ಗುರುವಾರ, ಆಗಸ್ಟ್ 8, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನಗು
ಮುಂಬೈನಲ್ಲಿ ನಡೆದ ಸಿನಿಮಾ ಪ್ರಚಾರ ಕಾರ್ಯಕ್ರಮದಲ್ಲಿ ನಟ ಕಿಯಾರ ಅಡ್ವಾಣಿ ಫೋಟೊಗೆ ಪೋಸ್ ನೀಡಿದ್ದು ಹೀಗೆ...

ಹೆಚ್ಚಿನ ಮಾಹಿತಿಗಾಗಿ ಸ್ಕ್ಯಾನ್ ಮಾಡಿರಿ

SBI MUTUAL FUND
A PARTNER FOR LIFE

ಎಸ್‌ಬಿಐ ಇನ್ನೊವೇಟಿವ್ ಆಪ್ರೊರ್ಚ್ಯುನಿಟೀಸ್ ಫಂಡ್

ನೆಕ್ಸ್ಟ್ ಜೆನ್ ಇಂಡಿಯಾಕ್ಕೆ ಸಾಮರ್ಥ್ಯ ಒದಗಿಸುವಂತಹ ಇನ್ನೋವೇಟರ್ಸ್‌ಗಳನ್ನು ಭೇಟಿಯಾಗಿರಿ.

- ಇನ್ನೊವೇಟಿವ್ ಮತ್ತು ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡುವಂತಹ, ಸರಕಾರದ ಪೂರ್ವಭಾವಿ ಉಪಕ್ರಮಗಳು
- ವರ್ಧಿಸುತ್ತಿರುವ ಸ್ಟಾರ್ಟ್ ಅಪ್ ಇಕೊಸಿಸ್ಟಮ್ ಮತ್ತು ಯೂನಿಕಾರ್ನ್‌ಗಳ ಹೆಚ್ಚುತ್ತಿರುವ ಸಂಖ್ಯೆ
- ವಿಭಿನ್ನ ವಲಯಗಳಲ್ಲಿ ಟೆಕ್‌ನ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳುತ್ತಿರುವ, ಬಲಶಾಲಿಯಾದ ಡಿಜಿಟಲ್ ಮೂಲಭೂತ ಸೌಕರ್ಯಗಳು

NFO ಕೊನೆಗೊಳ್ಳುವ ದಿನಾಂಕ:
12 ಆಗಸ್ಟ್ 2024

SBI
INNOVATIVE OPPORTUNITIES FUND
An open-ended equity scheme following the innovation theme

RISKOMETER
Investors understand that their principal will be at Very High risk

This product is suitable for investors who are seeking^:
- Long term capital appreciation
- Investment in equity and equity related instruments of companies engaged in and/or expected to benefit from adoption of innovative strategies & theme.

^Investors should consult their financial advisers if in doubt about whether the product is suitable for them.

ಟೋಲ್-ಫ್ರೀ: 1800 209 3333 | ನಿಮ್ಮ MFD/RIAರನ್ನು ಸಂಪರ್ಕಿಸಿರಿ | ಭೇಟಿಕೊಡಿ : www.sbimf.com | ನಮ್ಮನ್ನು ಫಾಲೋಮಾಡಿ:

ಮ್ಯೂಚ್ಯುವಲ್ ಫಂಡ್ ಹೂಡಿಕೆಗಳು ಮಾರುಕಟ್ಟೆಯ ಆಪತ್ತಿನ ಅಂಶಗಳಿಗೆ ಒಳಪಟ್ಟಿವೆ, ಸ್ಕೀಮ್ ಸಂಬಂಧಿತ ಎಲ್ಲ ದಸ್ತಾವೇಜುಗಳನ್ನು ಗಮನವಿಟ್ಟು ಓದಿರಿ.

ಹೈಕೋರ್ಟ್ ಪೀಠದಿಂದ ಅನಗತ್ಯ, ಅಪಮಾನಕರ ಮಾತು: 'ಸುಪ್ರೀಂ'ನ ಐವರು ಸದಸ್ಯರ ಪೀಠ

'ನ್ಯಾಯಮೂರ್ತಿ ಮಾತು ಅಳಿಸಿ'

ನವದೆಹಲಿ (ಪಿಟಿಐ): ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಏಕಸದಸ್ಯ ಪೀಠವೊಂದು ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ತನ್ನ ವಿರುದ್ಧ ಆಡಿದ್ದ ಮಾತುಗಳನ್ನು ಕಲಾಪದ ಕಡತಗಳಿಂದ ತೆಗೆದುಹಾಕಲು ಸುಪ್ರೀಂ ಕೋರ್ಟ್ ಬುಧವಾರ ಆದೇಶಿಸಿದೆ.

ಆ ಮಾತುಗಳು 'ಅನಗತ್ಯವಾಗಿದ್ದವು', ಅವು 'ಅಪಮಾನಕರವಾಗಿದ್ದವು' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠವು ಹೇಳಿದೆ. ಈ ಮಾತುಗಳನ್ನು ಆಡಿದ್ದ ನ್ಯಾಯಮೂರ್ತಿ ರಾಜಬೀರ್ ಸಹ್ರಾವತ್ ಅವರ ವಿರುದ್ಧ ಕ್ರಮ ಜರುಗಿಸಲು ಪೀಠವು ಮುಂದಾಗಿಲ್ಲ.

ಐವರು ಸದಸ್ಯರ ಪೀಠದಲ್ಲಿ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಬಿ.ಆರ್. ಗವಾಯಿ, ಸೂರ್ಯ ಕಾಂತ್ ಮತ್ತು ಹೃಷಿಕೇಶ್ ರಾಯ್ ಅವರೂ ಇದ್ದರು. 'ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ಪರಮೋಚ್ಚವಲ್ಲ; ದೇಶದಲ್ಲಿ ಸಂವಿಧಾನವೇ ಪರಮೋಚ್ಚ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಹೈಕೋರ್ಟ್ ನ್ಯಾಯಮೂರ್ತಿ ಆಡಿದ ಮಾತುಗಳು ತನಗೆ ನೋವು ಉಂಟುಮಾಡಿವೆ ಎಂದು ಪೀಠವು ವಿಚಾರಣೆ ಸಂದರ್ಭದಲ್ಲಿ ಹೇಳಿದೆ. ಹೈಕೋರ್ಟ್‌ನ ಆದೇಶದಲ್ಲಿ ಹಲವು ಸಂಗತಿಗಳ ಬಗ್ಗೆ ಅನಗತ್ಯವಾದ ಮಾತುಗಳನ್ನು ಉಲ್ಲೇಖಿಸಲಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಉನ್ನತ ಹಂತದ ನ್ಯಾಯಾಲಯಗಳು ನೀಡುವ ಆದೇಶಗಳಿಂದ ನ್ಯಾಯಮೂರ್ತಿಗಳು ಬಾಧೆಗೆ ಒಳಗಾಗುವುದಿಲ್ಲ. ನ್ಯಾಯಾಂಗಕ್ಕೆ ಅಗತ್ಯವಿರುವ ಶಿಸ್ತನ್ನು ಕಾಯ್ದುಕೊಳ್ಳಬೇಕು ಎಂದು ಪೀಠವು ಹೇಳಿದೆ. ಹೈಕೋರ್ಟ್‌ನಲ್ಲಿ ನಡೆಯುತ್ತಿದ್ದ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆಗೆ ಸುಪ್ರೀಂ ಕೋರ್ಟ್ ತಡೆ ನೀಡಿದ್ದರ ಬಗ್ಗೆ ನ್ಯಾಯಮೂರ್ತಿ ಸಹ್ರಾವತ್ ಅವರು ತೀರಾ ಕಟುವಾದ ಮಾತುಗಳನ್ನು ಆಡಿದ್ದರು.

ಕೋಚಿಂಗ್ ಸೆಂಟರ್ ಅವಘಡ ಸಿಬಿಐಗೆ ಕೋರ್ಟ್ ನೋಟಿಸ್

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಕೋಚಿಂಗ್ ಸೆಂಟರ್‌ವೊಂದರ ನೆಲಮಹಡಿಗೆ ನೀರು ನುಗ್ಗಿ ಮೂವರು ಐಎಎಸ್ ಆಕಾಂಕ್ಷಿಗಳು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿ, ನೆಲಮಹಡಿಯ ನಾಲ್ವರು ಸಹ ಮಾಲೀಕರ ಜಾಮೀನು ಅರ್ಜಿಯ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ದೆಹಲಿ ಹೈಕೋರ್ಟ್ ಬುಧವಾರ ಸಿಬಿಐಗೆ ನೋಟಿಸ್ ನೀಡಿದೆ.

ಆಗಸ್ಟ್ 9ರ ಒಳಗಾಗಿ ಉತ್ತರಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಂಜು ಬಜಾಜ್ ಚಂದನಾ ಅವರು ಆದೇಶಿಸಿದ್ದಾರೆ.

'ಪ್ರಕರಣದ ಎಫ್‌ಐಆರ್ ಪ್ರತಿ ನ್ಯಾಯಾಲಯಕ್ಕೆ ಸಲ್ಲಿಕೆಯಾಗಿಲ್ಲ. ಹಾಗಾಗಿ ಜಾಮೀನಿನ ಬಗ್ಗೆ ನಿರ್ಧರಿಸಲಾಗದು' ಎಂದು ನ್ಯಾಯಾಲಯ ತಿಳಿಸಿದೆ. ಪ್ರಕರಣವನ್ನು ದೆಹಲಿ ಪೊಲೀಸರಿಂದ ಸಿಬಿಐಗೆ ವರ್ಗಾಯಿಸುವ ಕಾರ್ಯ ಪೂರ್ಣಗೊಂಡಿಲ್ಲ ಮತ್ತು ಸಿಬಿಐ ಈವರೆಗೆ ಪ್ರಕರಣ ದಾಖಲಿಸಿಕೊಂಡಿಲ್ಲ ಎಂದು ಸರ್ಕಾರಿ ವಕೀಲರು ನ್ಯಾಯಾಲಯಕ್ಕೆ ತಿಳಿಸಿದ ಕಾರಣ ಸಿಬಿಐಗೆ ನೋಟಿಸ್ ಜಾರಿಯಾಗಿದೆ.

ಜುಲೈ 27ರಂದು ದೆಹಲಿಯ ಹಳೆ ರಾಜೇಂದರ್ ನಗರದ 'ರಾವ್ಸ್ ಸ್ಟಡಿ ಸರ್ಕಲ್'ನ ನೆಲಮಹಡಿಗೆ ನೀರು ನುಗ್ಗಿದ್ದ ಪರಿಣಾಮ ಮೂವರು ಐಎಎಸ್ ಆಕಾಂಕ್ಷಿಗಳು ಮೃತಪಟ್ಟಿದ್ದರು. ಪ್ರಕರಣ ಸಂಬಂಧ ನೆಲಮಹಡಿಯ ಸಹಮಾಲೀಕರಾದ ಪರ್ವಿಂದರ್ ಸಿಂಗ್, ತಾಜಿಂದರ್ ಸಿಂಗ್, ಹರ್ವಿಂದರ್ ಸಿಂಗ್ ಮತ್ತು ಸರಬ್‌ಜೀತ್ ಸಿಂಗ್ ಅವರು ಬಂಧನದಲ್ಲಿದ್ದಾರೆ.

ದೆಹಲಿ ಅಬಕಾರಿ ನೀತಿ ಹಗರಣ ಇ.ಡಿಗೆ ಹೈಕೋರ್ಟ್ ಪ್ರಶ್ನೆ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಜಾಮೀನು ರದ್ದುಗೊಳಿಸುವಂತೆ ಮಾಡಿದ ಮನವಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವನ್ನು (ಇ.ಡಿ) ದೆಹಲಿ ಹೈಕೋರ್ಟ್ ಬುಧವಾರ ಪ್ರಶ್ನಿಸಿದೆ.

ದೆಹಲಿ ಅಬಕಾರಿ ನೀತಿ ಹಗರಣದ ಜತೆ ನಂಟಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಜ್ರಿವಾಲ್, ಸುಪ್ರೀಂ ಕೋರ್ಟ್‌ನಿಂದ ಈಗಾಗಲೇ ಮಧ್ಯಂತರ ಜಾಮೀನು ಪಡೆದಿದ್ದಾರೆ. ಅವರ ಜಾಮೀನನ್ನು ರದ್ದುಗೊಳಿಸುವಂತೆ ಕೋರಿ ಸಲ್ಲಿಸಿರುವ ಅರ್ಜಿಯಲ್ಲಿ ಅಂತಹ ಮಹತ್ವದ ಅಂಶ ಏನಿದೆ ಎಂದು ಕೇಳಿದೆ.

'ನನ್ನ ಪ್ರಶ್ನೆಗೆ ನೀವು ಉತ್ತರಿಸಿ. ನಿಮ್ಮ ಮನವಿಯನ್ನು ನಾನು ಒಪ್ಪಿಕೊಂಡರೆ ಏನಾಗುತ್ತದೆ? ನೀವು ಅವರನ್ನು (ಕೇಜ್ರಿವಾಲ್) ಮತ್ತೆ ಬಂಧಿಸುತ್ತೀರಾ' ಎಂದು ನ್ಯಾಯಮೂರ್ತಿಗಳಾದ ನೀನಾ ಬನ್ಸಲ್ ಕೃಷ್ಣ ಅವರು ಇ.ಡಿ. ಪರ ಹಾಜರಿದ್ದ ವಕೀಲರನ್ನು ಪ್ರಶ್ನಿಸಿದರು.

ಅದಕ್ಕೆ ವಕೀಲರು, 'ಬಂಧಿಸುವ ಪ್ರಶ್ನೆಯೇ ಇಲ್ಲ ಮತ್ತು ಅವರ ಬಂಧನ ಅಕ್ರಮ ಎಂದು ಯಾರೂ ಹೇಳಿಲ್ಲ' ಎಂದು ಪ್ರತಿಕ್ರಿಯಿಸಿದರು. ಹೈಕೋರ್ಟ್ ಮುಂದಿನ ವಿಚಾರಣೆಯನ್ನು ಸೆ.5ಕ್ಕೆ ನಿಗದಿಪಡಿಸಿದೆ.

ಬಿಭವ್ ಕುಮಾರ್ ಜಾಮೀನು: ಪೊಲೀಸರಿಗೆ ನೋಟಿಸ್

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಆಪ್ತ ಬಿಭವ್ ಕುಮಾರ್ ಅವರ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಆ. 21ರ ಒಳಗೆ ಪ್ರತಿಕ್ರಿಯೆ ದಾಖಲಿಸುವಂತೆ ಸುಪ್ರೀಂ ಕೋರ್ಟ್ ಬುಧವಾರ ದೆಹಲಿ ಪೊಲೀಸರಿಗೆ ನಿರ್ದೇಶಿಸಿತು.

ರಾಜ್ಯಸಭೆ ಸದಸ್ಯೆ, ಎಎಪಿಯ ಸ್ವಾತಿ ಮಾಲಿವಾಲ್ ಅವರ ಮೇಲೆ ಹಲ್ಲೆ ನಡೆಸಿರುವ ಆರೋಪ ಬಿಭವ್ ಕುಮಾರ್ ಮೇಲಿದೆ. ದೆಹಲಿ ಪೊಲೀಸರನ್ನು ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, ಪ್ರತಿಕ್ರಿಯೆ ದಾಖಲಿಸಲು ಒಂದು ವಾರ ಬೇಕು ಎಂದರು.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ದೀಪಂಕರ್ ದತ್ತಾ, ಉಜ್ವಲ್ ಭುಯನ್ ಅವರಿದ್ದ ಪೀಠದ ಎದುರು ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, 'ಈ ಪ್ರಕರಣದಲ್ಲಿ ಈಗಾಗಲೇ ಆರೋಪಪಟ್ಟಿ ದಾಖಲಾಗಿದೆ. ಜಾಮೀನು ನೀಡಬಾರದು' ಎಂದು ಪ್ರತಿಪಾದಿಸಿದರು.

ಜಾಮೀನು ನಿರಾಕರಿಸಿದ್ದ ದೆಹಲಿ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಬಿಭವ್ ಕುಮಾರ್ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ತನಿಖೆ ಪೂರ್ಣವಾಗಿರುವ ಕಾರಣ ನನ್ನನ್ನು ವಶದಲ್ಲಿಟ್ಟುಕೊಳ್ಳುವ ಅಗತ್ಯವಿಲ್ಲ ಎಂದು ಅವರು ಪ್ರತಿಪಾದಿಸಿದ್ದಾರೆ.

ರಾಜ್ಯಸಭೆ: ಸೆ. 3ರಂದು ಚುನಾವಣೆ

ನವದೆಹಲಿ (ಪಿಟಿಐ): ತೆರವಾಗಿರುವ ರಾಜ್ಯಸಭೆಯ 2 ಸ್ಥಾನಗಳಿಗೆ ವಿವಿಧ 9 ರಾಜ್ಯಗಳಿಂದ ಸದಸ್ಯರನ್ನು ಆಯ್ಕೆ ಮಾಡಲು ಸೆಪ್ಟೆಂಬರ್ 3ರಂದು ಚುನಾವಣೆ ನಡೆಯಲಿದೆ ಎಂದು ಕೇಂದ್ರ ಚುನಾವಣಾ ಆಯೋಗವು ಬುಧವಾರ ಪ್ರಕಟಿಸಿದೆ.

ಪೀಯೂಷ್ ಗೋಯಲ್, ಸರ್ಬಾನಂದ ಸೋನೊವಾಲ್ ಮತ್ತು ಜ್ಯೋತಿರಾದಿತ್ಯ ಸಿಂಧಿಯಾ ಸೇರಿ 10 ಮಂದಿ ಲೋಕಸಭೆಗೆ ಆಯ್ಕೆಯಾದ್ದರಿಂದ ಅವರು ಪ್ರತಿನಿಧಿಸುತ್ತಿದ್ದ ಸ್ಥಾನಗಳು ತೆರವಾಗಿವೆ. ಒಡಿಶಾ, ತೆಲಂಗಾಣದಿಂದ ಒಟ್ಟು 2 ಸ್ಥಾನಗಳಿಗೆ ಉಪ ಚುನಾವಣೆ ನಡೆಯಲಿದೆ.

ರಾಜ್ಯಸಭೆ ಸದಸ್ಯರಾಗಿದ್ದು, ಲೋಕಸಭೆಗೆ ಆಯ್ಕೆಯಾದ ಇತರರು: ಕಾಮಾಕ್ಯ ಪ್ರಸಾದ್ ತಾಸಾ, ವಿವೇಕ್ ಠಾಕೂರ್, ಉದಯನ್‌ರಾಜೆ ಭೋಸ್ಲೆ ಮತ್ತು ಬಿಪ್ಲಬ್ ಕುಮಾರ್ ದೇಬ್ (ಎಲ್ಲರೂ ಬಿಜೆಪಿ), ಮಿಸಾ ಭಾರ್ತಿ (ಆರ್‌ಜೆಡಿ), ದೀಪೇಂದರ್ ಸಿಂಗ್ ಹೂಡಾ (ಕಾಂಗ್ರೆಸ್), ಕೆ.ಸಿ.ವೇಣುಗೋಪಾಲ್ (ಇಬ್ಬರೂ ಕಾಂಗ್ರೆಸ್).

ಬಿಆರ್‌ಎಸ್ ಪಕ್ಷಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರಿದ್ದ ತೆಲಂಗಾಣದ ಕೆ.ಕೇಶವರಾವ್, ಬಿಜು ಜನತಾದಳ (ಬಿಜೆಪಿ) ಸದಸ್ಯರಾಗಿದ್ದ ಮಮತಾ ಮೊಹಂತಾ ಅವರು ರಾಜ್ಯಸಭೆ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು.

ಈ ಸ್ಥಾನಗಳಿಗೆ ಚುನಾವಣೆ ನಡೆಸಲು ಆಗಸ್ಟ್ 11ರಂದು ಅಧಿಸೂಚನೆ ಹೊರಡಿಸಲಾಗುತ್ತದೆ.

ಸುದ್ದಿ 2 ನಿಮಿಷ

ಪೂಜಾ ನೇಮಕಾತಿ ರದ್ದು; 'ಎರಡು ದಿನದಲ್ಲಿ ಆದೇಶ ಪತ್ರ'

ನವದೆಹಲಿ (ಪಿಟಿಐ): ಐಎಎಸ್ ಪ್ರೊಬೇಷನರಿ ಅಧಿಕಾರಿಯಾಗಿದ್ದ ಪೂಜಾ ಖೇಡ್ಕರ್(32) ಅವರ ನೇಮಕಾತಿ ಆದೇಶವನ್ನು ರದ್ದುಗೊಳಿಸಿರುವ ಸಂಬಂಧ ಎರಡು ದಿನಗಳ ಒಳಗೆ ಆದೇಶ ಪತ್ರವನ್ನು ತಲುಪಿಸಲಾಗುವುದು ಎಂದು ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ದೆಹಲಿ ಹೈಕೋರ್ಟ್‌ಗೆ ಬುಧವಾರ ಮಾಹಿತಿ ನೀಡಿದೆ.

ಆಯೋಗವು ತಮ್ಮ ನೇಮಕಾತಿಯನ್ನು ರದ್ದುಗೊಳಿಸಿರುವುದಾಗಿ ಮಾಧ್ಯಮ ಪ್ರಕಟಣೆಯಲ್ಲಿ ಘೋಷಿಸಿದ್ದ ಕ್ರಮವನ್ನು ಪ್ರಶ್ನಿಸಿ ಖೇಡ್ಕರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರಿದ್ದ ಪೀಠ ವಜಾಗೊಳಿಸಿತು.

ಖೇಡ್ಕರ್ ಪರ ವಕಾಲತ್ತು ನಡೆಸಿದ ಹಿರಿಯ ವಕೀಲೆ ಇಂದಿರಾ ಜೈಸಿಂಗ್, ನೇಮಕಾತಿ ವಜಾ ಮಾಡಿರುವ ಬಗ್ಗೆ ಆಯೋಗವು ತಮ್ಮ ಕಕ್ಷಿದಾರರಿಗೆ ಮಾಹಿತಿ ನೀಡಿಲ್ಲ ಹಾಗೂ ಮಾಧ್ಯಮ ಪ್ರಕಟಣೆಯಿಂದಷ್ಟೆ ಈ ವಿಚಾರ ತಮ್ಮ ಗಮನಕ್ಕೆ ಬಂದಿದ್ದಾಗಿ ಆರೋಪಿಸಿದರು. ಆಗ, ಆಯೋಗದ ಪರ ವಕೀಲ ನರೇಶ್ ಕೌಶಿಕ್ ಮಾತನಾಡಿ, ನೇಮಕಾತಿ ರದ್ದತಿ ಆದೇಶವನ್ನು ಎರಡು ದಿನಗಳ ಒಳಗಾಗಿ ಖೇಡ್ಕರ್ ಅವರ ಇಮೇಲ್ ಹಾಗೂ ವಿಳಾಸಕ್ಕೆ ಕಳುಹಿಸಲಾಗುವುದು ಎಂದರು.

ಯುಪಿಎಸ್‌ಸಿಗೆ ತಮ್ಮ ವಿಳಾಸವನ್ನು ನೀಡುವಂತೆ ಖೇಡ್ಕರ್ ಅವರಿಗೆ ಪೀಠ ಇದೇ ವೇಳೆ ಸೂಚಿಸಿತು.

ವಕ್ಫ್ ಮಸೂದೆ: ಸಂಸದೀಯ ಸಮಿತಿಗೆ ಕಳುಹಿಸಲು ಆಗ್ರಹ

ನವದೆಹಲಿ (ಪಿಟಿಐ): ವಕ್ಫ್ ತಿದ್ದುಪಡಿ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿದ ಬಳಿಕ, ಪರಿಶೀಲನೆಗಾಗಿ ಸಂಸತ್ತಿನ ಸ್ಥಾಯಿ ಸಮಿತಿಗೆ ಕಳುಹಿಸುವಂತೆ ವಿರೋಧ ಪಕ್ಷಗಳು ಬುಧವಾರ ಒತ್ತಾಯಿಸಿವೆ.

ಇದಕ್ಕೆ ಪ್ರತಿಕ್ರಿಯಿಸಿದ ಸರ್ಕಾರ, 'ಲೋಕಸಭೆಯಲ್ಲಿ ಈ ಬಗ್ಗೆ ಚರ್ಚೆಯಾದ ಬಳಿಕ ವ್ಯವಹಾರ ಸಲಹಾ ಸಮಿತಿಯು ಈ ಬಗ್ಗೆ ಗಮನಹರಿಸಲಿದೆ' ಎಂದಿದೆ. 'ಮಸೂದೆಯನ್ನು ಸಂವಿಧಾನ ಸಮಿತಿಗೆ ಕಳುಹಿಸುವ ಬಗ್ಗೆ ಗುರುವಾರ ನಿರ್ಧರಿಸಲಾಗುವುದು ಎಂದು ಪ್ರಮುಖ ಪಕ್ಷಗಳ ನಾಯಕರನ್ನೊಳಗೊಂಡ ಸಮಿತಿಯ ಸಭೆಯಲ್ಲಿ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಚರ್ಚಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಮಸೂದೆಯು ಗುರುವಾರ ಲೋಕಸಭೆಯಲ್ಲಿ ಮಂಡನೆಯಾದ ಬಳಿಕ ಅದನ್ನು ಅಂಗೀಕರಿಸುವಂತೆ ಒತ್ತಾಯಿಸುವುದಿಲ್ಲ' ಎಂದು ಸರ್ಕಾರವು ಸಮಿತಿಯ ಸಭೆಯಲ್ಲಿ ತಿಳಿಸಿದೆ.

'ಕೆಲ ಮುಸ್ಲಿಂ ಸಂಘಟನೆಗಳಿಂದ ವಿರೋಧ ಹೊಂದಿರುವ ಪ್ರಸ್ತಾವಿತ ಮಸೂದೆಯನ್ನು ಸರ್ಕಾರ ಪರಿಶೀಲನೆಗಾಗಿ ಸಂಸದೀಯ ಸಮಿತಿಗೆ ಕಳುಹಿಸುವ ಸಾಧ್ಯತೆ ಹೆಚ್ಚಿದೆ. ಸರ್ಕಾರದ ಅಜೆಂಡಾವನ್ನು ಬೆಂಬಲಿಸುವ ಕೆಲ ಪಕ್ಷಗಳು ಪಸ್ತಾವಿತ ಮಸೂದೆಯಲ್ಲಿ ಮೀಸಲಾತಿಯನ್ನು ಬಯಸುತ್ತಿವೆ' ಎಂದು ಮೂಲಗಳು ತಿಳಿಸಿದೆ.

ಎನ್‌ಜಿಟಿಗೆ ಸುಪ್ರೀಂ ಕೋರ್ಟ್ ನಿರ್ದೇಶನ

ಬಾಧಿತ ಕಾರ್ಮಿಕರು ಮತ್ತು ಅವರ ಕುಟುಂಬದವರಿಗೆ ಪರಿಹಾರ ಪಾವತಿ ಪ್ರಕ್ರಿಯೆಯು ವಿಳಂಬವಾಗದೆ ಪರಿಣಾಮಕಾರಿಯಾಗಿ ಜಾರಿಯಾಗಿದೆಯೇ ಎಂಬುದನ್ನು ಗಮನಿಸಬೇಕು

'ಉಸಿರಾಟ ಸಮಸ್ಯೆ ಕಾರ್ಖಾನೆಗಳತ್ತ ಗಮನಹರಿಸಿ'

ನವದೆಹಲಿ: ಶ್ವಾಸಕೋಶ ಮತ್ತು ಉಸಿರಾಟದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕೈಗಾರಿಕೆ ಮತ್ತು ಕಾರ್ಖಾನೆಗಳಿಂದ ಆಗುತ್ತಿರುವ ಪರಿಣಾಮಗಳ ಕುರಿತು ಗಮನಹರಿಸಬೇಕು ಎಂದು ಸುಪ್ರೀಂ ಕೋರ್ಟ್ ಬುಧವಾರ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ (ಎನ್‌ಜಿಟಿ) ನಿರ್ದೇಶಿಸಿತು. ನ್ಯಾಯಮೂರ್ತಿಗಳಾದ ವಿಕ್ರಂನಾಥ್, ಪಿ.ಬಿ.ವರಾಳೆ ಅವರಿದ್ದ ಪೀಠವು ಈ ನಿರ್ದೇಶನ ನೀಡಿತು.

ದೂಳು, ಕಲ್ಮಶ ದೇಹವನ್ನು ಪ್ರವೇಶಿಸಿರುವುದರಿಂದ ಉಂಟಾಗುವ ಶ್ವಾಸಕೋಶ ಹಾಗೂ ಉಸಿರಾಟ ಸಂಬಂಧಿತ ಅನಾರೋಗ್ಯ ಸಮಸ್ಯೆಗಳ ತಡೆಗೆ ಸಂಬಂಧಿಸಿದಂತೆ ಈ ಹಿಂದೆ ನೀಡಲಾಗಿದ್ದ ನಿರ್ದೇಶನಗಳಿಗೆ ಕೇಂದ್ರ ಮತ್ತು ರಾಜ್ಯಗಳ ಮಾಲಿನ್ಯ ನಿಯಂತ್ರಣ ಮಂಡಳಿಗಳು ಬದ್ಧವಾಗಿರಬೇಕು ಎಂದು ಪೀಠ ಸೂಚಿಸಿತು.

ಕಾರ್ಮಿಕರು ಮಾಸ್ಕ್ ಧರಿಸಿರಬೇಕು ಎಂಬುದೂ ಸೇರಿದಂತೆ ಕನಿಷ್ಠ ನಿಯಂತ್ರಣ ಕ್ರಮಗಳನ್ನೂ ಪಾಲಿಸದ ಎಲ್ಲ ಘಟಕಗಳ ವಿರುದ್ಧ ಎನ್‌ಜಿಟಿ ಗಮನಹರಿಸಬೇಕು. ಅಲ್ಲದೆ, ಇಂತಹ ಕಾರ್ಖಾನೆಗಳಿಂದ ಉಸಿರಾಟ ಸಂಬಂಧಿ ರೋಗಗಳು ವ್ಯಾಪಿಸದಂತೆ ತಡೆಯಲು ಅಗತ್ಯ ಕ್ರಮಗಳನ್ನು ಹಸಿರು ಮಂಡಳಿಗಳು ಕ್ರಮವಹಿಸಬೇಕು ಎಂದು ಸೂಚಿಸಿತು.

ಪೀಪಲ್ಸ್ ರೈಟ್ಸ್ ಮತ್ತು ಸೋಷಿಯಲ್ ರೀಸರ್ಚ್ ಸೆಂಟರ್ (ಪ್ರಸಾರ್) ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆಯ ವೇಳೆ ಕೋರ್ಟ್ ಈ ಸೂಚನೆಗಳನ್ನು ನೀಡಿತು. ವಿವಿಧ ಕಾರ್ಖಾನೆಗಳು ಮತ್ತು ಕೈಗಾರಿಕೆಗಳಲ್ಲಿರುವ ಕಾರ್ಮಿಕರು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳ ಪರಿಹಾರಕ್ಕೆ ಅಗತ್ಯ ಕ್ರಮವಹಿಸಬೇಕು ಎಂದು ರಿಟ್ ಅರ್ಜಿಯಲ್ಲಿ ಕೋರಲಾಗಿತ್ತು.

ಹುಬ್ಬಳ್ಳಿ– ಅಂಕೋಲಾ ರೈಲು ಮಾರ್ಗ ವಿನ್ಯಾಸ ಬದಲಿಸಲು ತೀರ್ಮಾನ

ಅರಣ್ಯದಲ್ಲಿ ಜೋಡಿ ಹಳಿ ನಿರ್ಮಾಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಿಸರವಾದಿಗಳ ತೀವ್ರ ವಿರೋಧದ ಹಿನ್ನೆಲೆಯಲ್ಲಿ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗದ ವಿನ್ಯಾಸ ಬದಲಿಸಿರುವ ರೈಲ್ವೆ ಇಲಾಖೆ, ಅರಣ್ಯ ಪ್ರದೇಶದಲ್ಲಿ ಜೋಡಿ ಹಳಿ ನಿರ್ಮಿಸಲು ತೀರ್ಮಾನಿಸಿದೆ.

'ಯೋಜನೆಯ ಎಲ್ಲ ಪಾಲುದಾರರೊಂದಿಗೆ ಸಮಾಲೋಚನೆ ನಡೆಸಿ ಅರಣ್ಯದಲ್ಲಿ ದ್ವಿಪಥಕ್ಕಾಗಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗಿದೆ' ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಲೋಕಸಭೆಗೆ ಬುಧವಾರ ತಿಳಿಸಿದರು. ಉತ್ತರ ಕನ್ನಡ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರಶ್ನೋತ್ತರ ಅವಧಿಯಲ್ಲಿ ಕೇಳಿದ ಪ್ರಶ್ನೆಗೆ ಸಚಿವರು ಈ ಉತ್ತರ ನೀಡಿದರು. ಪಶ್ಚಿಮ ಘಟ್ಟದ 108 ಕಿ.ಮೀ. ದಟ್ಟ ಅರಣ್ಯಗಳ ನಡುವೆ ಸಾಗುವ ಪ್ರಸ್ತಾವವಿರುವ ಈ ಯೋಜನೆ ಅನುಷ್ಠಾನಕ್ಕಾಗಿ 2 ಲಕ್ಷ ಮರಗಳ ಹನನ ಮಾಡಬೇಕಾಗುತ್ತದೆ ಎಂದು ಪರಿಸರವಾದಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

'ಈ ಯೋಜನೆಗಾಗಿ ಹುಬ್ಬಳ್ಳಿ-ಕಿರಾವತಿ (47 ಕಿ.ಮೀ) ವಿಭಾಗದಲ್ಲಿ ಮಣ್ಣು ಮತ್ತು ಸೇತುವೆ ಕಾಮಗಾರಿ ಪೂರ್ಣಗೊಂಡಿದೆ. ಆದರೆ, 569.64 ಹೆಕ್ಟೇರ್ ಅರಣ್ಯ ಭೂಮಿಯ ಅರಣ್ಯ ಮತ್ತು ವನ್ಯಜೀವಿ ಅನುಮೋದನೆ ಹಾಗೂ ಸಂಬಂಧಿತ ವ್ಯಾಜ್ಯಗಳಿಂದಾಗಿ ಉಳಿದ ಕಾಮಗಾರಿ ಕಾರ್ಯಗತಗೊಳಿಸಲು ಸಾಧ್ಯವಾಗಿರಲಿಲ್ಲ. ಈಗ ವ್ಯಾಜ್ಯ ಇತ್ಯರ್ಥವಾಗಿರುವ ಕಾರಣ ವನ್ಯಜೀವಿಗಳಿಗೆ ಪದೇ ಪದೇ ತೊಂದರೆಯಾಗುವುದನ್ನು ತಪ್ಪಿಸಲು ಅರಣ್ಯ ಪ್ರದೇಶದಲ್ಲಿ ಜೋಡಿ ಹಳಿ ನಿರ್ಮಿಸಲು ನಿರ್ಧರಿಸಲಾಗಿದೆ' ಎಂದು ಸಚಿವರು ತಿಳಿಸಿದರು. ಡೆಹ್ರಾಡೂನ್‌ನ ವನ್ಯಜೀವಿ ಸಂಸ್ಥೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಕರ್ನಾಟಕ ಸರ್ಕಾರದ ಸಹಯೋಗದಲ್ಲಿ ರೈಲ್ವೆ ಇಲಾಖೆಯು ಡಿಪಿಆರ್ ಸಿದ್ಧಪಡಿಸಿದೆ.

ಈ ಮಾರ್ಗ ನಿರ್ಮಾಣಕ್ಕೆ ಕೇಂದ್ರ ಪರಿಸರ ಇಲಾಖೆಯ ತಜ್ಞರ ಸಮಿತಿಯ ಶಿಫಾರಸಿನ ಪ್ರಕಾರವೇ ರೈಲ್ವೆ ಇಲಾಖೆ ಹೊಸ ಪ್ರಸ್ತಾವನೆ ಸಲ್ಲಿಸಬೇಕು ಎಂದು ರಾಷ್ಟ್ರೀಯ ವನ್ಯಜೀವಿ ಮಂಡಳಿ ಈಚೆಗೆ ತಾಕೀತು ಮಾಡಿತ್ತು.

ದಟ್ಟ ಅರಣ್ಯಗಳ ನಡುವೆ ಸಾಗುವ ಈ ಯೋಜನೆಗೆ ಈಗಿನ ಸ್ವರೂಪದಲ್ಲಿ ಯೋಜನೆಗೆ ಒಪ್ಪಿಗೆ ನೀಡಲು ಸಾಧ್ಯವಿಲ್ಲ ಎಂದು ಹೇಳಿದ್ದ ತಜ್ಞರ ಸಮಿತಿ, ಪರಿಸರಕ್ಕೆ ಹಾನಿಯಾಗದಂತೆ ಯೋಜನೆ ಅನುಷ್ಠಾನಕ್ಕೆ ರೈಲ್ವೆ ಇಲಾಖೆಯು ಹೊಸ ಪ್ರಸ್ತಾವನೆ ಸಿದ್ಧಪಡಿಸುವಂತೆ ಸಲಹೆ ನೀಡಿತ್ತು. ಈ ಯೋಜನೆ ಅನುಷ್ಠಾನ ಮಾಡಿದರೆ ಅಪಾರ ಪ್ರಮಾಣದ ಕಾಡು ನಾಶವಾಗಲಿದೆ ಎಂದು 2022ರ ಹುಲಿ ಗಣತಿ ವರದಿಯಲ್ಲೂ ಎಚ್ಚರಿಸಲಾಗಿದೆ.

ಯೋಜನೆಗೆ ವನ್ಯಜೀವಿ ಅನುಮೋದನೆ ನೀಡುವಂತೆ ಕರ್ನಾಟಕ ಸರ್ಕಾರವು ಪರಿಸರ ಸಚಿವಾಲಯಕ್ಕೆ 2017ರಲ್ಲಿ ಪ್ರಸ್ತಾವ ಸಲ್ಲಿಸಿತ್ತು. ಈ ಮಾರ್ಗ ನಿರ್ಮಾಣಕ್ಕೆ 595.64 ಹೆಕ್ಟೇರ್ ಅರಣ್ಯ ಬಳಕೆಯಾಗಲಿದೆ ಎಂದು ರಾಜ್ಯ ಸರ್ಕಾರ ಪ್ರಸ್ತಾಪಿಸಿತ್ತು. ಶರಾವತಿ ವನ್ಯಜೀವಿ ಧಾಮ, ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಮೂಲಕ ಈ ಮಾರ್ಗ ಹಾದು ಹೋಗಲಿದೆ ಎಂದೂ ಉಲ್ಲೇಖಿಸಿತ್ತು.

ಮುಖ್ಯಾಂಶಗಳು
- ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿದ ರೈಲ್ವೆ ಇಲಾಖೆ
- ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಕೇಳಿದ ಪ್ರಶ್ನೆಗೆ ಸಚಿವರ ಉತ್ತರ
- ಪರಿಸರವಾದಿಗಳ ತೀವ್ರ ವಿರೋಧ

'ಶಿರೂರು, ವಯನಾಡ್ ಭೂಕುಸಿತ ನಂತರವೂ ಪಾಠ ಕಲಿತಿಲ್ಲ'

'ಪರಿಷ್ಕೃತ ಪ್ರಸ್ತಾವನೆ ಯಾವ ಮಾರ್ಗದಲ್ಲಿ ಹಾದುಹೋಗಲಿದೆ ಎಂಬ ಮಾಹಿತಿ ನನಗಿಲ್ಲ. ಪಶ್ಚಿಮ ಘಟ್ಟದ ಮೂಲಕವೇ ಹೊಸ ಪ್ರಸ್ತಾವಿತ ಮಾರ್ಗದ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದ್ದರೆ ನನ್ನ ಸ್ಪಷ್ಟ ವಿರೋಧ ಇರಲಿದೆ. ಶಿರೂರು, ವಯನಾಡ್ ಭೂಕುಸಿತ ಘಟನೆಗಳ ನಂತರವೂ ಸರ್ಕಾರ ಪಾಠ ಕಲಿತಂತಿಲ್ಲ. ಪಶ್ಚಿಮ ಘಟ್ಟಗಳಲ್ಲಿ ಇಂತಹ ಯೋಜನೆಗಳನ್ನು ರೂಪಿಸಲಾಗುತ್ತಿರುವುದರ ಕುರಿತು ನಾವೆಲ್ಲರೂ ಅವಲೋಕನ ಮಾಡಿಕೊಳ್ಳುವ ತುರ್ತು ಅಗತ್ಯ ಇದೆ' ಎಂದು ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ್ ಕುಲಕರ್ಣಿ ಹೇಳಿದರು. ಈ ಯೋಜನೆ ವಿರೋಧಿಸಿ ಗಿರಿಧರ್ ಅವರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಜಿ.ಪದ್ಮನಾಭನ್ 'ವಿಜ್ಞಾನ ರತ್ನ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಸಿದ್ಧ ಜೀವರಸಾಯನ ವಿಜ್ಞಾನಿ, ಐಐಎಸ್‌ಸಿ ಬೆಂಗಳೂರಿನ ಮಾಜಿ ನಿರ್ದೇಶಕ ಗೋವಿಂದ ರಾಜನ್ ಪದ್ಮನಾಭನ್ ಅವರನ್ನು ಕೇಂದ್ರ ಸರ್ಕಾರವು ಚೊಚ್ಚಲ 'ವಿಜ್ಞಾನ ರತ್ನ' ಪ್ರಶಸ್ತಿಗೆ ಆಯ್ಕೆ ಮಾಡಿದೆ.



ಜಿ.ಪದ್ಮನಾಭನ್

ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಸರ್ಕಾರ ಪ್ರತಿವರ್ಷ ಕೊಡಮಾಡುವ 33 ರಾಷ್ಟ್ರೀಯ ವಿಜ್ಞಾನ ಪುರಸ್ಕಾರಗಳಲ್ಲಿ 'ವಿಜ್ಞಾನ ರತ್ನ' ಪ್ರಶಸ್ತಿಯೂ ಒಂದು.

ವಿಜ್ಞಾನ ರತ್ನ ಅಲ್ಲದೆ ಈ ಬಾರಿ 13 'ವಿಜ್ಞಾನ ಶ್ರೀ' ಮತ್ತು 18 'ವಿಜ್ಞಾನ ಯುವ ಪ್ರಶಸ್ತಿ'ಗಳನ್ನು ಪ್ರಕಟಿಸಲಾಗಿದೆ. ಇಸ್ರೊದ 'ಚಂದ್ರಯಾನ–3' ತಂಡಕ್ಕೆ 'ಟೀಂ ವಿಜ್ಞಾನ' ಪ್ರಶಸ್ತಿ ನೀಡಲಾಗಿದೆ.

ಪದ್ಮನಾಭನ್ ಅವರು ಮಲೇರಿಯಾಕ್ಕೆ ಸಂಬಂಧಿಸಿದಂತೆ ನಡೆಸಿದ ಸಂಶೋಧನೆಯಿಂದ ಪ್ರಸಿದ್ಧಿ ಗಳಿಸಿದ್ದಾರೆ. ಅವರು 'ಪದ್ಮಭೂಷಣ', 'ಪದ್ಮಶ್ರೀ' ಗೌರವಕ್ಕೂ ಪಾತ್ರರಾಗಿದ್ದಾರೆ. 'ವಿಜ್ಞಾನ ಶ್ರೀ' ಪಡೆದ 13 ಮಂದಿಯಲ್ಲಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್‌ನ ನಿರ್ದೇಶಕರಾದ ಅನ್ನಪೂರ್ಣಿ ಸುಬ್ರಮಣ್ಯಂ, ಐಐಎಸ್‌ಸಿ ಪ್ರಾಧ್ಯಾಪಕ ಉಮೇಶ್ ವಾರ್ಷ್ಣೇಯ್ ಸೇರಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಕೇಜ್ರಿವಾಲ್ ಬದಲು ಸಚಿವೆ ಆತಿಶಿಯಿಂದ ಧ್ವಜಾರೋಹಣ'

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಇದೇ 15ರಂದು ನಡೆಯಲಿರುವ ಸ್ವಾತಂತ್ರ್ಯೋತ್ಸವದಲ್ಲಿ ತಮ್ಮ ಬದಲಿಗೆ ಸಚಿವೆ ಆತಿಶಿ ಧ್ವಜಾರೋಹಣ ನಡೆಸಲಿದ್ದಾರೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಲೆಫ್ಟಿನೆಂಟ್ ಗವರ್ನರ್ ಅವರಿಗೆ ಪತ್ರ ಬರೆದಿದ್ದಾರೆ. ಹೀಗೆಂದು ಆಮ್ ಆದ್ಮಿ ಪಕ್ಷ (ಎಎಪಿ) ಬುಧವಾರ ತಿಳಿಸಿದೆ.

ಮುಖ್ಯಮಂತ್ರಿ ಕೇಜ್ರಿವಾಲ್ ಅವರು ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರಿಗೆ ಜೈಲಿನಿಂದಲೇ ಪತ್ರ ಬರೆದಿದ್ದಾರೆ. 15ರಂದು ನಡೆಯಲಿರುವ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಸಚಿವೆ ಆತಿಶಿ ಅವರೇ ಧ್ವಜಾರೋಹಣ ನೆರವೇರಿಸಲಿದ್ದಾರೆ ಎಂಬುದಾಗಿ ಕೇಜ್ರಿವಾಲ್ ಅವರು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ ಎಂದಿದೆ.

ಅತ್ಯಾಚಾರ, ಕೊಲೆ ಅಪರಾಧಿಗೆ ಜೀವಾವಧಿ ಶಿಕ್ಷೆ

ನವದೆಹಲಿ (ಪಿಟಿಐ): ಐದು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿ, ಹತ್ಯೆ ಮಾಡಿದ್ದ ಯುವಕನಿಗೆ ದೆಹಲಿ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

2017ರಲ್ಲಿ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದಲ್ಲದೇ ಆಕೆಯ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಲಾಗಿತ್ತು. ಕೃತ್ಯ ಎಸಗಿಸ ಸಮಯದಲ್ಲಿ ಯುವಕ ಬಾಲಾಪರಾಧಿಯಾಗಿದ್ದ, ಇದೀಗ ಆತ 25 ವರ್ಷದ ವಯಸ್ಕನಾಗಿದ್ದಾನೆ. ಬಾಲಕಿಯ ಪೋಷಕರಿಗೆ ₹17 ಲಕ್ಷ ಪರಿಹಾರ ಘೋಷಿಸಲಾಗಿದೆ.

ಸಾಧುಗಳ ವೇಷ ಧರಿಸಿ ವಂಚನೆ

ಠಾಣೆ (ಪಿಟಿಐ): ಸಾಧುಗಳ ವೇಷ ಧರಿಸಿದ್ದ ಐವರು, ಸಮಸ್ಯೆಗಳಿಗೆ ಪರಿಹಾರ ನೀಡುವುದಾಗಿ ನಂಬಿಸಿ ವ್ಯಕ್ತಿಯೊಬ್ಬರಿಗೆ ವಂಚಿಸಿರುವ ಘಟನೆ ಮಹಾರಾಷ್ಟ್ರದ ಠಾಣೆಯಲ್ಲಿ ನಡೆದಿದೆ.

ಆರೋಪಿಗಳಲ್ಲಿ ಒಬ್ಬ, ಭೀವಂಡಿ ನಿವಾಸಿಯಾಗಿರುವ ದೂರುದಾರರನ್ನು ಅವರ ಅಂಗಡಿಯ ಬಳಿ ಭೇಟಿಯಾಗಿ ನಿಮಗೆ ತೊಂದರೆಗಳಿವೆಯೇ ಎಂದು ಪ್ರಶ್ನಿಸಿದ್ದ. ಬಳಿಕ ಸಹಾಯ ಮಾಡುವುದಾಗಿ ತಿಳಿಸಿ, ಆ.2ರಂದು ದೇವಸ್ಥಾನವೊಂದಕ್ಕೆ ಬರುವಂತೆ ಹೇಳಿದ್ದ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ದೂರುದಾರರು ದೇವಸ್ಥಾನಕ್ಕೆ ಹೋದ ವೇಳೆ, ಪೂಜೆ ಮಾಡುವಂತೆ ಹೇಳಿದ್ದರು. ಅವರು ಪೂಜೆಯಲ್ಲಿ ನಿರತರಾಗಿರುವಾಗ ಆರೋಪಿಗಳು ₹50 ಸಾವಿರ ಮೌಲ್ಯದ ಚಿನ್ನದ ಉಂಗುರವನ್ನು ಕಳವು ಮಾಡಿದ್ದಾರೆ. ಇದರೊಂದಿಗೆ ಪೂಜೆಯ ಖರ್ಚು ಎಂದು ₹20 ಸಾವಿರ ಹಣ ಪಡೆದುಕೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ರಸ್ತೆಯಲ್ಲೇ ತಂಗಿ ಕೊಲೆ ಮರ್ಯಾದೆಗೇಡು ಹತ್ಯೆ ಶಂಕೆ

ಲಖನೌ: ಬೇರೆ ಸಮುದಾಯದ ಯುವಕನನ್ನು ಪ್ರೀತಿಸಿದ ಕಾರಣಕ್ಕೆ ಅಣ್ಣನೊಬ್ಬ ತನ್ನ 16 ವರ್ಷ ವಯಸ್ಸಿನ ತಂಗಿಯನ್ನು ನಡು ರಸ್ತೆಯಲ್ಲಿಯೇ ಹತ್ಯೆ ಮಾಡಿರುವ ಆಘಾತಕಾರಿ ಘಟನೆ ಉತ್ತರ ಪ್ರದೇಶದ ಮೀರತ್ ಜಿಲ್ಲೆಯಲ್ಲಿ ನಡೆದಿದೆ.

ಮೃತ ಬಾಲಕಿ ಬೇರೊಂದು ಸಮುದಾಯದ ಯುವಕನೊಂದಿಗೆ ಸಂಬಂಧದಲ್ಲಿದ್ದಳು ಮತ್ತು ಆತನನ್ನೇ ವಿವಾಹವಾಗುವುದಾಗಿ ತನ್ನ ಕುಟುಂಬಕ್ಕೆ ತಿಳಿಸಿದ್ದಳು. ಇದರಿಂದ ಕೋಪಗೊಂಡ ಸಹೋದರ ಹಸೀನ್ ತಂಗಿಯ ಹತ್ಯೆ ಮಾಡಿದ್ದಾನೆ. ಈತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕಿಯು ಈ ಹಿಂದೆ ತನ್ನ ಪ್ರೇಮಿಯೊಂದಿಗೆ ಪರಾರಿಯಾಗಿದ್ದಳು. ಬಳಿಕ ಆಕೆಯನ್ನು ಪ್ರಿಯಕರ ಅಪಹರಿಸಿದ್ದಾನೆ ಎಂದು ಕುಟುಂಬಸ್ಥರು ಪ್ರಕರಣ ದಾಖಲಿಸಿದ್ದರು. ಹಲವು ತಿಂಗಳುಗಳ ಬಳಿಕ ಪೊಲೀಸರು ಬಾಲಕಿಯನ್ನು ಕರೆತಂದಿದ್ದರು.

ಬುಧವಾರ ಮುಂಜಾನೆ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಅಣ್ಣ ತಂಗಿಯ ಮಧ್ಯೆ ಜಗಳ ಶುರುವಾಗಿದ್ದು, ಆಗ ಹಸೀನ್ ತಂಗಿಗೆ ಥಳಿಸಿದ್ದಾನೆ. ಅಣ್ಣನಿಂದ ಬಚಾವಾಗಲು ಇಂಚಾಉಳಿಯ ನಗರದ ರಸ್ತೆಗೆ ಬಾಲಕಿ ಓಡಿ ಬಂದಿದ್ದಾಳೆ. ಆಕೆಯನ್ನು ಬೆನ್ನಟ್ಟಿ ಬಂದ ಹಸೀನ್, ತೀವ್ರವಾಗಿ ಥಳಿಸಿ ಬಳಿಕ ರಸ್ತೆಯಲ್ಲಿಯೇ ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ. ಈ ವೇಳೆ ಸ್ಥಳದಲ್ಲಿದ್ದ ಜನರು ಮೂಕ ಪ್ರೇಕ್ಷಕರಂತೆ ನಿಂತಿದ್ದರು. ಇದೊಂದು ಮರ್ಯಾದೆಗೇಡು ಹತ್ಯೆ ಪ್ರಕರಣ ಎಂದು ಶಂಕಿಸಿರುವುದಾಗಿ ಪೊಲೀಸರು ಮಾಹಿತಿ ನೀಡಿದ್ದಾರೆ.

ಜಮ್ಮು–ಕಾಶ್ಮೀರ: ಉಗ್ರರ ವಿರುದ್ಧದ ಕಾರ್ಯಾಚರಣೆ ಮುಂದುವರಿಕೆ

ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ಉಧಮ್‌ಪುರ ಜಿಲ್ಲೆಯಲ್ಲಿ ಭದ್ರತಾ ತಂಡ ಆರಂಭಿಸಿದ್ದ ಕಾರ್ಯಾಚರಣೆ ಎರಡನೇ ದಿನವಾದ ಬುಧವಾರವೂ ಮುಂದುವರಿದಿದ್ದು, ಹೆಚ್ಚುವರಿ ಪಡೆಗಳನ್ನು ನಿಯೋಜಿಸಲಾಗಿತ್ತು.

ಉಗ್ರರ ಚಲನವಲನಗಳ ಬಗ್ಗೆ ಮಾಹಿತಿ ದೊರೆತ ಕಾರಣ ಪೊಲೀಸ್, ಸೇನೆ ಮತ್ತು ಕೇಂದ್ರಿಯ ಮೀಸಲು ಪೊಲೀಸ್ ಪಡೆಯು ಬಸಂತ್‌ಘರ್ ಪ್ರದೇಶದಲ್ಲಿ ಮಂಗಳವಾರ ಬೃಹತ್ ಜಂಟಿ ಕಾರ್ಯಾಚರಣೆ ಆರಂಭಿಸಿತ್ತು.

'ಭಯೋತ್ಪಾದಕರು ಅರಣ್ಯದಲ್ಲಿ ಅವಿತಿರುವ ಸಾಧ್ಯತೆಗಳಿದೆ. ಹಾಗಾಗಿ ಹೆಚ್ಚುವರಿ ಪಡೆಗಳನ್ನು ನಿಯೋಜನೆಗೊಳಿಸಿ ಅರಣ್ಯವನ್ನು ಸುತ್ತುವರಿಯಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಠಾಣೆ: ಮಾದಕವಸ್ತು ತಯಾರಿಕಾ ಘಟಕ ಪತ್ತೆ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಭಿವಂಡಿ ಪಟ್ಟಣದ ಮನೆಯೊಂದರಲ್ಲಿ ಕಾರ್ಯಾಚರಿಸುತ್ತಿದ್ದ ಮಾದಕವಸ್ತು ತಯಾರಿಕಾ ಘಟಕವನ್ನು ಪತ್ತೆ ಮಾಡಿರುವ ಗುಜರಾತ್ ಭಯೋತ್ಪಾದನಾ ನಿಗ್ರಹದ ದಳದ (ಎಟಿಎಸ್) ಅಧಿಕಾರಿಗಳು, ಇಬ್ಬರನ್ನು ಬಂಧಿಸಿದ್ದಾರೆ.

ಅಧಿಕಾರಿಗಳು ₹800 ಕೋಟಿ ಮೌಲ್ಯದ 793 ಕೆ.ಜಿ. ಮಾದಕ ವಸ್ತುವನ್ನು ವಶಕ್ಕೆ ಪಡೆದಿದ್ದಾರೆ. ಬಂಧಿತರನ್ನು ಮಹಮ್ಮದ್ ಯೂನಸ್ ಅಲಿಯಾಸ್ ಎಜಾಜ್ ಮತ್ತು ಮಹಮ್ಮದ್ ಆದಿಲ್ ಶೇಖ್ ಎಂದು ಗುರುತಿಸಲಾಗಿದೆ. ಇವರಿಬ್ಬರೂ ಮುಂಬೈನ ಡೊಂಗರಿ ನಿವಾಸಿಗಳು.

ಎಟಿಎಸ್ ಅಧಿಕಾರಿಗಳು ಜೂನ್ ತಿಂಗಳಲ್ಲಿ ಗುಜರಾತ್‌ನ ಸೂರತ್‌ನಲ್ಲಿ ಮೆಫೆಡ್ರೋನ್ (ಒಂದು ಬಗೆಯ ಮಾದಕವಸ್ತು) ತಯಾರಿಕಾ ಜಾಲವನ್ನು ಪತ್ತೆಮಾಡಿದ್ದರು. ಅಲ್ಲಿ ಮೂವರನ್ನು ಬಂಧಿಸಲಾಗಿತ್ತು. ಈ ಮೂವರ ವಿಚಾರಣೆಯ ಸಂದರ್ಭದಲ್ಲಿ ಯೂನಸ್ ಮತ್ತು ಶೇಖ್ ಬಗ್ಗೆ ಮಾಹಿತಿ ಸಿಕ್ಕಿತ್ತು.

ತೀಜ್ ಸಂಭ್ರಮ... ತೀಜ್ ಉತ್ಸವದ ಅಂಗವಾಗಿ ರಾಜಸ್ಥಾನದ ಜೈಪುರದಲ್ಲಿ ಬುಧವಾರ ಆಯೋಜಿಸಿದ್ದ ಮೆರವಣಿಗೆಯಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡರು –ಪಿಟಿಐ ಚಿತ್ರ

ಜಮ್ಮುವಿನಲ್ಲಿ ಸುರಿಯುತ್ತಿರುವ ಮಳೆ • ಕಠುವಾದಲ್ಲಿ ಮೇಘಸ್ಫೋಟ

ಭಾರಿ ಮಳೆಗೆ ಕುಸಿದ ಮನೆ; ವೃದ್ಧೆ ಸಾವು

ಜಮ್ಮು (ಪಿಟಿಐ): ಜಮ್ಮುವಿನ ವಿವಿಧೆಡೆ ಬುಧವಾರ ಸುರಿದ ಭಾರಿ ಮಳೆಯಿಂದಾಗಿ ಹಲವು ಮನೆಗಳು ಕೊಚ್ಚಿಹೋಗಿದ್ದು, ರಾಜೌರಿ ಜಿಲ್ಲೆಯ ಗ್ರಾಮವೊಂದರಲ್ಲಿ ವೃದ್ಧೆಯೊಬ್ಬರು ಸಾವಿಗೀಡಾಗಿದ್ದಾರೆ.

ಮೃತಪಟ್ಟವರನ್ನು ಕಾಕೊ ದೇವಿ (60) ಎಂದು ಗುರುತಿಸಲಾಗಿದೆ. ಇದೇ ವೇಳೆ ಮೃತರು ಸಾಕಿದ್ದ ಎರಡು ಹಸುಗಳು ಕೂಡ ಮಣ್ಣಿನ ಅವಶೇಷಗಳ ಅಡಿ ಸಿಲುಕಿ ಮೃತಪಟ್ಟಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಕಠುವಾ ಜಿಲ್ಲೆಯ ದೂಂಗಾದಲ್ಲಿ ಮೇಸ್ಫೋಟದಿಂದಾಗಿ ಕನಿಷ್ಠ ಎಂಟು ಮನೆಗಳು ಕೊಚ್ಚಿಹೋಗಿದ್ದು, ಸಾವು ನೋವಿನ ಬಗ್ಗೆ ಯಾವುದೇ ವರದಿಯಾಗಿಲ್ಲ. ಹಲವು ರಸ್ತೆಗಳು ಹಾಳಾಗಿದ್ದು, ಸಂಚಾರ ಅಡಚಣೆ ಉಂಟಾಗಿದೆ ಎಂದು ಮಾಹಿತಿ ನೀಡಿದ್ದಾರೆ. 15ರ ವರೆಗೆ ಮಳೆ ಮುಂದುವರಿಯಲಿದ್ದು, ಕಣಿವೆ ಪ್ರದೇಶಗಳಲ್ಲಿ ಭೂಕುಸಿತವಾಗುವ ಸಾಧ್ಯತೆಯೂ ಇದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ.

ಜಮ್ಮುವಿನಲ್ಲಿ ಬುಧವಾರ ಸುರಿದ ಮಳೆಗೆ ಪ್ರವಾಹ ಉಂಟಾಗಿದ್ದು, ಜಲಾವೃತ ರಸ್ತೆಯಲ್ಲಿ ವಾಹನ ಸವಾರರು ಪರದಾಡಿದರು –ಪಿಟಿಐ ಚಿತ್ರ

ಸಿಡಿಲು ಬಡಿದು 6 ಸಾವು

ಪಟ್ನಾ (ಪಿಟಿಐ): ಬಿಹಾರದ ನವಾದಾ ಜಿಲ್ಲೆಯಲ್ಲಿ ಬುಧವಾರ ಸಿಡಿಲು ಬಡಿದು 6 ಜನರು ಮೃತಪಟ್ಟಿದ್ದಾರೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ಮುಖ್ಯಮಂತ್ರಿ ಕಚೇರಿಯಿಂದ ಹೊರಡಿಸಿದ ಹೇಳಿಕೆಯಲ್ಲಿ, ಘಟನೆಯು ಔರೈಯಾ, ಪಕ್ರಿಬರವಾ, ಕದಿರ್‌ಗಂಜ್ ಮತ್ತು ರೋಹ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದೆ ಎಂದು ತಿಳಿಸಿದೆ.

ಮುಖ್ಯಮಂತ್ರಿ ನಿತೀಶ್ ಕುಮಾರ್ ಮೃತರ ಕುಟುಂಬಕ್ಕೆ ₹4 ಲಕ್ಷ ಪರಿಹಾರ ಘೋಷಿಸಿದ್ದಾರೆ.

ವಿಪತ್ತು ನಿರ್ವಹಣಾ ಇಲಾಖೆ ನೀಡುವ ಸಲಹೆಗಳನ್ನು ಪಾಲಿಸುವಂತೆ ಕುಮಾರ್ ಜನರಿಗೆ ಮನವಿ ಮಾಡಿದರು ಎಂದು ಪ್ರಕಟಣೆಯಲ್ಲಿ ಸೇರಿಸಲಾಗಿದೆ. ಆಗಸ್ಟ್ 1ರಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಿಡಿಲು ಬಡಿದು ಈವರೆಗೆ 26ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ.

ಗುರುವಾರ, ಆಗಸ್ಟ್ 8, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರೇಸ್‌ಗೆ ಚಾಲನೆ

ಮುಂಬೈನಲ್ಲಿ ಟಿವಿಎಸ್ ಅಪಾಚೆ ಸ್ಪಾರ್ಟನ್ ಇಂಡಿಯಾ ರೇಸ್‌ಗೆ ಚಾಲನೆ ನೀಡಿದ ಕಾರ್ಯಕ್ರಮದಲ್ಲಿ ನಟ ಸಿದ್ಧಾರ್ಥ್ ಮಲ್ಹೋತ್ರಾ ಫೋಟೊಗೆ ಪೋಸ್ ನೀಡಿದರು

ನ್ಯಾಯಾಂಗ ನಿಂದನೆ ದೂರು ದಾಖಲು, ಉನ್ನತಾಧಿಕಾರಿಗಳಿಗೆ ನೋಟಿಸ್

ನಿಯಮ ಉಲ್ಲಂಘಿಸಿ ಅರಣ್ಯಾಧಿಕಾರಿಗಳಿಗೆ ಬಡ್ತಿ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಹೈಕೋರ್ಟ್ 2020ರಲ್ಲಿ ರದ್ದು ಮಾಡಿದ್ದ ದೋಷಪೂರಿತ ಜ್ಯೇಷ್ಠತಾ ಪಟ್ಟಿ ಆಧಾರದಲ್ಲೇ ವಲಯ ಅರಣ್ಯಾಧಿಕಾರಿಗಳಿಗೆ (ಆರ್‌ಎಫ್‌ಒ) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಎಸಿಎಫ್) ಹುದ್ದೆಗೆ ಬಡ್ತಿ ನೀಡಲು ಅರಣ್ಯ ಇಲಾಖೆ ಬಡ್ತಿ ಸಮಿತಿ ಅನುಮೋದನೆ ನೀಡಿದೆ.

ಆರ್‌ಎಫ್‌ಒ ಹುದ್ದೆಗೆ ನೇರ ನೇಮಕಾತಿ ಆದವರು ಹಾಗೂ ವಲಯ ಅರಣ್ಯಾಧಿಕಾರಿ ಹುದ್ದೆಯಿಂದ ಬಡ್ತಿ ಪಡೆದು ಆರ್‌ಎಫ್‌ಒ ಆದವರಿಗೆ ಬಡ್ತಿ ನೀಡುವಾಗ 50:50ರ ಅನುಪಾತದಂತೆ ಕ್ರಮಕೈಗೊಳ್ಳಲು ನಿಯಮ ರೂಪಿಸಲಾಗಿದೆ. ಆದರೆ, ನೇರ ನೇಮಕಾತಿಯಾದ ಅಧಿಕಾರಿಗಳನ್ನು ಕಡೆಗಣಿಸಿ, ಬಡ್ತಿ ಪ್ರಕ್ರಿಯೆ ಕೈಗೊಳ್ಳಲಾಗಿದೆ.

1976ರ ನೇಮಕಾತಿ ಆದೇಶವನ್ನು ಉಲ್ಲಂಘಿಸಿ ಅರಣ್ಯ ಇಲಾಖೆ ಹಲವು ಹೆಚ್ಚುವರಿ ಹುದ್ದೆಗಳನ್ನು ನೇರ ನೇಮಕಾತಿ ನಿಯಮಗಳಿಗೆ ವಿರುದ್ಧವಾಗಿ ಕೆಲ ವರ್ಷಗಳ ಹಿಂದೆ ಭರ್ತಿ ಮಾಡಿಕೊಂಡಿತ್ತು. ನಿಗದಿತ ನಮೂನೆಗಳಲ್ಲಿ ವಿವಿಧ ಹಂತದ ಅಧಿಕಾರಿಗಳ ಜ್ಯೇಷ್ಠತೆಯನ್ನು ಕ್ರಮಬದ್ಧವಾಗಿ ನಿರ್ವಹಿಸದೇ 2018ರಲ್ಲಿ ಬಡ್ತಿ ಪಟ್ಟಿ ಸಿದ್ಧಪಡಿಸಿತ್ತು. ಇಂತಹ ದೋಷಪೂರಿತ ಪಟ್ಟಿಯನ್ನು ಪ್ರಶ್ನಿಸಿ ಹಲವರು ಹೈಕೋರ್ಟ್ ಮೊರೆ ಹೋಗಿದ್ದರು. ವಿಚಾರಣೆ ನಡೆಸಿದ್ದ ಹೈಕೋರ್ಟ್ ಜ್ಯೇಷ್ಠತಾ ಪಟ್ಟಿಯನ್ನು ರದ್ದು ಮಾಡಿತ್ತು.

'ದೋಷ ಪೂರಿತ ಜ್ಯೇಷ್ಠತಾ ಪಟ್ಟಿ ವಿರುದ್ಧದ ಪ್ರಕರಣಗಳ ಕುರಿತು ಇಂದಿಗೂ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿವೆ. ಪ್ರಕರಣ ಇತ್ಯರ್ಥಗೊಳ್ಳುವವರೆಗೂ ಬಡ್ತಿ ನೀಡದಂತೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಇದರ ನಡುವೆಯೇ ಅರಣ್ಯ ಇಲಾಖೆ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದವರ ಹೆಸರನ್ನು ಮಾತ್ರ ಜ್ಯೇಷ್ಠತಾ ಪಟ್ಟಿಯಲ್ಲಿ ಸೇರಿಸಿದೆ. 2020ರಲ್ಲಿ ರದ್ದುಗೊಂಡಿದ್ದ ಪಟ್ಟಿಗೆ ಸಣ್ಣಪುಟ್ಟ ಬದಲಾವಣೆ ತಂದು ತರಾತುರಿಯಲ್ಲಿ ಇದೇ ಜೂನ್ 29ರಂದು ಪ್ರಕಟಿಸಿದೆ. ಜುಲೈ 29ರಂದು ಇಲಾಖಾ ಬಡ್ತಿ ಸಮಿತಿ ಸಭೆ ನಡೆಸಿ 72 ವಲಯ ಅರಣ್ಯಾಧಿಕಾರಿಗಳಿಗೆ ಎಸಿಎಫ್ ಹುದ್ದೆಗೆ ಬಡ್ತಿ ನೀಡಲು ಅನುಮೋದನೆ ನೀಡಿದೆ. ಇದರ ಹಿಂದೆ ದೊಡ್ಡ ಪ್ರಮಾಣದ ಹಣಕಾಸಿನ ವ್ಯವಹಾರ ನಡೆದಿದೆ' ಎಂದು ಹೆಸರು ಹೇಳಲು ಇಚ್ಛಿಸದ ಅಧಿಕಾರಿಗಳು ಆರೋಪಿಸಿದ್ದಾರೆ.

'ದೋಷಪೂರಿತ ಜ್ಯೇಷ್ಠತಾ ಪಟ್ಟಿ ಸರಿಪಡಿಸಿ, ಎಲ್ಲ ಅಧಿಕಾರಿಗಳಿಗೆ ನ್ಯಾಯ ದೊರಕಿಸಲು ಅರಣ್ಯ ಇಲಾಖೆ ಕ್ರಮ ಕೈಗೊಂಡಿಲ್ಲ. ಹೈಕೋರ್ಟ್ ಆದೇಶದ ಹೊರತಾಗಿಯೂ ಬಡ್ತಿ ನೀಡಲು ಜ್ಯೇಷ್ಠತಾ ಪಟ್ಟಿ ಬಿಡುಗಡೆ ಮಾಡಿದೆ. ನೇರ ನೇಮಕಾತಿ ಮೂಲಕ ವಲಯ ಅರಣ್ಯಾಧಿಕಾರಿ ಹುದ್ದೆ ಪಡೆದವರಿಗೆ ಅನ್ಯಾಯ ಮಾಡಲಾಗುತ್ತಿದೆ. ಕೆಲ ಪ್ರಭಾವಿಗಳು, ಸಂಸದರು, ಶಾಸಕರು ಇಲಾಖೆ ಸಚಿವರಿಗೆ ತಪ್ಪು ಮಾಹಿತಿ ನೀಡಿದ್ದಾರೆ.

ಈ ಸಂಬಂಧ ಜುಲೈ 24ರಂದು ನ್ಯಾಯಾಂಗ ನಿಂದನೆ ಅರ್ಜಿ ದಾಖಲಾಗಿದೆ. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಕೋರ್ಟ್ ನೋಟಿಸ್ ಜಾರಿ ಮಾಡಿದೆ. ಆದರೂ, 29ರಂದು ಡಿಪಿಸಿ ಸಭೆ ನಡೆಸಲಾಗಿದೆ' ಎಂದು ಅಧಿಕಾರಿಗಳು ದೂರಿದರು.

ಹೆಸರು ಸೇರ್ಪಡೆಗೆ 'ಕಣ್ತಪ್ಪಿನ' ಅಸ್ತ್ರ

ಅರಣ್ಯ ಇಲಾಖೆ ವಲಯ ಅರಣ್ಯಾಧಿಕಾರಿಗಳ ಜ್ಯೇಷ್ಠತಾ ಪಟ್ಟಿ ಪ್ರಕಟಿಸಿದ ನಂತರವೂ ತಿದ್ದುಪಡಿ ಆದೇಶದ ಮೂಲಕ ಮತ್ತೆ ಕೆಲವರನ್ನು ಸೇರ್ಪಡೆ ಮಾಡಿದೆ. ಹೀಗೆ ಸೇರ್ಪಡೆ ಮಾಡಲು ಹೊರಡಿಸಿದ ಆದೇಶಗಳಲ್ಲಿ ಕಣ್ತಪ್ಪಿನಿಂದ ಬಿಟ್ಟುಹೋದ ಕಾರಣ ನೀಡಲಾಗಿದೆ. ಅಲ್ಲದೇ, ಬಡ್ತಿ ಪ್ರಕ್ರಿಯೆಯೂ ಕೋರ್ಟ್ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ ಎಂದು ಷರಾ ಸೇರಿಸಲಾಗಿದೆ. ತಮಗೆ ಬೇಕಾದವರು ಬಡ್ತಿಯಿಂದ ಪಡೆದ ಸ್ಥಾನವನ್ನು ಕೋರ್ಟ್ ಪ್ರಕರಣಗಳು ಇತ್ಯರ್ಥವಾಗುವರೆಗೆ ಅನುಭವಿಸಲು ಇಲಾಖೆಯೇ ಅವಕಾಶ ಮಾಡಿಕೊಡುತ್ತಿದೆ.

ಅಂಕಿ ಅಂಶಗಳು

785 ವಲಯ ಅರಣ್ಯಾಧಿಕಾರಿ ಹುದ್ದೆಗಳು

72 ಬಡ್ತಿ ಪಡೆಯುತ್ತಿರುವ ಅಧಿಕಾರಿಗಳು

231 ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳು

ಕಲ್ಯಾಣ ಕರ್ನಾಟಕ ದ ಪ್ರಕರಣ ಹೊರತುಪಡಿಸಿ, ಉಳಿದ ಹುದ್ದೆಗಳಿಗೆ ಕೋರ್ಟ್ ಆದೇಶ, ಸರ್ಕಾರದ ನಿಯಮದಂತೆಯೇ ಬಡ್ತಿ ನೀಡಲಾಗುತ್ತಿದೆ

ಎನ್. ಮಂಜುನಾಥ್ ಪ್ರಸಾದ್
ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಅರಣ್ಯ ಇಲಾಖೆ

'ಆಯೋಗ ಸಿ.ಎಂ ಹೆಸರು ಉಲ್ಲೇಖಿಸಿದರೆ ನೋಡೋಣ'

ಪ್ರಜಾವಾಣಿ ವಾರ್ತೆ

ಜಿ.ಪರಮೇಶ್ವರ

ಹೊಸಪೇಟೆ (ವಿಜಯನಗರ): 'ಮುಡಾ ವಿಷಯದಲ್ಲಿ ಪಾದಯಾತ್ರೆ ನಡೆದಿರುವುದು ಶುದ್ಧ ರಾಜಕೀಯ. ರಾಜ್ಯಪಾಲರು ಕೇಂದ್ರದ ಕೈಗೊಂಬೆ ಆಗಿದ್ದಾರೆ. ತನಿಖಾ ಆಯೋಗವು ಸಿದ್ದರಾಮಯ್ಯ ಅವರ ಹೆಸರನ್ನು ಉಲ್ಲೇಖಿಸಿದರೆ, ಆಮೇಲೆ ನೋಡೋಣ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

'ಮುಡಾ ಹಗರಣದ ತನಿಖೆಗೆ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ನೇತೃತ್ವದ ಆಯೋಗ ರಚಿಸಲಾಗಿದೆ. ದೇಸಾಯಿ ಅವರೇನು ಮುಖ್ಯಮಂತ್ರಿಯ ದೊಡ್ಡಪ್ಪನ ಮಗನಾ? ಆಯೋಗ ನೀಡುವ ವರದಿಯಲ್ಲಿ ಸಿದ್ದರಾಮಯ್ಯ ಹೆಸರು ಉಲ್ಲೇಖವಾದರೆ ಆಮೇಲೆ ನೋಡಿಕೊಳ್ಳೋಣ' ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು. 'ತಮ್ಮ ಜಮೀನು ಕೊಟ್ಟಿದ್ದಕ್ಕೆ ಬದಲಿ ಜಮೀನು ಕೇಳಿದ್ದಾರೆ. ಹೀಗೆ ನಿವೇಶನ ನೀಡಬೇಕೆಂದು ಕೇಳಿದ್ದರಲ್ಲಿ ಸಿದ್ದರಾಮಯ್ಯ ಅವರ ರುಜು ಇದೆಯೇ? ಸರ್ಕಾರದಿಂದ ಆದೇಶ ಹೋಗಿದೆಯೇ? ಏನೂ ಇಲ್ಲದಿದ್ದರೂ ಇದೀಗ ರಾಜಕೀಯ ಕಾರಣಕ್ಕೆ ಪಾದಯಾತ್ರೆ ನಡೆದಿದೆ. ಈ ಪಾದಯಾತ್ರೆಯಿಂದ ಜನಸಾಮಾನ್ಯರಿಗೆ ಒಂದಿಷ್ಟೂ ಲಾಭ ಇಲ್ಲ' ಎಂದರು.

'ಯಡಿಯೂರಪ್ಪನ ಹಗರಣಗಳನ್ನೆಲ್ಲಾ ಬಿಚ್ಚಿಡುತ್ತೇನೆ'

ಪೋಕ್ಸೊ ಕೇಸ್ ಎದುರಿಸುತ್ತಿರುವವರಿಗೆ ನನ್ನ ಬಗ್ಗೆ ಮಾತನಾಡುವ ನೈತಿಕತೆ ಇದೆಯೇ?: ಸಿ.ಎಂ

ಪ್ರಜಾವಾಣಿ ವಾರ್ತೆ

ಮೈಸೂರು: '82ನೇ ವಯಸ್ಸಿನಲ್ಲಿ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆಯಡಿ ಕೇಸ್ ಎದುರಿಸುತ್ತಿರುವ ಬಿ.ಎಸ್.ಯಡಿಯೂರಪ್ಪನವರಿಗೆ ನನ್ನ ಬಗ್ಗೆ ಮಾತನಾಡುವ ನೈತಿಕತೆ ಇದೆಯೇ? ಅವರ ಕಾಲದಲ್ಲಿ ಆಗಿರುವ ಹಗರಣಗಳನ್ನೆಲ್ಲಾ ಆ.9ರಂದು ನಗರದಲ್ಲಿ ನಡೆಯಲಿರುವ ಕಾಂಗ್ರೆಸ್ ಜನಾಂದೋಲನ ಸಮಾವೇಶದಲ್ಲಿ ಬಿಚ್ಚಿಡುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗುಡುಗಿದರು.

'ಪಾದಯಾತ್ರೆ ಮುಗಿಯುವಷ್ಟರಲ್ಲಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು' ಎಂಬ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಯಡಿಯೂರಪ್ಪ ಅವರ ಹೇಳಿಕೆಗೆ ಬುಧವಾರ ಇಲ್ಲಿ ತಿರುಗೇಟು ನೀಡಿದರು.

'ಪೋಕ್ಸೊ ಕೇಸ್‌ನಲ್ಲಿ ದೋಷಾರೋಪ ಪಟ್ಟಿಯನ್ನೂ ಹಾಕಲಾಗಿದ್ದು, ನ್ಯಾಯಾಲಯದ ದಯೆಯಿಂದಾಗಿ ಅವರು ಬದುಕಿದ್ದಾರೆ; ಜೈಲಿಗೆ ಹೋಗಿಲ್ಲ. ಆ ಕೇಸ್‌ನಲ್ಲಿ ಜಾಮೀನೇ ಸಿಗುವಂತಿಲ್ಲ. ನೀವು (ಮಾಧ್ಯಮದವರು) ಅದನ್ನು ಜಾಸ್ತಿ ತೋರಿಸುವುದಿಲ್ಲ. ಅವರು ಸಾರ್ವಜನಿಕ ಜೀವನದಿಂದಲೇ ನಿವೃತ್ತಿಯಾಗಬೇಕು' ಎಂದು ಗರಂ ಆದರು.

'ಯಡಿಯೂರಪ್ಪ 18ರಿಂದ 20 ಕೇಸ್‌ಗಳಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಚೆಕ್ ಮೂಲಕ ದುಡ್ಡು ತೆಗೆದುಕೊಂಡಿದ್ದರು. ಡಿ-ನೋಟಿಫೈ ಮಾಡಿದ್ದರು. ನಾನು ಮಾಡಿದ್ದೇನೆಯೇ? ನನ್ನ ಪತ್ರ, ಆದೇಶ ಅಥವಾ ಹೇಳಿಕೆ ಇದೆಯಾ? ನಾನು ಯಾವುದೇ ಪ್ರಭಾವ ಬೀರಿಲ್ಲ. ಬುಧವಾರವೇ ಪತ್ರಿಕಾಗೋಷ್ಠಿಯಲ್ಲಿ ಎಲ್ಲವನ್ನೂ ಹೇಳಲು ಉದ್ದೇಶಿಸಿದ್ದೆ. ಸಮಾವೇಶದಲ್ಲೇ ತಿಳಿಸಲೆಂದು ಮುಂದೂಡಿದೆ' ಎಂದರು.

'ಅವರ ಕಾಲದಲ್ಲಿ ನಡೆದ ಹಗರಣಗಳು ಯಾವ ಹಂತದಲ್ಲಿವೆ, ಜಂತಕಲ್ ಪ್ರಕರಣವೇನು, ಅವರು ತಮ್ಮ ಮಗನೊಂದಿಗೆ ಮಾಡಿದ್ದ ಶೆಲ್ ಪ್ರಕರಣ, ದೇವರಾಜ ಅರಸು ಟ್ರಕ್ ಟರ್ಮಿನಲ್, ಭೋವಿ ಅಭಿವೃದ್ಧಿ ನಿಗಮದಲ್ಲಾದ ಹಗರಣಗಳನ್ನೆಲ್ಲಾ ತಿಳಿಸುತ್ತೇನೆ. ಬಿಜೆಪಿ-ಜೆಡಿಎಸ್‌ನವರ ಸುಳ್ಳುಗಳನ್ನು ಎದುರಿಸುವ ಧೈರ್ಯ ಸದಾ ಇದೆ. ಎರಡೂ ಪಕ್ಷದವರ ಹಗರಣಗಳ ಬಗ್ಗೆಯೂ ತನಿಖೆ ಮಾಡುತ್ತಿದ್ದೇವೆ' ಎಂದರು.

ಒಂದೇ ನೋಟಿಸ್: 'ರಾಜ್ಯಪಾಲರಿಂದ ಬಂದಿರುವುದು ಒಂದೇ ನೋಟಿಸ್. ಅದಕ್ಕೆ ಉತ್ತರಿಸಿದ್ದೇನೆ. ನೂತನ ಮುಖ್ಯ ಕಾರ್ಯದರ್ಶಿಯಿಂದ ಅವರು ವಿವರಣೆ ಕೇಳಿರುವುದು ಗೊತ್ತಿಲ್ಲ' ಎಂದು ಪ್ರತಿಕ್ರಿಯಿಸಿದರು.

'ವಿರೋಧ ಪಕ್ಷದವರು ನನ್ನನ್ನೇ ಏಕೆ ಟಾರ್ಗೆಟ್ ಮಾಡುತ್ತಿದ್ದಾರೆ? ಆಪರೇಷನ್ ಕಮಲ ಯಶಸ್ವಿಯಾಗಲಿಲ್ಲವೆಂದು, ಬಿಜೆಪಿ- ಜೆಡಿಎಸ್‌ನವರಿಬ್ಬರೂ ಸೇರಿ ಸರ್ಕಾರ ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ನಾನು ಬಡವರ ಪರವಾಗಿ ಕೆಲಸ ಮಾಡುತ್ತಿರುವುದು, ಗ್ಯಾರಂಟಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುವುದನ್ನು ತಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ' ಎಂದರು.

'ಅವರು ಈ ಯೋಜನೆಗಳಿಗೆ ಆರಂಭದಿಂದಲೂ ವಿರುದ್ಧವಾಗಿದ್ದಾರೆ. ಜಾರಿಗೊಳಿಸಿದರೂ ನಿಲ್ಲಿಸಿಬಿಡುತ್ತಾರೆಂದು ಪ್ರಧಾನಿಯೇ ಹೇಳಿದ್ದರು. ನಾವೇನಾದರೂ ನಿಲ್ಲಿಸಿದ್ದೇವೆಯೇ. ಒಂದು ವರ್ಷದಿಂದ ಯಶಸ್ವಿಯಾಗಿ ಮಾಡುತ್ತಿದ್ದೀವಲ್ಲವೇ' ಎಂದು ಪ್ರಶ್ನಿಸಿದರು.

ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್ ಜತೆಗಿದ್ದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆ.9ರಂದು ಕಾಂಗ್ರೆಸ್ ಆಯೋಜಿಸಿರುವ 'ಜನಾಂದೋಲನ ಸಮಾವೇಶ'ಕ್ಕೆ ನಡೆದಿರುವ ಸಿದ್ಧತೆಯನ್ನು ಬುಧವಾರ ಪರಿಶೀಲಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪುತ್ರ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಮಾಹಿತಿ ನೀಡಿದರು. ಸಚಿವರಾದ ಡಾ.ಎಚ್‌.ಸಿ. ಮಹದೇವಪ್ಪ, ಕೆ.ವೆಂಕಟೇಶ್ ಜತೆಗಿದ್ದರು — ಪ್ರಜಾವಾಣಿ ಚಿತ್ರ

ನಾನು ಸಿಎಂ ಆಗಿದ್ದಾಗಲೇ ನಿವೇಶನಕ್ಕೆ ಅರ್ಜಿ

ಮೈಸೂರು: 'ಜಮೀನನ್ನು ಬಡಾವಣೆಗೆ ಬಳಸಿಕೊಂಡಿದ್ದಕ್ಕೆ ಪ್ರತಿಯಾಗಿ ಬದಲಿ ನಿವೇಶನ ಕೊಡುವಂತೆ ನನ್ನ ಪತ್ನಿಯು ನಾನು ಮುಖ್ಯಮಂತ್ರಿ ಆಗಿದ್ದಾಗಲೇ ಅರ್ಜಿ ಕೊಟ್ಟಿದ್ದಳು. ಆದರೆ, ನಾನು ಕೊಡಿಸಿರಲಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

'ನಮ್ಮ ಜಮೀನನ್ನು ಒತ್ತುವರಿ ಮಾಡಿಕೊಂಡು ನಿವೇಶನ ಮಾಡಿ ಹಂಚಿಬಿಟ್ಟಿದ್ದೀರಿ, ಅದಕ್ಕಾಗಿ ಬದಲಿ ನಿವೇಶನ ಕೊಡಿ ಎಂದು ನನ್ನ ಹೆಂಡತಿ 2014ರಲ್ಲೇ ಅಂದರೆ ನಾನು ಮುಖ್ಯಮಂತ್ರಿಯಾಗಿದ್ದಾಗಲೇ ಮುಡಾಕ್ಕೆ ಅರ್ಜಿ ಕೊಟ್ಟಿದ್ದಳು. ನಾನು ಮುಖ್ಯಮಂತ್ರಿ ಆಗಿರುವವರೆಗೂ ಬದಲಿ ನಿವೇಶನ ಕೊಡಕೂಡದೆಂದು ಮುಡಾದವರಿಗೆ ಹೇಳಿದ್ದೆ. ಒಂದು ಗುಂಟೆಯನ್ನೂ ಕೊಡಬೇಡಿ ಎಂದು ನಗರಾಭಿವೃದ್ಧಿ ಇಲಾಖೆಗೆ ಸೂಚಿಸಿದ್ದೆ' ಎಂದರು.

'ನಾನೇ ಮುಖ್ಯಮಂತ್ರಿಯಾಗಿದ್ದರಿಂದ ಆಗಲೇ ಕೊಟ್ಟುಬಿಡಬಹುದಿತ್ತಲ್ಲವಾ? ಕೊಡಲಿಲ್ಲ. ಪ್ರಭಾವ ಬಳಸುವುದಿದ್ದರೆ ಅಂದೇ ಬಳಸುತ್ತಿದ್ದೆ. ಹಾಗೆ ಮಾಡಲಿಲ್ಲ' ಎಂದರು.

'ಮತ್ತೆ 2021ರಲ್ಲಿ ಅರ್ಜಿ ಕೊಟ್ಟಿದ್ದಳು. ಆಗ ಬಿಜೆಪಿ ಅಧಿಕಾರದಲ್ಲಿತ್ತು. ನಾನು ಪ್ರಭಾವ ಬೀರಲು ಹೇಗೆ ಸಾಧ್ಯ? ಎಲ್ಲವೂ ಕಾನೂನುಪ್ರಕಾರ ಇದ್ದಿದ್ದರಿಂದ ಬದಲಿ ನಿವೇಶನ ಕೊಟ್ಟಿದ್ದಾರಷ್ಟೆ. ಇದೆಲ್ಲ ವಿವರಣೆಯನ್ನೂ ರಾಜ್ಯಪಾಲರಿಗೆ ನೀಡಿದ್ದೇನೆ. ಕಾನೂನು ಪ್ರಕಾರ ಇರುವುದರಿಂದ ಒಪ್ಪುತ್ತಾರೆಂಬ ನಂಬಿಕೆ ನನಗಿದೆ. ಅವರೂ ಕಾನೂನಿನಂತೆಯೇ ನಡೆದುಕೊಳ್ಳಬೇಕಾಗುತ್ತದೆ' ಎಂದು ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

ಹಣಕ್ಕೆ ಬೇಡಿಕೆ ಆರೋಪ: ಅಬ್ರಾಹಂ ವಿರುದ್ಧ ಚಾರ್ಜ್‌ಶೀಟ್

ಬೆಂಗಳೂರು: ಕೆಎಎಸ್ ಅಧಿಕಾರಿ ಬಿ.ಸುಧಾ ಅವರಿಗೆ ಹಣ ನೀಡುವಂತೆ ಬೇಡಿಕೆ ಇರಿಸಿದ್ದ ಆರೋಪದ ಅಡಿ ಟಿ.ಜೆ. ಅಬ್ರಾಹಂ ಹಾಗೂ ಮಧ್ಯವರ್ತಿ ಸುನೀಲ್ ಎಂಬುವವರ ವಿರುದ್ಧ ದಾಖಲಾಗಿದ್ದ ಪ್ರಕರಣದ ತನಿಖೆ ನಡೆಸಿದ ಜೀವನ ಭೀಮಾನಗರ ಠಾಣೆ ಪೊಲೀಸರು, ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದಾರೆ.

ಸುಧಾ ನೀಡಿದ ದೂರಿನ ಮೇರೆಗೆ ಅಬ್ರಾಹಂ ಮತ್ತು ಸುನೀಲ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

'ಅಬ್ರಾಹಂ ಅವರು ಸಾಮಾಜಿಕ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿದ್ದಾರೆ. ಕೆಎಎಸ್ ಅಧಿಕಾರಿ ವಿರುದ್ಧ ಭ್ರಷ್ಟಾಚಾರ ಆರೋಪದ ಅಡಿ ಲೋಕಾಯುಕ್ತ ಮತ್ತು ಎಸಿಬಿಗೆ ದೂರು ನೀಡಿದ್ದರು. ನಂತರ, ಪ್ರಕರಣದಲ್ಲಿ ಯಾವುದೇ ತೊಂದರೆ ಆಗದಂತೆ ಮಾಡಲು ಹಣಕ್ಕೆ ಬೇಡಿಕೆ ಇಟ್ಟಿದ್ದರು' ಎಂದು ಆರೋಪಿಸಿ ಸುಧಾ ದೂರು ನೀಡಿದ್ದರು. 2023ರ ಆಗಸ್ಟ್ 1ರಂದು ಜೀವನ ಭೀಮಾನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಇದೇ ಪ್ರಕರಣದಲ್ಲಿ ಖಾಸಗಿ ಸುದ್ದಿವಾಹಿನಿ ರಹಸ್ಯ ಕಾರ್ಯಾಚರಣೆ ನಡೆಸಿತ್ತು.

'ಬಂಧನದ ಭೀತಿಯಿಂದ ಆರೋಪಿಗಳಿಬ್ಬರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದಿದ್ದರು. ಇಬ್ಬರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಲಾಗಿತ್ತು. ತನಿಖೆ ವೇಳೆ ಅಧಿಕಾರಿಗೆ ಕರೆ ಮಾಡಿ ಹಣಕ್ಕೆ ಬೇಡಿಕೆ ಇರಿಸಿದ್ದ ಕಾಲ್ ರೆಕಾರ್ಡ್‌ಗಳು, ಖಾಸಗಿ ಸುದ್ದಿ ವಾಹಿನಿಯ ರಹಸ್ಯ ಕಾರ್ಯಾಚರಣೆ ವಿಡಿಯೊಗಳು, ಆರೋಪಿಗಳ ಧ್ವನಿ ಮಾದರಿ ಸಂಗ್ರಹಿಸಲಾಗಿತ್ತು. ತಾಂತ್ರಿಕ ಸಾಕ್ಷ್ಯ ಹಾಗೂ ಧ್ವನಿ ಮಾದರಿಗಳನ್ನು ಪರೀಕ್ಷೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗಿತ್ತು. ಎಫ್‌ಎಸ್‌ಎಲ್ ವರದಿ ಬರುವುದು ವಿಳಂಬವಾಗಿತ್ತು. ಕಳೆದ ವಾರ ವರದಿ ಬಂದಿದ್ದು, ಮೂರು ದಿನಗಳ ಹಿಂದೆ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಅನುದಾನಿತ ಶಾಲಾ ಶಿಕ್ಷಕರ ಭರ್ತಿಗೆ ಅನುಮೋದನೆ

ಬೆಂಗಳೂರು: ಖಾಸಗಿ ಅನುದಾನಿತ ಪ್ರೌಢಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಶಾಲಾ ಶಿಕ್ಷಣ ಇಲಾಖೆ ಅನುಮೋದನೆ ನೀಡಿದೆ.

1995–96ನೇ ಶೈಕ್ಷಣಿಕ ಸಾಲಿನ ಪೂರ್ವದಲ್ಲಿ ಆರಂಭವಾಗಿ ವೇತನಾನುದಾನಕ್ಕೆ ಒಳಪಟ್ಟಿರುವ ಶಾಲಾ–ಕಾಲೇಜುಗಳಲ್ಲಿ ಜನವರಿ 2016ರಿಂದ ಡಿಸೆಂಬರ್ 2020ರವರೆಗಿನ ಅವಧಿಯಲ್ಲಿ ನಿವೃತ್ತಿ, ನಿಧನ, ರಾಜೀನಾಮೆ ಮತ್ತಿತರ ಕಾರಣಗಳಿಂದ ಖಾಲಿ ಇರುವ ಎಲ್ಲ ವಿಷಯಗಳ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬಹುದು.

ಅನುದಾನ ಸಂಹಿತೆ, ನೇಮಕಾತಿ ನಿಯಮಗಳಿಗೆ ಒಳಪಟ್ಟು ಹುದ್ದೆಗಳನ್ನು ಭರ್ತಿಮಾಡಿಕೊಳ್ಳಬೇಕು. ಮೀಸಲಾತಿ ನಿಯಮ ಹಾಗೂ ಕಲ್ಯಾಣ ಕರ್ನಾಟಕದ ಮೀಸಲಾತಿಯನ್ನು ಕಡ್ಡಾಯವಾಗಿ ಪಾಲಿಸಬೇಕು. ಅಗತ್ಯ ಮಕ್ಕಳ ಸಂಖ್ಯೆಯನ್ನು ಖಚಿತಪಡಿಸಿಕೊಳ್ಳಬೇಕು. ನಂತರ ಸಂಪೂರ್ಣ ಮಾಹಿತಿ ಮತ್ತು ದಾಖಲೆಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಮೈಸೂರು ಚಲೋ ಪಾದಯಾತ್ರೆ: ಎಚ್‌.ಡಿ.ಕುಮಾರಸ್ವಾಮಿ ಹೇಳಿಕೆ

'ತಮಿಳುನಾಡನ್ನು ಒಪ್ಪಿಸಿ, ಅನುಮತಿ ಕೊಡಿಸುವೆ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಅಧಿಕಾರಕ್ಕೆ ಬಂದಲ್ಲಿ ಐದೇ ನಿಮಿಷದಲ್ಲಿ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸುವುದಾಗಿ ಭರವಸೆ ನೀಡಿದ್ದು ನಿಜ. ಆದರೆ, ನಿಮ್ಮ 'ಇಂಡಿಯಾ' ಮಿತ್ರಕೂಟದಲ್ಲಿರುವ ತಮಿಳುನಾಡು ಸರ್ಕಾರವನ್ನು ಒಪ್ಪಿಸುವ ಜವಾಬ್ದಾರಿ ನಿಮ್ಮದೇ ಎಂಬ ಮಾತನ್ನೂ ಹೇಳಿದ್ದೆ. ಅದನ್ನು ಪ್ರಸ್ತಾಪಿಸದೆ ಕಾಂಗ್ರೆಸ್ ನಾಯಕರು ನಮ್ಮ ಜನರ ದಿಕ್ಕು ತಪ್ಪಿಸುತ್ತಿದ್ದಾರೆ' ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ತಿರುಗೇಟು ನೀಡಿದರು.

ನಗರದಿಂದ ಬುಧವಾರ ಹೊರಟ ಐದನೇ ದಿನದ 'ಮೈಸೂರು ಚಲೋ' ಪಾದಯಾತ್ರೆಯಲ್ಲಿ ಅವರು ಮಾತನಾಡಿ, 'ಯೋಜನೆ ಅನುಷ್ಠಾನಕ್ಕೆ ಇಲ್ಲಿನ ಕಾಂಗ್ರೆಸ್ ಸರ್ಕಾರವೂ ಸಹಕರಿಸಬೇಕು. ಕೇಂದ್ರವೇ ಎಲ್ಲವನ್ನೂ ಮಾಡಲಾಗದು. ತಮಿಳುನಾಡು ಮುಖ್ಯಮಂತ್ರಿಯೊಂದಿಗೆ ಮಾತುಕತೆ ನಡೆಸಿ ಒಪ್ಪಿಸಿದರೆ, ನಾನು ಪ್ರಧಾನಿಯೊಂದಿಗೆ ಮಾತನಾಡಿ ಒಪ್ಪಿಸುತ್ತೇನೆ ಎಂದಿದ್ದೆ. ಅದಕ್ಕೆ ಈಗಲೂ ಬದ್ಧ' ಎಂದರು.

ವಿಡಿಯೊ ಬಿಡುವ ಚಾಳಿ: 'ಕೊಚ್ಚೆಗಳ ಬಗ್ಗೆ ಮಾತನಾಡಬಾರದು ಎಂದುಕೊಂಡಿದ್ದೆ. ಆದರೆ, ಕಾಂಗ್ರೆಸ್ ಜನಾಂದೋಲನ ವೇದಿಕೆಯಲ್ಲಿ ಡಿ.ಕೆ.ಶಿವಕುಮಾರ್ ಅವರು ನನ್ನ ಬಗ್ಗೆ ವಿಡಿಯೊ ಪ್ಲೇ ಮಾಡಿದ್ದಾರೆ. ನಾನು ಅದಕ್ಕೆ ಹೇಳಿದ್ದು 'ಸಿಡಿ ಶಿವು' ಅಂತ. ವಿಡಿಯೊ ಬಿಡುವ ಚಾಳಿ ಎಲ್ಲೋಗುತ್ತೆ' ಎಂದು ಕುಮಾರಸ್ವಾಮಿ ಹರಿಹಾಯ್ದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, 'ಈ ಭಂಡ ಸರ್ಕಾರದಿಂದ ಜನರಿಗೆ ಒಳಿತಾಗುವುದಿಲ್ಲ. ಹಗರಣಗಳನ್ನು ಮುಚ್ಚಿ ಹಾಕಲು ಹುನ್ನಾರ ನಡೆಸುತ್ತಿದೆ. ಪೊಲೀಸರ ಮೇಲೆ ನಮಗೆ ನಂಬಿಕೆ ಇದೆಯೇ ಹೊರತು ಸರ್ಕಾರದ ಮೇಲಲ್ಲ. ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಬೇಕೆಂದೇ ಪಾದಯಾತ್ರೆ ನಡೆಸುತ್ತಿದ್ದೇವೆ' ಎಂದು ಗುಡುಗಿದರು.

ಮಂಡ್ಯದಲ್ಲಿ ಬುಧವಾರ ನಡೆದ 'ಮೈಸೂರು ಚಲೋ' ಪದಾಯಾತ್ರೆಯಲ್ಲಿ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಮಾತನಾಡಿದರು. ನಾಯಕರಾದ ಸಿ.ಟಿ. ರವಿ, ನಿಖಿಲ್ ಕುಮಾರಸ್ವಾಮಿ, ಬಿ.ವೈ.ವಿಜಯೇಂದ್ರ, ಆರ್‌.ಅಶೋಕ್, ಅಶ್ವತ್ಥನಾರಾಯಣ ಇದ್ದಾರೆ — ಪ್ರಜಾವಾಣಿ ಚಿತ್ರ

ಪ್ರೀತಂಗೌಡ ಪರ ಘೋಷಣೆ: ಮಾತಿನ ಚಕಮಕಿ

'ಮೈಸೂರು ಚಲೋ' ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರೀತಂಗೌಡ ಅವರ ಬೆಂಬಲಿಗರು 'ಗೌಡರ ಗೌಡ, ಪ್ರೀತಂ ಗೌಡ' ಎಂದು ಜೈಕಾರ ಕೂಗಿದರು.

ಇದನ್ನು ಕೇಳಿದ ಜೆಡಿಎಸ್ ಕಾರ್ಯಕರ್ತರು ಕೆರಳಿದರು. ಪ್ರೀತಂ ಪರ ಘೋಷಣೆ ಕೂಗದಂತೆ, ಅವರ ಬೆಂಬಲಿಗರೊಂದಿಗೆ ವಾಗ್ವಾದ ನಡೆಸಿದರು. ಕೆಲಹೊತ್ತು ಎರಡೂ ಬಣಗಳ ನಡುವೆ ಮಾತಿನ ಚಕಮಕಿ ಮುಂದುವರಿಯಿತು. ಮಧ್ಯ ಪ್ರವೇಶಿಸಿದ ನಿಖಿಲ್ ಕುಮಾರಸ್ವಾಮಿ, 'ಯಾವುದಕ್ಕೂ ತಲೆ ಕೆಡಿಸಿಕೊಳ್ಳಬೇಡಿ' ಎಂದು ಕಾರ್ಯಕರ್ತರನ್ನು ಸಮಾಧಾನ ಪಡಿಸಿದರು.

ಮಂಡ್ಯಕ್ಕೆ ಪ್ರೀತಂಗೌಡ ಬೆಂಬಲಿಗರು: 'ಪಾದಯಾತ್ರೆಯಲ್ಲಿ ಪಾಲ್ಗೊಳ್ಳಲು ಪ್ರೀತಂಗೌಡರ ಸಾವಿರಾರು ಬೆಂಬಲಿಗರು ಬುಧವಾರ ಇಲ್ಲಿಂದ ಮಂಡ್ಯಕ್ಕೆ ಪ್ರಯಾಣ ಬೆಳೆಸಿದರು. ಎಚ್‌.ಡಿ.ಕುಮಾರಸ್ವಾಮಿ ಅವರ ಎದುರು ಶಕ್ತಿ ಪ್ರದರ್ಶಿಸಲೆಂದೇ ಪ್ರೀತಂಗೌಡ ಸಾವಿರಾರು ಬೆಂಬಲಿಗರನ್ನು ಮಂಡ್ಯಕ್ಕೆ ಕರೆಸಿಕೊಳ್ಳುತ್ತಿದ್ದಾರೆ ಎಂಬ ಚರ್ಚೆಯೂ ಜಿಲ್ಲೆಯಲ್ಲಿ ಶುರುವಾಗಿದೆ.

ಪಾದಯಾತ್ರೆ ಆರಂಭಕ್ಕೂ ಮುನ್ನವೇ ಪ್ರೀತಂಗೌಡರ ವಿರುದ್ಧ ಕಿಡಿಕಾರಿದ್ದ ಸಚಿವ ಕುಮಾರಸ್ವಾಮಿ, 'ನಮ್ಮ ಕುಟುಂಬದ ವಿರುದ್ಧ ಷಡ್ಯಂತ್ರ ಮಾಡಿದವರ ಜೊತೆಗೆ ಕುಳಿತು ಚರ್ಚಿಸಲು ಆಗುತ್ತದೆಯೇ' ಎಂದು ಖಾರವಾಗಿ ಪ್ರಶ್ನಿಸಿದ್ದರು. ಬಿಜೆಪಿ ವರಿಷ್ಠ ನಾಯಕರು ಮಾತುಕತೆ ನಡೆಸಿದ ಬಳಿಕ, ಪಾದಯಾತ್ರೆಗೆ ಒಪ್ಪಿಗೆ ಸೂಚಿಸಿದ್ದರು.

'ಕೆರೆ ಕಳ್ಳ' ಎಂದು ಆರೋಪ

ನಾಗಮಂಗಲದ ಮಾಜಿ ಶಾಸಕ ಸುರೇಶ್‌ಗೌಡ ಮಾತನಾಡಿ, 'ಕೆರೆ ಕಳ್ಳನನ್ನು ಪಕ್ಕದಲ್ಲಿ ಕೂರಿಸಿಕೊಂಡು, ಕಾಂಗ್ರೆಸ್ ನಾಯಕರು ಭ್ರಷ್ಟಾಚಾರದ ಬಗ್ಗೆ ಭಾಷಣ ಹೊಡೆಯುತ್ತಾರೆ' ಎಂದು ಸಚಿವ ಎನ್.ಚಲುವರಾಯಸ್ವಾಮಿ ಹೆಸರು ಹೇಳದೆ ಆರೋಪಿಸಿದರು.

'ಕುಮಾರಸ್ವಾಮಿ ಅವರು ಮಂಡ್ಯದಲ್ಲಿ ಗೆದ್ದಾಗ ಮಾನ, ಮರ್ಯಾದೆ ಇದ್ದರೆ ಚಲುವರಾಯಸ್ವಾಮಿ ರಾಜೀನಾಮೆ ಕೊಡಬೇಕಿತ್ತು' ಎಂದು ವಾಗ್ದಾಳಿ ನಡೆಸಿದರು. 'ಉಸ್ತುವಾರಿ ಸಚಿವರಾಗಿ ಅಧಿಕಾರಿಗಳಿಂದ ದುಡ್ಡು ವಸೂಲಿ ಮಾಡುತ್ತಿದ್ದಾರೆ. ಅವರಿಗೆ ಜನರೇ ಬುದ್ಧಿ ಕಲಿಸುತ್ತಾರೆ. ಡಿ.ಕೆ.ಶಿವಕುಮಾರ್ ಅವರು ಹೆಂಡ ಕುಡಿದವರಂತೆ ಬಾಯಿಗೆ ಬಂದಂತೆ ಮಾತನಾಡುತ್ತಾರೆ' ಎಂದು ಆರೋಪಿಸಿದರು.

'ನನ್ನ ಮೇಲೆ ಆಧಾರರಹಿತ ಆರೋಪ'

ರಾಜ್ಯಪಾಲರ ಶೋಕಾಸ್ ನೋಟಿಸ್‌ಗೆ ಸಿ.ಎಂ ಉತ್ತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ನಿವೇಶನ ಹಂಚಿಕೆ ವಿಚಾರದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ನೀಡಿದ್ದ ಶೋಕಾಸ್ ನೋಟಿಸ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಸುಮಾರು 60 ಪುಟಗಳ ಉತ್ತರ ನೀಡಿದ್ದಾರೆ ಎಂದು ಮುಖ್ಯಮಂತ್ರಿ ಸಚಿವಾಲಯದ ಮೂಲಗಳು ಹೇಳಿವೆ.

'ಮುಡಾದಿಂದ ಪತ್ನಿ ಪಡೆದಿರುವ ನಿವೇಶನಗಳ ವಿಚಾರದಲ್ಲಿ ಯಾವುದೇ ಕಾನೂನುಬಾಹಿರ ಪ್ರಕ್ರಿಯೆ, ಅಧಿಕಾರ ದುರ್ಬಳಕೆ ಆಗಿಲ್ಲ. ನನ್ನ ಮೇಲಿರುವ ಎಲ್ಲ ಆರೋಪಗಳು ನಿರಾಧಾರ' ಎಂದು ಸಮರ್ಥನೆಗಳ ಸಹಿತ ಮುಖ್ಯಮಂತ್ರಿ ಪ್ರತಿಪಾದಿಸಿದ್ದಾರೆ ಎಂದು ತಿಳಿಸಿವೆ.

'ನನಗೆ ನೀವು ನೋಟಿಸ್ ಕೊಟ್ಟಿರುವುದು ಕ್ರಮಬದ್ಧವಲ್ಲ. ಅಧಿಕಾರದಲ್ಲಿದ್ದಾಗ ನಾನು ಸ್ವಜನಪಕ್ಷಪಾತ ಮಾಡಿಲ್ಲ. ಕಾನೂನು ಬಾಹಿರವಾಗಿ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ. ದೂರುದಾರರ ಆರೋಪಗಳಲ್ಲಿ ಹುರುಳಿಲ್ಲ' ಎಂದೂ ತಿಳಿಸಿದ್ದಾರೆ ಎಂದು ಗೊತ್ತಾಗಿದೆ.

'ಈ ಸಂಬಂಧ ಸರ್ಕಾರ ಮುಖ್ಯ ಕಾರ್ಯದರ್ಶಿ ನೀಡಿರುವ ಎಲ್ಲ ದಾಖಲಾತಿಗಳನ್ನು ಪರಿಶೀಲಿಸಬಹುದು. ನಿವೇಶನ ಹಂಚಿಕೆಗೆ ಕ್ರಮಬದ್ಧವಾಗಿದೆ ಎನ್ನುವುದಕ್ಕೆ ಆ ದಾಖಲೆಗಳೇ ಸಾಕ್ಷಿ. ನನಗೆ ನೋಟಿಸ್ ನೀಡಿರುವುದು ಸಮಂಜಸವಲ್ಲ. ದೂರುದಾರರ ಪೂರ್ವಾಪರಗಳ ಬಗ್ಗೆಯೂ ರಾಜ್ಯದ ಜನರಿಗೆ ಗೊತ್ತಿದೆ. ಹೀಗಾಗಿ, ನನ್ನ ವಿರುದ್ಧ ಮೊಕದ್ದಮೆ ದಾಖಲಿಸಲು ಪ್ರಾಸಿಕ್ಯೂಷನ್ ಅನುಮತಿಗಾಗಿ ಸಲ್ಲಿಕೆಯಾಗಿರುವ ಅರ್ಜಿಯನ್ನು ತಿರಸ್ಕರಿಸಬೇಕು' ಎಂದೂ ಪತ್ರದಲ್ಲಿದೆ ಎಂದೂ ಗೊತ್ತಾಗಿದೆ.

ಸಿದ್ದರಾಮಯ್ಯ– ಹರಿಪ್ರಸಾದ್ ರಹಸ್ಯ ಚರ್ಚೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಬುಧವಾರ ರಾತ್ರಿ ದಿಢೀರ್ ಭೇಟಿ ಮಾಡಿ ಚರ್ಚಿಸಿದರು.

ಮುಖ್ಯಮಂತ್ರಿ ವಿರುದ್ಧ ಅಸಮಾಧಾನಗೊಂಡು ಅಂತರ ಕಾಯ್ದುಕೊಂಡಿದ್ದ ಹರಿಪ್ರಸಾದ್, ವರ್ಷದ ಬಳಿಕ ಮುಖಾಮುಖಿ ಆಗಿರುವುದು ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ. ಮುಖ್ಯಮಂತ್ರಿಯ ಭೇಟಿ ಬಗ್ಗೆ ಪ್ರತಿಕ್ರಿಯಿಸಲು ಹರಿಪ್ರಸಾದ್ ನಿರಾಕರಿಸಿದರು.

ಮುಖ್ಯಮಂತ್ರಿಯ ಸರ್ಕಾರಿ ನಿವಾಸ 'ಕಾವೇರಿ'ಯಲ್ಲಿ ಇಬ್ಬರೂ ಸುಮಾರು ಒಂದು ತಾಸು ರಹಸ್ಯವಾಗಿ ಮಾತುಕತೆ ನಡೆಸಿದರು. ಮೈಸೂರಿಗೆ ತೆರಳಿದ್ದ ಮುಖ್ಯಮಂತ್ರಿ ಬುಧವಾರ ಮಧ್ಯಾಹ್ನ ನಗರಕ್ಕೆ ಮರಳಿದ್ದರು. ಕೆಲವು ಶಾಸಕರು ಕೂಡಾ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು.

ಮುಡಾ ಪ್ರಕರಣಗಳ ಬೆಳವಣಿಗೆಗಳ ನಡುವೆಯೇ ಜುಲೈ 30ರಂದು ದೆಹಲಿಗೆ ತೆರಳಿದ್ದ ಹರಿಪ್ರಸಾದ್, ಎಐಸಿಸಿ ನಾಯಕಿ ಸೋನಿಯಾ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸೇರಿ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ರಾಜ್ಯ ರಾಜಕೀಯ ಬೆಳವಣಿಗೆಗಳ ಬಗ್ಗೆ ಮಾಹಿತಿ ನೀಡಿದ್ದರು.

ವಾಲ್ಮೀಕಿ ನಿಗಮದ ಹಗರಣ: ವಿಚಾರಣೆ ಮುಂದೂಡಿಕೆ

'ಎಸ್‌ಐಟಿ ತನಿಖಾ ವ್ಯಾಪ್ತಿ ಹೊಂದಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಣ ದುರ್ಬಳಕೆ ಪ್ರಕರಣವನ್ನು ರಾಜ್ಯ ಸರ್ಕಾರ ನೇಮಿಸಿರುವ ಎಸ್‌ಐಟಿಯು (ವಿಶೇಷ ತನಿಖಾ ದಳ) ತನಿಖೆ ನಡೆಸುವ ವ್ಯಾಪ್ತಿ ಹೊಂದಿಲ್ಲ' ಎಂದು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾವನ್ನು ಹೈಕೋರ್ಟ್‌ನಲ್ಲಿ ಪ್ರತಿನಿಧಿಸುತ್ತಿರುವ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಪ್ರತಿಪಾದಿಸಿದರು.

'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರ್ಬಳಕೆ ಪ್ರಕರಣವನ್ನು ಸಿಬಿಐ ತನಿಖೆಗೆ ವರ್ಗಾಯಿಸಬೇಕು' ಎಂದು ಕೋರಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಖುದ್ದು ಹಾಜರಾಗಿದ್ದ ಆರ್.ವೆಂಕಟರಮಣಿ ಅವರು, 'ಬ್ಯಾಂಕ್‌ನಲ್ಲಿ ₹50 ಕೋಟಿಗಿಂತಲೂ ಹೆಚ್ಚಿನ ಮೊತ್ತದ ಅವ್ಯವಹಾರ ನಡೆದಿದೆ. ಇಂತಹ ಪ್ರಕರಣವನ್ನು ಸಿಬಿಐ ವಿಚಾರಣೆಗೆ ಒಳಪಡಿಸಲು ಅವಕಾಶವಿದೆ. ಹಗರಣದಲ್ಲಿ ಭಾಗಿಯಾಗಿರುವ ಬ್ಯಾಂಕ್ ಅಧಿಕಾರಿಗಳಲ್ಲದೇ ಇತರರ ವಿರುದ್ಧವೂ ತನಿಖೆ ನಡೆಸಬಹುದಾಗಿದೆ. ರಾಜ್ಯ ಸರ್ಕಾರ ತನಿಖೆಗಾಗಿ ಎಸ್‌ಐಟಿ ರಚಿಸಿದೆಯಾದರೂ, ಎಸ್‌ಐಟಿ ತನಿಖಾ ವ್ಯಾಪ್ತಿ ಹೊಂದಿಲ್ಲ. ಅಷ್ಟಕ್ಕೂ, ದಾಖಲೆ ಪರಿಶೀಲಿಸಿದ ಬಳಿಕ ಸಿಬಿಐಗೆ ಒಪ್ಪಿಗೆಯಾದರೆ ಎಸ್‌ಐಟಿ ತನಿಖೆಗೆ ಸಲಹೆ ನೀಡಬಹುದು' ಎಂದರು.

ಇದಕ್ಕೆ ರಾಜ್ಯ ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಆರೋಪಿತ ದೂರುದಾರರು (ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ) ತಮಗೆ ಹೊಂದುವ ತನಿಖಾ ಸಂಸ್ಥೆಯನ್ನು ಆಯ್ದುಕೊಳ್ಳಲು ಆಗದು. ಪೊಲೀಸ್, ರಾಜ್ಯಕ್ಕೆ ಸಂಬಂಧಿಸಿದ ವಿಷಯವಾಗಿದೆ' ಎಂದರು.

ಮುಂದುವರಿದು, 'ಬ್ಯಾಂಕ್ ಮತ್ತು ಆರ್‌ಬಿಐ ಏನು ಮಾಡಬೇಕೆಂದಿದೆಯೋ ಅದನ್ನು ಮಾಡಲಿ. ರಾಜ್ಯ ಸರ್ಕಾರ ಪ್ರಕರಣದ ತನಿಖೆ ನಡೆಸದೇ ಮೌನವಹಿಸುವಂತೆ ಹೇಳಲಾಗದು. ಇದು ಸಾಂವಿಧಾನಿಕ ಪ್ರಶ್ನೆಯಾಗಿದ್ದು, ಇದಕ್ಕೆ ನ್ಯಾಯಾಲಯ ಉತ್ತರಿಸಬೇಕಿದೆ. ಸದ್ಯಕ್ಕೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು' ಎಂದು ಮನವಿ ಮಾಡಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಪರ ಹಾಜರಾಗಿದ್ದ ಹಿರಿಯ ವಕೀಲ ರವಿವರ್ಮ ಕುಮಾರ್ ಅವರೂ, ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ಕೋರಿದರು. ಇದನ್ನು ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಸೆಪ್ಟೆಂಬರ್ 4ಕ್ಕೆ ಮುಂದೂಡಿತು.

ಇದೇ ವೇಳೆ ಶಶಿಕಿರಣ್ ಶೆಟ್ಟಿ, 'ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಗಳಾದ ನಿತೇಶ್ ರಂಜನ್, ಎ.ಮಣಿಮೇಖಲೈ, ಎಸ್. ರಾಮ ಸುಬ್ರಮಣಿಯನ್, ಸಂಜಯ್ ರುದ್ರ ಮತ್ತು ಪಂಕಜ್ ದ್ವಿವೇದಿ ವಿರುದ್ಧದ ಪ್ರಾಥಮಿಕ ತನಿಖೆಯಲ್ಲಿ ಯಾವುದೇ ದಾಖಲೆಗಳು ದೊರೆತಿಲ್ಲ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ಈ ನಾಲ್ವರ ವಿರುದ್ಧದ ಆರೋಪಗಳನ್ನು ಕೈಬಿಟ್ಟು ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಪ್ರಾಥಮಿಕ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಹೀಗಾಗಿ, ತಮ್ಮ ವಿರುದ್ಧದ ಪ್ರಕರಣ ರದ್ದುಪಡಿಸುವಂತೆ ಕೋರಿ ಈ ನಾಲ್ವರು ಹೈಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಗಳು ಈಗ ವಿಚಾರಣಾ ಮಾನ್ಯತೆ ಕಳೆದುಕೊಂಡಿವೆ' ಎಂದು ವಿವರಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠವು ಈ ಕುರಿತಾದ ಅರ್ಜಿಗಳನ್ನು ವಿಲೇವಾರಿ ಮಾಡಿತು.

ಕೋರಮಂಗಲದ ಸೇಂಟ್ ಜಾನ್ಸ್ ಸಭಾಂಗಣದಲ್ಲಿ ಆಯೋಜನೆ

ಬುಕ್ ಬ್ರಹ್ಮ: ಸಾಹಿತ್ಯ ಉತ್ಸವ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುಕ್ ಬ್ರಹ್ಮ ಸಂಸ್ಥೆಯು ಕೋರಮಂಗಲದ ಸೇಂಟ್ ಜಾನ್ಸ್ ಸಭಾಂಗಣದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ 'ಬುಕ್ ಬ್ರಹ್ಮ ಸಾಹಿತ್ಯ ಉತ್ಸವ'ಕ್ಕೆ ಶುಕ್ರವಾರ ಚಾಲನೆ ದೊರೆಯಲಿದೆ. ಕನ್ನಡದ ಸಾಹಿತಿಗಳೊಂದಿಗೆ ಹೊರ ರಾಜ್ಯಗಳು ಹಾಗೂ ವಿದೇಶಿ ಬರಹಗಾರರೂ ಈ ಸಾಹಿತ್ಯ ಹಬ್ಬದಲ್ಲಿ ಪಾಲ್ಗೊಳ್ಳಲಿದ್ದಾರೆ.

ಆಗಸ್ಟ್ 9ರಿಂದ 11ರವರೆಗೆ ಮೂರೂ ದಿನ ಬೆಳಿಗ್ಗೆ 9ರಿಂದ ರಾತ್ರಿ 8 ಗಂಟೆಯವರೆಗೆ ಕಾರ್ಯಕ್ರಮಗಳು ನಡೆಯಲಿವೆ. ಸಾಹಿತ್ಯ ಗೋಷ್ಠಿಗಳ ಜತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗಿದೆ. 300 ಬರಹಗಾರರು ಈ ಉತ್ಸವದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದ್ದು, ಕೆಲ ವಿದೇಶಿ ಬರಹಗಾರರು ಭಾಗವಹಿಸುತ್ತಾರೆ. ಕನ್ನಡ, ತಮಿಳು, ಮಲಯಾಳಂ, ತೆಲುಗು ಮತ್ತು ಇಂಗ್ಲಿಷ್ ಭಾಷೆಯ 50ಕ್ಕೂ ಅಧಿಕ ಪುಸ್ತಕ ಮಳಿಗೆಗಳು ಉತ್ಸವದಲ್ಲಿ ಇರಲಿವೆ. ದಕ್ಷಿಣದ ಐದು ರಾಜ್ಯಗಳಿಂದ ನೂರಕ್ಕೂ ಅಧಿಕ ಪ್ರಕಾಶಕರು ಭಾಗವಹಿಸಲಿದ್ದು, ಉತ್ಸವದಲ್ಲಿ ಪ್ರಕಾಶಕರ ಸಮಾವೇಶವೂ ನಡೆಯಲಿದೆ.

ನಾಲ್ಕು ಸಮಾನಾಂತರ ವೇದಿಕೆಗಳಲ್ಲಿ ಗೋಷ್ಠಿಗಳು, ಕಲಾ ಪ್ರದರ್ಶನ, ಪುಸ್ತಕ ಬಿಡುಗಡೆ ಹಾಗೂ ಲೇಖಕರ ಜತೆಗೆ ಸಂವಾದಗಳು ನಡೆಯಲಿವೆ. ಕರ್ನಾಟಕ ಸೇರಿ ದಕ್ಷಿಣ ರಾಜ್ಯಗಳ ಸುಮಾರು ನೂರು ಕಲಾವಿದರಿಂದ ಕಲಾ ಪ್ರದರ್ಶನ ಏರ್ಪಡಿಸಲಾಗಿದೆ. 20ಕ್ಕೂ ಅಧಿಕ ಯುವ ಕಲಾವಿದರಿಂದ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟವನ್ನು ಹಮ್ಮಿಕೊಳ್ಳಲಾಗಿದೆ.

ಮಕ್ಕಳಿಗಾಗಿಯೇ ಪ್ರತ್ಯೇಕ ವೇದಿಕೆ ಇರಲಿದ್ದು, ಕಥೆ ಹೇಳುವಿಕೆ, ಚಿತ್ರ ಬಿಡಿಸುವಿಕೆ ಸೇರಿ ವಿವಿಧ ಚಟುವಟಿಕೆಗಳು ನಡೆಯಲಿವೆ. ಉತ್ಸವದಲ್ಲಿ ಜಯಂತ ಕಾಯ್ಕಿಣಿ, ಎಚ್. ಎಸ್. ಶಿವಪ್ರಕಾಶ್ ಸೇರಿ ಕನ್ನಡ ಸಾಹಿತ್ಯ ಕ್ಷೇತ್ರದ ಪ್ರಮುಖರು ಹಾಗೂ ದಕ್ಷಿಣದ ಎಲ್ಲ ರಾಜ್ಯಗಳ ಹಲವರು ಈ ಸಾಹಿತ್ಯ ಹಬ್ಬದಲ್ಲಿ ಭಾಗವಹಿಸಲಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮ: ಮೂರು ದಿನಗಳ ಉತ್ಸವದಲ್ಲಿ ಒಟ್ಟು 80 ಗೋಷ್ಠಿಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಉತ್ಸವದ ಮೊದಲ ದಿನವಾದ ಆ.9ರಂದು ಕಲಾವಿದೆ ಮಾನಸಿ ಸುಧೀರ್ ಅವರಿಂದ 'ಕಾವ್ಯಾಭಿನಯ', ಮೈಸೂರಿನ ನಟನ ರಂಗ ತಂಡದಿಂದ 'ಕನ್ನಡ ಕಾವ್ಯ ಕಣಜ' ಎಂಬ ಕನ್ನಡ ಸಾಹಿತ್ಯದ ಇತಿಹಾಸ ಸಾರುವ ರಂಗ ಪ್ರಸ್ತುತಿ ಹಮ್ಮಿಕೊಳ್ಳಲಾಗಿದೆ.

ಆ. 10ರ ಬೆಳಿಗ್ಗೆ ಗಾಯಕಿ ಬಿಂದುಮಾಲಿನಿ ಅವರಿಂದ 'ಬೆಳಗಿನ ಗಾಯನ' ಕಾರ್ಯಕ್ರಮ ಮತ್ತು ಮಧ್ಯಾಹ್ನ ನಿರ್ದಿಗಂತ ತಂಡದಿಂದ 'ಸಮತೆ ಮತ್ತು ಮಮತೆಯ ಸೊಲ್ಲುಗಳು' ಪ್ರದರ್ಶನ ನಡೆಯಲಿದೆ. ಅದೇ ದಿನ ಸಂಜೆ, ಗಾಯಕ ಆರ್.ಕೆ.ಪದ್ಮನಾಭ ಅವರಿಂದ ಕರ್ನಾಟಕ ಸಂಗೀತ ಗಾಯನ ನಡೆಯಲಿದೆ.

ಉತ್ಸವದ ಕೊನೆಯ ದಿನವಾದ ಆ.11ರಂದು ಬೆಳಿಗ್ಗೆ ವೆಂಕಟೇಶ್ ಕುಮಾರ್ ಅವರಿಂದ ಹಿಂದೂಸ್ಥಾನಿ ಗಾಯನ, ಬಹುಭಾಷಾ ನಟ ಪ್ರಕಾಶ್ ರಾಜ್ ಅವರಿಂದ 'ಭಾಷೆ ಬೇರೆಯಾದರೂ, ಭಾವವೊಂದೇ' ಎಂಬ ರಂಗ ಪ್ರಯೋಗ ನಡೆಯಲಿದೆ. ಬಳಿಕ ಮೇಘನಾ ಚಂದ್ರಮೌಳಿ ಅವರಿಂದ 'ಕಾವ್ಯಾಭಿಕ್ತಿ' ನೃತ್ಯ ಪ್ರದರ್ಶನ ಹಾಗೂ ಕೆರೆಮನೆ ಯಕ್ಷಗಾನ ಮಂಡಳಿ ಮೇಳದಿಂದ 'ಪಂಚವಟಿ' ಯಕ್ಷಗಾನ ಪ್ರದರ್ಶನ ನಡೆಯಲಿದೆ ಎಂದು ಸಂಸ್ಥೆ ತಿಳಿಸಿದೆ.

'ಬುಕ್ ಬ್ರಹ್ಮ ಸಾಹಿತ್ಯ ಪುರಸ್ಕಾರ' ಪ್ರದಾನ

ಭಾರತೀಯ ಭಾಷೆಗಳಲ್ಲಿ ಸಾಹಿತ್ಯ ಸೃಷ್ಟಿಸಿ, ಮಹತ್ವದ ಕೊಡುಗೆ ನೀಡಿದ ಸಾಹಿತಿಗಳಿಗೆ ಗೌರವ ಸಲ್ಲಿಸಲು ಬುಕ್ ಬ್ರಹ್ಮ ಸಂಸ್ಥೆಯು 'ಬುಕ್ ಬ್ರಹ್ಮ ಸಾಹಿತ್ಯ ಪುರಸ್ಕಾರ' ಸ್ಥಾಪಿಸಿದೆ. ಈ ಪುರಸ್ಕಾರವು ₹2 ಲಕ್ಷ ನಗದು ಒಳಗೊಂಡಿದ್ದು, ಉತ್ಸವದಲ್ಲಿಯೇ ಪುರಸ್ಕೃತರ ಹೆಸರು ಘೋಷಿಸಿ ಪ್ರದಾನ ಮಾಡಲಾಗುತ್ತದೆ. ಇದೇ ಉತ್ಸವದಲ್ಲಿ 'ಬುಕ್ ಬ್ರಹ್ಮ ಕಾದಂಬರಿ ಪುರಸ್ಕಾರ'ವನ್ನು ತಮಿಳಿನ ಸಾಹಿತಿ ಪೆರುಮಾಳ್ ಮುರುಗನ್, 'ಬುಕ್ ಬ್ರಹ್ಮ ಸ್ವಾತಂತ್ರ್ಯೋತ್ಸವ ಕಥಾ ಸ್ಪರ್ಧೆ' ವಿಜೇತರಿಗೆ ಮಲಯಾಳಂ ಲೇಖಕ ಬೆನ್ಯಮಿನ್ ಅವರು ಬಹುಮಾನಗಳನ್ನು ವಿತರಿಸುತ್ತಾರೆ ಎಂದು ಸಂಸ್ಥೆ ತಿಳಿಸಿದೆ.

ಗುರುವಾರ, ಆಗಸ್ಟ್ 8, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 220 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಕೆಪಿಎಸ್‌ಸಿಯಿಂದ 400 ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನ

ಆಳ-ಅಗಲ
4ನೇ ವರ್ಷವೂ ಸಂಬಳ ತ್ಯಜಿಸಿದ ಮುಕೇಶ್ ಅಂಬಾನಿ 10
ತೂಕ ಇಳಿಸುವ ಪ್ರಯಾಸ
ಮುನ್ನಡೆಸಿದ ಶಾಲೆಯಲ್ಲಿಲ್ಲ ಜೀವಕಳೆ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,468	24,297	₹70,850 (ಬೆಂಗಳೂರು)	₹81,600 (ಬೆಂಗಳೂರು)	83.95

ಪ್ಯಾರಿಸ್ ಒಲಿಂಪಿಕ್ಸ್: ಮಹಿಳೆಯರ ಕುಸ್ತಿಯಲ್ಲಿ ವಿನೇಶ್ ಫೋಗಟ್ ಅನರ್ಹ ● ಕೈತಪ್ಪಿದ ಐತಿಹಾಸಿಕ ಪದಕ; ಆಘಾತ

100 ಗ್ರಾಂ ತೂಕದಿಂದ ಕನಸು ಛಿದ್ರ

● ಸಿಡ್ನಿ ಕಿರಣ್

ಪ್ಯಾರಿಸ್: ವಿಶ್ವ ಮತ್ತು ಏಷ್ಯಾಮಟ್ಟದ ಹಲವು ಕ್ರೀಡಾಕೂಟಗಳಲ್ಲೆಲ್ಲಾ ಉನ್ನತ ಸಾಧನೆ ಮಾಡಿರುವ ವಿನೇಶ್ ಫೋಗಟ್ ಅವರಿಗೆ ಇದುವರೆಗೆ ಒಲಿಂಪಿಕ್ಸ್ ಮಾತ್ರ ಏನನ್ನೂ ಕೊಟ್ಟಿಲ್ಲ. ಆ ಕೊರತೆಯನ್ನು ನೀಗಿಸುವ ಅವಕಾಶ ಈ ಛಲಗಾತಿಗೆ ಪ್ಯಾರಿಸ್‌ನಲ್ಲಿ ಒದಗಿ ಬಂದಿತ್ತು. ಆದರೆ ಬುಧವಾರ ಇಲ್ಲಿಯ ಚಾಂಪ್ ಡಿ ಮಾರ್ಸ್ ಅರೇನಾದಲ್ಲಿ ವಿನೇಶ್ ಅವರು 50 ಕೆ.ಜಿ. ವಿಭಾಗದ ಮಹಿಳೆಯರ ಫ್ರೀಸ್ಟೈಲ್ ಕುಸ್ತಿ ಫೈನಲ್‌ನಲ್ಲಿ ಪದಕ ಜಯಿಸಿ ಸಂಭ್ರಮಿಸುವುದನ್ನು ಕಣ್ತುಂಬಿ ಕೊಳ್ಳಲು ಕಾತುರದಿಂದ ಕಾದಿದ್ದ ಭಾರತೀಯರಿಗೆ ಸಿಕ್ಕಿದ್ದು ಮಾತ್ರ ಆಘಾತಕಾರಿ ಸುದ್ದಿ. ಅವರು ನಿಗದಿಯ ದೇಹ ತೂಕಕ್ಕಿಂತ 100 ಗ್ರಾಂ ಹೆಚ್ಚು ತೂಗಿದ ಸುದ್ದಿ ಕೇಳಿದ ಭಾರತದ ಅಸಂಖ್ಯಾತ ಕ್ರೀಡಾ ಪ್ರೇಮಿಗಳಿಗೆ ಕಾಲಡಿಯ ನೆಲ ಕುಸಿದ ಅನುಭವ.

ತಲೆಗೂದಲಿಗೆ ಕತ್ತರಿ!

ವಿನೇಶ್ ಅವರನ್ನು 50 ಕೆ.ಜಿ ತೂಕದ ವ್ಯಾಪ್ತಿಗೆ ತರಲು ತಂಡದ ನೆರವು ಸಿಬ್ಬಂದಿಯು ಸಕಲ ಪ್ರಯತ್ನಗಳನ್ನೂ ಮಾಡಿತ್ತು. ವಿನೇಶ್ ಅವರ ತಲೆಗೂದಲನ್ನೂ ಕತ್ತರಿಸಲಾಗಿತ್ತು. ವಿನೇಶ್ ಸಹ ದೇಹವನ್ನು ದಂಡಿಸಿದ್ದರು. ಆದರೂ ತೂಕವನ್ನು ನಿಗದಿತ ಮಿತಿಗೆ ತರಲು ಸಾಧ್ಯವಾಗಲಿಲ್ಲ ಎಂದು ತಂಡದ ವೈದ್ಯಾಧಿಕಾರಿ ದಿನ್‌ಶಾ ಪಾರ್ದಿವಾಲಾ ಹೇಳಿದ್ದಾರೆ.

11ನೇ ಪುಟ ನೋಡಿ

ವಿನೇಶ್‌ಗೆ ಆಗಿರುವ ನಿರಾಶೆಯನ್ನು ನಾವೆಲ್ಲಾ ಹಂಚಿಕೊಳ್ಳುತ್ತೇವೆ. 140 ಕೋಟಿ ಜನರ ಹೃದಯದಲ್ಲಿ ಅವರು ಚಾಂಪಿಯನ್ ಆಗಿಯೇ ಉಳಿಯುತ್ತಾರೆ. ಭಾರತದ ಮಹಿಳೆಯರ ದಣಿವರಿಯದ ಸ್ಫೂರ್ತಿಯನ್ನು ಅವರು ಮೈಗೂಡಿಸಿಕೊಂಡಿದ್ದಾರೆ
ದ್ರೌಪದಿ ಮುರ್ಮು, ರಾಷ್ಟ್ರಪತಿ

ವಿನೇಶ್, ನೀವು ಚಾಂಪಿಯನ್ನರಲ್ಲಿ ಚಾಂಪಿಯನ್ನರು. ನೀವು ಭಾರತದ ಹೆಮ್ಮೆ ಮತ್ತು ಪ್ರತಿಯೊಬ್ಬ ಭಾರತೀಯನಿಗೆ ಸ್ಫೂರ್ತಿ . ಇಂದಿನ ಹಿನ್ನಡೆ ನೋವು ತಂದಿದೆ. ಮತ್ತೆ ಪುಟಿದೆದ್ದು ಬಲಿಷ್ಠರಾಗಿ ಬನ್ನಿ. ನಾವೆಲ್ಲಾ ನಿಮ್ಮೊಂದಿಗಿದ್ದೇವೆ
ನರೇಂದ್ರ ಮೋದಿ, ಪ್ರಧಾನಿ

ಭಾರತದ ಹೆಮ್ಮೆ ವಿನೇಶ್ ಫೋಗಟ್ ತಾಂತ್ರಿಕ ಆಧಾರದಲ್ಲಿ ಅನರ್ಹಗೊಂಡಿರುವುದು ದುರದೃಷ್ಟಕರ. ವಿನೇಶ್ ಯಾವುದನ್ನೂ ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಪುಟಿದೆದ್ದು ಮತ್ತೆ ಅಖಾಡಕ್ಕೆ ಮರಳುವ ವಿಶ್ವಾಸವಿದೆ
ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ವಿನೇಶ್ ಫೋಗಟ್ ಅನರ್ಹಗೊಂಡಿರುವುದು ದುರದೃಷ್ಟಕರ. ಅವರ ಶಕ್ತಿ, ಸ್ಥೈರ್ಯ ಮತ್ತು ಸಮರ್ಪಣೆ ರಾಷ್ಟ್ರವನ್ನು ಯಾವಾಗಲೂ ಪ್ರೇರೇಪಿಸುತ್ತದೆ. ನೀವು ಸದಾ ನಮ್ಮ ಚಾಂಪಿಯನ್
ಸಿದ್ದರಾಮಯ್ಯ, ಮುಖ್ಯಮಂತ್ರಿ

ಕ್ರೀಡೆಯ ಭಾಗವೆಂದ ವಿನೇಶ್

‘ಪದಕ ಗೆಲ್ಲಲು ಸಾಧ್ಯವಾಗದಿರುವುದು ದುರದೃಷ್ಟಕರ. ಆದರೆ ಇವೆಲ್ಲವೂ ಕ್ರೀಡೆಯ ಭಾಗ' ಎಂದು ವಿನೇಶ್ ಫೋಗಟ್ ಅವರು ತಮ್ಮನ್ನು ತಾವೇ ಸಮಾಧಾನಪಡಿಸಿಕೊಂಡಿರುವುದಾಗಿ ಭಾರತದ ಕೋಚ್ ವಿರೇಂದರ್ ದಹಿಯಾ ತಿಳಿಸಿದ್ದಾರೆ.

‘ವಿನೇಶ್ ಅನರ್ಹಗೊಂಡಿರುವ ಸುದ್ದಿ ನಮ್ಮೆಲ್ಲರನ್ನು ಆಘಾತಗೊಳಿಸಿತ್ತು. ನಾವು ವಿನೇಶ್ ಅವರನ್ನು ಭೇಟಿಯಾಗಿ ಸಂತೈಸಲು ಪ್ರಯತ್ನಿಸಿದೆವು. ಆದರೆ, ಆಕೆ ಧೈರ್ಯಶಾಲಿ. ಆಕೆಯೇ ನಮ್ಮನ್ನು ಸಮಾಧಾನ ಪಡಿಸಿದರು’ ಎಂದು ದಹಿಯಾ ತಿಳಿಸಿದ್ದಾರೆ.

ಕ್ರೀಡಾ ನ್ಯಾಯಮಂಡಳಿಗೆ ಮೇಲ್ಮನವಿ

ಪ್ಯಾರಿಸ್ (ಪಿಟಿಐ): ವಿನೇಶ್ ಫೋಗಟ್ ಅವರು ತಮ್ಮನ್ನು ಅನರ್ಹಗೊಳಿಸಿರುವ ಕ್ರಮವನ್ನು ಪ್ರಶ್ನಿಸಿ ಕ್ರೀಡಾ ನ್ಯಾಯ ಮಂಡಳಿಗೆ ಮೇಲ್ಮನವಿ ಸಲ್ಲಿಸಿದ್ದಾರೆ. ತಮಗೆ ಜಂಟಿ ಬೆಳ್ಳಿ ಪದಕ ನೀಡಬೇಕು ಎಂದೂ ವಿನೇಶ್ ಬೇಡಿಕೆ ಸಲ್ಲಿಸಿದ್ದಾರೆ.

ವಿನೇಶ್ ಅವರು ಮೇಲ್ಮನವಿ ಸಲ್ಲಿಸಿರುವುದನ್ನು ಐಒಎ (ಭಾರತ ಒಲಿಂಪಿಕ್ ಸಂಸ್ಥೆ)ಯ ಮೂಲಗಳು ಖಚಿತಪಡಿಸಿವೆ. ‘ಹೌದು ಈ ಕುರಿತು ನಮಗೆ ಮಾಹಿತಿ ಬಂದಿದೆ. ಅವರ (ವಿನೇಶ್) ತಂಡವು ಈ ಕಾರ್ಯ ಮಾಡಿದೆ’ ಎಂದು ಮೂಲಗಳು ತಿಳಿಸಿವೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ವ್ಯಾಜ್ಯಗಳನ್ನು ಬಗೆಹರಿಸಲು ಹಂಗಾಮಿ ವಿಭಾಗವೊಂದನ್ನು ಆರಂಭಿಸಲಾಗಿದೆ. ಈ ವಿಭಾಗಕ್ಕೆ ವಿನೇಶ್ ಮನವಿ ಸಲ್ಲಿಸಿದ್ದಾರೆ. ಅವರ ಮನವಿಯ ಪರಿಶೀಲನೆಯು ಗುರುವಾರ ಬೆಳಿಗ್ಗೆ ನಡೆಯಲಿದೆ.

ವಿನೇಶ್ 50 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದು ಏಕೆ?

ಕುಸ್ತಿಯಲ್ಲಿ ಅತ್ಯಂತ ಹಿರಿಯ ಕ್ರೀಡಾಳು ವಾಗಿರುವ ವಿನೇಶ್ ಅವರ ದೇಹದ ತೂಕ 56 ಕೆ.ಜಿ ಇತ್ತು. ಅವರು ಹಲವು ವರ್ಷಗಳಿಂದ 53 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದರು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವರು 53 ಕೆಜಿ ವಿಭಾಗದಲ್ಲಿ ದೇಶವನ್ನು ಪ್ರತಿನಿಧಿಸಿದ್ದರು.

ಆದರೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಕ್ರೀಡಾಪಟುಗಳನ್ನು ಆಯ್ಕೆ ಮಾಡುವುದಕ್ಕಾಗಿ ಭಾರತೀಯ ಕುಸ್ತಿ ಫೆಡರೇಷನ್ ನಡೆಸಿದ್ದ ಟ್ರಯಲ್ಸ್‌ನಲ್ಲಿ ವಿನೇಶ್ 53 ಕೆಜಿ ವಿಭಾಗದ ಸೆಮಿಫೈನಲ್‌ನಲ್ಲಿ ಸೋತಿದ್ದರು. ಅಂತಿಮ್ ಪಂಘಲ್ ಆ ವಿಭಾಗದಲ್ಲಿ ಸ್ಥಾನ ಪಡೆದು ಪ್ಯಾರಿಸ್‌ಗೆ ತೆರಳಿದ್ದರು. ಇದರಿಂದಾಗಿ ತಮ್ಮ ಪಾಲಿಗೆ ಇದ್ದ 50 ಕೆಜಿ ವಿಭಾಗದ ಏಕೈಕ ಅವಕಾಶವನ್ನು ನೆಚ್ಚಿಕೊಂಡರು.

‘ಮೂರು ಕೆ.ಜಿ ತೂಕವನ್ನು ಇಳಿಸಿಕೊಂಡು ಕಣಕ್ಕಿಳಿಯುವುದು ಕಡುಕಠಿಣವಾದ ಪ್ರಕ್ರಿಯೆ. ಅದರಲ್ಲೂ ಒಂದೇ ದಿನ ಮೂರು ಬೌಟ್‌ಗಳಲ್ಲಿ ಸೆಣಸಿದ ನಂತರ ತೂಕ ನಿರ್ವಹಣೆ ಮತ್ತಷ್ಟು ಕ್ಲಿಷ್ಟ. ಇಂತಹ ಸಂದರ್ಭದಲ್ಲಿ ಉಪವಾಸವಿದ್ದು ತೂಕ ಇಳಿಸುವುದು ಸಾಧ್ಯವಾಗದ ಮಾತು. ಕುಸ್ತಿ ಆಡಲು ಶಕ್ತಿ ಮರುಪೂರಣಗೊಳಿಸಿಕೊಳ್ಳಲು ಆಹಾರಸೇವನೆ ಅಗತ್ಯವಾಗುತ್ತದೆ. ವಿನೇಶ್ ಕೂಡ ಅದೇ ರೀತಿ ಮಾಡಿದರು. ಅದರ ನಂತರ ಹೆಚ್ಚಿದ ತೂಕ ಇಳಿಸಲು ಅವಿರತವಾಗಿ ಶ್ರಮಿಸಿದರು. ಪದಕಕ್ಕಾಗಿ ಆಕೆ ಅಪ್ಪಟ ಚಾಂಪಿಯನ್ ರೀತಿಯಲ್ಲಿ ಹೋರಾಡಿದರು. ಆದರೆ ನಿರಾಶೆ ತಪ್ಪಲಿಲ್ಲ. ಇದು ದುಃಖಕರ ಸಂಗತಿ‘ ಎಂದು ಕೋಚ್ ಒಬ್ಬರು (ಹೆಸರು ಗೌಪ್ಯವಾಗಿಡಲಾಗಿದೆ) ವಿವರಿಸಿದರು.

ತೂಕ ನಿರ್ವಹಣೆಗಾಗಿ ಅಪಾರವಾಗಿ ವ್ಯಾಯಾಮ ಮಾಡಿ ದೇಹ ದಂಡಿಸಿದ್ದ ವಿನೇಶ್ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಆರೋಗ್ಯ ಉತ್ತಮವಾಗಿದೆ. ಆದರೆ ಅವರ ಮನಸ್ಸಿನ ಗಾಯದ ನೋವು ಮಾಯುವುದು ಅಷ್ಟು ಸುಲಭವಲ್ಲ.

ಬಾಂಗ್ಲಾದೇಶ: ಇಂದು ಯೂನಸ್ ಪ್ರಮಾಣ

ಢಾಕಾ(ಪಿಟಿಐ): ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಮೊಹಮ್ಮದ್ ಯೂನಸ್ (84) ಅವರು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿ ಗುರುವಾರ ರಾತ್ರಿ 8 ಗಂಟೆಗೆ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಈ ಕುರಿತು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿರುವ ಸೇನಾ ಮುಖ್ಯಸ್ಥ ಜನರಲ್ ವಕಾರ್-ಉಝ್-ಝುಮಾನ್, ಯೂನಸ್ ಅವರಿಗೆ ಆಡಳಿತದಲ್ಲಿ ನೆರವಾಗಲು 15 ಸದಸ್ಯರ ಸಲಹಾ ಸಮಿತಿ ಇರಲಿದೆ ಎಂದು ಹೇಳಿದರು.

ಮೀಸಲಾತಿ ನೀತಿ ವಿರೋಧಿಸಿ ದೇಶದಾದ್ಯಂತ ನಡೆದ ಹಿಂಸಾಚಾರದ ಬೆನ್ನಲ್ಲೇ, ಪ್ರಧಾನಿ ಸ್ಥಾನಕ್ಕೆ ಸೋಮವಾರ ರಾಜೀನಾಮೆ ನೀಡಿದ್ದ ಶೇಖ್ ಹಸೀನಾ ಅವರು ದೇಶ ತೊರೆದಿದ್ದರು. ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರು ಆರ್ಥಿಕ ತಜ್ಞ ಯೂನಸ್ ಅವರನ್ನು ಮಧ್ಯಂತರ ಸರ್ಕಾರದ ಮುಖ್ಯಸ್ಥರನ್ನಾಗಿ ಮಂಗಳವಾರ ನೇಮಿಸಿದ್ದರು.

ಹಿಂಸೆ ಬಿಡಿ, ಶಾಂತಿ ಕಾಯ್ದುಕೊಳ್ಳಿ: ‘ಎಲ್ಲರೂ ಹಿಂಸಾಚಾರದಿಂದ ದೂರವಿದ್ದು ಶಾಂತಿ ಕಾಯ್ದುಕೊಳ್ಳಬೇಕು. ಈ ಮೂಲಕ ಉತ್ತಮ ರಾಷ್ಟ್ರ ನಿರ್ಮಿಸುವ ಅವಕಾಶವನ್ನು ಬಳಸಿಕೊಳ್ಳಬೇಕು’ ಎಂದು ಮೊಹಮ್ಮದ್ ಯೂನಸ್ ಸಾರ್ವಜನಿಕರಿಗೆ ಕರೆ ನೀಡಿದರು.

‘ಶಾಂತರಾಗಿರಿ ಮತ್ತು ದೇಶ ಕಟ್ಟಲು ಸಿದ್ಧರಾಗಿರಿ. ಒಂದು ವೇಳೆ ಹಿಂಸೆ ಹಾದಿಯನ್ನು ಹಿಡಿದರೆ ಎಲ್ಲವೂ ನಾಶವಾಗುತ್ತದೆ’ ಎಂದು ಅವರು ಕಿವಿಮಾತು ಹೇಳಿದರು.

ಮೊಹಮ್ಮದ್ ಯೂನಸ್ ಅವರು ಬುಧವಾರ ಪ್ಯಾರಿಸ್‌ನಿಂದ ಢಾಕಾಕ್ಕೆ ತೆರಳಿದರು –ಎಪಿ ಚಿತ್ರ

ಇನ್ನಷ್ಟು ಸುದ್ದಿಗಳು 09

ಭಾರತಕ್ಕೆ ಮರಳಿದ ಹೈಕಮಿಷನ್ ಸಿಬ್ಬಂದಿ

ನವದೆಹಲಿ (ಪಿಟಿಐ): ಢಾಕಾದಲ್ಲಿರುವ ಭಾರತದ ಹೈಕಮಿಷನ್‌ನ ಸೇವೆಗೆ ಅತ್ಯವಶ್ಯವಲ್ಲದ ಸಿಬ್ಬಂದಿ ಮತ್ತು ಅವರ ಕುಟುಂಬಸ್ಥರು ಸ್ವಯಂಪ್ರೇರಿತರಾಗಿ ವಾಣಿಜ್ಯ ವಿಮಾನದ ಮೂಲಕ ಸ್ವದೇಶಕ್ಕೆ ಮರಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಬಾಂಗ್ಲಾದೇಶದಲ್ಲಿ ಭಾರತೀಯ ಹೈಕಮಿಷನ್ ಇನ್ನೂ ಕಾರ್ಯನಿರ್ವಹಿಸುತ್ತಿದೆ’ ಎಂದು ತಿಳಿಸಿವೆ.

469ಕ್ಕೆ ಏರಿದ ಸಾವು

ಶೇಖ್ ಹಸೀನಾ ನೇತೃತ್ವದ ಅವಾಮಿ ಪಕ್ಷದ ಕನಿಷ್ಠ 29 ಬೆಂಬಲಿಗರ ಮೃತದೇಹಗಳು ದೇಶದ ವಿವಿಧೆಡೆ ಪತ್ತೆಯಾಗಿವೆ. ಈ ಮೂಲಕ, ಮೀಸಲಾತಿ ನಿಯಮ ವಿರೋಧಿಸಿ ಜುಲೈನಿಂದ ದೇಶದಾದ್ಯಂತ ನಡೆಯುತ್ತಿರುವ ಹಿಂಸಾಚಾರದಲ್ಲಿ ಮೃತಪಟ್ಟವರ ಸಂಖ್ಯೆ 469ಕ್ಕೆ ಏರಿದಂತಾಗಿದೆ.

ಶಿರಾಡಿ ಘಾಟ್: ಎಂದಿನಂತೆ ವಾಹನ ಸಂಚಾರ

ಪ್ರಜಾವಾಣಿ ವಾರ್ತೆ

ಹಾಸನ: ಭೂಕುಸಿತದಿಂದ ತತ್ತರಿಸಿದ್ದ ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ -75ರ ಶಿರಾಡಿ ಘಾಟ್ ರಸ್ತೆಯಲ್ಲಿ ದಿನದ 24 ಗಂಟೆಯೂ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ.

ಸಕಲೇಶಪುರ ತಾಲ್ಲೂಕಿನ ದೊಡ್ಡತಪ್ಪಲೆ ಭೂಕುಸಿತ ಸಂಭವಿಸಿದ್ದರಿಂದ ಜಿಲ್ಲಾಧಿಕಾರಿ ಸಿ.ಸತ್ಯಭಾಮಾ, ವಾಹನ ಸಂಚಾರ ನಿರ್ಬಂಧಿಸಿ ಜುಲೈ 16 ರಂದು ಆದೇಶ ಹೊರಡಿಸಿದ್ದರು.

ಆದರೆ, ವಾಹನ ದಟ್ಟಣೆ ಹೆಚ್ಚಿದ್ದರಿಂದ ಸಂಜೆ 6 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ಮಾತ್ರ ವಾಹನ ಸಂಚಾರ ನಿರ್ಬಂಧಿಸಿ, ಸಕಲೇಶಪುರ ಉಪ ವಿಭಾಗಾಧಿಕಾರಿ ಡಾ.ಎಂ.ಕೆ. ಶ್ರುತಿ ಮತ್ತೊಂದು ಆದೇಶ ಹೊರಡಿಸಿದ್ದರು. ಈಗ ಸಂಚಾರ ಯಥಾಸ್ಥಿತಿಗೆ ಮರಳಿದೆ.

‘ದಲಿತರ ಜಮೀನು ಸಿ.ಎಂ ಪಾಲು’

ಮುಡಾ ಹಗರಣಕ್ಕೆ ಸಂಬಂಧಿಸಿದ ದಾಖಲೆ ಬಿಡುಗಡೆ ಮಾಡಿದ ಆರ್. ಅಶೋಕ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಕೇವಲ 14 ನಿವೇಶನ ನುಂಗಿಲ್ಲ, ಅವರ ಬೆಂಬಲಿಗರು 500ಕ್ಕೂ ಹೆಚ್ಚು ನಿವೇಶನ ನುಂಗಿದ್ದಾರೆ. 50:50 ಸ್ಕೀಮ್‌ನಲ್ಲಿ ಕೋಟ್ಯಂತರ ರೂಪಾಯಿ ಲೂಟಿ ಹೊಡೆದಿದ್ದಾರೆ ಎಂಬುದಕ್ಕೆ ಮುಡಾ ಅಧ್ಯಕ್ಷ ಕೆ.ಮರಿಗೌಡನ ಪತ್ರವೇ ಸಾಕ್ಷಿ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ದಾಖಲೆ ಬಿಡುಗಡೆ ಮಾಡಿದ ಆರ್.ಅಶೋಕ

ಮೈಸೂರಿನ ಮುಡಾದಲ್ಲಿ 50;50 ಅನುಪಾತದಲ್ಲಿ ನಿವೇಶನಗಳ ಹಂಚಿಕೆ ಹಗರಣಕ್ಕೆ ಸಂಬಂಧಿಸಿ ಬುಧವಾರ ಸುದ್ದಿಗೋಷ್ಠಿಯಲ್ಲಿ ದಾಖಲೆಗಳನ್ನು ಬಿಡುಗಡೆ ಮಾಡಿದ ಅವರು, ‘ಭೂಸ್ವಾಧೀನವಾದ ಜಾಗದಲ್ಲೇ 526 ನಿವೇಶನಗಳಿದ್ದರೂ, ಬೇರೆ ಕಡೆ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಸೈಟುಗಳನ್ನು ಸಿದ್ದರಾಮಯ್ಯ ಕುಟುಂಬಕ್ಕೆ ನೀಡಿದ್ದು ಏಕೆ? ಅವರ ಬೆಂಬಲಿಗರು ಹೇಗೆ 500 ಸೈಟು ನುಂಗಿದರು’ ಎಂದು ಪ್ರಶ್ನಿಸಿದರು. ‘ದಲಿತರಿಗೆ ನ್ಯಾಯಯುತವಾಗಿ ಸೇರಬೇಕಾದ ಜಮೀನನ್ನು ಸಿದ್ದರಾಮಯ್ಯ ಕುಟುಂಬ ಅಕ್ರಮವಾಗಿ ಖಾತೆ ಮಾಡಿಸಿಕೊಂಡಿದೆ. ಅವರು ತಪ್ಪಿತಸ್ಥರೆಂದು ತೋರಿಸಲು ನಮ್ಮಲ್ಲಿ ಅಧಿಕೃತ ದಾಖಲೆಗಳಿವೆ’ ಎಂದು ಪ್ರತಿಪಾದಿಸಿದರು.

ಇಲಾಖೆ ಹಂತದಲ್ಲಿ ಲೋಪ: ‘ಹಗರಣಕ್ಕೆ ಸಂಬಂಧಿಸಿದ ಜಮೀನನ್ನು ನಿಂಗ ಬಿನ್ ಜವರ ಎಂಬವರು 1936ರಲ್ಲಿ ಹರಾಜಿನಲ್ಲಿ ಖರೀದಿಸಿದ್ದರು. 1968ರಲ್ಲಿ ನಿಂಗ ಅವರ ಮಕ್ಕಳಾದ ಮಲ್ಲಯ್ಯ ಮತ್ತು ದೇವರಾಜು ಅವರು ಮತ್ತೊಬ್ಬ ಸಹೋದರ ಮೈಲಾರನಿಗೆ ಭೂಮಿಯ ಹಕ್ಕನ್ನು ₹300ಕ್ಕೆ ವರ್ಗಾಯಿಸಿದ್ದರು. ಆದರೆ, ಆರ್‌ಟಿಸಿಯಲ್ಲಿ 1993ರವರೆಗೆ ನಿಂಗ ಹೆಸರಿನಲ್ಲಿಯೇ ಮುಂದುವರಿದಿದೆ. ಅದು ಇಲಾಖೆ ಹಂತದಲ್ಲಿ ಆಗಿರುವ ಲೋಪ’ ಎಂದು ದೂರಿದರು.

9ನೇ ಪುಟ ನೋಡಿ



ದಿನಾಂಕ : 25.10.2021

ಇಂದ:
ಶ್ರೀಮತಿ ಪಾರ್ವತಿ
ಮನೆ ನಂ.206, 16ನೇ ಕ್ರಾಸ್,
ವಿಜಯನಗರ, ಬೆಂಗಳೂರು.

ರವರಿಗೆ
ಆಯುಕ್ತರು
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಮೈಸೂರು.

ಮಾನ್ಯರೆ,

ವಿಷಯ: ಮೈಸೂರು ತಾಲ್ಲೋಕು, ಕೆಸರೆ ಗ್ರಾಮದ ಸರ್ವೆ ನಂ. 464ರ 03 ಎಕರೆ 16 ಗುಂಟೆ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಸರ್ಕಾರ ಕೈಬಿಟ್ಟಿದ್ದರೂ ಕೂಡ ಪ್ರಾಧಿಕಾರವು ಸದರಿ ಜಮೀನಿನಲ್ಲಿ ಬಡಾವಣೆ ರಚಿಸಿದ್ದು, ಈ ಬಾಬ್ತು ಶೇ 50:50 ರಷ್ಟು ನಿವೇಶನವನ್ನು

ಪಾರ್ವತಿ ಅವರು ಬರೆದ ಪತ್ರದ ಮೇಲೆ ಮುಡಾ ಅಧಿಕಾರಿಗಳು ‘ಷರಾ’ ಬರೆದಿದ್ದರು

ಕೆಸರೆ ಜಮೀನಿಗೆ ಪಾರ್ವತಿ ಒಡತಿ!

ಮಂಡ್ಯ: ಮೈಸೂರು ತಾಲ್ಲೂಕಿನ ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464ರಲ್ಲಿ ಸ್ವಾಧೀನಪಡಿಸಿಕೊಂಡ 3.16 ಎಕರೆ ಜಮೀನಿಗೆ ಬದಲಾಗಿ ಮಾಲೀಕರಾದ ಪಾರ್ವತಿ ಸಿದ್ದರಾಮಯ್ಯ ಅವರಿಗೆ ಮುಡಾ ಒಟ್ಟು 38 ಸಾವಿರ ಚ.ಅಡಿ ವಿಸ್ತೀರ್ಣದ 14 ಬದಲಿ ನಿವೇಶನ ನೀಡಿದೆ. ಹೀಗಿದ್ದರೂ ಆ ಜಮೀನಿಗೆ ಇನ್ನೂ ಪಾರ್ವತಿ ಅವರೇ ಒಡತಿ! ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕಈ ಸಂಬಂಧ ದಾಖಲೆ ಬಿಡುಗಡೆ ಮಾಡಿದರು.

‘2001ರಲ್ಲಿ ಮುಡಾ ಇಲ್ಲಿ ಬಡಾವಣೆ ನಿರ್ಮಿಸಿದೆ. 2010ರಲ್ಲಿ ಜಮೀನನ್ನು ಪಾರ್ವತಿ ಅವರು ಖರೀದಿಸಿದ್ದು, 2014ರಲ್ಲಿ ಪರ್ಯಾಯ ನಿವೇಶನ ಕೋರಿದ್ದರು. 2022ರ ಜನವರಿಯಲ್ಲಿ ಅವರಿಗೆ ಮುಡಾ ಬದಲಿ ನಿವೇಶನಗಳನ್ನೂ ನೀಡಿದ್ದಾಗಿದೆ. ಆದರೆ, ಆರ್‌ಟಿಸಿ ದಾಖಲೆಗಳಲ್ಲಿ ಮಾತ್ರ ಇನ್ನೂ ಮೂಲ ಮಾಲೀಕರ ಹೆಸರೇ ಇದೆ. ಎಲ್ಲಿಯೂ ಜಮೀನು ಮುಡಾ ವಶದಲ್ಲಿದೆ ಎಂಬ ಉಲ್ಲೇಖವೇ ಇಲ್ಲ‘ ಎಂದು ವಿವರಿಸಿದರು. ‘ಮುಡಾದಿಂದ ವಶಪಡಿಸಿಕೊಂಡ ಜಮೀನಿಗೆ ಶೇ 50:50 ಯೋಜನೆ ಅಡಿ ಬದಲಿ ನಿವೇಶನ ಕೋರಿ ಜಮೀನಿನ ಮಾಲೀಕರಾದ ಪಾರ್ವತಿ 2021ರ ಅಕ್ಟೋಬರ್ 25ರಂದು ಮುಡಾ ಆಯುಕ್ತರಿಗೆ ಪತ್ರ ಬರೆದಿದ್ದರು. ಅದಕ್ಕೆ ಆಯುಕ್ತರು, ‘ಕೂಡಲೇ ಕಡತದಲ್ಲಿ ಮಂಡಿಸಿ’ ಎಂದು ಪತ್ರದ ಮೇಲೆ ಷರಾ ಬರೆದಿದ್ದರು. ಅದೇ ಪತ್ರದಲ್ಲಿ ಪಾರ್ವತಿ ಅವರು ‘ 2001ರಲ್ಲಿಯೇ ಈ ಜಮೀನಿನಲ್ಲಿ ಮುಡಾ ನಿವೇಶನ, ರಸ್ತೆ, ಉದ್ಯಾನವನ್ನು ನಿರ್ಮಿಸಿ ಹಂಚಿಕೆ ಮಾಡಿದೆ’ ಎಂದು ಉಲ್ಲೇಖಿಸಿದ್ದರು’ ಎಂದು ಹೇಳಿದರು.



ಕಾರವಾರದ ಕಾಳಿನದಿಗೆ ಅಡ್ಡಲಾಗಿ ಕಟ್ಟಿದ್ದ ಹಳೆಯ ಸೇತುವೆಯು ಕುಸಿದು ಬಿದ್ದಿದೆ –ಪ್ರಜಾವಾಣಿ ಚಿತ್ರ

ನದಿ ಪಾಲಾದ ಲಾರಿ: ಚಾಲಕನ ರಕ್ಷಿಸಿದ ಮೀನುಗಾರರು

ಕಾಳಿ ನದಿ: ಕುಸಿದ ಸೇತುವೆ

ಪ್ರಜಾವಾಣಿ ವಾರ್ತೆ

ಕಾರವಾರ: ಕರ್ನಾಟಕ-ಗೋವಾ ಸಂಪರ್ಕಿಸಲು ಬೆಸುಗೆಯಾಗಿ ಕಾಳಿ ನದಿಗೆ ಅಡ್ಡಲಾಗಿ 41 ವರ್ಷಗಳ ಹಿಂದೆ ಕಟ್ಟಲಾಗಿದ್ದ ಹಳೆಯ ಸೇತುವೆ ಮಂಗಳವಾರ ತಡರಾತ್ರಿ 1 ಗಂಟೆ ಸುಮಾರಿಗೆ ಕುಸಿದು ಬಿದ್ದಿದೆ.

ಗೋವಾದಿಂದ ಕಾರವಾರಕ್ಕೆ ಬರುತ್ತಿದ್ದ ತಮಿಳುನಾಡಿನ ಲಾರಿಯು ನದಿ ಪಾಲಾಗಿದೆ. ಚಾಲಕ, ತಮಿಳುನಾಡಿನ ಧರ್ಮಪುರಿಯ ಬಾಲಮುರುಗನ್ (37) ಎಂಬುವರನ್ನು ಸ್ಥಳೀಯ ಮೀನುಗಾರರು ರಕ್ಷಿಸಿದ್ದಾರೆ.

ಸೇತುವೆ ಕುಸಿದು ಬಿದ್ದ ಹಿನ್ನೆಲೆಯಲ್ಲಿ ಕಾರವಾರ-ಗೋವಾ ರಾಷ್ಟ್ರೀಯ ಹೆದ್ದಾರಿ-66ರಲ್ಲಿ ಹಲವು ಗಂಟೆ ವಾಹನಗಳ ಸಂಚಾರ ಸ್ಥಗಿತಗೊಂಡಿತ್ತು. ಬುಧವಾರ ಮಧ್ಯಾಹ್ನದ ಬಳಿಕ ಲಘು ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಯಿತು.

‘ರಾತ್ರಿ ನಮ್ಮ ಲಾರಿ ಹಿಂದಿಕ್ಕಿ ಚಲಿಸಿದ ಲಾರಿಯು ಸೇತುವೆ ಮುರಿದು ಕಾಳಿನದಿಯ ಮಧ್ಯಭಾಗದಲ್ಲಿ ಬಿದ್ದಿದ್ದು ಕಂಡೆವು. ಲಾರಿ ಬಿದ್ದ ಜಾಗಕ್ಕಿಂತ 50 ಮೀಟರ್ ಹಿಂದೆ ನಮ್ಮ ಲಾರಿ ಇತ್ತು. ತಕ್ಷಣವೇ ಹಿಮ್ಮುಖವಾಗಿ ಚಲಿಸಿಕೊಂಡು ಬಂದೆವು’ ಎಂದು ಪ್ರತ್ಯಕ್ಷದರ್ಶಿ ಲಾರಿ ಚಾಲಕರಾದ ದಲ್ವಿಂದರ್ ಸಿಂಗ್ ಮತ್ತು ರಾಧಾಕೃಷ್ಣನ್ ತಿಳಿಸಿದರು.

‘ಸೇತುವೆ ಬಿದ್ದಿದ್ದರಿಂದ ದೊಡ್ಡ ಕಂಪನ ಮತ್ತು ಶಬ್ದವಾಯಿತು. ಆಗಷ್ಟೇ ಮೀನುಗಾರಿಕೆ ಮುಗಿಸಿ, ನದಿ ದಡದಲ್ಲಿ ಇದ್ದವರಿಗೆ ಲಾರಿ ನದಿಗೆ ಬಿದ್ದಿದ್ದು ಗೊತ್ತಾಯಿತು. ಗಾಯಗೊಂಡಿದ್ದ ಚಾಲಕ ಬಾಲಮುರುಗನ್ ಲಾರಿಯ ಕ್ಯಾಬಿನ್ ಮೇಲೆ ಕೂತು ಸಹಾಯಕ್ಕೆ ಕೂಗುತ್ತಿದ್ದರು. ಅವರನ್ನು ರಕ್ಷಿಸಿ, ದಡಕ್ಕೆ ಕರೆತಂದೆವು’ ಎಂದು ಮೀನುಗಾರ ಸುದೇಶ ಸಾರಂಗ ತಿಳಿಸಿದರು.

8ನೇ ಪುಟ ನೋಡಿ

ಒಳಪುಟಗಳಲ್ಲಿ
ಬೆಳಗ್ಗೆ ಮದುವೆ, ಸಂಜೆ ವಧು ಹತ್ಯೆ! 5
ಮತ್ತೆ ಇನ್‌ಡೆಕ್ಸೇಷನ್ ಲಭ್ಯ 10

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಅಗ್ನಿ ದುರಂತ: ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಸಮೀಪದ ನಾವಗೆ ಗ್ರಾಮದಲ್ಲಿನ ಸ್ನೇಹಂ ಕಾರ್ಖಾನೆಯಲ್ಲಿ ಮಂಗಳವಾರ ರಾತ್ರಿ ಸಂಭವಿಸಿದ ಅಗ್ನಿ ದುರಂತದಲ್ಲಿ ಒಬ್ಬ ಕಾರ್ಮಿಕ ಸುಟ್ಟು ಕರಕಲಾಗಿದ್ದು, ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಬೆಳಗಾವಿ ತಾಲ್ಲೂಕಿನ ಮಾರ್ಕಂಡೇಯ ನಗರದ ನಿವಾಸಿ ಯಲ್ಲಪ್ಪ ಸಣ್ಣಗೌಡ ಗುಂಡ್ಯಾಗೋಳ (20) ಮೃತ ಕಾರ್ಮಿಕ. ಎರಡು ತಿಂಗಳ ಹಿಂದಷ್ಟೇ ಅವರು ಕೆಲಸಕ್ಕೆ ಸೇರಿದ್ದರು.

ಬೆಂಕಿಯಿಂದ ತೀವ್ರ ಗಾಯಗೊಂಡಿರುವ ಬೆಳಗಾವಿ ತಾಲ್ಲೂಕಿನ ಕವಳವಾಡಿಯ ಮಾರುತಿ ನಾರಾಯಣ ಕರವೇಕರ (32), ಜುನೇಬೆಳಗಾವಿಯ ಯಲ್ಲಪ್ಪ ಪ್ರಕಾಶ ಸಲಗುಡೆ (35) ಮತ್ತು ರಾಝುವಾಡಿಯ ರಂಜೀತ ದಶರಥ ಪಾಟೀಲ (39) ಅವರನ್ನು ಕೆಎಲ್‌ಇ ಆಸ್ಪತ್ರೆಗೆ ದಾಖಲಿಸಲಾಗಿದೆ.

5ನೇ ಪುಟ ನೋಡಿ

ಕೈಚೀಲದಲ್ಲಿ ಮೃತ ಮಗನ ಅವಶೇಷ

ಅಗ್ನಿ ಅವಘಡದಲ್ಲಿ ಮೃತಪಟ್ಟ ಕಾರ್ಮಿಕ ಯಲ್ಲಪ್ಪ ಸಣ್ಣಗೌಡ ಗುಂಡ್ಯಾಗೋಳ ಅವರ ದೇಹ ಸಂಪೂರ್ಣ ಸುಟ್ಟು ಬೂದಿಯಾಗಿತ್ತು. ಲಿಫ್ಟ್‌ನಲ್ಲಿ ಸಣ್ಣಪುಟ್ಟ ಅವಶೇಷಗಳಿದ್ದವು. ವಿಧಿವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಸ್ಥಳದಲ್ಲೇ ಮಹಜರು ನಡೆಸಿದರು. ನಂತರ ಅವರ ದೇಹದ ಅವಶೇಷಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ, ತಂದೆ ಸಣ್ಣಗೌಡ ಅವರ ಕೈಗೆ ಕೊಟ್ಟರು.

ಅವಶೇಷಗಳಿದ್ದ ಪ್ಲಾಸ್ಟಿಕ್ ಚೀಲವನ್ನು ಸಣ್ಣಗೌಡರು ಕೈಚೀಲದಲ್ಲಿ ಹಾಕಿಕೊಂಡು ಮನೆಗೆ ಹೋದರು. ನೋವಿನಲ್ಲಿ ಹೋಗುತ್ತಿದ್ದ ಅವರನ್ನು ಕಂಡು ಹಲವರು ಮರುಗಿದರು.

‘ಶವಕ್ಕೆ ಜಿಲ್ಲಾಡಳಿತ ಕನಿಷ್ಠ ಗೌರವವೂ ನೀಡಲಿಲ್ಲ. ಸ್ಥಳದಲ್ಲಿ ಆಂಬುಲೆನ್ಸ್‌ಗಳಿದ್ದರೂ ಕೈಚೀಲದಲ್ಲಿ ದೇಹದ ಅವಶೇಷಗಳನ್ನು ಹಾಕಿ ಕೊಟ್ಟಿದೆ’ ಎಂದು ಕಾರ್ಮಿಕರು ನೋವಿನಿಂದ ಹೇಳಿದರು.

ಇಲಾಖೆಗಳ ಕಾಮಗಾರಿ ನಿರ್ವಹಿಸಿ ಪಾವತಿಯಾಗದ ಬಿಲ್ ಮೊತ್ತ

ಗುತ್ತಿಗೆದಾರರ ಬಾಕಿ ₹31,000 ಕೋಟಿ!

● ರಾಜೇಶ್ ರೈ ಚಟ್ಲ

ಬೆಂಗಳೂರು: ಜಲಸಂಪನ್ಮೂಲ, ಲೋಕೋಪಯೋಗಿ, ಸಣ್ಣ ನೀರಾವರಿ, ನಗರಾಭಿವೃದ್ಧಿ ಮತ್ತು ಇತರ ಇಲಾಖೆಗಳಲ್ಲಿ ಸಣ್ಣಪುಟ್ಟ ಟೆಂಡರ್ ಪಡೆದು ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರಿಗೆ ರಾಜ್ಯ ಸರ್ಕಾರ ಸುಮಾರು ₹31 ಸಾವಿರ ಕೋಟಿಯ ಬಿಲ್ ಪಾವತಿಸದೇ ಬಾಕಿ ಉಳಿಸಿಕೊಂಡಿದೆ.

ಈ ಪೈಕಿ, ಜಲಸಂಪನ್ಮೂಲ ಮತ್ತು ಲೋಕೋಪಯೋಗಿ ಇಲಾಖೆ ಎರಡೂ ಸೇರಿ ಅತಿ ಹೆಚ್ಚು ₹20,823 ಕೋಟಿ ಬಾಕಿ ಇದ್ದರೆ, ಸಣ್ಣ ನೀರಾವರಿ ಇಲಾಖೆಯಲ್ಲಿ ₹1,800 ಕೋಟಿ, ನಗರಾಭಿವೃದ್ಧಿ (ಬಿಬಿಎಂಪಿ ಹೊರತುಪಡಿಸಿ) ಇಲಾಖೆಯಲ್ಲಿ ₹3,800 ಕೋಟಿ, ಬಿಬಿಎಂಪಿಯಲ್ಲಿ ₹3,000 ಕೋಟಿ ಬಾಕಿ ಇದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಗುತ್ತಿಗೆದಾರರಿಗೆ ಜಲಸಂಪನ್ಮೂಲ ಇಲಾಖೆ ₹12,069 ಕೋಟಿ, ಲೋಕೋಪಯೋಗಿ ಇಲಾಖೆ ₹ 8,754 ಕೋಟಿ ಪಾವತಿಸಲು ಬಾಕಿಯಿದೆ ಎಂದು ಎರಡೂ ಇಲಾಖೆಗಳ ಹೇಳಿವೆ.

ಜಲಸಂಪನ್ಮೂಲ ಇಲಾಖೆಯಲ್ಲಿ ಗುತ್ತಿಗೆದಾರರ ಅತೀ ಹೆಚ್ಚು ಮೊತ್ತದ ಬಿಲ್‌ಗಳು ಪಾವತಿಯಾಗದೆ ಬಾಕಿ ಉಳಿದಿವೆ. ಈ ಇಲಾಖೆಯ ವ್ಯಾಪ್ತಿಯಲ್ಲಿರುವ ಕೃಷ್ಣಾ ಭಾಗ್ಯ ಜಲ ನಿಗಮ (ಕೆಬಿಜೆಎನ್‌ಎಲ್), ಕರ್ನಾಟಕ ನೀರಾವರಿ ನಿಗಮ (ಕೆಎನ್‌ಎನ್‌ಎಲ್), ಕಾವೇರಿ ನೀರಾವರಿ ನಿಗಮ (ಸಿಎನ್‌ಎನ್‌ಎಲ್) ಮತ್ತು ವಿಶ್ವೇಶ್ವರಯ್ಯ ಜಲ ನಿಗಮ (ವಿಜೆಎಲ್‌ಎಲ್) ಮೂಲಕ ಅನುಷ್ಠಾನಗೊಳಿಸಿದ ವಿವಿಧ ಕಾಮಗಾರಿಗಳ ಭಾರಿ ಪ್ರಮಾಣ ಮೊತ್ತದ ಬಿಲ್ ಪಾವತಿಗೆ ಬಾಕಿ ಇದೆ ಎಂದು ಜಲಸಂಪನ್ಮೂಲ ಇಲಾಖೆಯ ಮೂಲಗಳು ಮಾಹಿತಿ ನೀಡಿವೆ.

‘ಎಲ್ಲ ಸರ್ಕಾರಗಳ ಅವಧಿಯಲ್ಲೂ ಗುತ್ತಿಗೆದಾರರ ಬಿಲ್‌ಗಳು ಪಾವತಿಗೆ ಬಾಕಿ ಉಳಿಯುತ್ತಲೇ ಬಂದಿದೆ. ಆಯವ್ಯಯದಲ್ಲಿ ಒದಗಿಸುವ ಮೊತ್ತಕ್ಕೆ ಅನುಗುಣವಾಗಿ ಬಾಕಿ ಮೊತ್ತ ಪಾವತಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಹಿಂದಿನ ವರ್ಷಗಳ ಬಾಕಿಯ ಜೊತೆಗೆ, ಕಳೆದ ಸಾಲಿನ ಬಿಲ್‌ಗಳ ಮೊತ್ತವೂ ಸೇರಿಕೊಂಡಿರುವುದರಿಂದ ಒಟ್ಟು ಮೊತ್ತ ಹೆಚ್ಚಳವಾಗಿದೆ’ ಎಂದೂ ಮೂಲಗಳು ಹೇಳಿವೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಒಂದು ವರ್ಷದ ಅವಧಿಯಲ್ಲಿ ತನ್ನ ನಾಲ್ಕೂ ನಿಗಮಗಳ ಮೂಲಕ ಕೈಗೊಂಡ 10,098 ಕಾಮಗಾರಿಗಳ ಬಿಲ್ ಮೊತ್ತದಲ್ಲಿ ₹12,206.56 ಕೋಟಿಯನ್ನು ಜಲ ಸಂಪನ್ಮೂಲ ಇಲಾಖೆ ಪಾವತಿಸಿದೆ.

10ನೇ ಪುಟ ನೋಡಿ

ಜಲಸಂಪನ್ಮೂಲ ಇಲಾಖೆಯಲ್ಲಿ ನಿಗಮವಾರು ಬಿಲ್ ಬಾಕಿ

ನಿಗಮ	ಬಾಕಿ (₹ಕೋಟಿಗಳಲ್ಲಿ)
ಕೆಬಿಜೆಎನ್‌ಎಲ್	4,678.97
ಕೆಎನ್‌ಎನ್‌ಎಲ್	3,896.19
ಸಿಎನ್‌ಎನ್‌ಎಲ್	1,518.63
ವಿಜೆಎನ್‌ಎಲ್	1,975.30
ಒಟ್ಟು	12,069.09

ಬಾಕಿ ಬಿಲ್ ಪಾವತಿ ವಿಳಂಬ ಕುರಿತಂತೆ ಶೀಘ್ರದಲ್ಲಿ ಮುಖ್ಯಮಂತ್ರಿಯನ್ನು ಭೇಟಿ ಮಾಡಿ ಚರ್ಚೆ ನಡೆಸುತ್ತೇವೆ. ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತೇವೆ
ಡಿ. ಕೆಂಪಣ್ಣ
ಅಧ್ಯಕ್ಷ, ರಾಜ್ಯ ಗುತ್ತಿಗೆದಾರರ ಸಂಘ

ಇತ್ತೀಚೆಗಷ್ಟೆ ಜಲಸಂಪನ್ಮೂಲ ಇಲಾಖೆಯ ಜವಾಬ್ದಾರಿ ವಹಿಸಿಕೊಂಡಿದ್ದೇನೆ. ಹೀಗಾಗಿ, ಗುತ್ತಿಗೆದಾರರ ಬಾಕಿ ಬಿಲ್ ಕುರಿತ ಯಾವುದೇ ಮಾಹಿತಿ ನನ್ನ ಬಳಿ ಸದ್ಯಕ್ಕೆ ಇಲ್ಲ
ಗೌರವ್ ಗುಪ್ತ
ಎಸಿಎಸ್, ಜಲಸಂಪನ್ಮೂಲ ಇಲಾಖೆ

ಜಲಮಂಡಳಿ: ನಾಳೆ ಫೋನ್ ಇನ್

ಬೆಂಗಳೂರು: ಜಲಮಂಡಳಿ ಅಧ್ಯಕ್ಷ ವಿ.ರಾಮ್‌ಪ್ರಸಾತ್ ಮನೋಹರ್ ಅವರು ಶುಕ್ರವಾರ (ಆಗಸ್ಟ್ 9) ಬೆಳಿಗ್ಗೆ 9.30ರಿಂದ 10.30ರವರೆಗೆ ಫೋನ್-ಇನ್ ಕಾರ್ಯಕ್ರಮ ನಡೆಸಿ ಕೊಡಲಿದ್ದಾರೆ.

ಸಾರ್ವಜನಿಕರು ವಲಯ/ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ, ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರ-ಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್‌ಗೆ ಸಂಬಂಧಿಸಿದ ಸಮಸ್ಯೆಯ ಬಗ್ಗೆ ಮಾತನಾಡಿ ಪರಿಹಾರ ಪಡೆದುಕೊಳ್ಳಬಹುದು.

ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆಯನ್ನು ತಿಳಿಸಿ ದೂರು ನೀಡಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ. ದೂರವಾಣಿ ಸಂಖ್ಯೆ- 080-22945119 ಮತ್ತು 080-22229639.

JOCKEY
FACTORY SECONDS
UPTO 50% OFF*
*T & C apply
· 10 am to 8 pm · Open All Days · Master / Visa Card Accepted
INNERWEAR · LEISUREWEAR · ACTIVEWEAR · KIDSWEAR · SOCKS

Venues In Bangalore

Kundalahalli Gate: S K R Convention hall, Thubarahalli, Varthur Main Road
Jayanagar: Srinivasa Sagar Kalyan Mahal, 2nd block (Near Ashoka Pillar)
Banshankari: Sri Hari Kalyana Mantap, 30th Main, B.S.K. 3rd Stage, Near K.I.M.S. Hospital
Rajarajeswari Nagar: Vasavi Mahal Kalyana Mantapa, Next To Reliance Digital, Ideal Homes I Phase
Vijay Nagar: Five O Gallery 17th Cross, M.C. Road, Near Vijay Nagar Bus Stop
Mahalaxmipuram: Sri Vidyaranya Prarthana Mandira, (Sri Avani Sringeri Shankar Mutt), West Of Chord Road, Next to Anupama English School
Malleswaram: The Canara Union, No.42, 8th Main, Canara Union Road
Hesaraghatta Main Road: Sri Sai Kalyana Mantapa, No. 36, Near Bangalagunte Bus Stop, Mallasandra
Koramangala: Apoorva International, #35A, Raheja Arcade, Opp Star Box - 560095
Basavanagudi: Amolak Apparels, #104, Bull Temple Road, Near Ramakrishna Ashram - 560019
Org. by: Surya Agency Pvt Ltd.

ಸ್ವಾತಂತ್ರ್ಯ ದಿನಾಚರಣೆಗೆ ಸಿದ್ಧತೆ ಆರಂಭ

ಬೆಂಗಳೂರು: ರಾಜ್ಯಮಟ್ಟದ ಸ್ವಾತಂತ್ರ್ಯ ದಿನಾಚರಣೆಗೆ ಅಗತ್ಯ ಸಿದ್ಧತೆಗಳನ್ನು ಆರಂಭಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪೂರ್ವಾಭ್ಯಾಸ, ಕಲಾವಿದರು, ವಿದ್ಯಾರ್ಥಿಗಳಿಗೆ ತಿಂಡಿ, ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಆಸನಗಳ ವ್ಯವಸ್ಥೆ, ದ್ವಾರಗಳಲ್ಲಿ ಪ್ರವೇಶ, ವಾಹನ ನಿಲುಗಡೆ, ಮಾರ್ಗ ಬದಲಾವಣೆ, ಭದ್ರತಾ ಸಿಬ್ಬಂದಿ ನಿಯೋಜನೆ ಎಂದು ಸೋಮವಾರ ನಡೆದ ಸಭೆಯಲ್ಲಿ ತಿಳಿಸಿದರು.

'ಅಂಗಾಂಗ ದಾನದ ವಿಶೇಷ ಕಾರ್ಯ'ಕ್ಕಾಗಿ 80 ಮಂದಿಯ ಕುಟುಂಬಕ್ಕೆ ಮುಖ್ಯಮಂತ್ರಿಯವರು ಪ್ರಶಂಸಾಪತ್ರ ನೀಡಲಿದ್ದಾರೆ ಎಂದು ಅವರು ಹೇಳಿದರು.

ಬಿಬಿಎಂಪಿಗೆ ಸಲಹೆ: ಮಧ್ಯಮಗಳ ವರದಿ ಆಧರಿಸಿ ಪಿಐಎಲ್ ದಾಖಲಿಸಿಕೊಂಡಿದ್ದ ಹೈಕೋರ್ಟ್

'ಡೆಂಗಿ ನಿಯಂತ್ರಣ: ದಂಡ ವಿಧಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡೆಂಗಿ ಜ್ವರಕ್ಕೆ ಕಾರಣವಾದ ಸೊಳ್ಳೆಗಳ ಉತ್ಪತ್ತಿಯನ್ನು ತಡೆಯಲು ಸಹಕರಿಸದೇ ಇರುವವರಿಗೆ ದಂಡ ವಿಧಿಸುವಂತಹ ಕಠಿಣ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ' ಎಂದು ಹೈಕೋರ್ಟ್, ರಾಜ್ಯ ಸರ್ಕಾರ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಸಲಹೆ ಮಾಡಿದೆ.

ಡೆಂಗಿ ಜ್ವರ ಹೆಚ್ಚಳದ ಬಗ್ಗೆ ಮಾಧ್ಯಮಗಳ ವರದಿ ಆಧರಿಸಿ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

51 ಕೇಂದ್ರಗಳಲ್ಲಿ ಸೊಳ್ಳೆ ಉತ್ಪತ್ತಿ ಕೋರ್ಟ್ ನಿರಾಕರಣೆ

ಬೆಂಗಳೂರು ಮಹಾನಗರದಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುವ 51 ಕೇಂದ್ರಗಳನ್ನು ಗುರುತಿಸಲಾಗಿದೆ' ಎಂಬ ಪಾಲಿಕೆಯ ವಿವರಣೆಯನ್ನು ತಿರಸ್ಕರಿಸಿದ ನ್ಯಾಯಪೀಠ, 'ಕೇವಲ ಇಷ್ಟು ಕೇಂದ್ರಗಳಿರಲು ಸಾಧ್ಯವಿಲ್ಲ. ನಗರದಲ್ಲಿ ಜನವಸತಿ, ವಾಣಿಜ್ಯ ಮತ್ತು ಕಟ್ಟಡ ನಿರ್ಮಾಣ ವಲಯ ಅತಿ ದೊಡ್ಡದಾಗಿದೆ' ಎಂದು ಹೇಳಿತು.

ವಿಚಾರಣೆ ವೇಳೆ ಸರ್ಕಾರ ಮತ್ತು ಬಿಬಿಎಂಪಿ ಸಲ್ಲಿಸಿದ್ದ ಪ್ರಮಾಣಪತ್ರಗಳನ್ನು ಪರಿಶೀಲಿಸಿದ ನ್ಯಾಯಪೀಠವು, 'ಸರ್ಕಾರ ತನ್ನ ಜವಾಬ್ದಾರಿ ಪೂರೈಸುವ ಕ್ರಮಗಳನ್ನು ಮುಂದುವರಿಸಬೇಕು ಹಾಗೂ ಇನ್ನಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಹೇಳಿತು.

ಆಕ್ಷೇಪ: ಪ್ರಕರಣದ ಅಮಿಕಸ್ ಕ್ಯೂರಿ (ಕೋರ್ಟ್‌ಗೆ ಸಹಕರಿಸುವ ವಕೀಲ) ಹಿರಿಯ ವಕೀಲ ಕೆ.ಎನ್.ಫಣೀಂದ್ರ, ಬಿಬಿಎಂಪಿ ಸಲ್ಲಿಸಿದ ಪ್ರಮಾಣಪತ್ರಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

'ಬಿಬಿಎಂಪಿ 10 ದಿನಗಳಲ್ಲಿ 24 ಲಕ್ಷಕ್ಕೂ ಹೆಚ್ಚಿನ ಮನೆಗಳ ಸಮೀಕ್ಷೆ ನಡೆಸಿರುವುದಾಗಿ ಹೇಳಿದೆ. ಈ ಅಂಕಿ ಅಂಶ ವಾಸ್ತವವಾಗಿಲ್ಲ. ಸಮೀಕ್ಷೆ ನಡೆಸಿರುವ ತಂಡವು ಹೈಕೋರ್ಟ್ ಸುತ್ತಮುತ್ತಲ ಪ್ರದೇಶದ ಮನೆಗಳಿಗೆ ಭೇಟಿಯನ್ನೇ ನೀಡಿಲ್ಲ ಮತ್ತು ನಗರದಲ್ಲಿ ಎಲ್ಲೂ ಸೊಳ್ಳೆಗಳ ನಿಯಂತ್ರಣಕ್ಕೆ ಫಾಗಿಂಗ್ ಮಾಡಿಲ್ಲ. ಸೊಳ್ಳೆಗಳ ಹಾಟ್‌ಸ್ಪಾಟ್‌ಗಳನ್ನು ಗುರುತಿಸಲು ಯಾವುದೇ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿಲ್ಲ' ಎಂದು ದೂರಿದರು.

'ಆರೋಗ್ಯ ಇಲಾಖೆ ನಿರ್ದೇಶಕರು ಸಲ್ಲಿಸಿರುವ ವರದಿಯಲ್ಲಿ ಆಗಸ್ಟ್‌ನಲ್ಲಿ ಡೆಂಗಿ ಪ್ರಕರಣ ತಕ್ಕಮಟ್ಟಿಗೆ ಇಳಿಕೆಯಾಗಿವೆ. ಮುಂಗಾರು ಮಳೆ ಮುಗಿಯುತ್ತಾ ಬಂದಿರುವುದು ಪ್ರಕರಣಗಳ ಸಂಖ್ಯೆ ಮತ್ತೆ ಹೆಚ್ಚಾಗಬಹುದು' ಎಂದು ಆತಂಕ ವ್ಯಕ್ತಪಡಿಸಿದರು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಎಸ್. ಶ್ರೀರಂಗ, 'ನವದೆಹಲಿ ಮತ್ತು ಇತರೆಡೆ ಡೆಂಗಿ ಜ್ವರದ ಪ್ರಕರಣಗಳ ತಡೆಗೆ ವಿಶೇಷ ಕ್ರಮ ಕೈಗೊಳ್ಳಲಾಗಿದೆ. ಅಂತಹ ಕ್ರಮಗಳನ್ನೂ ರಾಜ್ಯದಲ್ಲೂ ಕೈಗೊಳ್ಳಬೇಕು. ಸಾಂಕ್ರಾಮಿಕ ರೋಗಗಳ ಕಾಯ್ದೆಯಡಿ ಈ ಬಗ್ಗೆ ನಿಗಾ ವಹಿಸಲು ವಿಶೇಷ ಅಧಿಕಾರಿ ನಿಯೋಜಿಸಬೇಕು' ಎಂದರು.

ಅಂತಿಮವಾಗಿ ನ್ಯಾಯಪೀಠವು, 'ಡೆಂಗಿಜ್ವರ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ಕುರಿತು ಪ್ರಮಾಣಪತ್ರ ಸಲ್ಲಿಸಿ' ಎಂದು ಸರ್ಕಾರ ಮತ್ತು ಬಿಬಿಎಂಪಿಗೆ ಸೂಚಿಸಿ ವಿಚಾರಣೆಯನ್ನು ಇದೇ 28ಕ್ಕೆ ಮುಂದೂಡಿತು.

ಸಂಕ್ಷಿಪ್ತ ಸುದ್ದಿ

ಹತ್ತು ಪುಸ್ತಕಗಳ ಬಿಡುಗಡೆ ನಾಳೆ

ಬೆಂಗಳೂರು: ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರು ರಚಿಸಿರುವ ಹತ್ತು ಪುಸ್ತಕಗಳನ್ನು ಸೇಂಟ್ ಜೋಸೆಫ್ ಸಂಜೆ ಕಾಲೇಜಿನಲ್ಲಿ ಶುಕ್ರವಾರ (ಆಗಸ್ಟ್ 9) ನಡೆಯುವ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಲಾಗುವುದು ಎಂದು ಸಾಮಾಜಿಕ ನ್ಯಾಯಕ್ಕಾಗಿ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಮೈತ್ರಿಕೂಟ ತಿಳಿಸಿದೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಮೈತ್ರಿಕೂಟದ ಸದಸ್ಯೆ ಅಕ್ಕೈ ಪದ್ಮಶಾಲಿ, 'ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ಲಿಂಗತ್ವ ಅಲ್ಪಸಂಖ್ಯಾತರು ಹಾಡಿರುವ ರಾಷ್ಟ್ರಗೀತೆ ಮತ್ತು ನಾಡಗೀತೆಯ ಆಲ್ಬಮ್ ವಿಡಿಯೊ ಬಿಡುಗಡೆ ಆಗಲಿದೆ. ನಮ್ಮ ಸಮುದಾಯದ ಕಲಾವಿದರು ನಟಿಸಿರುವ 'ತಲ್ಕಿ' ಎಂಬ ನಾಟಕ ಪ್ರದರ್ಶನವಾಗಲಿದೆ' ಎಂದರು.

ಕಾಂಗ್ರೆಸ್ ನಾಯಕಿ ಮಾರ್ಗರೇಟ್ ಆಳ್ವಾ, ನಟ ಪ್ರಕಾಶ್ ರಾಜ್, ಸಚಿವರಾದ ಎಚ್.ಕೆ. ಪಾಟೀಲ, ಲಕ್ಷ್ಮಿ ಹೆಬ್ಬಾಳಕರ, ಶಿವರಾಜ ತಂಗಡಗಿ ಭಾಗವಹಿಸಲಿದ್ದಾರೆ ಎಂದರು.

ಅರ್ಜಿ ಆಹ್ವಾನ

ಬೆಂಗಳೂರು: ದೇವಾಂಗ ಸಂಘವು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ.

2023-24ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇಕಡ 75ಕ್ಕಿಂತ ಹೆಚ್ಚು ಅಂಕಗಳಿಸಿದವರು, ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಚಿನ್ನದ ಪದಕಗಳನ್ನು ಪಡೆದವರು, ಪಿ.ಎಚ್‌ಡಿ ಹಾಗೂ ಕೇಂದ್ರ ಮತ್ತು ರಾಜ್ಯ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ಅಧಿಕಾರಿಗಳಾಗಿ ಆಯ್ಕೆಯಾದವರು (ದೇವಾಂಗ ಸಂಘದ ಸದಸ್ಯರು ಅಥವಾ ಮಕ್ಕಳು ಮಾತ್ರ) ಆಗಸ್ಟ್ 31ರೊಳಗೆ ಅರ್ಜಿ ಸಲ್ಲಿಸಬೇಕು.

ಮಾಹಿತಿಗೆ: 9900066300/ 9845362386

ಲಾಲ್‌ಬಾಗ್ ಸುತ್ತಮುತ್ತಲಿನ ರಸ್ತೆಗಳಲ್ಲಿ ವಾಹನ ನಿಲುಗಡೆಗೆ ನಿಷೇಧ

ಇಂದಿನಿಂದ ಫಲಪುಷ್ಪ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ತೋಟಗಾರಿಕೆ ಇಲಾಖೆಯಿಂದ ಲಾಲ್‌ಬಾಗ್‌ನಲ್ಲಿ ಆಗಸ್ಟ್ 8ರಿಂದ 19ರವರೆಗೆ ಫಲಪುಷ್ಪ ಪ್ರದರ್ಶನ ಆಯೋಜಿಸಲಾಗಿದ್ದು, ಲಾಲ್‌ಬಾಗ್ ಸುತ್ತಮುತ್ತಲ ಹಲವು ರಸ್ತೆಗಳಲ್ಲಿ ವಾಹನ ನಿಲುಗಡೆ ನಿಷೇಧಿಸಲಾಗಿದೆ. ಅಲ್ಲದೇ ವಾಹನ ನಿಲುಗಡೆಗೆ ಪ್ರತ್ಯೇಕ ಸ್ಥಳ ಗುರುತಿಸಲಾಗಿದೆ.

ಪ್ರದರ್ಶನಕ್ಕೆ ಗಣ್ಯರು, ಸಾರ್ವಜನಿಕರು, ದೇಶ-ವಿದೇಶದ ಪ್ರೇಕ್ಷಕರು ಭೇಟಿ ನೀಡಲಿದ್ದಾರೆ. ಅಂದಾಜು 8ರಿಂದ 10 ಲಕ್ಷ ಜನರು ಬರುವ ನಿರೀಕ್ಷೆ ಇದೆ. ವಿಲ್ಸನ್ ಗಾರ್ಡನ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿ ಹಾಗೂ ಸುತ್ತಲ ಪ್ರದೇಶಗಳಲ್ಲಿ ದಟ್ಟಣೆ ಉಂಟಾಗಲಿದ್ದು, ಸುಗಮ ಸಂಚಾರ ವ್ಯವಸ್ಥೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ಮಾಡಿರುವ ಸಿದ್ಧತೆ – ಪ್ರಜಾವಾಣಿ ಚಿತ್ರ

'ಸಮೂಹ ಸಾರಿಗೆ ಬಳಸಿ'

ಪ್ರದರ್ಶನದ ಅವಧಿಯಲ್ಲಿ ಮರೀಗೌಡ ರಸ್ತೆ, ಲಾಲ್‌ಬಾಗ್ ರಸ್ತೆ, ಕೆ.ಎಚ್. ರಸ್ತೆಯಲ್ಲಿ ಸಂಚಾರ ದಟ್ಟಣೆ ಹೆಚ್ಚಿರುವ ಸಾಧ್ಯತೆಯಿದೆ. ಸಾರ್ವಜನಿಕರು ಸಾಧ್ಯವಾದಷ್ಟು ಸಮೂಹ ಸಾರಿಗೆಗಳಾದ ಬಿಎಂಟಿಸಿ ಬಸ್, ಮೆಟ್ರೊ ಹಾಗೂ ಕ್ಯಾಬ್ ಬಳಸುವಂತೆ ನಗರ ಸಂಚಾರ ವಿಭಾಗದ ಪೊಲೀಸರು ಮನವಿ ಮಾಡಿದ್ದಾರೆ.

ಎಲ್ಲೆಲ್ಲಿ ನಿಷೇಧ

- ಮರೀಗೌಡ ರಸ್ತೆ– ಲಾಲ್‌ಬಾಗ್ ಮುಖ್ಯದ್ವಾರದಿಂದ ನಿಮ್ಹಾನ್ಸ್‌ವರೆಗೆ ರಸ್ತೆಯ ಎರಡೂ ಬದಿ.
- ಕೆ.ಎಚ್. ರಸ್ತೆ – ಕೆ.ಎಚ್. ವೃತ್ತದಿಂದ ಶಾಂತಿನಗರ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿ.
- ಲಾಲ್‌ಬಾಗ್ ರಸ್ತೆ – ಸುಬ್ಬಯ್ಯ ವೃತ್ತದಿಂದ ಲಾಲ್‌ಬಾಗ್ ಮುಖ್ಯದ್ವಾರದವರೆಗೆ.
- ಸಿದ್ದಯ್ಯ ರಸ್ತೆ – ಊರ್ವಶಿ ಚಿತ್ರಮಂದಿರದ ಜಂಕ್ಷನ್‌ನಿಂದ ವಿಲ್ಸನ್ ಗಾರ್ಡನ್ 12ನೇ ಕ್ರಾಸ್‌ವರೆಗೆ.
- ಬಿಟಿಎಸ್ ಬಸ್ ನಿಲ್ದಾಣ – ಬಿಎಂಟಿಸಿ ಜಂಕ್ಷನ್‌ನಿಂದ ರಸ್ತೆಯ ಎರಡೂ ಬದಿ.
- ಕೃಂಬಿಗಲ್ ರಸ್ತೆಯ ಎರಡೂ ಬದಿ.
- ಲಾಲ್‌ಬಾಗ್ ವೆಸ್ಟ್‌ಗೇಟ್‌ನಿಂದ ಆರ್.ವಿ. ಟೀಚರ್ಸ್ ಕಾಲೇಜುವರೆಗೆ.
- ಆರ್.ವಿ. ಟೀಚರ್ಸ್ ಕಾಲೇಜಿನಿಂದ ಅಶೋಕ ಪಿಲ್ಲರ್‌ವರೆಗೆ.
- ಅಶೋಕ ಪಿಲ್ಲರ್‌ನಿಂದ ಸಿದ್ದಾಪುರ ಜಂಕ್ಷನ್‌ವರೆಗೆ.

ನಿಲುಗಡೆಗೆ ಅವಕಾಶ

- ಮರೀಗೌಡ ರಸ್ತೆ – ಅಲ್ ಅಮೀನ್ ಕಾಲೇಜು ಆವರಣದಲ್ಲಿ ದ್ವಿಚಕ್ರ ವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ.
- ಕೆ.ಎಚ್. ರಸ್ತೆ– ಶಾಂತಿನಗರ ಬಿಎಂಟಿಸಿ ಬಸ್ ನಿಲ್ದಾಣದ ಮೇಲೆ ನಾಲ್ಕು ಚಕ್ರದ ವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ.
- ಮರೀಗೌಡ ರಸ್ತೆ – ಹಾಪ್‌ಕಾಮ್ಸ್‌ನಲ್ಲಿ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳ ನಿಲುಗಡೆಗೆ ಅವಕಾಶ ಇದೆ.
- ಜೆ.ಸಿ. ರಸ್ತೆ – ಕಾರ್ಪೊರೇಶನ್ ಪಾರ್ಕಿಂಗ್ ಸ್ಥಳಗಳಲ್ಲಿ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳ ನಿಲುಗಡೆಗೆ ಅವಕಾಶ ಇದೆ.

ಅಂಚೆ ಚೀಟಿ ಸಂಗ್ರಹ: ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಶಾಲಾ ಮಕ್ಕಳಲ್ಲಿ ಅಂಚೆ ಚೀಟಿ ಸಂಗ್ರಹ ಹವ್ಯಾಸವನ್ನು ಉತ್ತೇಜಿಸಲು ಅಂಚೆ ಇಲಾಖೆ 'ದೀನ್ ದಯಾಳ್ ಸ್ಪರ್ಶ್ ಯೋಜನೆ'ಯಡಿ 6 ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುತ್ತಿದ್ದು, ಆಸಕ್ತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು 2023-24ರ ಶೈಕ್ಷಣಿಕ ವರ್ಷದ ಪರೀಕ್ಷೆಯಲ್ಲಿ ಶೇ 60ರಷ್ಟು ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಫಿಲಾಟೆಲಿಕ್ ಕ್ಲಬ್‌ನ ಸದಸ್ಯರಾಗಿರಬೇಕು ಅಥವಾ ತನ್ನದೇ ಆದ ಅಂಚೆ ಚೀಟಿಯ ಸಂಗ್ರಹ ಖಾತೆಯನ್ನು ಹೊಂದಿರಬೇಕು.

ವಿವರ: www.inidapost.gov.in

ಛಾಯಾಚಿತ್ರಗಳ ಪ್ರದರ್ಶನ, ಸ್ಪರ್ಧೆ ಆ.10ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೂತ್ ಫೋಟೋಗ್ರಾಫಿಕ್ ಸೊಸೈಟಿಯಿಂದ (ವೈಪಿಎಸ್) ವಿಶ್ವ ಛಾಯಾಗ್ರಹಣ ದಿನಾಚರಣೆ ಅಂಗವಾಗಿ ಇದೇ 10 ಮತ್ತು 11ರಂದು ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ 'ಸ್ಕ್ವೇರ್ ಇಟ್ ಅಪ್' ಹೆಸರಿನಲ್ಲಿ ವೈಪಿಎಸ್ ಸದಸ್ಯರ ಛಾಯಾಚಿತ್ರಗಳ ಪ್ರದರ್ಶನ ನಡೆಯಲಿದೆ.

ಆಗಸ್ಟ್ 10ರಂದು ಮಧ್ಯಾಹ್ನ 3ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಡಾ. ಅಜಿತ್ ಹುಯಿಲಗೋಳ ಅವರು ವಿಶ್ವದ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ತೆಗೆದಿರುವ ಛಾಯಾಚಿತ್ರಗಳ ಪ್ರದರ್ಶನ ನಡೆಯಲಿದೆ.

ಆಗಸ್ಟ್ 11ರಂದು ಆಹಾರ ಛಾಯಾಚಿತ್ರ ಸ್ಪರ್ಧೆ ನಡೆಯಲಿದ್ದು, ವಿವಿಧ ಆಹಾರ ಪದಾರ್ಥಗಳ ಛಾಯಾಚಿತ್ರಗಳನ್ನು ತೆಗೆದು ಆಯೋಜಕರೊಂದಿಗೆ ಹಂಚಿಕೊಳ್ಳಬೇಕು. ಉತ್ತಮ ಛಾಯಾಚಿತ್ರಗಳಿಗೆ ಬಹುಮಾನಗಳನ್ನು ನೀಡಲಾಗುವುದು. ಪ್ರತಿದಿನ ಬೆಳಿಗ್ಗೆ 11ರಿಂದ ಸಂಜೆ 6ರವರೆಗೆ ಛಾಯಾಚಿತ್ರಗಳ ಪ್ರದರ್ಶನ ಇರಲಿದೆ. ಈ ಪ್ರದರ್ಶನ ಹಾಗೂ ಸ್ಪರ್ಧೆ ಉಚಿತವಾಗಿದ್ದು, ಎಲ್ಲರೂ ಭಾವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: www.ypsbengaluru.comಗೆ ಭೇಟಿ ನೀಡಿ ಅಥವಾ 95139 77257ಗೆ ಸಂಪರ್ಕಿಸಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

SECURITY AGENCY
Require Experienced Field-Officer, Marketing Manager/ Operations, Tally Clerk, Personnel Driver. Bangalore
Ph:080-23437474 23437797
Mob:8892073262

BUSINESS

Business Offers

Distributors

RS.1.50.000/-ABOVE REGULAR Life Time "Opportunity" In Excellent Concrete Secured Business PART/ FULL-TIME. Registrer- 7775842189

PERSONAL

Change of Name

CHANGE OF NAME
I, REKHA KRISHNANAND, Residing at No. 277/B, 37th 'A' Cross Road, Jayanagar, 8th Block, Bengaluru - 560082, have changed my name to VASUMATHI KRISHNANAND vide affidavit dated 07/08/2024, before notary Gangaraju.B.N, Bengaluru

I, RAKSHITH TARABANAHALLI KUMAR resident of Tharabanahalli, Chikkajala Post, Chikkajala Hobli, Bangalore-562157 have changed my name to RAKSHITH GOWDA T.K vide affidavit dated 01/08/2024 sworn before notary D.Sarala Kumari, Bangalore

ANNOUNCEMENT
I SHANKAR.K, S/o Kaverappa R/at #368, Madhura Nagar, Sora Hunase, Varthur, Bangalore-560087, declare that in LIC document my name is mentioned as K. SHANKARAPPA, my correct name is SHANKAR. K. vide affidavit dated 07.08.2024, before notay Sumithra N, Bangalore.

I, ASHWIN S/o Satish Bhat, R/o Surabhi, Indira Nagar, New Market Yard, Sirsi, Uttara Kannada, Karnataka, have changed my name and shall hereafter be known as Ashwin Satish Bhat.

CHANGE OF NAME
I, SUMANGALA AITHAL Residing at #6243,Sobha Forest View, Vajarahalli Road, Off Kanakapura Main Road, Thalaghattapura, Bangalore-560109 have changed my name to SUMANGALA K AITHAL vide affidavit dated 06.08.2024 before Notary G.R. Rajanna, Bangalore. Henceforth I shall be known as SUMANGALA K AITHAL only.

I P M Shanth Kumar S/o P R Muniswamy Reddy residing at Ward No.17 Chowdareddypalya Chintamani Chickbalapur Dist I have changed my name from P M Shantha Kumar to P M Shanth kumar Vide Affidavit dated on:31/07/2024 before Notary Manjunatha Reddy Chintamani

CHANGE OF NAME
I, RAHIM M.A. Residing at #29, 2nd floor, 3rd Main, Matadahalli, RT Nagar, Bangalore-560032 have changed our minor son's name from MOHAMMED AMEER HUMZA to AMEER HAMZA vide affidavit dated 16.10.2021 before Notary Prakash C, Bangalore. Henceforth he/ shall be known as AMEER HAMZA only.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact | ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | 080-45557163/164

CONNECT

ಅರುಣ ಸಿಲ್ಕ್ಸ್
ರಾಜಾಜಿನಗರ – ಕೆಂಗೇರಿ
ವರಮಹಾಲಕ್ಷ್ಮಿ ಫೆಸ್ಟಿವಲ್ ಕಲೆಕ್ಷನ್ಸ್
GET 10% OFF *T&C Applied
● ವೆಡ್ಡಿಂಗ್ ಸ್ಯಾರಿಸ್ ● ಡ್ರೆಸ್ ಮೆಟಿರಿಯಲ್ಸ್
● ಫ್ಯಾನ್ಸಿ ಸ್ಯಾರಿಸ್ ● ಮೆನ್ಸ್ ವೇರ್
● ಸಲ್ವರ್ಸ್ ● ಕಿಡ್ಸ್ ವೇರ್
SCAN CODE FOR LOCATION
ಅರುಣ ಸಿಲ್ಕ್ ಪ್ಯಾರಡೈಸ್
#713, ಜಿಂಕಾ ಅವೆನ್ಯೂ, ಮೋದಿ ಹಾಸ್ಪಿಟಲ್ ರೋಡ್, ವೆಸ್ಟ್ ಆಫ್ ಕಾರ್ಡ್ ರೋಡ್, ರಾಜಾಜಿನಗರ, ಬೆಂಗಳೂರು – 86
Ph : 080 23197755
ಶ್ರೀ ಅರುಣ ಸಿಲ್ಕ್ಸ್
#141, 1ನೇ ಮುಖ್ಯರಸ್ತೆ, ಆಕ್ಸಿಸ್ ಬ್ಯಾಂಕ್ ಪಕ್ಕ ಹೊಯ್ಸಳ ಸರ್ಕಲ್ ಹತ್ತಿರ, ಕೆಂಗೇರಿ ಉಪನಗರ ಬೆಂಗಳೂರು – 60
Ph : 080 29917755
Car Parking Available 7676405040 / 9900889444 Open All Days

Handloom INDIA
ನೈಸರ್ಗಿಕ ನಾರು ರೇಷ್ಮೆಯ ಪ್ರದರ್ಶನ ಮತ್ತು ಮಾರಾಟ
ಪ್ರಮಾಣೀಕೃತ ಅಸಲಿ ರೇಷ್ಮೆ ಮತ್ತು ನೂಲಿನ, ಹಸ್ತದಿಂದ ತಯಾರಿಸಲಾದ ಭಾರತದಾದ್ಯಂತದ ಎಲ್ಲಾ ಉತ್ಪಾದಕರ ಉತ್ಪನ್ನಗಳು ಒಂದೇ ಸೂರಿನ ಅಡಿಯಲ್ಲಿ
9 ರಿಂದ 13 ಆಗಸ್ಟ್
ಭಾರತದ 100ಕ್ಕೂ ಹೆಚ್ಚು ಅತ್ಯುತ್ತಮ ನೇಕಾರರಿಂದ ವಿನ್ಯಾಸ
ಚಂದ್ರ ಸಾಗರ್ ಕಲ್ಯಾಣ ಮಂಟಪ
ಅಶೋಕ ಸ್ತಂಭದ ಹತ್ತಿರ, 2ನೇ ಬ್ಲಾಕ್, ಜಯನಗರ, ಬೆಂಗಳೂರು-11
ಭಾಗವಹಿಸುವ ರಾಜ್ಯಗಳು
ಬಿಹಾರ್, ಅಸ್ಸಾಂ, ಉತ್ತರ ಪ್ರದೇಶ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ರಾಜಸ್ಥಾನ, ಕರ್ನಾಟಕ, ತಮಿಳುನಾಡು, ಪಂಜಾಬ್, ತೆಲಂಗಾಣ, ಒರಿಸ್ಸಾ, ಚತ್ತೀಸ್‌ಗಢ್, ಜಮ್ಮು ಮತ್ತು ಕಾಶ್ಮೀರ್, ಆಂಧ್ರಪ್ರದೇಶ ಮತ್ತು ಇತರೇ ರಾಜ್ಯಗಳು
ನೇಕಾರರಿಂದ ಆಕರ್ಷಕ ರಿಯಾಯಿತಿ
ENTRY FREE • M:9441987009 • ALL DEBIT & CREDIT CARDS ACCEPTED

ಪುರಸಭಾ ಕಾರ್ಯಾಲಯ ಮಾಲೂರು, ಕೋಲಾರ ಜಿಲ್ಲೆ-563130

ದೂರವಾಣಿ ಸಂ: 08151-232847/ ಸಹಾಯವಾಣಿ:08151-232840, ಇಮೇಲ್:itstaff_ulb_malur@yahoo.co.in, ವೆಬ್‌ಸೈಟ್: www.malurtown.mrc.gov.in

ನಂ: ಪು.ಸ.ಮಾ/ಕಿ.ಅ/ಟೆಂಡರ್-03/2024-25 ದಿನಾಂಕ:05.08.2024

ಟೆಂಡರ್ ಪ್ರಕಟಣೆ (KPPP portal ಮೂಲಕ ಮಾತ್ರ)

ಮಾಲೂರು ಪುರಸಭೆ ವ್ಯಾಪ್ತಿಯಲ್ಲಿ 2024-25 ನೇ ಸಾಲಿನ ವಿವಿಧ ಕಾಮಾಗಾರಿಗಳು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ. -1999 ನಿಯಮಗಳು 2000) ಅನ್ವಯ ಟೆಂಡರ್‌ನ್ನು ಕೆಪಿಪಿಪಿ ಮೂಲಕ ಆಹ್ವಾನಿಸಲಾಗಿದೆ. ಸರಬರಾಜುದಾರರು/ಗುತ್ತಿಗೆದಾರರು ಟೆಂಡರ್‌ಗಳನ್ನು, ತಾಂತ್ರಿಕ ಬಿಡ್‌ನ್ನು ಹಾಗು ಆರ್ಥಿಕ ಬಿಡ್‌ನ್ನು ತೆರೆಯುವ ವಿವರಗಳನ್ನು KPPP portal ನಲ್ಲಿ ಕಾಣಬಹುದು.

ಕ್ರ ಸಂ	ಕಾಮಗಾರಿಗಳ ವಿವರ	Indent No	Category
1	Supply and erection of pump and Motor and other items to the borewell in SWM site in Doddahiggaluru	DMA/2024-25/OW/WORK_INDENT24435	Others
2	Supply and erection of pump and Motor and other items to the borewell in Indira Canteen	DMA/2024-25/OW/WORK_INDENT24410/ call-2	SC
3	Borewell drilling in newly constructed Indira Canteen in TMC Malur	DMA/2024-25/OW/WORK_INDENT24365/ call-2	ST
4	Laying of Asphalt road from sheegechatlu krishnappa home to baabajan home in valmiki road in ward no.7 in TMC Malur	DMA/2024-25/RD/WORK_INDENT24519/ call-2	SC
5	Construction of deck slab to the drains in the ward no. 02 in TMC Malur	DMA/2024-25/OW/WORK_INDENT24481	Others
6	Construction of Ramp and railings near Masthi Venkatesh Ayyangar Ranga Mandira and Railings adoption for social welfare office in TMC Malur	DMA/2024-25/OW/WORK_INDENT24467	Others
7	Construction of remaining compound in swm site in Malur TMC in Doddahiggaluru village	DMA/2024-25/OW/WORK_INDENT24156	Others
8	Construction of Compound, gate and other works for pump house behind Dharmaraya swamy temple	DMA/2024-25/OW/WORK_INDENT24116	Others
9	Construction of Compound, gate and other works for the sump near OHT in ward no.14 in TMC Malur	DMA/2024-25/OW/WORK_INDENT24147	Others
10	Construction of RCC drains covering slabs and deck slabs in various wards in Malur TMC limits	DMA/2024-25/OW/WORK_INDENT24127	Others
11	Providing pipeline for the supply of Yargol drinking water to Malur town	DMA/2024-25/WS/WORK_INDENT24083	Others

ಸಹಿ/-
(ಶ್ರೀ ರಮೇಶ್ ಕುಮಾರ್. ಕೆ)
ಆಡಳಿತಾಧಿಕಾರಿಗಳು
ಪುರಸಭೆ, ಮಾಲೂರು

ಸಹಿ/-
(ಶ್ರೀ ಪ್ರದೀಪ್ ಕುಮಾರ್ ಎ.ಬಿ)
ಮುಖ್ಯಾಧಿಕಾರಿ
ಪುರಸಭೆ, ಮಾಲೂರು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:150/ಕೆಎಸ್‌ಎಂ.ಸಿ.ಎ/2024-25

ದರ್ಶನ್ ಚಿತ್ರಕ್ಕೆ ಪೂಜೆ ಅರ್ಚಕನಿಗೆ ನೋಟಿಸ್

ಹೂವಿನಹಡಗಲಿ: ತಾಲ್ಲೂಕಿನ ಸುಕ್ಷೇತ್ರ ಕುರುವತ್ತಿಯ ಬಸವೇಶ್ವರ ದೇಗುಲದಲ್ಲಿ ನಟ ದರ್ಶನ್ ಅಭಿಮಾನಿಗಳ ಕೋರಿಕೆ ಮೇರೆಗೆ ಅರ್ಚಕರು ದರ್ಶನ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ ಘಟನೆ ನಡೆದಿದೆ.

ನಟ ದರ್ಶನ್ ಬಂಧಮುಕ್ತಗೊಳ್ಳಲಿ ಎಂದು ಪ್ರಾರ್ಥಿಸಿ ಅಭಿಮಾನಿಗಳು ಈಚೆಗೆ ದೇಗುಲಕ್ಕೆ ತೆರಳಿ ಪೂಜೆ ಸಲ್ಲಿಸಿದ್ದಾರೆ. ವಿಗ್ರಹದ ಪಾದದಡಿ ದರ್ಶನ್ ಚಿತ್ರವನ್ನು ಇಟ್ಟು, ಪೂಜೆ ಸಲ್ಲಿಸಲು ಅಭಿಮಾನಿಗಳು ಕೋರಿದ್ದಾರೆ. ಅರ್ಚಕ ಬಸಪ್ಪ ಪೂಜಾರ್ ಭಾವಚಿತ್ರ ಇರಿಸಿ, ಪೂಜೆ ನೆರವೇರಿಸಿದ್ದಾರೆ. ಅದರ ವಿಡಿಯೋ ಜಾಲತಾಣಗಳಲ್ಲಿ ವೈರಲ್ ಆಗಿದೆ.

‘ಅರ್ಚಕ ಮುಗ್ಧರು. ಅಭಿಮಾನಿಗಳ ಕೋರಿಕೆಯಂತೆ ದರ್ಶನ್ ಚಿತ್ರಗಳನ್ನು ಇಟ್ಟಿದ್ದಾರೆ. ಅವರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿದೆ’ ಎಂದು ದೇವಸ್ಥಾನ ಸಮಿತಿ ಕಾರ್ಯನಿರ್ವಾಹಕ ಅಧಿಕಾರಿ ಶಾಂತಮ್ಮ ತಿಳಿಸಿದರು.

ಬಿಬಿಎಂಪಿ ಸ್ವಚ್ಛ ಮಾಡಿದರೆ ಶುಲ್ಕ, ದಂಡದ ಹಣ ಆಸ್ತಿ ತೆರಿಗೆಗೆ ಸೇರ್ಪಡೆ

ಖಾಲಿ ನಿವೇಶನ ಸ್ವಚ್ಛತೆಗೆ 7 ದಿನ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ಖಾಲಿ ನಿವೇಶನಗಳ ಸ್ವಚ್ಛತೆಗೆ ಏಳು ದಿನಗಳ ಗಡುವು ನೀಡಲಾಗಿದ್ದು, ತದನಂತರ ತೆರವು ಶುಲ್ಕ, ದಂಡ ವಿಧಿಸಲು ಬಿಬಿಎಂಪಿ ಆದೇಶ ಹೊರಡಿಸಿದೆ.

ಖಾಲಿ ನಿವೇಶನಗಳಲ್ಲಿರುವ ತ್ಯಾಜ್ಯ, ಗಿಡ–ಗಂಟಿಗಳನ್ನು ತೆರವು ಮಾಡಲು ಮಾಲೀಕರಿಗೆ ಒಂದು ವಾರದ ಗಡುವು ನೀಡಿ ನೋಟಿಸ್ ಜಾರಿ ಮಾಡಲಾಗುತ್ತದೆ. ತದನಂತರ, ಪಾಲಿಕೆ ವತಿಯಿಂದಲೇ ತೆರವು ಕಾರ್ಯಾಚರಣೆ ಮಾಡಿ, ಅದಕ್ಕೆ ತಗಲುವ ವೆಚ್ಚ ಹಾಗೂ ದಂಡವನ್ನು ಮಾಲೀಕರ ಆಸ್ತಿ ತೆರಿಗೆಯಲ್ಲಿ ನಮೂದಿಸಿ ಸಂಗ್ರಹಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶ ಹೊರಡಿಸಿದ್ದಾರೆ.

ಖಾಲಿ ನಿವೇಶನಗಳಿಂದ ತ್ಯಾಜ್ಯ ವಿಲೇವಾರಿಗಾಗಿ, ಮಾಲೀಕರಿಂದ ಆಸ್ತಿ ತೆರಿಗೆ ಭಾಗವಾಗಿ ದಂಡ ಮತ್ತು ವಿಲೇವಾರಿಗೆ ತಗುಲಿದ ವೆಚ್ಚ ಸಂಗ್ರಹಿಸಲು ಘನತ್ಯಾಜ್ಯ ನಿರ್ವಹಣೆ ನಿಯಮಗಳು-2016, ಘನತ್ಯಾಜ್ಯ ನಿರ್ವಹಣೆ ಬೈ-ಲಾ 2020 ಮತ್ತು ಬಿಬಿಎಂಪಿ ಕಾಯ್ದೆ 2020ರ ಅಡಿಯಲ್ಲಿ ಹೊಸ ಆದೇಶ ಹೊರಡಿಸಲಾಗಿದೆ.

ವಲಯ ಅಧಿಕಾರಿಗಳು ಕೈಗೊಳ್ಳಬೇಕಾದ ಕ್ರಮಗಳು

- ಖಾಲಿ ನಿವೇಶನಗಳು ಹಾಗೂ ಘನತ್ಯಾಜ್ಯ/ ಕಟ್ಟಡ ಮತ್ತು ಭಗ್ನಾವಶೇಷ (ಸಿ ಆ್ಯಂಡ್ ಡಿ) ತ್ಯಾಜ್ಯ ಸುರಿದಿರುವ ಪ್ರದೇಶಗಳನ್ನು ಪಟ್ಟಿ ಮಾಡಬೇಕು. ಅಹಿತಕರ ಅಥವಾ ಅನಾರೋಗ್ಯಕರ ಸ್ಥಿತಿ, ಹಾನಿಕಾರಕ ಸಸ್ಯವರ್ಗ, ಮರಗಳು ಅಥವಾ ಗಿಡಗಂಟಿಗಳಿರುವ ಸಾರ್ವಜನಿಕ ಸ್ಥಳಗಳು ಅಥವಾ ನೆರೆಹೊರೆಯವರಿಗೆ ತೊಂದರೆಯನ್ನುಂಟು ಮಾಡುವ ಸ್ಥಳಗಳನ್ನು ಗುರುತಿಸಬೇಕು.
- ನಿರ್ದಿಷ್ಟ ನಿಯಮಗಳ ಉಲ್ಲಂಘನೆಗೆ ಘನತ್ಯಾಜ್ಯ ನಿರ್ವಹಣಾ ಬೈ-ಲಾ ಶೆಡ್ಯೂಲ್-7ಕ್ಕೆ ಅನುಗುಣವಾಗಿ ದಂಡ ವಿಧಿಸಬೇಕು.
- ಖಾಲಿ ನಿವೇಶನದಲ್ಲಿನ ತ್ಯಾಜ್ಯವನ್ನು ತೆಗೆದುಹಾಕಲು ಅಥವಾ ತೆರವುಗೊಳಿಸಲು ಏಳು ದಿನಗಳ ನಿರ್ದಿಷ್ಟ ಅವಧಿಯೊಂದಿಗೆ ಸೂಚನೆ ನೀಡಬೇಕು.
- ವ್ಯಕ್ತಿ/ ಮಾಲೀಕರು ನಿರ್ದೇಶನಗಳನ್ನು ಪಾಲಿಸಲು ವಿಫಲರಾದರೆ, ನಂತರ ಪಾಲಿಕೆಯಿಂದ ಸ್ಥಳದಲ್ಲಿನ ತ್ಯಾಜ್ಯವನ್ನು ತೆರವುಗೊಳಿಸಬೇಕು. ಅದರ ವೆಚ್ಚ ಮತ್ತು ದಂಡವನ್ನು ಪಾವತಿಸಲು ಆಸ್ತಿ ತೆರಿಗೆಯ ಬೇಡಿಕೆ ಸೂಚನೆಯಲ್ಲಿ ಪ್ರತ್ಯೇಕ ಕೋಷ್ಟಕದಲ್ಲಿ ನಮೂದಿಸಿ ಏಳು ದಿನಗಳೊಳಗೆ ಆಸ್ತಿ ಮಾಲೀಕರಿಗೆ ನೀಡಬೇಕು.
- ದಂಡ ಮತ್ತು ವೆಚ್ಚವನ್ನು ಆಸ್ತಿ ತೆರಿಗೆಯ ಪುಸ್ತಕಗಳಲ್ಲಿ ನಮೂದಿಸಬೇಕು. ಆಸ್ತಿ ತೆರಿಗೆ ಸಂಗ್ರಹಣೆಯೊಂದಿಗೆ ಬಾಕಿ ಮೊತ್ತ ಎಂದು ಪ್ರತ್ಯೇಕವಾಗಿ ಉಲ್ಲೇಖಿಸಿ, ಸಂಗ್ರಹಿಸಬೇಕು.
- ನಿಗದಿತ ಅವಧಿಯಲ್ಲಿ ಪಾವತಿಸಲು ವಿಫಲವಾದಲ್ಲಿ ವಲಯ ಆಯುಕ್ತರು ಅನ್ವಯಿತ ಬಡ್ಡಿಯನ್ನೂ ವಿಧಿಸಬೇಕು.

ಪ್ಯಾರಿಸ್ ಒಲಿಂಪಿಕ್ಸ್ 100 ಮೀಟರ್ ಪುರುಷರ ಫೈನಲ್ಸ್ ಇದುವರೆಗಿನ ಅತ್ಯಂತ ಸಮೀಪವಾದ ಮುಕ್ತಾಯ ಕಂಡಿದೆ!

ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ ಜನ್ಮದಿನದ ಪ್ರಯುಕ್ತ ಕಾಂಗ್ರೆಸ್ ಮುಖಂಡರಾದ ಬಿ.ವಿ.ಜಯರಾಮ ಶುಭಕೋರಿದರು. ಕಾಂಗ್ರೆಸ್ ಮುಖಂಡರಾದ ಸುನಿಲ್ ಪ್ರಕಾಶ್, ಕನಕಪುರ ಜಗದೀಶ್, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಕಾರ್ಯದರ್ಶಿ ಕೇಶವಮೂರ್ತಿ ಹಾಗೂ ಗುತ್ತಿಗೆದಾರ ಜಯಚಂದ್ರ ಉಪಸ್ಥಿತರಿದ್ದರು

‘ವಸ್ತ್ರೋದ್ಯಮ: ಬೇಡಿಕೆ ಹೆಚ್ಚುವ ಸಾಧ್ಯತೆ’

ರಾಷ್ಟ್ರೀಯ ಕೈಮಗ್ಗ ದಿನಾಚರಣೆ: ಜವಳಿ ಸಚಿವ ಶಿವಾನಂದ ಪಾಟೀಲ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಟ್ಟೆ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ಬಾಂಗ್ಲಾದೇಶದಲ್ಲಿನ ಇತ್ತೀಚಿನ ಬೆಳವಣಿಗೆಗಳಿಂದ ಭಾರತದ ಜವಳಿ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗುವ ಸಾಧ್ಯತೆ ಇದೆ. ಪೂರೈಕೆಗೆ ನಮ್ಮ ನೇಕಾರರು ಸಿದ್ಧವಾಗಬೇಕಿದೆ’ ಎಂದು ರಾಷ್ಟ್ರೀಯ ಕೈಮಗ್ಗ ದಿನಾಚರಣೆಯಲ್ಲಿ ಜವಳಿ ಸಚಿವ ಶಿವಾನಂದ ಪಾಟೀಲ ಹೇಳಿದರು.

ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಕಾವೇರಿ ಹ್ಯಾಂಡ್ ಲೂಮ್ಸ್, ನೇಕಾರರ ಸೇವಾ ಕೇಂದ್ರ ಹಾಗೂ ಎಫ್‌ಐಸಿಸಿಐ ಎಫ್‌ಎಲ್‌ಒ ಇವುಗಳ ಸಹಯೋಗದಲ್ಲಿ ಆಯೋಜಿಸಿದ್ದ 10ನೇ ರಾಷ್ಟ್ರೀಯ ಕೈಮಗ್ಗ ದಿನಾಚರಣೆ ಮತ್ತು ಕೈಮಗ್ಗ ನೇಕಾರರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ರಾಜ್ಯ ಸರ್ಕಾರ ನೇಕಾರಿಕೆಗೆ ಹಲವು ಪ್ರೋತ್ಸಾಹಗಳನ್ನು ನೀಡುತ್ತಿದೆ. ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಪಿಎಂ–ಮಿತ್ರ ಪಾರ್ಕ್ ಸ್ಥಾಪಿಸಲು ಕಲಬುರ್ಗಿಯಲ್ಲಿ 1,000 ಎಕರೆಯಷ್ಟು ಜಮೀನು ಗುರುತಿಸಲಾಗಿದೆ. ಈ ಪಾರ್ಕ್ ಸ್ಥಾಪನೆಯಾದರೆ ಹೆಚ್ಚಿನ ಉದ್ಯೋಗ ಸೃಷ್ಟಿಯಾಗಲಿದೆ. ರಾಜ್ಯ ಸರ್ಕಾರದಿಂದ 20 ರಿಂದ 25 ಮಿನಿ ಜವಳಿ ಪಾರ್ಕ್ ಸ್ಥಾಪನೆಗೆ ಯೋಜನೆ ರೂಪಿಸಲಾಗಿದೆ ಎಂದರು.

‘ಸರ್ಕಾರದ ಎಲ್ಲಾ ಇಲಾಖೆಗಳು ಜವಳಿ ನಿಗಮದ ಮೂಲಕವೇ ಬಟ್ಟೆ ಖರೀದಿಸಿದರೆ ನಿಗಮಗಳಿಗೂ ಅನುಕೂಲವಾಗುತ್ತದೆ. ಇದರಿಂದ ನೇಕಾರರಿಗೆ ವರ್ಷವಿಡೀ ಕೆಲಸ ದೊರೆಯುತ್ತದೆ. ಈ ಕುರಿತು ಹಿಂದೆ ಹೊರಡಿಸಿದ್ದ ಆದೇಶ ಪಾಲನೆಗೆ ಕ್ರಮ ಕೈಗೊಳ್ಳಬೇಕು’ ಎಂದು ವೇದಿಕೆಯಲ್ಲಿದ್ದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಕೋರಿದರು.

ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಸದ್ಯ ಶೇ 20 ರಷ್ಟು ರಿಯಾಯಿತಿ ನೀಡಲಾಗುತ್ತಿದೆ. ರಿಯಾಯಿತಿಯನ್ನು ಶೇ 30 ರಿಂದ ಶೇ 40 ರಷ್ಟಕ್ಕೆ ಹೆಚ್ಚಿಸಲಾಗುವುದು ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಶಾಸಕ ರಿಜ್ವಾನ್ ಅರ್ಷದ್, ಕರ್ನಾಟಕ ರಾಜ್ಯ ಸಹಕಾರ ಕೈ ಮಗ್ಗ ನೇಕಾರರ ಮಹಾಮಂಡಳ (ಕಾವೇರಿ ಹ್ಯಾಂಡ್ ಲೂಮ್ಸ್) ಅಧ್ಯಕ್ಷ ಬಿ.ಜೆ. ಗಣೇಶ್ ಮತ್ತಿತರರು ಭಾಗವಹಿಸಿದ್ದರು.

ಕೈಮಗ್ಗ ನೇಕಾರರಾದ ತಿಪ್ಪೇಸ್ವಾಮಿ, ಹನುಮಂತಮ್ಮ ಬಾಣದ, ರಮೇಶ್, ಆರ್.ಮಂಜುನಾಥ್ ಮತ್ತು ತುಕಾರಾಮ ಹನುಮಂತಪ್ಪ ವದ್ದಿ ಅವರಿಗೆ ‘ರಾಜ್ಯ ಕೈಮಗ್ಗ ನೇಕಾರ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಜವಳಿ ಸಚಿವ ಶಿವಾನಂದ ಎಸ್. ಪಾಟೀಲ, ವಿಧಾನಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತು ಜವಳಿ ಅಭಿವೃದ್ಧಿ ಆಯುಕ್ತೆ ಕೆ.ಜ್ಯೋತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

ಕೆಪಿಎಸ್‌ಸಿ ಕಾನೂನು ಕೋಶದ ಮುಖ್ಯಸ್ಥ ವಸ್ತ್ರದಮಠ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಎಸ್‌ಸಿ ಕಾನೂನು ಕೋಶದ ಮುಖ್ಯಸ್ಥ (ಎಚ್‌ಎಲ್‌ಸಿ) ಹುದ್ದೆಗೆ ನಿವೃತ್ತ ನ್ಯಾಯಾಧೀಶ ಎಸ್.ಬಿ. ವಸ್ತ್ರದಮಠ ಅವರು ರಾಜೀನಾಮೆ ನೀಡಿದ್ದಾರೆ.

ಎಚ್‌ಎಲ್‌ಸಿ ನೇಮಕ ವಿಚಾರದಲ್ಲಿ ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ ಮತ್ತು ಕೆಲವು ಸದಸ್ಯರು ಮತ್ತು ನಿಕಟ ಪೂರ್ವ ಕಾರ್ಯದರ್ಶಿ ಕೆ.ಎಸ್. ಲತಾಕುಮಾರಿ ನಡುವೆ ತೀವ್ರ ಸಂಘರ್ಷ ನಡೆದಿತ್ತು. ಎಚ್‌ಎಲ್‌ಸಿ ನೇಮಕ ವಿಚಾರದಲ್ಲಿ ನಿಯಮ ಪಾಲನೆ ಆಗಿಲ್ಲವೆಂದು ಆಕ್ಷೇಪ ಎತ್ತಿದ್ದ ಲತಾಕುಮಾರಿ ಅವರನ್ನು ಕೆಪಿಎಸ್‌ಸಿಯಿಂದ ವರ್ಗಾವಣೆ ಮಾಡಲಾಗಿತ್ತು.

ಫೆ. 19 ರಂದು ಎಚ್‌ಎಲ್‌ಸಿ ಆಗಿ ಅಧಿಕಾರ ವಹಿಸಿಕೊಂಡಿದ್ದ ವಸ್ತ್ರದಮಠ ಅವರು ಆರು ತಿಂಗಳು ತುಂಬುವ ಮೊದಲೇ ರಾಜೀನಾಮೆ ನೀಡಿದ್ದಾರೆ. ಮಂಗಳವಾರ (ಆಗಸ್ಟ್ 6) ಕೆಪಿಎಸ್‌ಸಿ ಅಧ್ಯಕ್ಷರಿಗೆ ತಮ್ಮ ರಾಜೀನಾಮೆ ಪತ್ರ ಸಲ್ಲಿಸಿರುವ ಅವರು, ‘ಕೆಲವು ಸನ್ನಿವೇಶಗಳ ಕಾರಣಗಳಿಗೆ ನಾನು ಎಚ್‌ಎಲ್‌ಸಿ ಹುದ್ದೆಯಲ್ಲಿ ಮುಂದುವರಿಯುವ ಸ್ಥಿತಿಯಲ್ಲಿ ಇಲ್ಲ’ ಎಂದು ತಿಳಿಸಿದ್ದಾರೆ.

ಎಚ್‌ಎಲ್‌ಸಿ ನೇಮಕಕ್ಕೆ 2023ರ ನ. 15ರಂದು ಹೊರಡಿಸಿದ್ದ ಅಧಿಸೂಚನೆಯನ್ನು ಆಡಳಿತಾತ್ಮಕ ಕಾರಣ ನೀಡಿ ಲತಾಕುಮಾರಿ ಹಿಂಪಡೆದಿದ್ದರು. ಅಲ್ಲದೆ, ಜನವರಿ 9ರಂದು ಹೊಸ ಅಧಿಸೂಚನೆ ಹೊರಡಿಸಿದ್ದರು. ಮೊದಲ ಅಧಿಸೂಚನೆಯಂತೆ ನಡೆದಿದ್ದ ಎಚ್‌ಎಲ್‌ಸಿ ಆಯ್ಕೆಗೆ ಸಂಬಂಧಿಸಿದ ನಡಾವಳಿಯಲ್ಲಿ ಯಾವುದೇ ಸ್ಪಷ್ಟ ಮಾಹಿತಿ ಇಲ್ಲದೇ ಇರುವುದರಿಂದ, ಅದು ‘ಅಸಂವಿಧಾನಿಕ ಆಯ್ಕೆ’ ಪ್ರಕ್ರಿಯೆ ಎಂದು ಮುಖ್ಯ ಕಾರ್ಯದರ್ಶಿಗೆ ಲತಾಕುಮಾರಿ ಪತ್ರ ಬರೆದಿದ್ದರು.

ಈ ಮಧ್ಯೆ, ನ. 15ರ ಅಧಿಸೂಚನೆಯಂತೆ ಆಯೋಗದ ಆಯ್ಕೆ ಸಮಿತಿ ಶಿಫಾರಸು ಮಾಡಿದ್ದ ಅಭ್ಯರ್ಥಿಯನ್ನೇ ನೇಮಿಸಿ ಆದೇಶ ಹೊರಡಿಸದಿದ್ದರೆ ಯಾವುದೇ ಆಯ್ಕೆ ಪಟ್ಟಿ ಅಥವಾ ಕಡತಕ್ಕೆ ಅನುಮೋದನೆ ನೀಡುವುದಿಲ್ಲವೆಂದು ಆಯೋಗದ ಕೆಲವು ಸದಸ್ಯರು ಪಟ್ಟು ಹಿಡಿದಿದ್ದರು. ಹೀಗಾಗಿ ಸುಮಾರು ಒಂದೂವರೆ ತಿಂಗಳು ಆಯೋಗದ ಸಭೆಯೇ ನಡೆದಿರಲಿಲ್ಲ. ನಂತರದ ಬೆಳವಣಿಗೆಯಲ್ಲಿ, ಲತಾಕುಮಾರಿ ‘ಅಸಂವಿಧಾನಿಕ ಆಯ್ಕೆ’ ಎಂದಿದ್ದ ಪ್ರಕ್ರಿಯೆಗೇ ಅನುಮೋದನೆ ನೀಡಿ ನೇಮಕಕ್ಕೆ ಕೆಪಿಎಸ್‌ಸಿ ಅನುಮೋದನೆ ನೀಡಿತ್ತು.

ದವಡೆ ಚಿಕಿತ್ಸೆಗೆ ಸ್ವಯಂಚಾಲಿತ ತಂತ್ರಾಂಶ

ಬೆಂಗಳೂರು: ದವಡೆಗಳಲ್ಲಿ ಸೃಷ್ಟಿಯಾಗುವ ಗುಳ್ಳೆಯನ್ನು (ಸಿಸ್ಟ್) ನಿಯಂತ್ರಿಸುವ ಹಾಗೂ ತಪಾಸಣೆ ಮಾಡುವ ಸ್ವಯಂಚಾಲಿತ ವಿಧಾನದ ತಂತ್ರಾಂಶವನ್ನು ಎಂ.ಎಸ್. ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್‌ನ ವಿದ್ಯಾರ್ಥಿಗಳು ಮತ್ತು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞರು, ಮೌಖಿಕ ರೋಗಶಾಸ್ತ್ರಜ್ಞರೊಂದಿಗೆ ಅಭಿವೃದ್ಧಿಪಡಿಸಿದ್ದಾರೆ.

ಮೂರು ಪ್ರತ್ಯೇಕ ‘ಭಾರತೀಯ ಪೇಟೆಂಟ್’ ಪಡೆಯಲು ಈ ವಿಧಾನಗಳನ್ನು ಸಲ್ಲಿಸಲಾಗಿದೆ. ಈ ಸಂಶೋಧನಾ ಯೋಜನೆಗೆ ವಿಜ್ಞಾನ ಮತ್ತು ಎಂಜಿನಿಯರಿಂಗ್ ಸಂಶೋಧನಾ ಮಂಡಳಿ (ಪ್ರೊಮೋಟಿಂಗ್ ಆಪರ್ಚ್ಯುನಿಟೀಸ್ ಫಾರ್ ವುಮೆನ್ ಇನ್ ಎಕ್ಸ್‌ಪ್ಲೋಟರಿ ರಿಸರ್ಚ್–ಎಸ್‌ಇಆರ್‌ಬಿ– ಪಿಒಡಬ್ಲ್ಯುಆರ್) ಮೂಲಕ ಭಾರತ ಸರ್ಕಾರ ಹಣ ಒದಗಿಸಿದೆ.

‘ದವಡೆಗಳಲ್ಲಿ ಸೃಷ್ಟಿಯಾಗುವ ಗುಳ್ಳೆಗಳನ್ನು(ಸಿಸ್ಟ್) ಮೊದಲೇ ತಪಾಸಣೆ ಮಾಡುವುದರಿಂದ, ಚಿಕಿತ್ಸೆಯ ವಿಧಾನ ಆಯ್ಕೆ ಮಾಡಿಕೊಳ್ಳಲು ದಂತ ವೈದ್ಯರಿಗೆ ಅನುಕೂಲವಾಗುತ್ತದೆ. ಹಲವು ರೀತಿಯ ಮಾದರಿಗಳನ್ನು ಅಧ್ಯಯನ ಮಾಡಿದ ನಂತರ, ಶಸ್ತ್ರಚಿಕಿತ್ಸೆಯ ನಂತರವೂ ಗುಳ್ಳೆಗಳು ಮತ್ತೆ ಸೃಷ್ಟಿಯಾಗುವ ಸಾಧ್ಯತೆಗಳಿವೆ ಎಂಬುದನ್ನು ಕಂಡುಕೊಂಡಿದ್ದೇವೆ. ತಂತ್ರಜ್ಞಾನದ ವಿಧಾನಗಳಿಂದ ವ್ಯಕ್ತಿಗನುಗುಣವಾದ ಚಿಕಿತ್ಸೆಯನ್ನು ನಿರ್ಧರಿಸಬಹುದಾಗಿದೆ’ ಎಂದು ಎಂ.ಎಸ್. ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್‌ನ ಮೌಖಿಕ ರೋಗಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ. ರೂಪಾ ಎಸ್. ರಾವ್ ಮತ್ತು ಕಂಪ್ಯೂಟರ್ ಸೈನ್ಸ್– ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ದಿವ್ಯಾ ಬಿ.ಎಸ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

SELCO
ಸೆಲ್ಕೋ ಸೋಲಾರ್ ಲೈಟ್ ಪ್ರೈವೇಟ್ ಲಿಮಿಟೆಡ್
ಸ್ವ–ಉದ್ಯೋಗಕ್ಕೊಂದು ಸುವರ್ಣಾವಕಾಶ !
ಜಾಗತಿಕವಾಗಿ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಸೌರಶಕ್ತಿ (ಸೋಲಾರ್) ಉದ್ಯಮದಲ್ಲಿ ತೊಡಗಿಸಿಕೊಳ್ಳಲು ಆಸಕ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗುತ್ತಿದೆ.
ಕರ್ನಾಟಕ ರಾಜ್ಯಾದ್ಯಂತ ಎನರ್ಜಿ ಅಸೋಸಿಯೇಟ್ಸ್ ಆಗಿ ಕೆಲಸ ಮಾಡಲು ಆಸಕ್ತರು ತಮ್ಮ ಬಯೋಡಾಟಾವನ್ನು ಈ ಕೆಳಗಿನ ವ್ಯಾಟ್ಸ್ ಆ್ಯಪ್ ನಂಬರ್‌ಗಳಿಗೆ ಹಂಚಿಕೊಳ್ಳಲು ಕೋರಲಾಗಿದೆ.
9900055926 / 9880103136
8867898733 / 9900038803

ಮೂರು ತಲೆಮಾರುಗಳಿಗಿಂತ ಹೆಚ್ಚು ಅನುಭವ ಸಾಬೀತಾಗಿದೆ
ಹೋಮಿಯೋ ಪ್ರಯೋಗಾಲಯಗಳ ಗುಣಮಟ್ಟ ಉತ್ಪಾದನೆ
ಹಲ್ಲುಗಳು ಸುಲಭವಾಗಿ ಬರಲು ಸೂಕ್ತ ಹೋಮಿಯೋಪತಿ ಮಾತ್ರೆಗಳು

ಡೆನ್ ಟಾನಿಕ್®
ನಕಲಿ ಬಗ್ಗೆ ಎಚ್ಚರದಿಂದಿರಿ
ಅರಿವಿಲ್ಲದೆ ಹಾಸಿಗೆಯಲ್ಲಿ ಮೂತ್ರ ವಿಸರ್ಜಿಸುವ ಮಕ್ಕಳಿಗೆ ಉಪಯುಕ್ತ ಹೋಮಿಯೋಪತಿ ಮಾತ್ರೆಗಳು



ಎ ಪಿಲ್ಸ್®
Mfg.: Homoeo Laboratories, Pune.
Email : homoeolab@gmail.com
SS:B.R.Ent, Mumbai.
Mobile 8652756688 / 7219731618
Sumit Pharma, Bangalore : 8379019941
Kolar Pharma, Kolar : 9449955077
Nagaraj Chik, Chikkaballapur : 8867863277
Adarsh Pharma, Ramdurga : 9448466111
Mahant Pharma, Ramdurga : 9845375065
Krishna Distributors, Tumur : 8162272616
Dels Enterprises, Mangalore : 9341622675
Deepa Enterprises, Udupi : 9448978941
Chetana Pharma, Chikmangalur : 8296987456
Manju Durg, Mandya : 9141470143
Saneha, Mysore : 8212432796
Deepak Pharma Agency, Mysore : 988672264
For Product information contact : Bhargavi Bhatt : 6363477044

ಬೆಂಗಳೂರು ಸಂತೆಗೆ ಬಿಎಂಆರ್‌ಸಿಎಲ್– ಎನ್‌ಎಲ್‌ಎಂ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಸ್ವಾಮಿ ವಿವೇಕಾನಂದ ರಸ್ತೆಯಲ್ಲಿರುವ ಬೆಂಗಳೂರು ಸಂತೆಯಲ್ಲಿನ ಅಂಗಡಿಗಳನ್ನು ಪ್ರಾಯೋಗಿಕ ಯೋಜನೆಯಲ್ಲಿ ಒಂದು ವರ್ಷದ ಅವಧಿಗೆ ಬಾಡಿಗೆಗೆ ನೀಡಲು ಬಿಎಂಆರ್‌ಸಿಎಲ್ ಮತ್ತು ರಾಷ್ಟ್ರೀಯ ಜೀವನೋಪಾಯ ಮಿಷನ್ (ಎನ್‌ಎಲ್‌ಎಂ) ಒಪ್ಪಂದ ಮಾಡಿಕೊಂಡಿವೆ.

ಗ್ರಾಮೀಣ ಮತ್ತು ನಗರ ಪ್ರದೇಶದ ಮಹಿಳಾ ಉದ್ಯಮಿಗಳು, ಸ್ವ-ಸಹಾಯ ಗುಂಪುಗಳು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಮತ್ತು ಪ್ರದರ್ಶಿಸಲು ಸಂತೆ ಮಾರುಕಟ್ಟೆಯನ್ನು ನಿರ್ಮಿಸಿದ್ದು, ಇದು ಮೊದಲ ಒಪ್ಪಂದವಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಹುಡ್ಕೊ ಮತ್ತು ಬಿಎಂಆರ್‌ಸಿಎಲ್ ಸಂಯುಕ್ತವಾಗಿ ‘ಬೆಂಗಳೂರು ಸಂತೆ’ಯನ್ನು ಅಸ್ತಿತ್ವಕ್ಕೆ ತಂದಿವೆ. ಒಪ್ಪಂದದ ಸಂದರ್ಭದಲ್ಲಿ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್, ರಾಷ್ಟ್ರೀಯ ಜೀವನೋಪಾಯ ಮಿಷನ್‌ನ ನಿರ್ದೇಶಕಿ ಪಿ.ಐ. ಶ್ರೀವಿದ್ಯಾ ಅವರು ಭಾಗವಹಿಸಿದ್ದರು.

ಮೆಟ್ರೊದಲ್ಲಿ ಒಂದೇ ದಿನ 8.26 ಲಕ್ಷ ಜನರ ಪ್ರಯಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊದಲ್ಲಿ ಆಗಸ್ಟ್ 6ರಂದು ದಾಖಲೆ ಪ್ರಮಾಣದಲ್ಲಿ (8.26 ಲಕ್ಷ) ಜನರು ಸಂಚರಿಸಿದ್ದಾರೆ.

ಪಕ್ಷಗಳ ರ‍್ಯಾಲಿ, ಸ್ವಾತಂತ್ರ್ಯ ದಿನಾಚರಣೆ, ಫಲಪುಷ್ಪ ಪ್ರದರ್ಶನ ಮುಂತಾದ ಕಾರ್ಯಕ್ರಮಗಳಿಂದಾಗಿ 2022ರ ಆಗಸ್ಟ್ 15ರಂದು 8.25 ಲಕ್ಷ ಜನರು ಮೆಟ್ರೊದಲ್ಲಿ ಪ್ರಯಾಣಿಸಿದ್ದು ಈವರೆಗಿನ ದಾಖಲೆಯಾಗಿತ್ತು. ಆನಂತರ ನಿತ್ಯದ ಪ್ರಯಾಣ 8 ಲಕ್ಷದ ಒಳಗೆ ಇತ್ತು. ಈ ವರ್ಷ ಜೂನ್ 8ರಂದು 8.08 ಲಕ್ಷ ಜನರು ಪ್ರಯಾಣಿಸಿದ್ದರು. ಹಿಂದಿನ ಎಲ್ಲ ದಾಖಲೆಗಳನ್ನು ಮುರಿದಿದ್ದು, ದೊಡ್ಡಮಟ್ಟದ ಕಾರ್ಯಕ್ರಮಗಳು ಇಲ್ಲದೇ ಇದ್ದರೂ ಆ.6ರಂದು 8,26,883 ಜನರು ಪ್ರಯಾಣಿಸಿದ್ದಾರೆ.

‘ನಮ್ಮ ಮೆಟ್ರೊದಿಂದಾಗಿ ಜನರು ವಾಹನ ಸಂದಣಿಯಲ್ಲಿ ಸಿಲುಕಿಕೊಳ್ಳುವುದು ತಪ್ಪಿದೆ. ಸಮಯದ ಉಳಿತಾಯವಾಗಿದೆ. ಹಾಗಾಗಿ ದಿನದಿಂದ ದಿನಕ್ಕೆ ಮೆಟ್ರೊ ಪ್ರಯಾಣಿಕರ ಸಂಖ್ಯೆ ಹೆಚ್ಚುತ್ತಿದೆ’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

‘ಹಸಿರು ಮತ್ತು ನೀಲಿ ಮಾರ್ಗದಲ್ಲಿ 57 ಮೆಟ್ರೊ ರೈಲುಗಳು ಸಂಚರಿಸುತ್ತಿದ್ದು, ಇಲ್ಲಿವರೆಗಿನ ಪ್ರಯಾಣಿಕರ ಸರಾಸರಿಗೆ ಅನುಗುಣವಾಗಿದೆ. ಜನದಟ್ಟಣೆಯ ಅವಧಿಯಲ್ಲಿ 3 ನಿಮಿಷಕ್ಕೊಂದು ರೈಲು ಸಂಚರಿಸುತ್ತಿದೆ. ಪ್ರಯಾಣಿಕರ ಸಂಖ್ಯೆ ಇನ್ನಷ್ಟು ಹೆಚ್ಚಲಿದ್ದು, ಈಗಿರುವ ಎರಡು ಮಾರ್ಗಗಳಿಗೆ ಇನ್ನು 10 ಕೋಚ್‌ಗಳು (ರೈಲು) ಅವಶ್ಯಕತೆ ಬೀಳಲಿದೆ. ಆರು ತಿಂಗಳಲ್ಲಿ ಕೋಚ್‌ಗಳು ಬರಲಿವೆ’ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

‘ಔಷಧಗಳ ಗುಣಮಟ್ಟದ ಬಗ್ಗೆ ಕಟ್ಟುನಿಟ್ಟಿನ ತಪಾಸಣೆ ನಡೆಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಉತ್ಪಾದನೆಯಾಗುವ ಔಷಧಗಳು ಸೇರಿದಂತೆ ಸರ್ಕಾರಿ ಔಷಧ ಮಳಿಗೆಗಳ ಮೇಲೆ ಕಟ್ಟುನಿಟ್ಟಿನ ನಿಗಾ ವಹಿಸಬೇಕು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬುಧವಾರ ಇಲ್ಲಿ ಔಷಧ ನಿಯಂತ್ರಣ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಅಧಿಕಾರಿಗಳ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ‘ರಾಜ್ಯದ ಔಷಧ ಮಾರುಕಟ್ಟೆಯಲ್ಲಿ ಕಳಪೆ ಗುಣಮಟ್ಟದ ಔಷಧಗಳು ಪೂರೈಕೆ ಆಗುತ್ತಿವೆ. ಮನಬಂದಂತೆ ಔಷಧಗಳನ್ನ ಕೆಲವರು ಮನೆಗಳಿಗೆ ಪೂರೈಸುತ್ತಿದ್ದಾರೆ. ಇದರಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ.ಔಷಧ ನಿಯಂತ್ರಣ ಇಲಾಖೆಯ ಮುಖ್ಯ ಉದ್ದೇಶವೇ ಸಾರ್ವಜನಿಕರ ಆರೋಗ್ಯ ಕಾಪಾಡುವುದು. ಸಾರ್ವಜನಿಕರ ಆರೋಗ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಔಷಧಗಳ ಗುಣಮಟ್ಟದ ಬಗ್ಗೆ ಅಧಿಕಾರಿಗಳು ಹೆಚ್ಚಿನ ನಿಗಾ ವಹಿಸಬೇಕು ಆದರೆ, ಆ ರೀತಿಯ ಕಾರ್ಯವೈಖರಿ ಇಲಾಖೆಯ ಅಧಿಕಾರಿಗಳಿಂದ ಕಂಡುಬರುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಔಷಧಗಳ ಗುಣಮಟ್ಟದ ವಿಚಾರದಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿಸ್ತೃತ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ ಅವರು, ‘ಕಳಪೆ ಔಷಧಗಳ ತಯಾರಕರ ಮೇಲೆ ಕ್ರಮಗಳನ್ನು ತೆಗೆದುಕೊಂಡಿದ್ದೀರಾ’ ಎಂದು ಪ್ರಶ್ನಿಸಿದರು.

ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ ಅವರು ಸಹ ಅಧಿಕಾರಿಗಳ ಕಾರ್ಯವೈಖರಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ, ‘ಕಳಪೆ ಔಷಧಗಳ ತಯಾರಿಕರ ವಿರುದ್ಧ ಒಂದೇ ಒಂದು ಪ್ರಕರಣ ದಾಖಲಿಸಿ, ಕ್ರಮಕೈಗೊಳ್ಳಲು ನಿಮಗೆ ಸಾಧ್ಯವಾಗಿಲ್ಲ. ನೀವು ಇನ್ನೇನು ಕೆಲಸ ಮಾಡುವಿರಿ ? ಸಭೆಗೆ ಬರುವ ಮುನ್ನ ಸಂಪೂರ್ಣ ಮಾಹಿತಿಯನ್ನ ತರಬೇಕು. ಅರೆ ಬರೆ ಅಂಕಿ ಅಂಶಗಳನ್ನ ನಮ್ಮ ಮುಂದಿಟ್ಟು ಕರ್ತವ್ಯದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ’ ಎಂದು ಎಚ್ಚರಿಕೆ ನೀಡಿದರು.

ಔಷಧ ನಿಯಂತ್ರಣ ಅಧಿಕಾರಿಗಳ ಜತೆಗೆ ದಿನೇಶ್ ಗುಂಡೂರಾವ್ ಸಭೆ ನಡೆಸಿದರು. ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ ಉಪಸ್ಥಿತರಿದ್ದರು

AIR FORCE SCHOOL ASTE,
GV Camp, Murugeshpalya, Bengaluru - 560 017
(Ph:080-25276920/ 25272332)
Invites Applications for the Posts of

Sl.No	Post	Nature of Appointment
1	PGT – IP	Regular
2	Office Superintendent	Regular
3	Computer Lab Attendant	Contractual
4	Helpers (Male)	Regular - Panel

Details of qualifications and documents required to be checked on www.afsaste.edu.in. Hard copies of resume/ CV, along with copies of relevant documents, Aadhaar card, PAN card, two passport size photographs and covering letter stating the post applied for with complete contact details (i.e. present address, mobile nos, email id) should be submitted/posted to Air Force School, ASTE, GV Camp, Murugeshpalya, Bengaluru - 560 017. Last date of receipt is 21 Aug 2024 upto 1200 hrs. Soft copies will not be accepted.

‘ಕಾಡುವ ಕಿರಂ’ ಅಹೋರಾತ್ರಿ ಕಾರ್ಯಕ್ರಮದಲ್ಲಿ ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಅಭಿಮತ

‘ವಿಶ್ವದಲ್ಲಿ ಶಾಂತಿ ನೆಲೆಸಲು ಕಾವ್ಯ ಸಹಕಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಗತ್ತಿನಲ್ಲಿ ನಡೆಯುತ್ತಿರುವ ಯುದ್ಧಗಳು ಧರ್ಮ ಕೇಂದ್ರಿತವಾಗಿವೆ. ಆದ್ದರಿಂದ ಕಾವ್ಯವೂ ಒಂದು ಧರ್ಮವಾಗಿ, ಇನ್ನೆಲ್ಲ ಧರ್ಮವೂ ಲಯವಾಗಬೇಕು’ ಎಂದು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ತಿಳಿಸಿದರು.

ಜನಸಂಸ್ಕೃತಿ ಪ್ರತಿಷ್ಠಾನ, ಬೆಂಗಳೂರು ಆರ್ಟ್ ಫೌಂಡೇಷನ್, ಕಿರಂ ಪ್ರಕಾಶನ ಜಂಟಿಯಾಗಿ ನಗರದಲ್ಲಿ ಬುಧವಾರ ಹಮ್ಮಿಕೊಂಡ ‘ಕಾಡುವ ಕಿರಂ’ ಅಹೋರಾತ್ರಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. ‘ಜಗತ್ತಿನಲ್ಲಿ ಶಾಂತಿ ನೆಲೆಸಲು ಕಾವ್ಯ ಸಹಕಾರಿ. ಹೀಗಾಗಿ, ಕಾವ್ಯ ಧರ್ಮಕ್ಕೆ ಧರ್ಮಾಂತರವಾಗಬೇಕಿದೆ. ಆಗ ಯುದ್ಧಗಳು ಸ್ಥಗಿತವಾಗಿ, ಶಾಂತಿ ನೆಲೆಸಲಿದೆ’ ಎಂದು ಹೇಳಿದರು.

‘ಕನ್ನಡ ವಿಮರ್ಶಾಲೋಕದಲ್ಲಿ ಕಿ.ರಂ. ಎಂದೇ ಚಿರಪರಿಚಿತರಾಗಿದ್ದ ಕಿ.ರಂ. ನಾಗರಾಜ್ ಅವರದ್ದು ಮೌಖಿಕ ಪ್ರತಿಭೆ. ಅವರು ಹೆಚ್ಚು ಬರೆಯದಿದ್ದರೂ ಮನಸ್ಸಿನಲ್ಲಿ ಉಳಿದಿದ್ದಾರೆ. ಅನನ್ಯ ಪ್ರತಿಭೆ ಹೊಂದಿದ್ದ ಅವರು, ಕಾವ್ಯದ ವ್ಯಾಮೋಹಿಯಾಗಿದ್ದರು. ಸಮಾಜದ ಜತೆಗೆ ಅವಿನಾಭಾವ ಸಂಬಂಧ ಇಟ್ಟುಕೊಂಡಿದ್ದರು. ಮಾತನಾಡುವುದು ಕಷ್ಟವಾಗಿರುವ ಈ ಸಂದರ್ಭದಲ್ಲಿ ಅವರ ಅಗತ್ಯತೆ ಹೆಚ್ಚಿತ್ತು’ ಎಂದು ತಿಳಿಸಿದರು.

ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಮಾತನಾಡಿ, ‘ಕಿ.ರಂ. ಅವರು ಸಾಹಿತ್ಯ ಜಂಗಮ. ವಲ್ಮೀಕ ಪ್ರಜ್ಞೆಯೊಳಗಿದ್ದ ಅವರು, ಷಣ್ಮುಖ ಪ್ರಜ್ಞೆ ಅನುಭವಿಸಿದ ಒಬ್ಬ ಸಂತ. ಅವರು ಕಾವ್ಯದೊಂದಿಗೆ ಹೆಚ್ಚು ಒಡನಾಟ ಹೊಂದಿದ್ದರು. ಈ ಮೂಲಕ ತನ್ನ ಬಳಿಗೆ ಬರುವವರನ್ನು ಮನುಷ್ಯರನ್ನಾಗಿಸಬೇಕು ಎಂಬುದು ಅವರ ಉದ್ದೇಶವಾಗಿತ್ತು’ ಎಂದು ಹೇಳಿದರು. ಕಿರಂ ಪ್ರಶಸ್ತಿ ಪುರಸ್ಕೃತ ಎಚ್.ಆರ್.ಸ್ವಾಮಿ, ‘ಪ್ರಾಕೃತಿಕ ವಿಕೋಪದಿಂದ ಗುಡ್ಡಗಳು ಕುಸಿಯುತ್ತಿರುವ ಈ ಕಾಲಘಟ್ಟದಲ್ಲಿ ತಮ್ಮ ಜವಾಬ್ದಾರಿ ಏನು ಎಂಬುದರ ಬಗ್ಗೆ ಕವಿಗಳು, ಸಾಹಿತಿಗಳು ಮಾತನಾಡಬೇಕು. ಪಶ್ಚಿಮಘಟ್ಟಗಳ ಕಾಡು ನಾಶವಾಗುತ್ತಿದೆ. ಪರಿಣಾಮವಾಗಿ ಗುಡ್ಡಗಳು ಕುಸಿದು, ಪ್ರಾಕೃತಿಕ ವಿಕೋಪಗಳಾಗುತ್ತಿವೆ. ಈ ಬಗ್ಗೆಯೂ ಚಿಂತಿಸಬೇಕು’ ಎಂದರು.

ಬಳಿಕ ಪ್ರದೀಪ್ ತಿಪಟೂರು ನಿರ್ದೇಶನದ ‘ಮಿಸೆಸ್ ಅಂಬೇಡ್ಕರ್’ ನಾಟಕ ಪ್ರದರ್ಶನ ಕಂಡಿತು. ಕಿ.ರಂ. ನಾಗರಾಜ್ ಅವರಿಗೆ ಸಂಬಂಧಿಸಿದಂತೆ ಕವಿಗೋಷ್ಠಿಗಳು ರಾತ್ರಿಯಿಡೀ ನಡೆದವು.

ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಕೆ.ಆರ್. ಸಂಧ್ಯಾ ರೆಡ್ಡಿ, ಎಂ.ಜಿ. ಕಮಲಾಕ್ಷಿ, ರಾಮದೇವ ರಾಕೆ, ಎಚ್.ಆರ್. ಸ್ವಾಮಿ, ಬಂಜಗೆರೆ ಜಯಪ್ರಕಾಶ್, ಕಾ.ತ. ಚಿಕ್ಕಣ್ಣ ಅವರಿಗೆ ‘ಕಿರಂ ಪುರಸ್ಕಾರ’ ನೀಡಿ ಗೌರವಿಸಲಾಯಿತು, (ನಿಂತವರು ಎಡದಿಂದ) ಕವಿ ಎಲ್. ಹನುಮಂತಯ್ಯ, ಎಸ್.ಜಿ. ಸಿದ್ಧರಾಮಯ್ಯ, ಉಪನ್ಯಾಸಕಿ ಕೆ.ಎನ್. ಚಂದನ, ಕೆ.ಎನ್. ಸಹನ, ಸಂಶೋಧಕ ಪ್ರದೀಪ್ ಮಾಲ್ಗುಡಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಮೂಡ್ನಾಕೂಡು ಚಿನ್ನಸ್ವಾಮಿ, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕಿ ಕೆ.ಎನ್. ಕವನ, ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಆರು ಮಂದಿಗೆ ‘ಕಿರಂ ಪುರಸ್ಕಾರ’

ಸಮಾರಂಭದಲ್ಲಿ ಆರು ಮಂದಿಗೆ ಕಿ.ರಂ. ಪುರಸ್ಕಾರ ಪ್ರದಾನ ಮಾಡಲಾಯಿತು. ಪರಿಸರ ಕ್ಷೇತ್ರದಲ್ಲಿ ಎಚ್.ಆರ್.ಸ್ವಾಮಿ, ಚಿತ್ರಕಲೆಯಲ್ಲಿ ಎಂ.ಜಿ.ಕಮಲಾಕ್ಷಿ, ಜಾನಪದ ಕ್ಷೇತ್ರದಲ್ಲಿ ಕೆ.ಆರ್. ಸಂಧ್ಯಾ ರೆಡ್ಡಿ, ಹೋರಾಟಕ್ಕೆ ಸಂಬಂಧಿಸಿದಂತೆ ರಾಮದೇವ ರಾಕೆ, ಸಂಸ್ಕೃತಿ ಚಿಂತನೆಗೆ ಬಂಜಗೆರೆ ಜಯಪ್ರಕಾಶ್ ಹಾಗೂ ಕಾ.ತ.ಚಿಕ್ಕಣ್ಣ ಅವರಿಗೆ ಪುರಸ್ಕಾರ ನೀಡಿ ಗೌರವಿಸಲಾಯಿತು.

ಇಂದಿನಿಂದ ಗೋಡಂಬಿ ಕುರಿತ ರಾಷ್ಟ್ರೀಯ ಸಮ್ಮೇಳನ

ಮಂಗಳೂರು: ಆಲ್ ಇಂಡಿಯಾ ಕ್ಯಾಶ್ಯು ಅಸೋಸಿಯೇಶನ್ (ಎಐಸಿಎ) ನೇತೃತ್ವ ಹಾಗೂ ಇತರ ಕೆಲವು ಸಂಘಟನೆಗಳ ಸಹಯೋಗದಲ್ಲಿ ಇದೇ ಮೊದಲ ಬಾರಿಗೆ ಬೆಂಗಳೂರಿನ ಮಾನ್ಯತಾ ಪಾರ್ಕ್‌ನ ಹಿಲ್ಟನ್‌ನಲ್ಲಿ ಆಗಸ್ಟ್ 8ರಿಂದ 10ರವರೆಗೆ ‘ಗೋಡಂಬಿ’ (ಗೇರು ಬೀಜ) ಕುರಿತ ರಾಷ್ಟ್ರೀಯ ಸಮ್ಮೇಳನ ನಡೆಯಲಿದೆ.

ಆಂತರಿಕವಾಗಿ ಕಚ್ಚಾ ಗೋಡಂಬಿ ಉತ್ಪಾದನೆ ಹೆಚ್ಚಿಸುವುದು, ಕಾರ್ಖಾನೆಗಳ ತಂತ್ರಜ್ಞಾನ ಉನ್ನತೀಕರಣ, ದೇಶದಲ್ಲಿ ಗೋಡಂಬಿ ಬಳಕೆ ಉತ್ತೇಜಿಸುವುದೇ ಮುಂತಾದ ಅನೇಕ ವಿಷಯಗಳ ಬಗ್ಗೆ ಇಲ್ಲಿ ವಿಚಾರ ವಿನಿಮಯ ನಡೆಯಲಿದೆ. ಗುರುವಾರ(ಆ.8) ಸಂಜೆ 5 ಗಂಟೆಗೆ ಸಮ್ಮೇಳನದ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರದ (ಎಪಿಇಡಿಎ) ಅಧ್ಯಕ್ಷ ಅಭಿಷೇಕ್ ದೇವ್ ಮುಖ್ಯ ಅತಿಥಿಯಾಗಿರುತ್ತಾರೆ. ನಿರ್ದೇಶಕ ಡಾ. ತರುಣ್ ಬಜಾಜ್, ಗೋಡಂಬಿ ಮತ್ತು ಎಫ್‌ಎಸ್‌ಎಸ್‌ಎಐ ಸಲಹೆಗಾರರಾದ ಅಲ್ಕಾ ರಾವ್, ನಟ್ಸ್ & ಡ್ರೈ ಫ್ರೂಟ್ಸ್ ಕೌನ್ಸಿಲ್ ಆಫ್ ಇಂಡಿಯಾ ಅಧ್ಯಕ್ಷ ಗುಂಜನ್ ಜೈನ್ ಅವರು ಗೌರವ ಅತಿಥಿಗಳಾಗಿ ಭಾಗವಹಿಸುವರು.

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ



ಕೆಪಿಎಸ್‌ಸಿಯಿಂದ ನೇಮಕಾತಿ ಪ್ರಕ್ರಿಯೆ: ಆಗಸ್ಟ್ 12 ರಿಂದ ಆನ್‌ಲೈನ್ ಅರ್ಜಿ ಸಲ್ಲಿಕೆ ಆರಂಭ

400 ಪಶುವೈದ್ಯಾಧಿಕಾರಿ ಹುದ್ದೆಗಳಿಗೆ ಅರ್ಜಿ ಆಹ್ವಾನ

- ಕೆಪಿಎಸ್‌ಸಿಯಿಂದ ನೇಮಕಾತಿ ಪ್ರಕ್ರಿಯೆ
- ಆಗಸ್ಟ್ 12ರಿಂದ ಆನ್‌ಲೈನ್ ಅರ್ಜಿ ಸಲ್ಲಿಕೆ ಆರಂಭ
- ಸೆಪ್ಟೆಂಬರ್ 12 ಅರ್ಜಿ ಸಲ್ಲಿಸಲು ಕಡೆಯ ದಿನ

ಮಂಜುನಾಥ್ ಭದ್ರಶೆಟ್ಟಿ

ಕರ್ನಾಟಕದ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯಲ್ಲಿ ಬಹಳ ವರ್ಷಗಳ ನಂತರ 'ಪಶುವೈದ್ಯಾಧಿಕಾರಿ' ಹುದ್ದೆಗಳ ಭರ್ತಿಗೆ ಹಸಿರು ನಿಶಾನೆ ತೋರಿಸಲಾಗಿದೆ.

ಸದ್ಯ 400 ಪಶುವೈದ್ಯಾಧಿಕಾರಿ ಹುದ್ದೆಗಳ ಭರ್ತಿಗೆ ಕರ್ನಾಟಕ ಲೋಕಸೇವಾ ಆಯೋಗ (KPSC) ನೇಮಕಾತಿ ಪ್ರಕ್ರಿಯೆ ಆರಂಭಿಸಿದೆ.

ಮೂಲ ವೃಂದದ 342 ಹುದ್ದೆಗಳು ಹಾಗೂ ಬ್ಯಾಕ್‌ಲಾಗ್‌ನ 58 ಹುದ್ದೆಗಳು ಸೇರಿ ಒಟ್ಟು 400 ಹುದ್ದೆಗಳಿವೆ. ಈ ಹುದ್ದೆಗಳು ಗ್ರೂಪ್ 'ಎ' ಶ್ರೇಣಿಯ ಹುದ್ದೆಗಳಾಗಿರುತ್ತವೆ.

ಇದೇ ಆಗಸ್ಟ್ 12 ರಿಂದ ಆನ್‌ಲೈನ್ ಅರ್ಜಿ ಸಲ್ಲಿಕೆ ಆರಂಭವಾಗಲಿದ್ದು ಸೆಪ್ಟೆಂಬರ್ 12ಕ್ಕೆ ಅಂತ್ಯವಾಗಲಿದೆ.

ಅಂಗೀಕೃತ ವಿಶ್ವವಿದ್ಯಾಲಯದಿಂದ ಪಶುವೈದ್ಯಕೀಯ ಪದವಿ ಪಡೆದು (B.V.Sc/ B.V.Sc&AH) ಕರ್ನಾಟಕ ವೆಟೆರಿನರಿ ಕೌನ್ಸಿಲ್‌ನಲ್ಲಿ ಅಥವಾ ಇಂಡಿಯನ್ ವೆಟೆರಿನರಿ ಕೌನ್ಸಿಲ್‌ನಲ್ಲಿ (IVC/ VCI) ನೋಂದಾಯಿಸಲ್ಪಟ್ಟ ಪುರುಷ, ಮಹಿಳೆ ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹ.

ಸಾಮಾನ್ಯ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ ₹600. 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ ₹300. ಮಾಜಿ ಸೈನಿಕರಿಗೆ ₹50, ಹಾಗೂ ಎಸ್‌ಸಿ, ಎಸ್‌ಟಿ, ಪ್ರವರ್ಗ 1, ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ.

ಅರ್ಜಿ ಸಲ್ಲಿಸಲು ಕನಿಷ್ಠ 18 ವರ್ಷ ವಯಸ್ಸು ಆಗಿರಬೇಕು. ಗರಿಷ್ಠ 35. ಮೀಸಲು ವರ್ಗಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಇದೆ. ಹೆಚ್ಚಿನ ಮಾಹಿತಿಗೆ kpsc.kar.nic.in ವೆಬ್‌ಸೈಟ್‌ಗೆ ಭೇಟಿ ನೀಡಿ.

ಪರೀಕ್ಷೆ ಹೇಗಿರಲಿದೆ?

ಇದು ನೇರ ನೇಮಕಾತಿಯಾಗಿದ್ದು ಸಂದರ್ಶನ ಇರುವುದಿಲ್ಲ. ಕನ್ನಡ ಕಡ್ಡಾಯ ಭಾಷಾ ಪರೀಕ್ಷೆ, ಸ್ಪರ್ಧಾತ್ಮಕ ಪರೀಕ್ಷಾ ವಿಧಾನದ ಮೂಲಕ ನೇಮಕಾತಿ ನಡೆಯಲಿದೆ. ಬಹುಆಯ್ಕೆ ಮಾದರಿಯ ಎರಡು ಪ್ರಶ್ನೆಪತ್ರಿಕೆಗಳನ್ನು ಒಳಗೊಂಡಿರುತ್ತದೆ. ನಾಲ್ಕು ತಪ್ಪು ಉತ್ತರಗಳಿಗೆ ಒಂದು ಋಣಾತ್ಮಕ ಅಂಕ ಇರುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಯ ಶೇಕಡಾವಾರು ಮೆರಿಟ್ ಆಧಾರದ ಮೇಲೆಯೇ ಆಯ್ಕೆ ಪಟ್ಟಿ ಪ್ರಕಟವಾಗಲಿದೆ. ❖

ಪತ್ರಿಕೆ	ವಿಷಯ	ಅಂಕ	ಅವಧಿ
1	ಸಾಮಾನ್ಯ ಜ್ಞಾನ	300	2.30 ಗಂಟೆ
2	ನಿರ್ದಿಷ್ಟ ಪತ್ರಿಕೆ	300	2 ಗಂಟೆ

ಕಂಪ್ಯೂಟರ್ ಪರೀಕ್ಷೆ ನಡೆಯುವ ಸಂಭವ

ಪಶುವೈದ್ಯಾಧಿಕಾರಿ ಹುದ್ದೆಗಳಿಗೆ ಕೆಪಿಎಸ್‌ಸಿ ಇದೇ ಮೊದಲ ಬಾರಿಗೆ ಕಂಪ್ಯೂಟರ್ ಆಧಾರಿತ ಪರೀಕ್ಷೆ (ಸಿಬಿಟಿ ಅಥವಾ ಸಿಬಿಆರ್‌ಟಿ) ನಡೆಸುವ ಸಾಧ್ಯತೆ ಇದೆ. ಈ ಬಗ್ಗೆ ಆಯೋಗ ಇನ್ನೂ ಅಂತಿಮ ತೀರ್ಮಾನ ತೆಗೆದುಕೊಂಡಿಲ್ಲ. ಯಾವುದಕ್ಕೂ ಅಭ್ಯರ್ಥಿಗಳು ಸಿಬಿಟಿ ಬಗ್ಗೆ ಅಣಕು ಪರೀಕ್ಷೆ (Mock Test) ತೆಗೆದುಕೊಳ್ಳುವುದು ಉತ್ತಮ.

ನೀವು ಅನುವಾದಕರೇ? ಇಲ್ಲಿವೆ ಅವಕಾಶ

ಕೇಂದ್ರ ಸರ್ಕಾರದ ಸಚಿವಾಲಯ, ಸಿಎಪಿಎಫ್ ಕೇಂದ್ರ ಕಚೇರಿ ಹಾಗೂ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಭಾಷಾಂತರಕಾರ ಎಂಬ ಒಟ್ಟು 312 ಹುದ್ದೆಗಳಿಗೆ ಸಿಬ್ಬಂದಿ ನೇಮಕಾತಿ ಆಯೋಗ (ಎಸ್‌ಎಸ್‌ಸಿ) ನೇಮಕಾತಿ ಪ್ರಕ್ರಿಯೆ ಆರಂಭಿಸಿದೆ. ಜೂನಿಯರ್ ಟ್ರಾನ್ಸಲೇಟರ್ಸ್ (ಸಚಿವಾಲಯದಲ್ಲಿ), ಜೂನಿಯರ್ ಟ್ರಾನ್ಸಲೇಟರ್ಸ್ (ಕೇಂದ್ರ ಸಶಸ್ತ್ರ ಪೊಲೀಸ್ ಪಡೆ ಕಚೇರಿಯಲ್ಲಿ) ಜೂನಿಯರ್ ಹಿಂದಿ ಟ್ರಾನ್ಸಲೇಟರ್, ಸೀನಿಯರ್ ಹಿಂದಿ ಟ್ರಾನ್ಸಲೇಟರ್ (ಕೇಂದ್ರದ ವಿವಿಧ ಇಲಾಖೆಗಳಲ್ಲಿ) ಹುದ್ದೆಗಳಿವೆ. ಅರ್ಹ ಪುರುಷ, ಮಹಿಳೆ, ಲಿಂಗತ್ವ ಅಲ್ಪಸಂಖ್ಯಾತರು ಅರ್ಜಿ ಸಲ್ಲಿಸಬಹುದು.

ಹಿಂದಿ ಅಥವಾ ಇಂಗ್ಲಿಷ್ ವಿಷಯದಲ್ಲಿ ಅಂಗೀಕೃತ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದು ಜೊತೆಗೆ ಹಿಂದಿ ಅಥವಾ ಇಂಗ್ಲಿಷ್ ವಿಷಯವನ್ನು ಪದವಿ ಅಥವಾ ಸ್ನಾತಕೋತ್ತರ ಮಟ್ಟದಲ್ಲಿ ಒಂದು ಐಚ್ಛಿಕ ವಿಷಯವನ್ನಾಗಿ ಕಡ್ಡಾಯವಾಗಿ ಕಲಿತಿರಬೇಕು. ಇದರ ಜೊತೆಗೆ ಭಾಷಾಂತರ ಕ್ಷೇತ್ರದಲ್ಲಿ ಡಿಪ್ಲೊಮಾ ಅಥವಾ ಸರ್ಕಾರದ ಯಾವುದಾದರೂ ಇಲಾಖೆಯಲ್ಲಿ ಎರಡು ವರ್ಷ ಭಾಷಾಂತರಕಾರರಾಗಿ ಕೆಲಸ ಮಾಡಿದ ಅನುಭವ ಹೊಂದಿರಬೇಕು. ಅಂತಹವರು ಅರ್ಜಿ ಸಲ್ಲಿಸಲು ಅರ್ಹ. ಕನಿಷ್ಠ 18 ವರ್ಷ ವಯಸ್ಸು ಪೂರೈಸಿರಬೇಕು ಗರಿಷ್ಠ 30. ಮೀಸಲು ವರ್ಗಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಇದೆ. ಅರ್ಜಿ ಶುಲ್ಕ ₹100 ಇದ್ದು, ಎಸ್‌ಸಿ/ಎಸ್‌ಟಿ, ಮಾಜಿ ಸೈನಿಕರಿಗೆ ಶುಲ್ಕದಿಂದ ವಿನಾಯಿತಿ ಇದೆ. ಆನ್‌ಲೈನ್ ಅರ್ಜಿ ಸಲ್ಲಿಸಲು ಆಗಸ್ಟ್ 25 ಕಡೆಯ ದಿನ.

ಈ ಹುದ್ದೆಗಳಿಗೆ ಕಂಪ್ಯೂಟರ್ ಆಧಾರಿತ ಪರೀಕ್ಷೆ (ಸಿಬಿಟಿ) ಹಾಗೂ ವಿವರಣಾತ್ಮಕ ಪರೀಕ್ಷೆ ಇರಲಿದೆ. ಇದರಲ್ಲಿ ಎರಡು ಪತ್ರಿಕೆಗಳು ಇದ್ದು ತಲಾ 200 ಅಂಕಗಳಿರುತ್ತವೆ. ಹೆಚ್ಚಿನ ಮಾಹಿತಿಗೆ ಹಾಗೂ ಅರ್ಜಿ ಸಲ್ಲಿಸಲು ssc.gov.in ವೆಬ್‌ಸೈಟ್‌ಗೆ ಭೇಟಿ ನೀಡಿ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಆಹಾರ ಸಂಸ್ಕರಣಾ ವಲಯದ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಸಂಬಂಧಿಸಿದ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. 2014ರಿಂದ 2020ರ ಅವಧಿಯಲ್ಲಿ 4.18 ಶತಕೋಟಿ ಡಾಲರ್ ವಿದೇಶಿ ನೇರ ಬಂಡವಾಳ ಹೂಡಿಕೆ ಹರಿದು ಬಂದಿದೆ.
2. 2020ರ ನಂತರ ವಿದೇಶಿ ನೇರ ಬಂಡವಾಳ ಹೂಡಿಕೆಯ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಎ

2. ಭಾರತದ ಆಹಾರ ಸಂಸ್ಕರಣಾ ವಲಯ ಕೆಳಗಿನ ಯಾವ ಸವಾಲುಗಳನ್ನು ಎದುರಿಸುತ್ತಿದೆ?
1. ಸೂಕ್ತ ದಾಸ್ತಾನು ವ್ಯವಸ್ಥೆ ಇಲ್ಲದೆ ಇರುವುದು.
2. ರೈಲು ಮತ್ತು ರಸ್ತೆ ಸಾರಿಗೆಯ ಅಲಭ್ಯತೆ.
3. ಸಂಶೋಧನಾ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಸಮರ್ಪಕ ಬೆಂಬಲ ಇಲ್ಲದಿರುವುದು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 2 ಮತ್ತು 3 ಡಿ. 1, 2 ಮತ್ತು 3

ಉತ್ತರ : ಡಿ

3. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ದೇಶದಲ್ಲಿ 1975ರ ಜೂನ್ 25ರಂದು ತುರ್ತು ಪರಿಸ್ಥಿತಿ ಘೋಷಣೆ ಮಾಡಲಾಯಿತು.
ಬಿ. ತುರ್ತು ಪರಿಸ್ಥಿತಿ ಘೋಷಣೆ ಮಾಡಲಾದ ಜೂನ್ 25 ಅನ್ನು ಕೇಂದ್ರ ಸರ್ಕಾರವು ಸಂವಿಧಾನದ ಹತ್ಯೆಯ ದಿನ ಎಂದು ಘೋಷಿಸಿದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ

4. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಸಂವಿಧಾನದ XVIII ಭಾಗದ 352 ರಿಂದ 360ನೇ ವಿಧಿಗಳಲ್ಲಿ ತುರ್ತು ಪರಿಸ್ಥಿತಿಯನ್ನು ಕುರಿತ ಪ್ರಾವಧಾನಗಳನ್ನು ಒದಗಿಸಲಾಗಿದೆ.
ಬಿ. ಭಾರತೀಯ ಸಂವಿಧಾನವು ನಾಲ್ಕು ರೀತಿಯ ತುರ್ತು ಪರಿಸ್ಥಿತಿಗಳ ಪ್ರಾವಧಾನವನ್ನು ಒದಗಿಸುತ್ತದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಎ

5. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಕೇಂದ್ರ ಸರ್ಕಾರವು 358ನೇ ವಿಧಿಯ ಅಡಿಯಲ್ಲಿ ಯುದ್ಧ ಮತ್ತು ಬಾಹ್ಯ ಆಕ್ರಮಣದ ಸಮಯದಲ್ಲಿ ಮಾತ್ರ ನಾಗರಿಕರ ಮೂಲಭೂತ ಹಕ್ಕುಗಳನ್ನು ಅಮಾನತುಗೊಳಿಸಬಹುದು.
ಬಿ. ಕೇಂದ್ರ ಸರ್ಕಾರವು ವಿಧಿ 359ರ ಅಡಿಯಲ್ಲಿ ಯುದ್ಧ, ಬಾಹ್ಯ ಆಕ್ರಮಣ, ಸಶಸ್ತ್ರ ದಂಗೆ, ಆರ್ಥಿಕ ಬಿಕ್ಕಟ್ಟು ಮತ್ತು ಇತರ ಕಾರಣಗಳಿಂದ ಮೂಲಭೂತ ಹಕ್ಕುಗಳನ್ನು ಅಮಾನತುಗೊಳಿಸಬಹುದು.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ

6. ಭಾರತದ ಕೆಳಗಿನ ಯಾವ ರಾಜ್ಯದಲ್ಲಿ ಕೋಲ್ಮಿಂಚಿನ ಘಟನೆಗಳು ಹೆಚ್ಚಾಗಿ ಕಂಡುಬರುತ್ತದೆ?
ಎ. ಒಡಿಶಾ. ಬಿ. ನಾಗಾಲ್ಯಾಂಡ್.
ಸಿ. ಉತ್ತರ ಪ್ರದೇಶ. ಡಿ. ಮಧ್ಯಪ್ರದೇಶ.

ಉತ್ತರ : ಎ

7. ಕೆನಡಾದ ಯಾವ ಪ್ರದೇಶಗಳಲ್ಲಿ ಕಾಡ್ಗಿಚ್ಚುಗಳ ಘಟನೆಗಳು ಹೆಚ್ಚಾಗಿ ಕಂಡುಬಂದಿದೆ?
1. ಬ್ರಿಟಿಷ್ ಕೊಲಂಬಿಯಾ.
2. ಆಲ್ಬರ್ಟಾ.
3. ಒಂಟಾರಿಯೋ.
4. ನೋವಾ ಸ್ಕಾಟಿಯಾ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 1, 2, 3 ಮತ್ತು 4
ಸಿ. 2 ಮತ್ತು 3 ಡಿ. 3 ಮತ್ತು 4.

ಉತ್ತರ : ಬಿ

8. ಸರಕು ಮತ್ತು ಸೇವಾ ತೆರಿಗೆಯ ಮೇಲ್ಮನವಿ ನ್ಯಾಯಾಧಿಕರಣಗಳ ಸಂಖ್ಯೆಯನ್ನು ನಿರ್ಧರಿಸಲು ಕೆಳಗಿನ ಯಾರಿಗೆ ಅಧಿಕಾರವನ್ನು ನೀಡಲಾಗಿದೆ?
ಎ. ಕೇಂದ್ರ ಹಣಕಾಸು ಸಚಿವಾಲಯ.
ಬಿ. ಕೇಂದ್ರ ವಾಣಿಜ್ಯ ಸಚಿವಾಲಯ.
ಸಿ. ರಾಜ್ಯಸರ್ಕಾರಗಳಿಗೆ.
ಡಿ. ಸುಪ್ರೀಂಕೋರ್ಟ್.

ಉತ್ತರ : ಸಿ

9. ಕೆಳಗಿನ ಯಾವ ಸಭೆಯಲ್ಲಿ ಸರಕು ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಾಧಿಕರಣವನ್ನು ಸ್ಥಾಪಿಸಲು ಮೌಖಿಕ ಸಮ್ಮತಿಯನ್ನು ನೀಡಲಾಗಿತ್ತು?
ಎ. 49ನೇ ಸರಕು ಮತ್ತು ಸೇವಾ ತೆರಿಗೆ ಮಂಡಳಿ ಸಭೆ.
ಬಿ. 48ನೇ ಸರಕು ಮತ್ತು ಸೇವಾ ತೆರಿಗೆ ಮಂಡಳಿ ಸಭೆ.
ಸಿ. 53ನೇ ಸರಕು ಮತ್ತು ಸೇವಾ ತೆರಿಗೆ ಮಂಡಳಿ ಸಭೆ.
ಡಿ. 55ನೇ ಸರಕು ಮತ್ತು ಸೇವಾ ತೆರಿಗೆ ಮಂಡಳಿ ಸಭೆ.

ಉತ್ತರ : ಎ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಇಂಗ್ಲಿಷ್

Unit-2 PROSE

There's a Girl by the Tracks!

Task 2: Work in pairs and write a letter to the editor column focusing on the problems of your locality

S. Venkatesh
3, Veera Sadana
7th Cross, 12th Main
Vijaynagar Bangalore
11th August, 2024

To,
The Editor
English Daily, Bangalore

Dear Sir,
Sub: Murderous Stubs of tree trunks and electric Poles

The BBMP has recently completed widening of 12th main road, Vijaynagar, Bangalore. It is appreciated as solution to heavy traffic. But unfortunately slips hod work has resulted in a loss of young life two days back.

On 9 August 2024, the day after road was asphalted after widening, at 11.30pm a motorcyclist was slightly touched by a BMTC bus and the rider fell and hit a stub of electric pole which broke his helmet to seriously injured the brain tissue after piercing the skull. He was taken to NIMHANS but could not survive.

A young life was snuffed out by slipshod work of BBMP. We request you to campaign against such killer stubs being left by BBMP / other PWD agencies elsewhere and prevent further such deaths, which can be liberally termed as state murders. We hope BBMP will immediately remove killer stubs from the 12th main road, Vijaynagar, Bangalore.

Thank you

Yours faithfully
XXXXX
(Signature)

Task 3: Prepare a questionnaire.
Imagine you are a correspondent of English daily and you have to interview the following persons on the issue 'Safety measures taken with regard to traffic and the public response'.
1.Superintendent of police
2.Traffic Inspector and
3. Local MLA

Prepare a set of questions to interview each one of the above. One example is done for you.

Note: Only questions for the interview are given, not the reply.

Good morning Sir / Madam. I'm Kumar. I'm a reporter from English daily.

Sir/Madam, I've some questions. Could you spare some time for me, please?

1. In recent days, traffic is usually heavy. Accidents are on the increase. May I know what measures have been taken in this regard?
1.There are pot holes on roads almost everywhere. How do you think we can prevent accidents?
2.Well, Sir / Madam, what do you suggest to the public to maintain road safety?
3.Banners, buntings and advertisements are a nuisance in maintaining safety on road. Your comments please.
4.Youths, especially teens drive erratically. What advice would you like to give them?

Sir / Madam on behalf of our media I'm highly thankful to you.

1) Superintendent of police:
Good morning Sir / Madam. I'm Shekhar. I'm a reporter from English daily. Let me thank you for giving my media your appointment for interview from 9am to 9.45am today on the issue of 'Safety measures taken with regard to traffic and the public response'.

Let me begin with my first question.
1.Why do you think average traffic speed vehicles even on main trunk routes connecting eight directions of city is one of the lowest in India?
2.Why vehicles are being parked now even on the carriage width indicating B Track white lines, which results in slow traffic and traffic jams?
3.Why is the system of outsourcing of clearance parking in no parking zones is not functioning effectively?
4.Do you have right number of police personnel to enforce traffic discipline with respect to number of vehicles, traffic junctions?
5.Why do police get involved in RTO work like checking payment of road tax or insurance instead of focusing on enforcing traffic discipline?
6.Why are you not serious about cameras at traffic junctions of which only 25% are serviceable?

Sir / Madam on behalf of our media I'm highly thankful to you.

2) Traffic Inspector:
Good morning Sir / Madam. I'm Shekhar. I'm a reporter from English daily. Let me thank you for giving my media your appointment for interview from 9am to 9.45am today on the issue of 'Safety measures taken with regard to traffic and the public response' *(Contd……)*

II PUC BIOLOGY

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

MOLECULAR BASIS OF INHERITANCE

33. How many triplet codons are possible according to triplet codon system?
Ans:- In a triplet codon system, 64 triplet codons are possible.

34. Name the initiator codon?
Ans:- In most of the organisms AUG acts as the initiator codon and if AUG is not present GUG acts as the initiator codon.

35. Name the terminator codons?
Ans:- UAG, UAA and UGA are the three terminator codons that do not code for any aminoacids and those just stop the process of protein synthesis, they are also called nonsense codons.

36. What is Replication of the DNA?
Ans:- Synthesis of two identical molecules of DNA from a single DNA molecule is known as Replication of the DNA.

37. What is the function of enzyme Helicase?
Ans:- The enzyme Helicase catalyses the unwinding of the DNA helix during the Replication of the DNA.

38. What is transcription?
Ans:- Synthesis of an mRNA chain with one of the strands of DNA as a template is called transcription.

39. What is translation?
Ans:- Translation is a process which involves sequential assembly of amino acids linked by peptide bonds on an mRNA which is bound by the ribosomal complex. It is also termed as decoding the coded message into amino acid language.

40. Who proposed the LAC - operon concept and why ?
Ans:- Francis Jacob and Jacques Monod proposed the LAC- operon concept in 1961 to explain the regulation of genes or expression of genes at the transcriptional level in Escherichia coli (E. Coli), a prokaryote.

41. Mention the three enzymes involved in the metabolism of lactose?
Ans:- The three enzymes involved in the metabolism of lactose are – β galactosidase, β galactoside permease and thiogalactoside transacetylase.

42. What is the Lac – operon system composed of?
Ans:- Lac–operon system is composed of Regulatory gene, Promoter gene, Operator gene and three structural genes namely Lac Z, Lac Y and Lac A.

43. Which enzyme is responsible for the unwinding of double stranded DNA helix?
Ans:- Unwindase enzyme.

44. How do you say that the Triplet code is commaless?
Ans:- The Triplet code is commaless because there is no punctuation between any of the codon triplets. It means that after one amino acid is coded, the second one will be automatically coded by next three nitrogenous bases and no base is wasted till the stop codon, which marks the termination of polypeptide chain.

45. Distinguish between autocatalytic function form and heterocatalytic function with reference to DNA.
Ans:- Autocatalytic function is the function in which DNA replicates or reproduces itself to produce more DNA. Heterocatalytic function is the function in which the DNA directs the synthesis of different types of RNA like mRNA, tRNA, rRNA and these RNA molecules along with other cellular components synthesise proteins.

46. What are the functions of DNA?
Ans:- The functions of DNA are -
(1) DNA is a genetic material. The hereditary unit, gene is a segment of DNA that can synthesise a sensible RNA or a polypeptide chain.
(2) It controls all the metabolic activities of the cell directly or indirectly. Hence it is a master molecule.
(3) DNA synthesises RNA and thereby directs the synthesis of protein in the cytoplasm.
(4) DNA can undergo mutation and recombination which are changes at the genetic level. They bring about variations which in turn play an important role in speciation.

47. Why doesn't both the strands of DNA act as template for RNA synthesis?
Ans:- Both the strands of DNA do not act as template for RNA synthesis because of the following reasons –
(a) Both the strands of DNA are with different sequence. Proteins thus formed, due to the presence of different amino acids, will differ.
(b) Due to the formation of two different proteins from one DNA will complicate the genetic information and transfer mechanism.
(c) If two strands of RNA are formed from one DNA molecule simultaneously, being complementary, RNA will become double stranded. It will stop the translation step and protein formation will not be there. Thus, *(Contd…….)*

ಸೋಮನಾಳ ಗ್ರಾಮಕ್ಕೆ ಗೃಹಸಚಿವ ಜಿ. ಪರಮೇಶ್ವರ ಭೇಟಿ; ಸಾಂತ್ವನ

‘ಪರಶುರಾಮ್ ಕುಟುಂಬಕ್ಕೆ ₹50 ಲಕ್ಷ’

ಪ್ರಜಾವಾಣಿ ವಾರ್ತೆ

ಕಾರಟಗಿ (ಕೊಪ್ಪಳ ಜಿಲ್ಲೆ): ಯಾದಗಿರಿಯಲ್ಲಿ ಸಂಶಯಾಸ್ಪದವಾಗಿ ಮೃತಪಟ್ಟ ಪಿಎಸ್ಐ ಪರಶುರಾಮ್ ಛಲವಾದಿ ಕುಟುಂಬದವರಿಗೆ ಗೃಹ ಇಲಾಖೆ ಹಾಗೂ ಮುಖ್ಯಮಂತ್ರಿಯಿಂದ ₹50 ಲಕ್ಷ ವಿಶೇಷ ನೆರವು ನೀಡಲಾಗುವುದು ಎಂದು ಗೃಹಸಚಿವ ಜಿ. ಪರಮೇಶ್ವರ ಘೋಷಿಸಿದರು.

ತಾಲ್ಲೂಕಿನ ಸೋಮನಾಳ ಗ್ರಾಮದಲ್ಲಿ ಬುಧವಾರ ಪರಶುರಾಮ್ ಕುಟುಂಬದವರಿಗೆ ಸಾಂತ್ವನ ಹೇಳಿದ ಬಳಿಕ ಮಾಧ್ಯಮದವರ ಜೊತೆ ಮಾತನಾಡಿ, ‘ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ ಆದಷ್ಟು ಬೇಗನೆ ವಿಶೇಷ ನೆರವು ಬಿಡುಗಡೆ ಮಾಡಿಸುವೆ’ ಎಂದು ತಿಳಿಸಿದರು.

‘ವಿರೋಧ ಪಕ್ಷಗಳು ರಾಜಕೀಯ ಕಾರಣಕ್ಕಾಗಿ ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಒತ್ತಾಯಿಸುತ್ತಿವೆ. ಇದು ಸಿಬಿಐಗೆ ವಹಿಸುವಷ್ಟು ಅರ್ಹವಾಗಿಲ್ಲ. ಈಗಾಗಲೇ ಸಿಐಡಿ ತನಿಖೆ ನಡೆಯುತ್ತಿದ್ದು, ಅವರು ಪರಿಣಾಮಕಾರಿಯಾಗಿ ತನಿಖೆ ಮಾಡುತ್ತಾರೆ. ಅಧಿಕಾರದಲ್ಲಿದ್ದಾಗ ಸಿಐಡಿ ಸಮರ್ಥವಾಗಿದೆ ಎಂದು ಬಿಜೆಪಿಯವರೇ ಹೇಳಿದ್ದರು. ವಿರೋಧ ಪಕ್ಷದ ಸ್ಥಾನಕ್ಕೆ ಬಂದಾಕ್ಷಣ ಸಿಐಡಿ ದುರ್ಬಲವಾಯಿತೇ’ ಎಂದು ಪ್ರಶ್ನಿಸಿದರು.

ಕೊಪ್ಪಳ ಜಿಲ್ಲೆಯ ಸೋಮನಾಳ ಗ್ರಾಮದಲ್ಲಿ ಗೃಹ ಸಚಿವ ಜಿ. ಪರಮೇಶ್ವರ ಅವರು ಮೃತ ಪಿಎಸ್ಐ ಪರಶುರಾಮ್ ಛಲವಾದಿ ಕುಟುಂಬದವರಿಗೆ ಸಾಂತ್ವನ ಹೇಳಿದರು

‘ಪರಶುರಾಮ್ ಪತ್ನಿ ಶ್ವೇತಾ ಬಿ.ಇ ಪದವೀಧರೆಯಾಗಿದ್ದು, ರಾಯಚೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಅಥವಾ ಜೆಸ್ಕಾಂನಲ್ಲಿ ಕೆಲಸ ಕೊಡುವಂತೆ ಮನವಿ ಮಾಡಿದ್ದಾರೆ. ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಈ ಕುರಿತು ತೀರ್ಮಾನ ಕೈಗೊಳ್ಳಲಾಗುವುದು’ ಎಂದು ಹೇಳಿದರು.

‘ಸಿಐಡಿ ತಂಡ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕಲೆ ಹಾಕುತ್ತಿದೆ. ತನಿಖೆಯಿಂದ ಪರಶುರಾಮ್ ಕುಟುಂಬಕ್ಕೆ ಸಂಪೂರ್ಣ ನ್ಯಾಯ ಸಿಗುತ್ತದೆ. ಇದನ್ನು ಅವರ ಕುಟುಂಬದವರಿಗೂ ಮನವರಿಕೆ ಮಾಡಿಕೊಡಲಾಗಿದೆ. ಎಫ್ಐಆರ್‌ನಲ್ಲಿ ಉಲ್ಲೇಖವಾಗಿರುವ ಯಾದಗಿರಿ ಶಾಸಕ ಹಾಗೂ ಅವರ ಪುತ್ರನ ವಿರುದ್ಧದ ಆರೋಪ ಸಾಬೀತಾದರೆ ಬಂಧಿಸಲಾಗುವುದು’ ಎಂದರು.

ಸಂಕ್ಷಿಪ್ತ ಸುದ್ದಿ

ಶಾಲೆಯಲ್ಲಿ ಮುಖ್ಯ ಶಿಕ್ಷಕ ಆತ್ಮಹತ್ಯೆ

ಸಿ.ಎಸ್.ಹಡಪದ

ವಿಜಯಪುರ: ಬಸವನಬಾಗೇವಾಡಿ ಸಮೀಪದ ನಾಗೂರ ಗ್ರಾಮದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕ ಸಿ.ಎಸ್.ಹಡಪದ(54) ಶಾಲೆಯಲ್ಲೇ ಬುಧವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಎರಡು ವರ್ಷಗಳಿಂದ ಶಾಲೆಯಲ್ಲಿ ಶಿಕ್ಷಕರಾಗಿದ್ದ ಅವರು ಒಂದು ವರ್ಷದಿಂದ ಪ್ರಭಾರ ಮುಖ್ಯ ಶಿಕ್ಷಕರಾಗಿದ್ದರು. ಶಾಲೆಯ ಸ್ಟಾಕ್‌ರೂಮ್‌ನಲ್ಲಿ ಅವರು ನೇಣು ಹಾಕಿಕೊಂಡಿದ್ದು, ಶಾಲಾ ತರಗತಿ ಅವಧಿ ಮುಗಿದ ಬಳಿಕ ಗೊತ್ತಾಗಿದೆ. ಆತ್ಮಹತ್ಯೆಗೆ ಕಾರಣ ಗೊತ್ತಾಗಿಲ್ಲ’ ಎಂದು ಬಸವನಬಾಗೇವಾಡಿ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಶಿಕ್ಷಕ ಆತ್ಮಹತ್ಯೆ ಪ್ರಕರಣದ ಬಗ್ಗೆ ಸೂಕ್ತ ತನಿಖೆಯಾಗಬೇಕು’ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಬಸವನಬಾಗೇವಾಡಿ ತಾಲ್ಲೂಕು ಘಟಕದ ಅಧ್ಯಕ್ಷ ಶಿವಾನಂದ ಮಂಗಾನವರ ಒತ್ತಾಯಿಸಿದ್ದಾರೆ.

ಹಣ ವರ್ಗಾವಣೆ: ಮತ್ತೆ ನಾಲ್ವರ ಬಂಧನ

ಬಾಗಲಕೋಟೆ: ಐಡಿಬಿಐ ಬ್ಯಾಂಕ್‌ನಲ್ಲಿ ಪ್ರವಾಸೋದ್ಯಮ ಇಲಾಖೆ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ನಾಲ್ವರನ್ನು ಬಂಧಿಸಲಾಗಿದೆ.

‘ಪ್ರಕರಣದ ಪ್ರಮುಖ ಆರೋಪಿ ಸೂರಜ್ ಸಂಬಂಧಿಕರಾದ ಮಲ್ಲಪ್ಪ ಸಗರ, ರವಿ ಸಗರ, ಇಳಕಲ್ ಅರ್ಷದ್ ದೋಟಿಹಾಳ, ಅಮೀನಾ ದೋಟಿಹಾಳ ಬಂಧಿತರು. ಬಂಧಿತರ ಸಂಖ್ಯೆ 19ಕ್ಕೆ ಏರಿಕೆಯಾಗಿದೆ. ಬಂಧಿತರ ಖಾತೆಗೆ ಸರ್ಕಾರದ ವಿವಿಧ ಇಲಾಖೆಗಳ ಖಾತೆಯಲ್ಲಿನ ಹಣ ವರ್ಗಾವಣೆಯಾದ ಹಿನ್ನಲೆಯಲ್ಲಿ ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಅರ್ಜುನ್ ಪತ್ನಿಗೆ ಉದ್ಯೋಗ’

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕರ್ನಾಟಕದ ಶಿರೂರಿನಲ್ಲಿ ಸಂಭವಿಸಿದ್ದ ಭೂಕುಸಿತದ ಅವಘಡದ ವೇಳೆ ನಾಪತ್ತೆಯಾಗಿರುವ ಲಾರಿ ಚಾಲಕ ಅರ್ಜುನ್ ಅವರ ಪತ್ನಿಗೆ ಉದ್ಯೋಗ ನೀಡಲಾಗುವುದು ಎಂದು ಕೇರಳದ ಸಹಕಾರ ಬ್ಯಾಂಕ್ ಪ್ರಕಟಿಸಿದೆ.

ಅರ್ಜುನ್ ಅವರ ಪತ್ನಿ ಕೃಷ್ಣಪ್ರಿಯಾ ಅವರಿಗೆ ಕಿರಿಯ ಗುಮಾಸ್ತೆ ಹುದ್ದೆಯನ್ನು ನೀಡಲಾಗುವುದು ಎಂದು ವೆಂಬೇರಿ ಸರ್ವೀಸ್ ಕೋ–ಆಪರೇಟಿವ್ ಬ್ಯಾಂಕ್ ತಿಳಿಸಿದೆ. ಚಾಲಕನ ಮನೆಗೆ ಸಮೀಪದಲ್ಲಿಯೇ ಬ್ಯಾಂಕ್‌ನ ಶಾಖೆ ಇದೆ.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರೂ ಅರ್ಜುನ್ ಅವರ ಮನೆಗೆ ಭೇಟಿ ನೀಡಿದ್ದು, ಸರ್ಕಾರ ಬೆಂಬಲ ನೀಡಲಿದೆ ಎಂದು ಭರವಸೆ ನೀಡಿದ್ದಾರೆ. ನಾಪತ್ತೆಯಾಗಿರುವ ಅರ್ಜುನ್ ಪತ್ತೆ ಶೋಧ ಕಾರ್ಯ ಪುನರಾರಂಭ ಆಗುವುದನ್ನು ಆತನ ಕುಟುಂಬ ಕಾತುರದಿಂದ ಎದುರು ನೋಡುತ್ತಿದೆ.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧೀಕ್ಷಕ ಅಭಿಯಂತರರು (ವಿ) ರವರ ಕಚೇರಿ, ಸೆಕ್ಟರ ನಂ. 63.
ನವನಗರ, ಬಾಗಲಕೋಟೆ–587103 Cell: 9449877676,
Email: seebgkt.hescom@gmail.com

Corporate Identity Number (CIN): U31401KA2002SGC030437

No. BGKT/SEE/EEE(O)/AEE-2/24-25/3611-3621 Date: 05-08-2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಅಧೀಕ್ಷಕ ಇಂಜಿನೀಯರ್ (ವಿ), ಕಾ&ಪಾ ವೃತ್ತ ಹೆಸ್ಕಾಂ ಬಾಗಲಕೋಟೆ ರವರು ಬಾಗಲಕೋಟೆ ವೃತ್ತದಲ್ಲಿ ವೃತ್ತ ಕಚೇರಿ, ವಿಭಾಗ, ಉಪ–ವಿಭಾಗ, ವಿವಿಧ ಸೇವೆಗಳಿಗೆ (2024–25) ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ.

ಸದರಿ ಪ್ರಕ್ರಿಯೆಗೆ ದಿನಾಂಕ: 22–08–2024 ರ 16:00 ಗಂಟೆಯೊಳಗೆ ಬಿಡ್‌ಗಳನ್ನು ಇ ಪ್ರೊಕ್ಯೂರ್‌ಮೆಂಟ್ ಮೂಲಕ ಸ್ವೀಕರಿಸಲಾಗುತ್ತದೆ. ಟೆಂಡರ್ ಡಾಕ್ಯುಮೆಂಟ್ ಗಳನ್ನು https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– ಅಧೀಕ್ಷಕ ಇಂಜಿನೀಯರರು (ವಿ), ಕಾ ಮತ್ತು ಪಾ ವೃತ್ತ, ಹೆಸ್ಕಾಂ ಬಾಗಲಕೋಟೆ

ವಾ.ಸಾ.ಇ/ಧಾರವಾಡ/253/ದೇಶಪಾಂಡೆಪಬ್ಲಿಸಿಟಿ/2024–25

ಅಗ್ನಿ ದುರಂತ: ಕಾರ್ಮಿಕ ಸಾವು

ಒಂದನೇ ಪುಟದಿಂದ...

‘ವೈದ್ಯಕೀಯ ಕ್ಷೇತ್ರಕ್ಕೆ ಬೇಕಾದ ಟೇಪ್ (ಅಂಟು) ಇಲ್ಲಿ ತಯಾರಿಸಲಾಗುತ್ತದೆ. ಸುಮಾರು 400 ಕಾರ್ಮಿಕರು ಮೂರು ಶಿಫ್ಟ್‌ನಲ್ಲಿ ಕೆಲಸ ಮಾಡುತ್ತಾರೆ. ಮಂಗಳವಾರ ರಾತ್ರಿ ಪಾಳಿಯಲ್ಲಿ 74 ಕಾರ್ಮಿಕರು ಕೆಲಸದಲ್ಲಿದ್ದರು. ಊಟಕ್ಕೆ ಹೊರಗೆ ಬಂದಾಗ, ಲಿಫ್ಟ್‌ನಲ್ಲಿ ವಿದ್ಯುತ್ ಶಾರ್ಟ್ ಸರ್ಕಿಟ್ ಆಗಿ ಬೆಂಕಿ ಹೊತ್ತಿಕೊಂಡಿತು. ಒಳಗಿದ್ದ ಎಂಟು ಕಾರ್ಮಿಕರ ಪೈಕಿ ಏಳು ಮಂದಿ ಹೊರಗೆ ಓಡಿದರು. ಲಿಫ್ಟ್‌ನಲ್ಲಿದ್ದ ಯಲ್ಲಪ್ಪ ಅಲ್ಲಿಯೇ ಸಿಕ್ಕಿಕೊಂಡರು’ ಎಂದು ಕಾರ್ಮಿಕರು ತಿಳಿಸಿದರು.

‘ಕಾರ್ಖಾನೆಯ ಒಳಗೆ ಪ್ಲಾಸ್ಟಿಕ್, ಮದ್ದಿನಂಥ ವಸ್ತುಗಳು ಹೆಚ್ಚಿದ್ದ ಕಾರಣ ಕ್ಷಣಾರ್ಧದಲ್ಲೇ ಬೆಂಕಿ ಇಡೀ ಕಟ್ಟಡಕ್ಕೆ ಆವರಿಸಿತು. ಮಂಗಳವಾರ ರಾತ್ರಿಯಿಂದ ಬುಧವಾರ ಮಧ್ಯಾಹ್ನದ ವರೆಗೆ 16 ಗಂಟೆ ಹರಸಾಹಸ ಪಟ್ಟ ಬಳಿಕ ಬೆಂಕಿ ನಂದಿಸಲಾಯಿತು. ಮೂರು ಅಂತಸ್ತಿನ ಕಾರ್ಖಾನೆಗೆ ಎರಡೇ ಪ್ರವೇಶ ದ್ವಾರಗಳಿದ್ದು, ಎತ್ತರದ ಗೋಡೆಗಳಿವೆ. ಇದರಿಂದ ಬೆಂಕಿ ನಂದಿಸಲು ಕಷ್ಟವಾಯಿತು’ ಎಂದು ಅಗ್ನಿಶಾಮಕ ಸಿಬ್ಬಂದಿ ತಿಳಿಸಿದರು.

ಮೂರು ಜಿಲ್ಲೆಗಳ 6 ಅಗ್ನಿಶಾಮಕ ವಾಹನ, 250 ಅಗ್ನಿ ನಂದಕ ಸಿಬ್ಬಂದಿ, 50 ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ಸುತ್ತಮುತ್ತಲಿನ 10 ಕಿ.ಮೀ. ಪ್ರದೇಶದಲ್ಲಿ ದಟ್ಟ ಹೊಗೆ ಮತ್ತು ಪ್ಲಾಸ್ಟಿಕ್ ಸುಟ್ಟ ಘಾಟು ವಾಸನೆ ವ್ಯಾಪಿಸಿತ್ತು.

ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಸೇರಿ 200 ಪೊಲೀಸರು ರಾತ್ರಿಯಿಡೀ ಸ್ಥಳದಲ್ಲೇ ಬೀಡು ಬಿಟ್ಟರು.

ಕಾರ್ಖಾನೆಯಲ್ಲಿ ಇರುವ ಬೃಹತ್ ಗಾತ್ರದ ಗ್ಯಾಸ್ ಸಿಲಿಂಡರ್‌ಗಳು ಸ್ಫೋಟಗೊಂಡರೆ, ಭಾರಿ ಅನಾಹುತ ಸಂಭವಿಸಲಿದೆ ಎಂದು ಸ್ಥಳೀಯರು ಆತಂಕಗೊಂಡಿದ್ದರು. ಇದನ್ನು ತಳ್ಳಿಹಾಕಿದ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ‘ಸಿಲಿಂಡರ್‌ಗಳು ಸ್ಫೋಟವಾಗುವ ಸಾಧ್ಯತೆ ಇಲ್ಲ. ಮುಂಜಾಗ್ರತಾ ಕ್ರಮವಾಗಿ ಜಿಲ್ಲಾ ಆಸ್ಪತ್ರೆಯಲ್ಲಿ 200 ಬೆಡ್ ಸಿದ್ಧಪಡಿಸಲಾಗಿದೆ’ ಎಂದು ತಿಳಿಸಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ

ನಂ.1, ಡಾ. ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ ಕಾಲೋನಿ,
ಮಾಗಡಿ ರಸ್ತೆ, ಬೆಂಗಳೂರು – 560079
ದೂರವಾಣಿ: +91–80–29619801, ಇಮೇಲ್: md.ksmscl@gmail.com

No. KSMSCL/DRUGS/RETND(IV)/2022-23 AI/13 DRUGS/16/2024-25 Date: 06/08/2024

ಟೆಂಡರ್ ಪ್ರಕಟಣೆ

1. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ : KSMSCL/DRUGS/RETND(IV)/2022-23AI/13 DRUGS/16/2024-25, Dated: 06.08.2024 (IND-0155).

ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.

1. 2022–23 ನೇ ಸಾಲಿನ ವಾರ್ಷಿಕ ಬೇಡಿಕೆಯ 13 ಔಷಧಗಳನ್ನು ಖರೀದಿಸಿ ಪೂರೈಸಲು ಮರುಟೆಂಡರ್ ಆಹ್ವಾನಿಸುವ ಕುರಿತು. (IND-0155).

ತಾಂತ್ರಿಕ ವಿವರಣೆ, ಇ.ಎಮ್.ಡಿ. ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: https:/kppp.karnataka.gov.in ನಲ್ಲಿ ದಿನಾಂಕ: 06.08.2024 ರಿಂದ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್ ಲೋಡ್ ಮಾಡಬಹುದಾಗಿದ್ದು ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು

DIPR/CP/1323/Zen/2024-25

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ

ನಂ.1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ. ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು – 560079.
ದೂರವಾಣಿ: +91–80–29619801 ಇ–ಮೇಲ್: md.ksmscl@gmail.com

No:HFW/KSMSCL/EQPT/KSAPS/BSE/TND /11/2024-25 (IND-0156) Date: 07-08-2024

ಟೆಂಡರ್ ಪ್ರಕಟಣೆ

ಉಲ್ಲೇಖ: 1) ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/EQPT/KSAPS/BSE/TND/11/2024-25 (IND-0156), Date: 07.08.2024.

ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಈ ಕೆಳಕಂಡ ಟೆಂಡರ್‌ನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ.

1) ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ನಾಲ್ಕು ಸರ್ಕಾರಿ ರಕ್ತ ಕೇಂದ್ರಗಳಿಗೆ ಅವಶ್ಯವಿರುವ ರಕ್ತಶೇಖರಣೆಯ ಉಪಕರಣಗಳನ್ನು ಖರೀದಿಸುವ ಬಗ್ಗೆ.

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿರುವ ಟೆಂಡರ್‌ದಾರರು ಇ–ಟೆಂಡರಿಂಗ್ ವ್ಯವಸ್ಥೆಯ ಮೂಲಕ ಭಾಗವಹಿಸಬಹುದಾಗಿದೆ. ತಾಂತ್ರಿಕ ವಿವರಣೆ, ಇ.ಎಂ.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಟೆಂಡರ್ ದಸ್ತಾವೇಜಿನಲ್ಲಿ ಅಳವಡಿಸಲಾಗಿದ್ದು, ಟೆಂಡರ್‌ಗಳ ದಸ್ತಾವೇಜನ್ನು ಇ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: https://kppp.karnataka.gov.in ನಲ್ಲಿ ದಿನಾಂಕ: 07–08–2024 ರಿಂದ ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು.

ವಾಸಾಸಂಇ/ವಾ.ಪ್ರ/1350/ಅಡ್ವರ್ಟೈಸ್/2024–25

ಕರ್ನಾಟಕ ಉಚ್ಚ ನ್ಯಾಯಾಲಯ

ಉಚ್ಚ ನ್ಯಾಯಾಲಯ ಕಟ್ಟಡಗಳು, ಬೆಂಗಳೂರು – 560001

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

HCC No. 10/2024 Date: 06.08.2024

ಕರ್ನಾಟಕ ಉಚ್ಚ ನ್ಯಾಯಾಲಯವು, ತನ್ನ ಅಧೀನ ನ್ಯಾಯಾಲಯಗಳ ನ್ಯಾಯಾಂಗ ಅಧಿಕಾರಿಗಳಿಗೆ ಒಟ್ಟು 74 ಸಂಖ್ಯೆಗಳ Multifunctional Device Printers ಖರೀದಿಸಿ ಅಳವಡಿಸಲು ನಿರ್ಧರಿಸಿದ್ದು, ಅದಕ್ಕಾಗಿ ಟೆಂಡರನ್ನು Karnataka Public Procurement Portal ನಲ್ಲಿ ಆಹ್ವಾನಿಸಲಾಗಿದೆ. ಟೆಂಡರನ್ನು **ದಿನಾಂಕ 22.08.2024 ರ 4.00 ಗಂಟೆಯೊಳಗೆ** ಆಸಕ್ತರು ಅಪ್‌ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳನ್ನು https://kppp.karnataka.gov.in/#/portal/-searchTender/live ಜಾಲತಾಣದ ಮೂಲಕ ಪಡೆದುಕೊಳ್ಳಬಹುದು.

ಸಹಿ/–
(ಎನ್.ಜಿ. ದಿನೇಶ್)
ರಿಜಿಸ್ಟ್ರಾರ್ (ಗಣಕ) ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು

ವಾಸಸಂಇ/ಸಿಪಿ/ಎಎಎ/1341/2024–25

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560 002
ದೂರವಾಣಿ: 080–22213530/22241325 ಫ್ಯಾಕ್ಸ್ : 080–22214379
ಇ–ಮೇಲ್: kanbhavblr@gmail.com ವೆಬ್‌ಸೈಟ್: www.kannadasiri.in

ಸಂಖ್ಯೆ : ಡಿಕೆಸಿ/2024–25/SE/0032 ದಿನಾಂಕ : 06.08.2024

ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ–3ನೇ ಕರೆ
(ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಮಾತ್ರ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೇಂದ್ರ ಕಚೇರಿ ಹಾಗೂ ಕಣಜ ಶಾಖೆಯ ಕಚೇರಿ ಕೆಲಸಗಳಿಗೆ ಶೀಘ್ರಲಿಪಿಗಾರರು / ಕಂಪ್ಯೂಟರ್ ಆಪರೇಟರ್ಸ್, ಬೆರಳಚ್ಚುಗಾರರು / ಡಾಟಾ ಎಂಟ್ರಿ ಆಪರೇಟರ್ಸ್, ಡಿ.ಟಿ.ಪಿ ಆಪರೇಟರ್ಸ್ ಹಾಗೂ ತಂತ್ರಜ್ಞರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಮರು ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್ ಪ್ರಕಟಣೆಯ ನಿಯಮ ಹಾಗೂ ನಿಬಂಧನೆಗಳು ಮತ್ತು ಇತರೆ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆಯಬಹುದು.

ಸಹಿ/– ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/1348/ಅಕಾರ್/2024–25

ಅಬಕಾರಿ ಉಪ ಆಯುಕ್ತರ ಕಛೇರಿ,
ತುಮಕೂರು ಜಿಲ್ಲೆ, ತುಮಕೂರು.

ಪತ್ರಿಕಾ ಪ್ರಕಟಣೆ

ಶ್ರೀ ಶ್ರೀನಿವಾಸ ಎಂ.ವಿ ಬಿನ್ ವೆಂಕಟರಾಮಪ್ಪ, ನಂ.397/1, ಗಲ್ ಪೇಟೆ, ಕೋಲಾರ ಇವರು ಗುಬ್ಬಿ ತಾಲ್ಲೂಕಿನಲ್ಲಿ 2001–02ನೇ ಸಾಲಿನ ಸಾರಾಯಿ ಗುತ್ತಿಗೆದಾರರಾಗಿದ್ದು, ಇವರಿಂದ ಸರ್ಕಾರಕ್ಕೆ ಅಸಲು ರೂ.88,50,100/–, ಬಡ್ಡಿ ರೂ.2,82,92,078/– (ದಿನಾಂಕ:31.03.2024ರ ಅಂತ್ಯಕ್ಕೆ) ಹಾಗೂ ನಷ್ಟ ರೂ.1,11,23,330/– ಹೀಗೆ ಒಟ್ಟು ರೂ.4,82,65,508/–ಗಳನ್ನು ಬಾಕಿ ಉಳಿಸಿಕೊಂಡಿದ್ದು, ಸರ್ಕಾರಕ್ಕೆ ಬಾಕಿ ಉಳಿಸಿಕೊಂಡಿರುವ ಮೊತ್ತವನ್ನು ಸದರಿಯವರಿಂದ ವಸೂಲಿ ಮಾಡಬೇಕಾಗಿರುತ್ತದೆ. ಆದ್ದರಿಂದ ಶ್ರೀ ಶ್ರೀನಿವಾಸ ಎಂ.ವಿ ಬಿನ್ ವೆಂಕಟರಾಮಪ್ಪ, ನಂ.397/1, ಗಲ್ ಪೇಟೆ, ಕೋಲಾರ ಇವರ ಹೆಸರಿನಲ್ಲಿ ಚರ–ಸ್ಥಿರಾಸ್ತಿ ಇದ್ದಲ್ಲಿ ಅಬಕಾರಿ ಉಪ ಆಯುಕ್ತರ ಕಛೇರಿ, 1ನೇ ಮಹಡಿ, 2ನೇ ಬ್ಲಾಕ್, 2ನೇ ಮುಖ್ಯ ರಸ್ತೆ, ನೇತಾಜಿ ಪಾರ್ಕ್ ಎದುರು, ಕುವೆಂಪುನಗರ, ತುಮಕೂರು ಜಿಲ್ಲೆ–572103 ಇವರಿಗೆ ಮಾಹಿತಿ ನೀಡಲು ಕೋರಿದೆ.

ಸಹಿ/–ಅಬಕಾರಿ ಉಪ ಆಯುಕ್ತರು,
ತುಮಕೂರು ಜಿಲ್ಲೆ, ತುಮಕೂರು.

DIPR/TUM/208/MCA/2024-25

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ಚಪ್ಪರದಕಲ್ಲು, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 560 110.
ದೂರವಾಣಿ : 080–2978 1051 ಇ–ಮೇಲ್: ceoruralzp5@gmail.com

ಸಂಖ್ಯೆ : ಬೆಂ.ಗ್ರಾ.ಜಿ.ಪಂ./ಡಿ.ಆರ್.ಡಿ.ಎ./ಸಂಜೀವಿನಿ/ಮಾ.ಸಂ. ಟೆಂಡರ್/2023–24
ದಿನಾಂಕ : 05–08–2024

ಟೆಂಡರ್ ಪ್ರಕಟಣೆ

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ (ಎನ್.ಆರ್.ಎಲ್.ಎಮ್) ಅಡಿಯಲ್ಲಿ ಮಾನವ ಸಂಪನ್ಮೂಲ ಒದಗಿಸುವ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಲು ಇ–ಟೆಂಡರ್ ಆಹ್ವಾನಿಸಲಾಗಿದೆ.

1) ಟೆಂಡರ್ ಉಲ್ಲೇಖ ಸಂಖ್ಯೆ ಮತ್ತು ದಿನಾಂಕ : BRZP-NRLM/HR/DRDA/2023-24 Bengaluru RuraL ZP, 2) ಟೆಂಡರ್ ಅಂದಾಜು ಮೌಲ್ಯ : ರೂ. 178.90827 ಲಕ್ಷಗಳು, 3) ಇ.ಎಂ.ಡಿ. ಮೊತ್ತ : ರೂ. 3.57816 ಲಕ್ಷಗಳು, 4) ಟೆಂಡರ್ ಪ್ರಾರಂಭವಾಗುವ ದಿನಾಂಕ : 07–08–2024 ರ ಬೆಳಿಗ್ಗೆ 10.30, 5) ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ : 21–08–2024 ರ ಸಂಜೆ 5.30, 6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 22–08–2024 ರ ಬೆಳಿಗ್ಗೆ 11.30, 7) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 23–08–2024 ರ ಬೆಳಿಗ್ಗೆ 11.30, 8) ಗುತ್ತಿಗೆ ಅವಧಿ : ಒಪ್ಪಂದದ ದಿನಾಂಕದಿಂದ 2 ವರ್ಷಗಳು, 9) ಟೆಂಡರ್ ತೆರೆಯುವ ಸ್ಥಳ : ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ, ಚಪ್ಪರದಕಲ್ಲು – 562 110, ದೇವನಹಳ್ಳಿ ತಾಲ್ಲೂಕು.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್,
ಬೆಂಗಳೂರು ಗ್ರಾಮಾಂತರ.

ವಾಸಾಸಂಇ/ಉನಿಕ/ಬೆಂಗ್ರಾಜಿ/ಮಣಿಪಾಲ್/1330/2024–25

ಬೆಳಿಗ್ಗೆ ಮದುವೆ, ಸಂಜೆ ವಧು ಹತ್ಯೆ!

ಲಿಖಿತಾಶ್ರೀ, ನವೀನ್ ಕುಮಾರ್

ಕೆಜಿಎಫ್: ಹೊರವಲಯದ ಚಂಬರಸನಹಳ್ಳಿಯಲ್ಲಿ ಬುಧವಾರ ಬೆಳಿಗ್ಗೆ ಹಸಮಣೆ ಏರಿದ್ದ ನವ ಜೋಡಿ ಮಧ್ಯೆ ಸಂಜೆ ಆರಂಭವಾದ ಜಗಳ ವಧುವಿನ ಕೊಲೆಯಲ್ಲಿ ಅಂತ್ಯವಾಗಿದೆ.

ಆಂಧ್ರಪ್ರದೇಶದ ಸಂತೂರು ಗ್ರಾಮದ ನವೀನ್ ಕುಮಾರ್ (27), ಬೈನೇಹಳ್ಳಿಯ ಲಿಖಿತಾಶ್ರೀ (20) ಚಂಬರಸನಹಳ್ಳಿಯ ವರನ ಅಕ್ಕನ ಮನೆಯಲ್ಲಿ ಸರಳವಾಗಿ ಮದುವೆಯಾಗಿದ್ದರು. ಕಲ್ಯಾಣ ಮಂಟಪದಲ್ಲಿ ಮದುವೆ ಮಾಡಲು ವಧುವಿನ ಮನೆಯವರು ಕೇಳಿಕೊಂಡಿದ್ದರು. ದುಂದುವೆಚ್ಚ ಬೇಡ ಎಂದ ವರನ ಕಡೆಯವರ ಮಾತನ್ನು ಒಪ್ಪಿದ್ದರು. ಸಂಜೆ ಸಂಬಂಧಿಕರ ಮನೆಗೆ ಹೋಗಿದ್ದ ನವದಂಪತಿ ಕಿತ್ತಾಡಿಕೊಂಡಿದ್ದಾರೆ. ಕಿರುಚಾಟ ಕೇಳಿ ಸಂಬಂಧಿಕರು ಕಿಟಕಿಯಲ್ಲಿ ಇಣುಕಿದಾಗ ವಧು ರಕ್ತದ ಮಡುವಿನಲ್ಲಿ ಬಿದ್ದಿದ್ದರು. ನವೀನ್ ಕುಮಾರ್ ಮಚ್ಚಿನಿಂದ ಕತ್ತು ಕೊಯ್ದುಕೊಳ್ಳುತ್ತಿದ್ದ. ಬಾಗಿಲು ಮುರಿದು ರಕ್ಷಣೆ ಮಾಡಲಾಯಿತು. ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಲಿಖಿತಾಶ್ರೀ ಮೃತಪಟ್ಟಿದ್ದಾರೆ. ನವೀನ್ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ವಕ್ಫ್: ರಾಜ್ಯದ 4,132 ಆಸ್ತಿಗಳು ವ್ಯಾಜ್ಯದಲ್ಲಿ

ನವದೆಹಲಿ: ಕರ್ನಾಟಕದಲ್ಲಿ 62,830 ವಕ್ಫ್ ಆಸ್ತಿಗಳಿದ್ದು, ಈ ಪೈಕಿ 4,132 ಆಸ್ತಿಗಳು ವ್ಯಾಜ್ಯದಲ್ಲಿವೆ ಎಂದು ಕೇಂದ್ರದ ಅಲ್ಪಸಂಖ್ಯಾತ ಕಲ್ಯಾಣ ಸಚಿವ ಕಿರಣ್ ರಿಜಿಜು ತಿಳಿಸಿದರು.

ಲೋಕಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ಅವಧಿಯಲ್ಲಿ ದಕ್ಷಿಣ ಕನ್ನಡ ಸಂಸದ ಬ್ರಿಜೇಶ್ ಚೌಟ ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ‘1502 ಆಸ್ತಿಗಳ ವ್ಯಾಜ್ಯ ನ್ಯಾಯಾಲಯದಲ್ಲಿದೆ’ ಎಂದು ಮಾಹಿತಿ ನೀಡಿದ್ದಾರೆ.

ವಿದ್ಯುತ್ ಸ್ಪರ್ಶ: ತಂದೆ, ಮಗ ಸಾವು

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ತಾಲ್ಲೂಕಿನ ಪತ್ತೇಪುರ ಗ್ರಾಮದ ಜಮೀನಿನಲ್ಲಿ ಬುಧವಾರ ಬೆಳಿಗ್ಗೆ ವಿದ್ಯುತ್ ಸ್ಪರ್ಶದಿಂದ ಕರಬಸಪ್ಪ ಕಡೇನಾಯಕನಹಳ್ಳಿ (50) ಮತ್ತು ಅವರ ಪುತ್ರ ದರ್ಶನ (26) ಎಂಬುವರು ಮೃತಪಟ್ಟರು.

‘ನೀರೆತ್ತುವ ಮೋಟರ್ ಚಾಲೂ ಮಾಡುವಾಗ, ಅವಘಡ ಸಂಭವಿಸಿದೆ. ಇಬ್ಬರೂ ಸ್ಥಳದಲ್ಲೇ ಮೃತಪಟ್ಟರು. ಘಟನೆ ಕುರಿತು ಹೆಸ್ಕಾಂ ಅಧಿಕಾರಿಗಳಿಂದ ಮಾಹಿತಿ ಪಡೆದು, ಮುಂದಿನ ಕ್ರಮ ಜರುಗಿಸಲಾಗುವುದು’ ಎಂದು ಪೊಲೀಸರು ತಿಳಿಸಿದ್ದಾರೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–14/1143/2024–25 ದಿನಾಂಕ : 06.08.2024

ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕ್ಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : ಹಾಸನ ಜಿಲ್ಲೆಯ ಹಾಸನ ಬೆಳವಣಿಗೆ ಕೇಂದ್ರ, ಉಪ ಬಡಾವಣೆಗಳು, ಬಿ ಕತ್ತಿಹಳ್ಳಿ, ಹೊಳೇನರಸೀಪುರ, ತಿಮ್ಮನಹಳ್ಳಿ, ಟೆಕ್ಸ್‌ಟೈಲ್ಸ್ ಮತ್ತು ಫಾರ್ಮ SEZ ಕೈಗಾರಿಕಾ ಪ್ರದೇಶಗಳು ಮತ್ತು ಚಿಕ್ಕಮಗಳೂರು ಜಿಲ್ಲೆ ಅಂಬಳೆ ಕೈಗಾರಿಕಾ ಪ್ರದೇಶದಲ್ಲಿ ಬೀದಿ ದೀಪಗಳ ದುರಸ್ತಿ ಮತ್ತು ನಿರ್ವಹಣೆ ಮಾಡುವ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21.08.2024 ಸಂಜೆ 4.30 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/1325/Zen/2024-25

ಕರ್ನಾಟಕ ಸರಕಾರ

ಯೋಜನಾ ನಿರ್ದೇಶಕರ ಕಚೇರಿ, ಜಿಲ್ಲಾ ನಗರಾಭಿವೃದ್ಧಿ ಕೋಶ,
ಜಿಲ್ಲಾಧಿಕಾರಿಗಳ ಕಚೇರಿ ಆವರಣ, ವಿಜಯಪುರ–586101
ದೂರವಾಣಿ ಸಂಖ್ಯೆ:08352–259855
ಇ–ಮೇಲ್:itstaff_dudc_bijapur@yahoo.co.in, dudc_bjp@yahoo.co.in,
& ka.vijapura.dudc@gmail.com ವೆಬ್‌ಸೈಟ್: www.vijayapuradudc.mrc.gov.in

ಕ್ರ.ಸಂ: ಜಿನಕೋ–5/ಅ.ನ.ಹಂ–4/ಟೆಂಡರ್/ಸಿಆರ್–01/2022–23/201 ದಿನಾಂಕ:05.08.2024

ಟೆಂಡರ್ ಅಧಿಸೂಚನೆ

ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಹಂತ–4 ಯೋಜನೆ ಮತ್ತು ಸಚಿವರ ವಿವೇಚನಾತ್ಮಕ ಅನುದಾನದಡಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಯಾದ ಅನುದಾನದಲ್ಲಿ ಮಂಜೂರಾದ ಕಾಮಗಾರಿಗಳಿಗೆ KW–1 ರಿಂದ 4 ಡಾಕ್ಯುಮೆಂಟ್ ಉಪಯೋಗಿಸಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅಹ್ವಾನಿಸಲಾಗಿದೆ. ವಿವರ

1) ಕೋಲ್ಹಾರ ಪ.ಪಂ ಇಂಡೆಂಟ್ ಸಂಖ್ಯೆ: DMA/2024-25/OW/WORK_INDENT24679,
2) ಕೋಲ್ಹಾರ ಪ.ಪಂ ಇಂಡೆಂಟ್ ಸಂಖ್ಯೆ: DMA/2024-25/OW/WORK_INDENT24681,
3) ನಿಡಗುಂದಿ ಪ.ಪಂ ಇಂಡೆಂಟ್ ಸಂಖ್ಯೆ: DMA/2024-25/OW/WORK_INDENT24684 (ಪಜಾ),
4) ಬಸವನ ಬಾಗೇವಾಡಿ ಪುರಸಭೆ ಇಂಡೆಂಟ್ ಸಂಖ್ಯೆ: DMA/2024-25/OW/WORK_INDENT24686,
5) ಬಸವನ ಬಾಗೇವಾಡಿ ಪುರಸಭೆ ಇಂಡೆಂಟ್ ಸಂಖ್ಯೆ: DMA/2024-25/OW/WORK_INDENT24688 (ಪ.ಜಾ),
6) ಬಬಲೇಶ್ವರ ಪ.ಪಂ ಇಂಡೆಂಟ್ ಸಂಖ್ಯೆ: DMA/2024-25/BD/WORK_INDENT24690,
7) ಆಲಮೇಲ ಪ.ಪಂ ಇಂಡೆಂಟ್ ಸಂಖ್ಯೆ: DMA/2024-25/OW/WORK_INDENT24693,
8) ತಿಕೋಟಾ ಪ.ಪಂ ಇಂಡೆಂಟ್ ಸಂಖ್ಯೆ: DMA/2024-25/OW/WORK_INDENT24556 (ಪ.ಪಂ)
9) ಚಡಚಣ ಪ.ಪಂ ಇಂಡೆಂಟ್ ಸಂಖ್ಯೆ: DMA/2024-25/OW/WORK_INDENT24534,
10) ಚಡಚಣ ಪ.ಪಂ ಇಂಡೆಂಟ್ ಸಂಖ್ಯೆ: DMA/2024-25/BD/WORK_INDENT24564,
11) ಸಿಂದಗಿ ಪುರಸಭೆ ಇಂಡೆಂಟ್ ಸಂಖ್ಯೆ: DMA/2024-25/OW/WORK_INDENT24575,
12) ಸಿಂದಗಿ ಪುರಸಭೆ ಇಂಡೆಂಟ್ ಸಂಖ್ಯೆ: DMA/2024-25/OW/WORK_INDENT24589,
13) ದೇವರ ಹಿಪ್ಪರಗಿ ಪ.ಪಂ ಇಂಡೆಂಟ್ ಸಂಖ್ಯೆ: DMA/2024-25/BR/WORK_INDENT24595,
14) ಇಂಡಿ ಪುರಸಭೆ ಇಂಡೆಂಟ್ ಸಂಖ್ಯೆ: DMA/2024-25/OW/WORK_INDENT24675 (ಪ.ಜಾ).

ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಹೆಚ್ಚಿನ ವಿವರಗಳನ್ನು ಇ–ಪ್ರೋಕರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬಸೈಟ್ www.kppp.karnataka.gov.in ಮೂಲಕ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಕೆಲಸದ ಕುರಿತು ಯಾವುದೇ ವಿವರಗಳನ್ನು ಕಛೇರಿಯ ವೇಳೆಯಲ್ಲಿ ಕಾ.ಅ/ಸ.ಕಾ.ಅ ಇವರನ್ನು ಸಂಪರ್ಕಿಸಬಹುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ.

1) ಟೆಂಡರ್ ಆಕ್ಷೇಪಣೆ ದಿನಾಂಕ: 26–08–2024 ರಂದು ಬೆಳಿಗ್ಗೆ 11.00 ಘಂಟೆಗೆ.
2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 27–08–2024 ರಂದು 17.00 ಘಂಟೆಯವರೆಗೆ.
3) ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್) ದಿನಾಂಕ: 29–08–2024 ರಂದು 11.00 ಘಂಟೆಗೆ. 4) ಟೆಂಡರ್ ತೆರೆಯುವ ದಿನಾಂಕ (ಆರ್ಥಿಕ ಬಿಡ್) ದಿನಾಂಕ: 31–08–2024 ರಂದು 11.00 ಘಂಟೆ ನಂತರ

ಅವಧಿ ವಿಸ್ತರಣೆ ಮತ್ತು ತಿದ್ದುಪಡಿ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ

ವಾಸಾಸಂಇ/ವಿಜಯಪುರ/162/ಕೆಎಸ್‌ಎಂಸಿಎ/2024–25

॥ಕರ್ನಾಟಕ ಸರ್ಕಾರ॥

ಸಹಾಯಕ ನಿರ್ದೇಶಕರ ಕಛೇರಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಿತ್ರದುರ್ಗ.
ವೀರವನಿತೆ ಒನಕೆ ಓಬವ್ವ ಕ್ರೀಡಾಂಗಣ, ಚಿತ್ರದುರ್ಗ. ದೂ. ಸಂಖ್ಯೆ: 08194–235635

ಸಂಖ್ಯೆ:ಸನಿ/ಯುಸೇಕ್ರಇ/ಚಿದು/ಪಿಆರ್/01/2024–25 ದಿನಾಂಕ: 05–08–2024

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2024–25 ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಯ ಜಿಲ್ಲಾ ಕ್ರೀಡಾ ವಸತಿ ನಿಲಯದ 5 ರಿಂದ 7ನೇ ತರಗತಿ ಕ್ರೀಡಾಪಟುಗಳಿಗೆ ಊಟೋಪಹಾರ ವ್ಯವಸ್ಥೆಯನ್ನು ಕಲ್ಪಿಸುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000 ರ ಪ್ರಕಾರ ಮೆಸ್ ಗುತ್ತಿಗೆಯನ್ನು ನೀಡುವ ಸಲುವಾಗಿ ಅರ್ಹ ಗುತ್ತಿಗೆದಾರರನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ (E-Procurement) ಮೂಲಕ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ.

(1) ಟೆಂಡರ್ ಪ್ರಕಟಣೆ ದಿನಾಂಕ:–05–08–2024 (2) ಟೆಂಡರ್ ಇಟ್ಟ ಅಂದಾಜು ಮೊತ್ತ:–ರೂ. 33,75,000–00 (3) ಟೆಂಡರ್ ಫಾರಂ ಬೆಲೆ:–E-Procurement ನಿಯಮನುಸಾರ (4) ಟೆಂಡರ್ ಫಾರಂ ವಿತರಿಸುವ ದಿನಾಂಕ:–E-Procurement ನಿಯಮನುಸಾರ (5) ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿ:– 23–08–2024 ಸಂಜೆ 4.00 ಗಂಟೆಗೆ http://WWW.eproc.Karnataka.gov.in (6) ಫ್ರಿ–ಬಿಡ್ ಮೀಟಿಂಗ್ ದಿನಾಂಕ ತಿಳಿಸಲಾಗುವುದು. (7) ತಾಂತ್ರಿಕ ಬಿಡ್ ತೆರೆಯುವ ಬಗ್ಗೆ:–ದಿನಾಂಕ: 27–08–2024 ಬೆಳಿಗ್ಗೆ 11.00ಗಂಟೆಗೆ (8) ಆರ್ಥಿಕ ಬಿಡ್ ತೆರೆಯುವ ಬಗ್ಗೆ:– ಮುಂದಿನ ದಿನಾಂಕವನ್ನು ತಿಳಿಸಲಾಗುವುದು. (9) ಇ–ಪ್ರೊಕ್ಯೂರಮೆಂಟ್‌ನಲ್ಲಿ ಇ.ಎಂ.ಡಿ ಶುಲ್ಕದ ಬಗ್ಗೆ:–ರೂ. 67,500/– (10) ಟೆಂಡರ್ ತೆರೆಯುವ ಸ್ಥಳ:– ಸಹಾಯಕ ನಿರ್ದೇಶಕರ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ಚಿತ್ರದುರ್ಗ (11) ಹೆಚ್ಚಿನ ಮಾಹಿತಿಗಾಗಿ:– ಸಹಾಯಕ ನಿರ್ದೇಶಕರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಿತ್ರದುರ್ಗ ಜಿಲ್ಲೆ. ದೂರವಾಣಿ ಸಂಖ್ಯೆ: 08194–235635ಗೆ ಸಂಪರ್ಕಿಸುವುದು

DIPR/CTA/KSMCA/173/2024-25
ಸಹಿ/–ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಿತ್ರದುರ್ಗ.

ಉಪ ನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು (ದ) ಜಿಲ್ಲೆ, ತುಮಕೂರು

Phone No: 0816-2275405 E mail ID: egovtumkur@gmail.com

ಸಂ.ಸಶಿ.ಕ/ಸಿ2/ಕೆಕೆಜಿ.ಬಿ.ವಿ/ಮಾ.ಸೇ.ಟೆಂ–15/2024–25 ದಿನಾಂಕ 05.08.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಸಮಗ್ರ ಶಿಕ್ಷಣ ಕರ್ನಾಟಕ ತುಮಕೂರು(ದ) ಯೋಜನೆಯಡಿ 2024–25ನೇ ಶೈಕ್ಷಣಿಕ ಸಾಲಿಗೆ ಕೆ.ಕೆ.ಜಿ.ಬಿ.ವಿ ವಸತಿ ನಿಲಯ. ಚಿ.ನಾ.ಹಳ್ಳಿ ನಗರ, ಅಮ್ಮನಘಟ್ಟ, ಗುಬ್ಬಿ ತಾ॥ ದೊಡ್ಡಮದುರೆ, ಕುಣಿಗಲ್ ತಾ// ಮತ್ತು ದಬ್ಬೆಘಟ್ಟ ತಾಲ್ಲೂಕುಗಳಲ್ಲಿ ಏಜೆನ್ಸಿಗಳ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆ ಒದಗಿಸಲು ಅಲ್ಪಾವಧಿ ಟೆಂಡರ್ ಮೂಲಕ ಅರ್ಹ ಸಂಸ್ಥೆ/ಏಜೆನ್ಸಿಗಳಿಂದ ಅರ್ಜಿಗಳನ್ನು ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಅಂತರ್ಜಾಲ www.eproc.karnataka.gov.in ನಲ್ಲಿ ಅಲ್ಪಾವಧಿಯ ಇ–ಟೆಂಡರ್ ಅರ್ಜಿಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಶುಲ್ಕವನ್ನು e-Procurement ನಲ್ಲಿ ತಿಳಿಸಿರುವಂತೆ ಪಾವತಿಸಿ ಅಂತರ್ಜಾಲದಲ್ಲಿ ಅರ್ಜಿ ಸಲ್ಲಿಸುವುದು.

ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: **07.08.2024**. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **21.08.2024** ಸಂಜೆ 4.00 ಗಂಟೆವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **22.08.2024** ಬೆಳಿಗ್ಗೆ 11.00 ಗಂಟೆಗೆ.

01. ಚಿ.ನಾ.ಹಳ್ಳಿ ತಾ॥, 2. ಗುಬ್ಬಿ ತಾ॥ 3. ಕುಣಿಗಲ್ ತಾ// ಮತ್ತು ತುರುವೇಕೆರೆ ತಾ॥ ಪ್ರತಿ ವಸತಿ ನಿಲಯಕ್ಕೆ ರೂ.4.43ಲಕ್ಷ ದಂತೆ ರಂತೆ (4) ವಸತಿ ನಿಲಯಗಳಿಂದ ಟೆಂಡರ್‌ಗೆ ಇಟ್ಟಿರುವ ಒಟ್ಟು ಮೊಬಲಗು. ಬಿಡ್ ಮೊತ್ತ : ಅಂದಾಜು ಮೊತ್ತ ರೂ.17.72ಲಕ್ಷ. ಇ ಎಂ ಡಿ ಮೊತ್ತ ರೂ.44.300/–. ಹೆಚ್ಚಿನ ಮಾಹಿತಿಗಾಗಿ 94489 99407 ದೂರವಾಣಿ ಮುಖಾಂತರ ಸಂಪರ್ಕಿಸಬಹುದು.

ಸಹಿ/–ಉಪನಿರ್ದೇಶಕರು (ಆಡಳಿತ) ಹಾಗೂ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು
ಸಮಗ್ರ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ,
ತುಮಕೂರು(ದ) ಜಿಲ್ಲೆ.

DIPR/TUM/215/MCA/2024-25

ಕಾನೂನು ಮಾಪನಶಾಸ್ತ್ರ ನಿಯಂತ್ರಕರ ಕಛೇರಿ

ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560052.
ಇ–ಮೇಲ್: clm-lm-ka@nic.in ದೂರವಾಣಿ: (080) 22253500

ಸಂಖ್ಯೆ: ಕಾಮಾಇ/ಗು.ವ.ಸೇ./ಸಿಆರ್–31/2024–25 ದಿನಾಂಕ: 06.08.2024

ಕಾನೂನು ಮಾಪನಶಾಸ್ತ್ರ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರು ನಗರ/ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರದ ಕಛೇರಿಗೆ ಕ್ಷೇತ್ರಾಧಿಕಾರಿಗಳು ವ್ಯಾಪಾರ ವಾಣಿಜ್ಯ ಸಂಸ್ಥೆಗಳಲ್ಲಿ ಉಪಯೋಗಿಸುವ ತೂಕ ಮತ್ತು ಅಳತೆ ಸಾಧನ ಹಾಗೂ ಪೊಟ್ಟಣ ಸಾಮಗ್ರಿಗಳಡಿಯಲ್ಲಿ ಇಲಾಖೆಯ ಕಾನೂನು/ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಲಾಗುತ್ತಿದೆ. ಈ ಮೊಕದ್ದಮೆಗಳಲ್ಲಿ ನ್ಯಾಯಾಲಯಕ್ಕೆ ದಾಖಲಿಸುವಂತಹ ಪ್ರಕರಣಗಳನ್ನು ಹಾಗೂ ಸೇವಾ ವಿಷಯಗಳಿಗೆ ಸಂಬಂಧಿಸಿದ ನ್ಯಾಯಾಲಯ ಪ್ರಕರಣಗಳನ್ನು ಇತ್ಯರ್ಥಪಡಿಸಲು ಈ ಇಲಾಖೆಗೆ ಒಬ್ಬರನ್ನು **ಕಾನೂನು ಸಲಹೆಗಾರರನ್ನಾಗಿ** ಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳಬೇಕಾಗಿರುತ್ತದೆ. ಪ್ರಸ್ತುತ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ವಿವರಗಳನ್ನು ತಿಳಿಸಿದ್ದು ಪ್ರಕರಣಗಳ ಸಂಖ್ಯೆಯು ಹೆಚ್ಚು ಅಥವಾ ಕಡಿಮೆಯಾಗುವ ಸಾಧ್ಯತೆಗಳು ಸಹ ಇರುತ್ತದೆ.

ಗುತ್ತಿಗೆ ಆಧಾರದಲ್ಲಿ ಕಾನೂನು ಸಲಹೆಗಾರರಾಗಿ ಈ ಇಲಾಖೆಗೆ ಬರಲು ಇಚ್ಛಿಸಿದಲ್ಲಿ ಕಾನೂನು ಮಾಪನಶಾಸ್ತ್ರ ನಿಯಂತ್ರಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಪಿ.ಬಿ.ನಂ.175, ಬೆಂಗಳೂರು–52, ಇವರಿಗೆ ತಾವು ಕೋರುವ ಮಾಸಿಕ ಸಂಭಾವನೆಯ ಮೊತ್ತವನ್ನು ಮುಚ್ಚಿದ ಲಕೋಟೆಯ ಮೂಲಕ **ದಿನಾಂಕ: 13/08/2024ರ ಅಪರಾಹ್ನ 4.00 ಗಂಟೆಯ** ಒಳಗಾಗಿ ಈ ಕಛೇರಿಗೆ ಸಲ್ಲಿಸಲು ಕೋರಿದೆ.

ಕ್ರಮ ಸಂಖ್ಯೆ	ಜೆಎಂಎಫ್‌ಸಿ/ ಎಂಎಂಟಿಸಿ/ಎಸಿಎಂಎಂ	ಕೆ.ಎ.ಟಿ	ಉಚ್ಛ ನ್ಯಾಯಾಲಯ	ಸರ್ವೋಚ್ಛ ನ್ಯಾಯಾಲಯ	ಒಟ್ಟು
1	250	19	52	4	325

ಸಹಿ/–
ನಿಯಂತ್ರಕರು, ಕಾನೂನು ಮಾಪನಶಾಸ್ತ್ರ ಇಲಾಖೆ

ವಾಸಾಸಂಇ/ವಾ.ಪ್ರ/1332ಎ/ಎಂಎಎ/2024–25

ಪುರಸಭಾ ಕಾರ್ಯಾಲಯ, ತಿ.ನರಸೀಪುರ

ತಿ.ನರಸೀಪುರ, ಮೈಸೂರು ಜಿಲ್ಲೆ
ಕಛೇರಿ : 08227-261232, ವೆಬ್‌ಸೈಟ್: www.tnarasipuratown.gov.in
ಇಮೇಲ್: tpnarasipura@ymail.com, itstaff_ulb_tnarasipura@yahoo.com

ನಂ. ಪುಸ:ತಿನಪುರ/ಕಿಅ/ಟೆಂಡರ್/ಎಸ್‌ಎಫ್‌ಸಿ ವಿ.ಅ 2023–24/2024–25 ದಿನಾಂಕ: 07.08.2024

ಟೆಂಡರ್ ಪ್ರಕಟಣೆ

ತಿ.ನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ 2023–24ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ ಯೋಜನೆಯಡಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೋಂದಾಯಿತ 3ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ KW-3 ನಿಯಮಗಳ ಅನ್ವಯ ಹಾಗೂ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರರು http://kppp.karnataka.gov.in ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜ್‌ನ್ನು ಡೌನ್ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು.

1. ಟೆಂಡರ್ ಸಲ್ಲಿಸಲು ಕೊನೆ **ದಿನಾಂಕ: 23–08–2024 ಸಂಜೆ 5.30 ಗಂಟೆವರೆಗೆ**
2. ಟೆಂಡರ್ ತೆರೆಯುವ **ದಿನಾಂಕ: 26–08–2024 ಬೆಳಿಗ್ಗೆ 11.30 ಗಂಟೆಗೆ ಅಥವಾ** ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು

ಕ್ರ. ಸಂ.	ವಿವರ	ಕಾಮಗಾರಿ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ
1.	DMA/2024-25/OW/WORK_INDENT23857(ST)	84.49	84500/-
2.	DMA/2024-25/OW/WORK_INDENT23856	83.16	166350/-
3.	DMA/2024-25/OW/WORK_INDENT23855	83.01	166100/-
4.	DMA/2024-25/OW/WORK_INDENT23854(SC)	84.49	84500/-
5.	DMA/2024-25/OW/WORK_INDENT23853	20.20	40400/-

ಸೂಚನೆ : 1) ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ಹಾಗೂ ಹೆಚ್ಚಿನ ವಿವರಗಳಿಗೆ ಗುತ್ತಿಗೆದಾರರು http://kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು. 2) GST will be added to the contract Amount

ಸಹಿ/– ಆಡಳಿತಾಧಿಕಾರಿಗಳು ಪುರಸಭೆ, ತಿ.ನರಸೀಪುರ
ಸಹಿ/– ಮುಖ್ಯಾಧಿಕಾರಿಗಳು ಪುರಸಭೆ, ತಿ.ನರಸೀಪುರ

DIPR/MYS/KAVITA/387/2024-25

ಸರ್ಕಾರ ಅಸ್ಥಿರಗೊಳಿಸುವ ಯತ್ನ; ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಆರೋಪ

ಪಾದಯಾತ್ರೆ ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ, ಜೆಡಿಎಸ್ ನಡೆಸುತ್ತಿರುವ ಪಾದಯಾತ್ರೆಯನ್ನು ಖಂಡಿಸಿ ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಸದಸ್ಯರು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ, 'ಜಾಮೀನಿನ ಮೇಲೆ ಹೊರಗಿರುವ ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ಮೈಸೂರು ಚಲೋ ಪಾದಯಾತ್ರೆಯಲ್ಲಿ ಭಾಗವಹಿಸಿದ್ದಾರೆ. ಹಲವಾರು ಅಕ್ರಮಗಳಲ್ಲಿ ಭಾಗಿಯಾಗಿದ್ದವರು ಸಿದ್ದರಾಮಯ್ಯ ವಿರುದ್ಧ ಪಾದಯಾತ್ರೆ ನಡೆಸುವ ನೈತಿಕತೆ ಇದೆಯೆ? ಅಧಿಕಾರದಲ್ಲಿದ್ದಾಗ ಎಚ್.ಡಿ. ದೇವೇಗೌಡರ ಕುಟುಂಬದವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಕ್ರಮವಾಗಿ 78 ನಿವೇಶನಗಳನ್ನು ಪಡೆದುಕೊಂಡಿದ್ದಾರೆ' ಎಂದು ದೂರಿದರು.

'ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಯಡಿಯೂರಪ್ಪ ಅವರ ನಕಲಿ ಸಹಿ ಮಾಡಿ, ಸಾವಿರಾರೂ ಕೋಟಿ ರೂಪಾಯಿ ಲೂಟಿ ಮಾಡಿದ್ದಾರೆ. ಇದನ್ನು ಬಿಜೆಪಿಯವರೇ ಆರೋಪ ಮಾಡುತ್ತಿದ್ದಾರೆ. ಈಗ ಸಿದ್ದರಾಮಯ್ಯ ಅವರ ಗೌರವಕ್ಕೆ ಧಕ್ಕೆ ತರುವ ಉದ್ದೇಶದಿಂದ ಪಾದಯಾತ್ರೆ ಮಾಡುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಮಾತನಾಡಿ, 'ಸಿದ್ದರಾಮಯ್ಯ ಅವರಿಗೆ ಕೆಟ್ಟ ಹೆಸರು ತರಬೇಕು ಎಂಬ ಉದ್ದೇಶದಿಂದ ಮೈಸೂರು ಚಲೋ ಪಾದಯಾತ್ರೆ ಮಾಡಲಾಗುತ್ತಿದೆ. ರಾಜಭವನದ ಮೂಲಕ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ ಮಾಡಲಾಗುತ್ತಿದೆ' ಎಂದು ಆರೋಪಿಸಿದರು.

'ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ಅವರ ಪಾತ್ರವಿಲ್ಲ. ಬಿಜೆಪಿ ಸರ್ಕಾರದ ಅವಧಿಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಎಲ್ಲ ನಿವೇಶನಗಳನ್ನು ಕಾನೂನು ಪ್ರಕಾರವೇ ಪಡೆದುಕೊಳ್ಳಲಾಗಿದೆ' ಎಂದು ಕಾಂಗ್ರೆಸ್ ಮುಖಂಡ ಎಚ್.ಎಂ. ರೇವಣ್ಣ ಹೇಳಿದರು.

ಒಕ್ಕೂಟದ ಸಂಚಾಲಕರಾದ ಮಾವಳ್ಳಿ ಶಂಕರ್, ಅನಂತನಾಯ್ಕ ಎನ್., ಎಣ್ಣೆಗೆರೆ ಆರ್. ವೆಂಕಟರಾಮಯ್ಯ, ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್, ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಸದಸ್ಯರು ಬುಧವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಯಡಿಯೂರಪ್ಪ, ದೇವೇಗೌಡ ಕುಟುಂಬದ ವಿರುದ್ಧ ವಾಗ್ದಾಳಿ
- ವಿಜಯೇಂದ್ರ ವಿರುದ್ಧ ಕಿಡಿ

'ಅನಕ್ಷರಸ್ಥ ರಾಜ್ಯಪಾಲರಿಂದ ನೋಟಿಸ್'

'ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಇಂಗ್ಲಿಷ್ ಹಾಗೂ ಹಿಂದಿ ಓದಲು ಬರುವುದಿಲ್ಲ. ಮುಡಾ ಹಗರಣದ ಕುರಿತು ಟಿ.ಜೆ. ಅಬ್ರಾಹಂ ಸಲ್ಲಿಸಿರುವ 250 ಪುಟಗಳ ದೂರಿನಲ್ಲಿ ಒಂದು ಪುಟವನ್ನೂ ಓದದೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶೋಕಾಸ್ ನೋಟಿಸ್ ನೀಡಿರುವುದು ಸರಿಯಲ್ಲ' ಎಂದು ಗ್ಯಾರಂಟಿ ಅನುಷ್ಠಾನ ರಾಜ್ಯ ಮಟ್ಟದ ಸಮಿತಿಯ ಅಧ್ಯಕ್ಷ ಎಚ್.ಎಂ. ರೇವಣ್ಣ ದೂರಿದರು.

'ರಾಜ್ಯಪಾಲರು ಅನಕ್ಷರಸ್ಥ, ಆದಿವಾಸಿ' ಎಂದು ಟೀಕಾಪ್ರಹಾರ ನಡೆಸಿದ್ದ ರೇವಣ್ಣ, ತಕ್ಷಣವೇ ಮಾತು ಹೊರಳಿಸಿ, 'ಅವರು ಯಾವ ಸಮುದಾಯದವರು ಎಂಬ ವಿಚಾರದ ಬಗ್ಗೆ ಮಾತನಾಡುವುದು ಬೇಡ' ಎಂದರು.

'ಪಾದಯಾತ್ರೆಯಲ್ಲ, ದ್ವೇಷದ ಯಾತ್ರೆ'

ಬೆಂಗಳೂರು: 'ಬಿಜೆಪಿ– ಜೆಡಿಎಸ್ ನಾಯಕರು ಹಮ್ಮಿಕೊಂಡಿರುವುದು ಪಾದಯಾತ್ರೆಯಲ್ಲ, ದ್ವೇಷದ ಯಾತ್ರೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಟೀಕಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಈ ಪಾದಯಾತ್ರೆ ಕುಮಾರಸ್ವಾಮಿಗೆ ಇಷ್ಟ ಇರಲಿಲ್ಲ. ಕುಮಾರಸ್ವಾಮಿಯನ್ನು ಬಿಜೆಪಿಯವರು ಬಲಿಪಶು ಮಾಡುತ್ತಿದ್ದಾರೆ. ಜೆಡಿಎಸ್ ಮುಗಿಸುವುದೇ ಬಿಜೆಪಿ ಉದ್ದೇಶ' ಎಂದರು.

'ಕುಮಾರಸ್ವಾಮಿ ಕೇಂದ್ರದಲ್ಲಿ ಸಚಿವರು. ಅವರಿಗೆ ಪ್ರಮುಖ ಖಾತೆಯೇ ಸಿಕ್ಕಿದೆ. ಅಲ್ಲಿ ಹೆಚ್ಚು ಕೆಲಸ ಮಾಡುವುದು ಬಿಟ್ಟು, ರಾಜಕೀಯ ಹೇಳಿಕೆಗಳನ್ನು ನೀಡಿ ಗೊಂದಲ ಸೃಷ್ಟಿಸುತ್ತಿದ್ದಾರೆ' ಎಂದು ದೂರಿದರು.

'ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರಿಗೆ ದೂರು ಅರ್ಜಿ ಸಲ್ಲಿಸಿರುವ ಟಿ.ಜೆ. ಅಬ್ರಹಾಂ ಬಾಡಿಗೆ ಏಜೆಂಟ್. ಯಾರೊ ಅವರಿಗೆ ಗುತ್ತಿಗೆ ಕೊಟ್ಟಿದ್ದಾರೆ. ರಾಜ್ಯ ಸರ್ಕಾರವನ್ನು ಉರುಳಿಸಲು ಷಡ್ಯಂತ್ರ ನಡೆಸುವವರು ಈ ಕೆಲಸ ಮಾಡಿದ್ದಾರೆ' ಎಂದು ಆರೋಪಿಸಿದರು.

'ಬಿಜೆಪಿ ಸರ್ಕಾರದ ಅವಧಿಯಲ್ಲಿನ ಭ್ರಷ್ಟಾಚಾರ ಪ್ರಕರಣಗಳ ತನಿಖೆ ನಡೆಯುತ್ತಿದೆ. ಕುಮಾರಸ್ವಾಮಿ ವಿರುದ್ಧವೂ ಆರೋಪಗಳು ಬಂದಿದೆ. ದೇವೇಗೌಡರ ಕುಟುಂಬದ ವಿರುದ್ಧ ದೊಡ್ಡ ಆರೋಪಗಳು ಬರುತ್ತಿವೆ. ಆ ಆರೋಪಗಳ ಬಗ್ಗೆಯೂ ತನಿಖೆ ನಡೆಯಲಿದೆ' ಎಂದು ಹೇಳಿದರು.

'ಹೈಕಮಾಂಡ್‌ಗೆ ವಸ್ತುಸ್ಥಿತಿ ಅರ್ಥವಾಗಿದೆ'

ಬೆಂಗಳೂರು: 'ಮುಡಾ ಪ್ರಕರಣದ ವಸ್ತುಸ್ಥಿತಿ ಏನೆಂಬುವುದು ಹೈಕಮಾಂಡ್‌ಗೆ ಅರ್ಥವಾಗಿದೆ' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ಕಾಂಗ್ರೆಸ್ ಕಾರ್ಯಕರ್ತರ ಅಹವಾಲು ಆಲಿಸಿದ ನಂತರ ಸುದ್ದಿಗಾರರ ಜೊತೆ ಅವರು ಮಾತನಾಡಿದರು.

'ಮುಡಾ ಪ್ರಕರಣದಲ್ಲಿ ರಾಜಭವನವನ್ನು ದುರ್ಬಳಕೆ ಮಾಡಲಾಗುತ್ತಿದೆ' ಎಂಬ ಆರೋಪದ ಬಗ್ಗೆ ಕೇಳಿದ ಪ್ರಶ್ನೆಗೆ, 'ಈ ನೆಲದ ಕಾನೂನು ಎಲ್ಲರಿಗೂ ಒಂದೇ ಅಲ್ಲವೇ? ಯಾರ ಮೇಲೆ ಒತ್ತಡ ತಂದರೂ ಕಾನೂನು ಎಲ್ಲರಿಗೂ ಒಂದೇ' ಎಂದರು.

'ಮುಡಾ ಪ್ರಕರಣದ ತನಿಖೆಯನ್ನು ನಿವೃತ್ತ ನ್ಯಾಯಾಧೀಶ ಪಿ.ಎನ್. ದೇಸಾಯಿ ನೇತೃತ್ವದ ಆಯೋಗ ನಡೆಸುತ್ತಿದೆ. ಅವರು ತನಿಖೆ ನಡೆಸಿ ವರದಿ ನೀಡಲಿದ್ದಾರೆ. ತಪ್ಪು ಮಾಡಿದವರಿಗೆ ಶಿಕ್ಷೆ ಆಗಲಿದೆ. ಈ ಆಯೋಗಕ್ಕೆ ಇಲ್ಲಿಯವರೆಗೆ ಕುಮಾರಸ್ವಾಮಿಯಾಗಲಿ, ವಿಜಯೇಂದ್ರ ಆಗಲಿ ದಾಖಲೆಗಳನ್ನು ನೀಡಿಲ್ಲ' ಎಂದರು.

ಸುದ್ದಿ 2 ನಿಮಿಷ

ಮದ್ಯದ ಬಾಟಲಿ ಹಿಡಿದು ಪುಂಡಾಟ

ಬೆಂಗಳೂರು: ದ್ವಿಚಕ್ರ ವಾಹನದಲ್ಲಿ ಮೂವರು ಸವಾರಿ ಮಾಡಿಕೊಂಡು ಕೈಯಲ್ಲಿ ಮದ್ಯದ ಬಾಟಲಿ ಹಿಡಿದು ಪುಂಡಾಟ ಮೆರೆದಿರುವ ವಿಡಿಯೊ ತುಣುಕು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಆರೋಪಿಗಳ ಪತ್ತೆಗೆ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ನಗರದ ಮಹಾತ್ಮ ಗಾಂಧಿ ರಸ್ತೆಯ ಬಳಿ ಈ ಘಟನೆ ನಡೆದಿದೆ ಎನ್ನಲಾಗಿದೆ.

ಮೂವರು ಯುವಕರು ಒಂದೇ ದ್ವಿಚಕ್ರ ವಾಹನದಲ್ಲಿ ಕುಳಿತು ಅಡ್ಡಾದಿಡ್ಡಿ ವಾಹನ ಚಲಾಯಿಸಿದ್ದಾರೆ. ಕೈಯಲ್ಲಿ ಮದ್ಯದ ಬಾಟಲಿ ಹಾಗೂ ಲೋಟ ಹಿಡಿದುಕೊಂಡು ಮದ್ಯ ಸೇವಿಸುತ್ತಾ ವಾಹನ ಚಾಲನೆ ಮಾಡಿದ್ದಾರೆ. ಅದೇ ಮಾರ್ಗದಲ್ಲಿ ಕಾರಿನಲ್ಲಿ ತೆರಳುತ್ತಿದ್ದವರು ಯುವಕರ ಪುಂಡಾಟವನ್ನು ಸೆರೆ ಹಿಡಿದು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಅಲ್ಲದೇ ಪೊಲೀಸರ 'ಎಕ್ಸ್' ಖಾತೆಗೆ ಟ್ಯಾಗ್ ಮಾಡಿ ಕಾನೂನು ಕ್ರಮ ಕೈಗೊಳ್ಳುವಂತೆಯೂ ಆಗ್ರಹಿಸಿದ್ದಾರೆ.

ಇದಕ್ಕೆ 'ಎಕ್ಸ್' ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಪೊಲೀಸ್ ಅಧಿಕಾರಿಗಳು, 'ಈ ದೂರನ್ನು ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಗೆ ವರ್ಗಾಯಿಸಿ ಆರೋಪಿಗಳ ವಿರುದ್ಧ ಕ್ರಮಕ್ಕೆ ಸೂಚಿಸಲಾಗಿದೆ' ಎಂದು ತಿಳಿಸಿದ್ದಾರೆ.

ವಿಡಿಯೊದಲ್ಲಿರುವ ದ್ವಿಚಕ್ರ ವಾಹನದ ನೋಂದಣಿ ಸಂಖ್ಯೆ ಆಧರಿಸಿ ಪುಂಡರ ಪತ್ತೆಗೆ ಶೋಧ ಕಾರ್ಯ ನಡೆಸಲಾಗುತ್ತಿದೆ ಎಂದು ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ತಿಳಿಸಿದ್ದಾರೆ.

ಐಐಎಸ್‌ಸಿ ವಿದ್ಯಾರ್ಥಿ ಸಾವು

ಬೆಂಗಳೂರು: ನಗರದ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ(ಐಐಎಸ್‌ಸಿ) ಎಂ.ಟೆಕ್ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಯೊಬ್ಬರು ಕುಸಿದುಬಿದ್ದು ಮೃತಪಟ್ಟಿದ್ದಾರೆ.

ಮಹಾರಾಷ್ಟ್ರದ ಅವಿರಾಜ್ ಹನಮಂತ್ ಪವಾರ್(23) ಮೃತ ವಿದ್ಯಾರ್ಥಿ.

'ಸಂಸ್ಥೆಯ ಹಾಸ್ಟೆಲ್ ಬ್ಲಾಕ್–2ರಲ್ಲಿ ನೆಲೆಸಿದ್ದರು. ಅನಾರೋಗ್ಯದಿಂದ ಬಳಲುತ್ತಿದ್ದರು ಎನ್ನಲಾಗಿದೆ. ಮಂಗಳವಾರ ಮಧ್ಯಾಹ್ನ ಅಸ್ವಸ್ಥರಾಗಿ ಕುಸಿದು ಬಿದ್ದಿದ್ದರು. ಸಂಸ್ಥೆಯ ಸಿಬ್ಬಂದಿ ಹಾಗೂ ಸಹಪಾಠಿಗಳು ಅವರನ್ನು ರಾಮಯ್ಯ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಮಹಾರಾಷ್ಟ್ರದಿಂದ ವಿದ್ಯಾರ್ಥಿಯ ಪೋಷಕರು ಬಂದಿದ್ದರು. ಕುಟುಂಬಸ್ಥರು ನೀಡಿದ ದೂರು ಆಧರಿಸಿ ಅಸಹಜ ಸಾವು ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಕುಟುಂಬಸ್ಥರಿಗೆ ಮೃತದೇಹ ಹಸ್ತಾಂತರ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಅಪಘಾತ: ಗರ್ಭಿಣಿ ಸಾವು

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ರಾಷ್ಟ್ರೀಯ ಹೆದ್ದಾರಿ–48ರ ಎಡೆಹಳ್ಳಿ ಬಳಿ ಟಿಪ್ಪರ್ ಮತ್ತು ದ್ವಿಚಕ್ರ ವಾಹನದ ಮಧ್ಯೆ ಬುಧವಾರ ಬೆಳಿಗ್ಗೆ 7.45ರ ಸುಮಾರಿಗೆ ಸಂಭವಿಸಿದ ಭೀಕರ ಅಪಘಾತದಲ್ಲಿ ಎಂಟು ತಿಂಗಳ ಗರ್ಭಿಣಿ ಸಿಂಚನಾ (30) ಹಾಗೂ ಗರ್ಭದೊಳಗೆ ಇದ್ದ ಮಗು ಮೃತಪಟ್ಟಿದೆ. ಸಿಂಚನಾ ಪತಿ ಮಂಜುನಾಥ್ ಅವರು ಪಾರಾಗಿದ್ದಾರೆ.

ಸಿಂಚನಾ

ನೆಲಮಂಗಲ ತಾಲ್ಲೂಕಿನ ತ್ಯಾಮಗೊಂಡ್ಲು ಹೋಬಳಿಯ ತೋಟನಹಳ್ಳಿ ಗ್ರಾಮದ ಮಂಜುನಾಥ್ ಸೋಂಪುರ ಕೈಗಾರಿಕಾ ಪ್ರದೇಶದ ಎಲ್.ಎಂ. ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಕಂಪನಿಯಿಂದ ಬೇರೆ ರಾಜ್ಯಕ್ಕೆ ವರ್ಗಾವಣೆಯಾಗಿತ್ತು. ವರ್ಗಾವಣೆ ಸ್ಥಳಕ್ಕೆ ತೆರಳುವುದಕ್ಕೂ ಮುನ್ನ ದೇವಸ್ಥಾನದಲ್ಲಿ ಪೂಜೆ ಮಾಡಿಸಲು ಪತ್ನಿ ಸಿಂಚನಾ ಜೊತೆಗೆ ಶಿವಗಂಗೆಯ ತೋಪಿನ ಗಣಪತಿ ದೇವಾಲಯಕ್ಕೆ ಹೋಗಿದ್ದರು. ಪೂಜೆ ಮುಗಿಸಿಕೊಂಡು ತೋಟನಹಳ್ಳಿ ಗ್ರಾಮಕ್ಕೆ ವಾಪಸ್ ಬರುವಾಗ ಈ ಅಪಘಾತ ಸಂಭವಿಸಿದೆ ಎಂದು ಸಂಚಾರ ಠಾಣೆ ಪೊಲೀಸರು ತಿಳಿಸಿದರು.

ಜೈಹಿಂದ್ ಹೋಟೆಲ್ ಬಳಿ ಬರುತ್ತಿದ್ದ ವೇಳೆ ಟಿಪ್ಪರ್ ಡಿಕ್ಕಿಯಾಗಿದೆ. ಕೆಳಕ್ಕೆ ಬಿದ್ದ ಸಿಂಚನಾ ಅವರ ಮೇಲೆ ಟಿಪ್ಪರ್ ಚಕ್ರ ಹರಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದ ರಭಸಕ್ಕೆ ಸಿಂಚನಾ ಅವರ ಹೊಟ್ಟೆಯಿಂದ ಮಗು ಕೂಡ ಹೊರ ಬಂದು ಮೃತಪಟ್ಟಿದೆ ಎಂದು ಮೂಲಗಳು ತಿಳಿಸಿವೆ.

ಮತ್ತೊಂದು ಬದಿಗೆ ಬಿದ್ದಿದ್ದ ಮಂಜುನಾಥ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಟಿಪ್ಪರ್ ಚಾಲಕ ಪರಾರಿ ಆಗಿದ್ದಾನೆ.

ಪೊಲೀಸರಿಂದ ತಪ್ಪಿಸಿಕೊಳ್ಳಲು ಯತ್ನ ಕಟ್ಟಡದಿಂದ ಬಿದ್ದು ಸಾವು

ಬೆಂಗಳೂರು: ಪತ್ನಿಯನ್ನು ಕೊಲೆ ಮಾಡಿ ಕೋಲಾರದ ತನ್ನ ಚಿಕ್ಕಮ್ಮನ ಮನೆಯಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಯೊಬ್ಬ ಪೊಲೀಸರ ಕಾರ್ಯಾಚರಣೆ ವೇಳೆ ತಪ್ಪಿಸಿಕೊಳ್ಳಲು ಕಟ್ಟಡದಿಂದ ಜಿಗಿಯುವಾಗ ಬಿದ್ದು ಮೃತಪಟ್ಟಿದ್ದಾನೆ.

ನಗರದ ಸಿದ್ದಾಪುರದ ಸೋಮೇಶ್ವರ ನಗರ ನಿವಾಸಿ ತಬ್ರೇಜ್ ಪಾಷಾ(37) ಮೃತ ಆರೋಪಿ. ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದ್ದು ಪ್ರಕರಣವನ್ನು ಚಾಮರಾಜಪೇಟೆ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಿದ್ದಾರೆ.

ಚಾಮರಾಜಪೇಟೆಯ ತನ್ನ ತವರು ಮನೆಯಲ್ಲಿದ್ದ ಪತ್ನಿ ಸೈಯಿದಾ ಫಾಜೀಯಾ ಫಾತೀಮಾ(34) ಅವರನ್ನು ಪತಿ ತಬ್ರೇಜ್ ಪಾಷಾ ಚಾಕುವಿನಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದ್ದ. ಆಗಸ್ಟ್ 2ರಂದು ಕೃತ್ಯ ನಡೆದಿತ್ತು. ಪ್ರಕರಣ ದಾಖಲಿಸಿಕೊಂಡು ಆರೋಪಿ ಪತ್ತೆಗೆ ಪೊಲೀಸರು ಶೋಧ ನಡೆಸುತ್ತಿದ್ದರು.

ಕೋಲಾರದಲ್ಲಿ ಆರೋಪಿ ತಲೆಮರೆಸಿಕೊಂಡ ಮಾಹಿತಿ ಮೇರೆಗೆ ಚಾಮರಾಜಪೇಟೆ ಠಾಣೆ ಪೊಲೀಸರು ಅಲ್ಲಿಗೆ ತೆರಳಿದ್ದರು. ಕೋಲಾರದ ಹೊರವಲಯದಲ್ಲಿ ಆಶ್ರಯ ಪಡೆದುಕೊಂಡಿದ್ದ ಎಂಬುದು ಗೊತ್ತಾಗಿತ್ತು. ಬಳಿಕ ಪೊಲೀಸರು ಹೋಗುವಷ್ಟರಲ್ಲಿ ಸಮೀಪದಲ್ಲಿ ಇರುವ ತನ್ನ ಚಿಕ್ಕಮ್ಮನ ಮನೆಗೆ ತೆರಳಿದ್ದ. ಪೊಲೀಸರು ಅಲ್ಲಿಗೂ ತೆರಳಿದ್ದರು. ಈ ವಿಚಾರ ತಿಳಿದ ಆರೋಪಿ, ಪೊಲೀಸರಿಂದ ತಪ್ಪಿಸಿಕೊಳ್ಳಲು ಮನೆಯ ಮಹಡಿ ಮೇಲೆ ಏರಿದ್ದ. 12 ಅಡಿ ಎತ್ತರದ ಕಟ್ಟಡದಿಂದ ಜಿಗಿದು ಕೆಳಕ್ಕೆ ಬಿದ್ದು ಗಂಭೀರ ಗಾಯಗೊಂಡಿದ್ದ. ಸಮೀಪದ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಕೊಲೆ ಆರೋಪಿ ಮೃತಪಟ್ಟಿದ್ದಾನೆ ಎಂದು ಮೂಲಗಳು ಹೇಳಿವೆ.

ಬಿಹಾರದ ಇಬ್ಬರ ಬಂಧನ: ಆರೋಪಿಗಳಿಂದ 37 ಎಟಿಎಂ ಕಾರ್ಡ್ ಜಪ್ತಿ

ಪಿನ್ ಬದಲಾವಣೆ ಸಹಾಯದ ನೆಪದಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಟಿಎಂ ಕಾರ್ಡ್‌ನ ಪಿನ್ ನಂಬರ್ ಬದಲಾಯಿಸಲು ಸಹಾಯ ಮಾಡುವ ನೆಪದಲ್ಲಿ ವೃದ್ಧರೊಬ್ಬರ ಬ್ಯಾಂಕ್ ಖಾತೆಯಲ್ಲಿದ್ದ ನಗದು ಡ್ರಾ ಮಾಡಿಕೊಂಡು ವಂಚಿಸಿದ್ದ ಇಬ್ಬರು ಆರೋಪಿಗಳನ್ನು ಸುಬ್ರಮಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಿಹಾರದ ಚುನಿಲಾಲ್ ಕುಮಾರ್ ಹಾಗೂ ವಿವೇಕ್ ಕುಮಾರ್ ಬಂಧಿತ ಆರೋಪಿಗಳು.

'ಬಂಧಿತರಿಂದ ವಿವಿಧ ಬ್ಯಾಂಕ್‌ಗಳ ನಿಷ್ಕ್ರಿಯಗೊಂಡಿರುವ 37 ಎಟಿಎಂ ಕಾರ್ಡ್ ಹಾಗೂ ₹7,500 ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರು ತಿಂಗಳ ಹಿಂದೆ ನಗರಕ್ಕೆ ಬಂದಿದ್ದ ಆರೋಪಿಗಳು, ಎಲೆಕ್ಟ್ರಾನಿಕ್ ಸಿಟಿಯ ಬೆಟ್ಟದಾಸನಪುರದ ಬಳಿ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ಇಬ್ಬರೂ ಗಾರೆ ಕೆಲಸ ಮಾಡಿಕೊಂಡಿದ್ದರು. ಬಳಿಕ ವಂಚನೆಗೆ ಇಳಿದಿದ್ದರು. ಎಟಿಎಂ ಕೇಂದ್ರಗಳಿಗೆ ಬರುವ ವೃದ್ಧರನ್ನು ಗುರಿಯಾಗಿಸಿ, ಸಹಾಯ ಮಾಡುವ ನೆಪದಲ್ಲಿ ವಂಚಿಸಿ ಹಣ ಡ್ರಾ ಮಾಡಿಕೊಂಡು ಪರಾರಿ ಆಗುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಹೇಗೆ ವಂಚಿಸುತ್ತಿದ್ದರು?: 'ಜುಲೈ 15ರಂದು ಸಂಜಯ್ ಸಿಂಗ್ ಅವರು ಉತ್ತರಹಳ್ಳಿ ಮುಖ್ಯ ರಸ್ತೆಯಲ್ಲಿರುವ ಕೆನರಾ ಬ್ಯಾಂಕ್‌ನಲ್ಲಿರುವ ತಮ್ಮ ಖಾತೆಗೆ ₹50 ಸಾವಿರ ಜಮೆ ಮಾಡಿದ್ದರು. ನಂತರ, ಬ್ಯಾಂಕ್ ಮುಂಭಾಗದಲ್ಲಿದ್ದ ಎಟಿಎಂ ಕೇಂದ್ರಕ್ಕೆ ತೆರಳಿ ಪಿನ್ ಬದಲಾವಣೆ ಮಾಡಲು ಪ್ರಯತ್ನಿಸುತ್ತಿದ್ದರು. ಅದೇ ವೇಳೆ ಕೇಂದ್ರದ ಒಳಕ್ಕೆ ಬಂದ ಆರೋಪಿಗಳು, ಪಿನ್ ಬದಲಾವಣೆಗೆ ಸಹಾಯ ಮಾಡುವುದಾಗಿ ತಿಳಿಸಿದರು. ಆರೋಪಿಗಳ ಮಾತು ನಂಬಿದ ಸಂಜಯ್ ಸಿಂಗ್ ತಮ್ಮ ಎಟಿಎಂ ಕಾರ್ಡ್ ಅನ್ನು ಅವರಿಗೆ ನೀಡಿದರು. ಆರೋಪಿಗಳು ಕಾರ್ಡ್ ಪಡೆದು ಪಿನ್ ಬದಲಾವಣೆ ಮಾಡಿದರು. ಅದಾದ ಮೇಲೆ ಬೇರೊಂದು ಎಟಿಎಂ ಕಾರ್ಡ್ ಅನ್ನು ಸಂಜಯ್ ಅವರಿಗೆ ನೀಡಿದ್ದರು. ಸಂಜಯ್ ಅಲ್ಲಿಂದ ತೆರಳಿದ ಮೇಲೆ ₹75 ಸಾವಿರ ಡ್ರಾ ಮಾಡಿಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

'ಹಣ ಕಳೆದುಕೊಂಡಿದ್ದ ವ್ಯಕ್ತಿ ನೀಡಿದ ದೂರು ಆಧರಿಸಿ ಎಟಿಎಂ ಕೇಂದ್ರದಲ್ಲಿ ಅಳವಡಿಸಿದ್ದ ಸಿಸಿ ಟಿ.ವಿ ಕ್ಯಾಮೆರಾದ ದೃಶ್ಯಾವಳಿ ಪರಿಶೀಲಿಸಿದಾಗ ವಂಚಕರ ಚಹರೆ ಪತ್ತೆಯಾಗಿತ್ತು. ವಿವಿಧ ಸ್ಥಳಗಳ ಸಿ.ಸಿ ಟಿವಿ ಕ್ಯಾಮೆರಾ ಪರಿಶೀಲಿಸಿದಾಗ ಇಬ್ಬರು ಬಿಎಂಟಿಸಿ ಬಸ್ ಹತ್ತಿ ಚಿಕ್ಕದಾಸನಪುರ ಬಸ್ ನಿಲ್ದಾಣದಲ್ಲಿ ಇಳಿದು ಮನೆಗೆ ಹೋಗಿರುವುದು ಗೊತ್ತಾಗಿತ್ತು. ಅಲ್ಲಿ ತೆರಳಿ ಪರಿಶೀಲಿಸಿದಾಗ ಆರೋಪಿಗಳು ಬಿಹಾರಕ್ಕೆ ಹೋಗಿರುವುದು ದೃಢಪಟ್ಟಿತ್ತು. ಹಣ ಖಾಲಿಯಾದ ಮೇಲೆ ನಗರಕ್ಕೆ ವಾಪಸ್ ಆಗಿದ್ದ ಆರೋಪಿಗಳು, ಮತ್ತೆ ವಂಚನೆಗೆ ಮುಂದಾಗಿದ್ದರು. ಆಗ ಕಾರ್ಯಾಚರಣೆ ನಡೆಸಿ ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

ಚುನಿಲಾಲ್ ಕುಮಾರ್

ವಿವೇಕ್ ಕುಮಾರ್

ವಶಪಡಿಸಿಕೊಂಡ ಎಟಿಎಂ ಕಾರ್ಡ್‌ಗಳು

ವಿದ್ಯಾರ್ಥಿನಿಗೆ ಬ್ಲ್ಯಾಕ್‌ಮೇಲ್ ಮಾಡಿ ಸುಲಿಗೆ

ಬೆಂಗಳೂರು: ವಿದ್ಯಾರ್ಥಿನಿಗೆ ಬ್ಲ್ಯಾಕ್‌ಮೇಲ್ ಮಾಡಿ ಚಿನ್ನಾಭರಣ ಹಾಗೂ ನಗದು ಸುಲಿಗೆ ಮಾಡಿದ್ದ ಆರೋಪಿಯನ್ನು ಸುಬ್ರಮಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಲ್ಲಸಂದ್ರದ ಕಾಕತೀಯ ನಗರದ ನಿವಾಸಿ ತೇಜಸ್(19) ಬಂಧಿತ ಆರೋಪಿ.

ಠಾಣಾ ವ್ಯಾಪ್ತಿಯ ನಾಯ್ಡು ಲೇಔಟ್ ನಿವಾಸಿ ಹೇಮಾ ಅವರು ನೀಡಿದ ದೂರು ಆಧರಿಸಿ ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ. ಆರೋಪಿಯಿಂದ ₹3.40 ಲಕ್ಷ ಮೌಲ್ಯದ 50 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ವಿದ್ಯಾರ್ಥಿಯೊಬ್ಬನನ್ನು ಪ್ರೀತಿಸುತ್ತಿರುವ ವಿಷಯವನ್ನು ಸಹೋದರ ಮತ್ತು ತಾಯಿಗೆ ಹೇಳುವುದಾಗಿ ಆರೋಪಿ ಬ್ಲ್ಯಾಕ್‌ಮೇಲ್ ಮಾಡಿ ಪರಿಚಿತ ವಿದ್ಯಾರ್ಥಿನಿಯಿಂದ 75 ಗ್ರಾಂ. ಚಿನ್ನಾಭರಣ ಹಾಗೂ ₹1.25 ಲಕ್ಷ ನಗದು ಸುಲಿಗೆ ಮಾಡಿದ್ದ' ಎಂದು ಪೊಲೀಸರು ಹೇಳಿದರು.

'19 ವರ್ಷದ ವಿದ್ಯಾರ್ಥಿನಿಗೆ ಎರಡು ವರ್ಷದ ಹಿಂದೆ ಕಾಲೇಜಿನ ಸಹಪಾಠಿ ಪ್ರೀತಂ ಮೂಲಕ ತೇಜಸ್ ಪರಿಚಿತನಾಗಿದ್ದ. ಬಳಿಕ ತೇಜಸ್ ವಿದ್ಯಾರ್ಥಿನಿಯ ಮೊಬೈಲ್ ಸಂಖ್ಯೆ ಪಡೆದುಕೊಂಡಿದ್ದ. ಪ್ರೀತಂ ಹಾಗೂ ವಿದ್ಯಾರ್ಥಿನಿ ಪ್ರೀತಿಸುತ್ತಿರುವ ವಿಚಾರವನ್ನು ಕುಟುಂಬದ ಸದಸ್ಯರಿಗೆ ತಿಳಿಸುವುದಾಗಿ ಆಗಾಗ್ಗೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ. ಮನೆ ಹಾಗೂ ಕಾಲೇಜಿನ ಬಳಿ ತೆರಳಿ ವಿದ್ಯಾರ್ಥಿನಿಗೆ ಹೆದರಿಸಿದ್ದ' ಎಂದು ಹೇಳಿದರು.

'ಪ್ರೀತಿಯ ವಿಚಾರವು ಸಹೋದರ ಮತ್ತು ತಾಯಿಗೆ ಗೊತ್ತಾದರೆ, ಮುಂದಿನ ವಿದ್ಯಾಭ್ಯಾಸಕ್ಕೆ ತೊಂದರೆ ಆಗುವ ಭಯದಲ್ಲಿ ವಿದ್ಯಾರ್ಥಿನಿ, ಮನೆಯಲ್ಲಿದ್ದ 75 ಗ್ರಾಂ ಚಿನ್ನಾಭರಣ ಮತ್ತು ₹1.25 ಲಕ್ಷ ನಗದನ್ನು ಆರೋಪಿಗೆ ತಂದುಕೊಟ್ಟಿದ್ದಳು. ಇತ್ತೀಚೆಗೆ ಮನೆಯ ಬೀರು ತೆಗೆದು ಪರಿಶೀಲಿಸಿದಾಗ ಚಿನ್ನ ಹಾಗೂ ನಗದು ಇಲ್ಲದಿರುವುದು ಗೊತ್ತಾಗಿತ್ತು' ಎಂದು ಪೊಲೀಸರು ಹೇಳಿದರು.

'ಆರೋಪಿ ಅರ್ಧಕ್ಕೆ ವ್ಯಾಸಂಗ ಮೊಟಕುಗೊಳಿಸಿ ಡೆಲಿವರಿ ಬಾಯ್ ಕೆಲಸ ಮಾಡಿಕೊಂಡಿದ್ದ. ಸದ್ಯ ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಲೋಕಾಯುಕ್ತರ ದಾಳಿ: ಲಂಚದ ಹಣದೊಂದಿಗೆ ಓಡಿದ ಅಧಿಕಾರಿ!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ವ್ಯಕ್ತಿಯೊಬ್ಬರಿಂದ ಲಂಚ ಪಡೆಯುತ್ತಿದ್ದ ದೇವನಹಳ್ಳಿ ಕಂದಾಯ ಇಲಾಖೆಯ ಸಿಬ್ಬಂದಿಯೊಬ್ಬ ಬುಧವಾರ ಲೋಕಾಯುಕ್ತ ಪೊಲೀಸರನ್ನು ಕಂಡ ತಕ್ಷಣ ಹಣದ ಸಮೇತ ಪರಾರಿ ಆಗಿದ್ದಾನೆ.

ಲೋಕಾಯುಕ್ತ ಪೊಲೀಸರು ಆತನ ಬೆನ್ನಟ್ಟಿದ್ದರೂ ಅವರ ಕೈಗೂ ಸಿಗದೆ ತಪ್ಪಿಸಿಕೊಂಡು ಓಟ ಕಿತ್ತಿದ್ದಾನೆ. ಆರೋಪಿಗಾಗಿ ಹುಡುಕಿ ವಾಪಸ್ ಆದ ಪೊಲೀಸರು ರಾತ್ರಿ 8 ಗಂಟೆಯವರೆಗೂ ಕಂದಾಯ ಇಲಾಖೆ ಕಚೇರಿಯಲ್ಲಿ ಪ್ರಕರಣಕ್ಕೆ ಸಂಬಂಧಿದ ಅಗತ್ಯ ದಾಖಲೆಗಳನ್ನು ಕಲೆ ಹಾಕಿಕೊಂಡು ಹೋದರು.

ದೇವನಹಳ್ಳಿ ತಾಲ್ಲೂಕಿನ ವೆಂಕಟಗಿರಿಕೋಟೆ ಬಳಿ ಪೆಟ್ರೋಲ್ ಬಂಕ್ ಆರಂಭಿಸಲು ಚಿಕ್ಕಬಳ್ಳಾಪುರದ ಜಯಸೂರ್ಯ ಎಂಬುವರು ಅಗತ್ಯ ಪರವಾನಗಿ ಪಡೆಯಲು ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿದ್ದರು. ಕಂದಾಯ ಇಲಾಖೆಯ ವಿಷಯ ನಿರ್ವಾಹಕ ಅಧಿಕಾರಿ ಮಹೇಶ್, ಜಯಸೂರ್ಯ ಅವರಿಗೆ ₹2.50 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಜಯಸೂರ್ಯ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಜಯಸೂರ್ಯ ಬುಧವಾರ ಮುಂಗಡವಾಗಿ ನೀಡಲು ₹50 ಸಾವಿರ ಹಣದೊಂದಿಗೆ ಕಂದಾಯ ಇಲಾಖೆಗೆ ಬಂದಿದ್ದರು. ಮಹೇಶ್ ಹಣ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದರು. ಇದು ಗೊತ್ತಾಗುತ್ತಲೇ ಮಹೇಶ್ ಹಣದ ಸಮೇತ ಕಚೇರಿಯಿಂದ ಓಡಿ ಹೋದರು.

'ನಿಯಮ ಪ್ರಕಾರವೇ ಟೋಲ್ ದರ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಸ್ ರಸ್ತೆಯಲ್ಲಿ ಟೋಲ್ ದರಗಳನ್ನು ನಿಯಮ ಪ್ರಕಾರವೇ ಹೆಚ್ಚಿಸಲಾಗಿದೆ ಎಂದು ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ (ನೈಸ್) ಲಿಮಿಟೆಡ್ ಸ್ಪಷ್ಟನೆ ನೀಡಿದೆ.

ಟೋಲ್ ದರದ ಬಗ್ಗೆ ನೈಸ್ ಸಂಸ್ಥೆಯು 2020ರಲ್ಲಿ ಕರ್ನಾಟಕ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಈ ಒಪ್ಪಂದದ ಪ್ರಕಾರ ದರ ಪರಿಷ್ಕರಣೆ ಮಾಡುವ ಸಂದರ್ಭದಲ್ಲಿ ಅದರ ವಿವರಗಳನ್ನು ಲೋಕೋಪಯೋಗಿ ಇಲಾಖೆಗೆ (ಪಿಡಬ್ಲ್ಯುಡಿ) ತಿಳಿಸಿ, ಒಪ್ಪಿಗೆ ಪಡೆಯಬೇಕು. ಅನುಮತಿಗಾಗಿ ಅರ್ಜಿ ಸಲ್ಲಿಸಿ 30 ದಿನಗಳಲ್ಲಿ ಇಲಾಖೆಯಿಂದ ಯಾವುದೇ ಪ್ರತಿಕ್ರಿಯೆ ಬಾರದೇ ಇದ್ದರೆ ನೇರವಾಗಿ ದರ ಹೆಚ್ಚಿಸಲು ಅವಕಾಶ ನೀಡಲಾಗಿದೆ ಎಂದು ನೈಸ್ ಪ್ರಕಟಣೆಯಲ್ಲಿ ತಿಳಿಸಿದೆ.

ಒಪ್ಪಂದದ ಪ್ರಕಾರ 2023ರಲ್ಲಿ ಟೋಲ್ ಹೆಚ್ಚಿಸಬೇಕಿತ್ತು. ಅದಕ್ಕೆ ಸಂಬಂಧಿಸಿದಂತೆ ಅನುಮತಿಗಾಗಿ ಪಿಡಬ್ಲ್ಯುಡಿಗೆ 2022ರ ನವೆಂಬರ್‌ನಲ್ಲಿ ಪತ್ರ ಬರೆಯಲಾಗಿತ್ತು. 2024ರ ಜುಲೈ 1ರಿಂದ ದರ ಏರಿಸಲಾಗಿದೆ. ಆದರೆ, ಇಲಾಖೆಗೆ ಯಾವುದೇ ಮಾಹಿತಿ ನೀಡಿಲ್ಲ ಎಂದು ಪಿಡಬ್ಲ್ಯುಡಿ ಅಧಿಕಾರಿಗಳು ತಪ್ಪು ಮಾಹಿತಿ ನೀಡಿದ್ದಾರೆ ಎಂದು ನೈಸ್ ತಿಳಿಸಿದೆ.

ಕೊತ್ತನೂರು: 17 ಎಕರೆಯಲ್ಲಿ ವೃಕ್ಷೋದ್ಯಾನ, ಪಕ್ಷಿಲೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊತ್ತನೂರಿನಲ್ಲಿ ಒತ್ತುವರಿಯನ್ನು ತೆರವುಗೊಳಿಸಿ ವಶಕ್ಕೆ ಪಡೆದಿರುವ 17 ಎಕರೆ ಜಮೀನಿನಲ್ಲಿ ವೃಕ್ಷೋದ್ಯಾನ, ಪಕ್ಷಿಲೋಕ ನಿರ್ಮಿಸುವ ಕಾಮಗಾರಿಗೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಅವರು ಬುಧವಾರ ಚಾಲನೆ ನೀಡಿದರು.

ಅರಣ್ಯ ಇಲಾಖೆ ಮರುವಶಪಡಿಸಿಕೊಂಡಿರುವ ಸುಮಾರು ₹500 ಕೋಟಿ ಮೌಲ್ಯದ 17 ಎಕರೆ ಜಮೀನನ್ನು ಪರಿಶೀಲಿಸಿದ ಸಚಿವರು, ಗಿಡ ನೆಡುವ ಮೂಲಕ ವೃಕ್ಷೋದ್ಯಾನ ನಿರ್ಮಾಣಕ್ಕೆ ಚಾಲನೆ ನೀಡಿದರು. 1,800 ಸ್ಥಳೀಯ ಪ್ರಭೇದದ ಸಸಿ ನೆಡುವುದು ಹಾಗೂ ಜಮೀನಿನ ಸುತ್ತಲೂ ತಂತಿ ಬೇಲಿ ಹಾಕುವ ಕಾಮಗಾರಿಯೂ ಆರಂಭವಾಯಿತು.

'ಬೆಂಗಳೂರು ಬೃಹದಾಕಾರವಾಗಿ ಬೆಳೆಯುತ್ತಿದ್ದು, ನಗರ ಪ್ರದೇಶದಲ್ಲಿ ಉಸಿರಾಡಲು ಹಸಿರು ಪ್ರದೇಶ ಇರಬೇಕು. ಐಟಿ–ಬಿಟಿ ಕಂಪನಿಗಳಿರುವ ಈ ಪ್ರದೇಶ ಕಾಂಕ್ರೀಟ್ ಕಾಡಿನಂತಿದ್ದು, 17 ಎಕರೆಯಲ್ಲಿ ನಿರ್ಮಾಣವಾಗಲಿರುವ ಈ ವೃಕ್ಷೋದ್ಯಾನ ಬೆಳಗಿನ ವಾಯುವಿಹಾರ, ವಾರಾಂತ್ಯದಲ್ಲಿ ಮಕ್ಕಳು, ಮೊಮ್ಮಕ್ಕಳೊಂದಿಗೆ ಸಮಯ ಕಳೆಯಲು ಮಾಹಿತಿ ಮತ್ತು ಮನರಂಜನೆಯ ತಾಣವಾಗುವಂತೆ ಅಭಿವೃದ್ಧಿಪಡಿಸಲಾಗುವುದು' ಎಂದು ಈಶ್ವರ ಖಂಡ್ರೆ ತಿಳಿಸಿದರು.

ಹಿನ್ನೆಲೆ: ಕೆ.ಆರ್.ಪುರ ಹೋಬಳಿಯ ಕೊತ್ತನೂರು ಸರ್ವೆ ನಂಬರ್ 47ರಲ್ಲಿ 17 ಎಕರೆ 34 ಗುಂಟೆ ಜಮೀನನ್ನು ಜಿಲ್ಲಾಧಿಕಾರಿಯವರು 2006ರ ಜೂನ್‌ನಲ್ಲಿ ಅರಣ್ಯ ಎಂದು ಘೋಷಿಸಿದ್ದರು. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಈ ಆದೇಶವನ್ನು ಪ್ರಶ್ನಿಸಲಾಗಿತ್ತು. ನ್ಯಾಯಾಲಯ ಜಿಲ್ಲಾಧಿಕಾರಿಯವರ ಆದೇಶವನ್ನು ಎತ್ತಿ ಹಿಡಿದಿತ್ತು.

ಇದಾದ 17 ವರ್ಷಗಳ ನಂತರ, 2023ರ ಜನವರಿಯಲ್ಲಿ ಉಪ ವಿಭಾಗಾಧಿಕಾರಿಯಾಗಿದ್ದ ಎಂ.ಜಿ. ಶಿವಣ್ಣ ಮತ್ತು ತಹಶೀಲ್ದಾರ್ ಅಜಿತ್ ರೈ ಏಕಪಕ್ಷೀಯವಾಗಿ ಈ ಅರಣ್ಯ ಭೂಮಿಯನ್ನು 'ಸರ್ಕಾರಿ ಭೂಮಿ' ಎಂದು ಬದಲಾಯಿಸಿದ್ದರು. ಅರಣ್ಯ ಜಮೀನು ಒತ್ತುವರಿ ಮಾಡಿದ್ದವರಿಗೆ ಅನುಕೂಲ ಮಾಡಿಕೊಡುವ ಪ್ರಯತ್ನ ಮಾಡಿದ್ದರು.

ಈ ಪ್ರಕರಣ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರ ಗಮನಕ್ಕೆ ಬಂದಾಗ, ಉಪ ವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಆದೇಶ ನೀಡಿದ್ದರು. ಇಬ್ಬರು ಹಿರಿಯ ಕೆಎಎಸ್ ಅಧಿಕಾರಿಗಳ ವಿರುದ್ಧ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಸೆಕ್ಷನ್ 3ಬಿ ಮತ್ತು ಬಿಎ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ನಂತರ, ಹೈಕೋರ್ಟ್‌ನಲ್ಲಿ ಕೂಡ ಈ ಜಮೀನು ಅರಣ್ಯ ಇಲಾಖೆಗೆ ಸೇರಿದ್ದೆಂದು ತೀರ್ಪುಬಂದಿತು. ಮತ್ತೆ, 'ಅರಣ್ಯ' ಎಂದು ಜಿಲ್ಲಾಧಿಕಾರಿಗಳು ಇಂಡೀಕರಣ ಮಾಡಲು ಸೂಚಿಸಲಾಗಿತ್ತು. ಇದೀಗ ಈ ಅರಣ್ಯ ಜಮೀನಿನಲ್ಲೇ ವೃಕ್ಷೋದ್ಯಾನ ಮತ್ತು ಪಕ್ಷಿಲೋಕ ನಿರ್ಮಿಸಲಾಗುತ್ತಿದೆ ಎಂದು ಅರಣ್ಯ ಅಧಿಕಾರಿಗಳು ಮಾಹಿತಿ ನೀಡಿದರು.

ಕೊತ್ತನೂರಿನಲ್ಲಿ ಅರಣ್ಯ ಇಲಾಖೆ ಅಭಿವೃದ್ಧಿಪಡಿಸುತ್ತಿರುವ ವೃಕ್ಷೋದ್ಯಾನ

ಮುಖ್ಯಾಂಶಗಳು

- ಒತ್ತುವರಿ ತೆರವು ಭೂಮಿಯಲ್ಲಿ ಅರಣ್ಯ ಇಲಾಖೆಯಿಂದ ಅಭಿವೃದ್ಧಿ
- ಕೆಎಎಸ್ ಅಧಿಕಾರಿಗಳ ಮೇಲೆ ಪ್ರಕರಣ

ಪಕ್ಷಿಲೋಕವನ್ನು ನಿರ್ಮಿಸಿ, ಹಕ್ಕಿಗಳ ಕಲರವ, ಸ್ವಚ್ಛಂದ ಹಾರಾಟವನ್ನು ಸ್ಥಳೀಯರಷ್ಟೇ ಅಲ್ಲ, ಪ್ರವಾಸಿಗರೂ ಕಣ್ತುಂಬಿಕೊಳ್ಳುವಂತೆ ಮಾಡಲಾಗುವುದು

ಈಶ್ವರ ಬಿ. ಖಂಡ್ರೆ
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ

ನಗರದಲ್ಲಿ ಇಂದು

'ಸಂವಿಧಾನ ಶಿಲ್ಪಿ ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್' ವಿಷಯಾಧಾರಿತ ಫಲಪುಷ್ಪ ಪ್ರದರ್ಶನ: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಭೀಮರಾವ್ ಯಶವಂತ ಅಂಬೇಡ್ಕರ್, ಡಿ.ಕೆ. ಶಿವಕುಮಾರ್, ಎಸ್.ಎಸ್. ಮಲ್ಲಿಕಾರ್ಜುನ್, ರಾಮಲಿಂಗಾರೆಡ್ಡಿ, ಎಚ್.ಸಿ. ಮಹದೇವಪ್ಪ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ಗಾಜಿನ ಮನೆ, ಲಾಲ್‌ಬಾಗ್, ಬೆಳಿಗ್ಗೆ 10.30

ಡ್ರಗ್ಸ್ ಕುರಿತು ಜಾಗೃತಿ ಅಭಿಯಾನ: ಅತಿಥಿಗಳು: ಜಯಕರ ಎಸ್.ಎಂ., ದುನಿಯಾ ವಿಜಯ್, ಶೇಖ್ ಲತೀಫ್, ಶ್ರೀಕಾಂತ್ ಎ.ಎಸ್., ಆಯೋಜನೆ: ಗ್ರಾಮೀಣ ಅಭಿವೃದ್ಧಿ ಅಧ್ಯಯನ ವಿಭಾಗ, ಸ್ಥಳ: ಎಚ್.ಎನ್. ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 11

ನಾಡಪ್ರಭು ಕೆಂಪೇಗೌಡರ ಜಯಂತಿ: ಉದ್ಘಾಟನೆ: ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅತಿಥಿಗಳು: ಯು.ಟಿ.ಖಾದರ್, ರಾಮಲಿಂಗಾರೆಡ್ಡಿ, ಶರತ್ ಬಚ್ಚೇಗೌಡ, ಆಯೋಜನೆ: ಕರ್ನಾಟಕ ರಾಜ್ಯ ಒಕ್ಕಲಿಗರ ಹಿತರಕ್ಷಣಾ ಪರಿಷತ್, ಸ್ಥಳ: ಎನ್.ಜಿ.ಒ ಸಭಾಂಗಣ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30

'ಬೆಂಗಳೂರಿನ ಭವಿಷ್ಯದ ಆಡಳಿತದ' (ಗ್ರೇಟರ್ ಬೆಂಗಳೂರು) ಕುರಿತು ಚರ್ಚೆ: ಅತಿಥಿಗಳು: ಶ್ರೀಕಾಂತ್ ವಿಶ್ವನಾಥನ್, ಸಂತೋಷ ನರಗುಂದ, ವಿ.ಆರ್. ವಚನ, ಆಯೋಜನೆ: ಜನಾಗ್ರಹ, ಸ್ಥಳ: ಕೋಬಾಲ್ಟ್–46, ನಾಲ್ಕನೇ ಮಹಡಿ, ಚರ್ಚ್ ಸ್ಟ್ರೀಟ್, ಶಾಂತಲಾನಗರ, ಅಶೋಕನಗರ, ಬೆಳಿಗ್ಗೆ 11.30

'ಕೃಷ್ಣರೆಡ್ಡಿ ಶತಮಾನೋತ್ಸವ' ವಸ್ತುಪ್ರದರ್ಶನ: ಸ್ಥಳ: ಮ್ಯೂಸಿಯಮ್ ಆಫ್ ಆರ್ಟ್ ಆ್ಯಂಡ್ ಫೋಟೊಗ್ರಫಿ, ಮಧ್ಯಾಹ್ನ 12

'ವರ್ಣ ವಿನ್ಯಾಸ' ಏಕವ್ಯಕ್ತಿ ಕಲಾಕೃತಿಗಳ ಪ್ರದರ್ಶನ: ಅತಿಥಿಗಳು: ಮೀನಾಕ್ಷಿ ಕೃಷ್ಣಬೈರೇಗೌಡ, ಗಿರಿಜಾ ಲೋಕೇಶ್, ಶ್ರೀಧರ್ ಎಸ್.ಎನ್., ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 4.30

ವಿಶ್ವ ಪತ್ರಿಕಾ ದಿನಾಚರಣೆ ಪ್ರಯುಕ್ತ 'ವಿಚಾರ ಸಂಕಿರಣ'ದ ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಉಪನ್ಯಾಸ: ಎಲ್.ಎನ್. ಮುಕುಂದರಾಜ್, ಅತಿಥಿಗಳು: ಕೃಷ್ಣಬೈರೇಗೌಡ, ಧರಣೀದೇವಿ ಮಾಲಗತ್ತಿ, ಎಸ್. ಸಿದ್ಧರಾಜು, ಆರ್. ಶ್ರೀಧರ್, ಎಸ್. ರವಿ, ಎಸ್.ಬಿ. ಗಿರೀಶ್, ಆರ್. ಜಗದೀಶ್. ಅಧ್ಯಕ್ಷತೆ: ಸುರೇಶ್ ಕೆ.ಎನ್.ಸಿ, 'ನಟರಾಜ' ನಾಟಕ ಪ್ರದರ್ಶನ: ರಚನೆ, ನಿರ್ದೇಶನ: ಆರ್. ವೆಂಕಟರಾಜು, ಆಯೋಜನೆ: ಜೊತೆಯಲಿ ಪತ್ರಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 5

ಬರಗೂರು ರಾಮಚಂದ್ರಪ್ಪ

'ಡಾ. ಎಚ್‌ಕೆಆರ್ 100ರ' ನೆನಪು: ಉದ್ಘಾಟನೆ: ಎಚ್.ಎನ್. ಸುರೇಶ್, ಅಧ್ಯಕ್ಷತೆ: ಗುರುರಾಜ ಕರ್ಜಗಿ, ಅತಿಥಿಗಳು: 'ಮುಖ್ಯಮಂತ್ರಿ' ಚಂದ್ರು, ಕೆ.ವಿ. ನಾಗರಾಜಮೂರ್ತಿ, ವೈ.ವಿ.ಗುಂಡೂರಾವ್, 'ಅಮೃತ ವರ್ಷ' ನಾಟಕ ಪ್ರದರ್ಶನ: ರಚನೆ: ಎಚ್.ಕೆ. ರಂಗನಾಥ್, ನಿರ್ದೇಶನ: ಬಿ.ವಿ.ರಾಜಾರಾಂ, ಆಯೋಜನೆ: ರಂಗ ಸಂಗ, ಭಾರತೀಯ ವಿದ್ಯಾ ಭವನ, ಕಲಾ ಗಂಗೋತ್ರಿ, ನವಚೇತನ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ತಿಂಗಳ ಕಾರ್ಯಕ್ರಮ: ಅತಿಥಿಗಳು: ವಿ. ಮಂಜುನಾಥ್, ಜಗದೀಶ್ ಜಾಲ, ಬಿ.ಆರ್. ಹಿರೇಮಠ, ಸುಕನ್ಯ ಹಿರೇಮಠ, ಎನ್.ಆರ್. ಮಂಜುನಾಥ್, ಗುಣವಂತ ಮಂಜು, ಆಯೋಜನೆ: ಕಲಾಸಾಗರ, ಸ್ಥಳ: ಪುನೀತ್ ರಾಜಕುಮಾರ್ ಕಲಾಭವನ, ಶಾಂತಿನಗರ, ಸಂಜೆ 6

'ಸರ್ವಜ್ಞನ ವಚನಗಳಲ್ಲಿ ದೈವತ್ವ' ಉಪನ್ಯಾಸ: ಶಿವಕುಮಾರ್, ಅತಿಥಿ: ಜಿ.ಎಂ. ಶೀನಪ್ಪ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡ ನಗರ, ಸಂಜೆ 6.30

ಹರಿದಾಸ ವೈಭವ: ಗಾಯನ: ಪ್ರಜ್ಞಾ ರಾವ್, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಒಂದನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.
nagaradalli_indu@prajavani.co.in

NARENDRA MODI
PRIME MINISTER

DR. MOHAN YADAV
CHIEF MINISTER, MADHYA PRADESH

SCRIPT YOUR GROWTH STORY WITH
MAGNIFICENT MADHYA PRADESH
THE FUTURE READY STATE

Engage In A Strategic Discussion With

DR. MOHAN YADAV

Chief Minister, Madhya Pradesh

Interactive Session
on Investment Opportunities
in Madhya Pradesh

8TH AUGUST, 2024 - 11:00 AM ONWARDS

FOUR SEASONS HOTEL, BELLARY RD, BENGALURU

Preamble of 'Invest Madhya Pradesh' Global Investors Summit 2025

LIVE STREAMING
JansamparkMP
@Cmmadhyapradesh
@jansampark.madhyapradesh
@Cmmadhyapradesh
@jansamparkMP

NATIONAL PARTNER CII Confederation of Indian Industry
KNOWLEDGE PARTNER Deloitte. EY

Government of Madhya Pradesh

Released by the Department of Public Relations, M.P.

D11043/24

Designed by M.P. Madhyam/2024

ಸುಭಾಷಿತ

ಹಣವು ಜನರನ್ನು ಅಪರೂಪವಾಗಿ ಒಂದುಗೂಡಿಸುತ್ತದೆ ಮತ್ತು ಹೆಚ್ಚಾಗಿ ವಿಭಜಿಸುತ್ತದೆ.

–ಸುಧಾ ಮೂರ್ತಿ

ಪ್ರಸಾರ ಮಸೂದೆ ಕರಡು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆದರಿಕೆ

ಕೇಂದ್ರ ಸರ್ಕಾರ ರೂಪಿಸಿರುವ 'ಪ್ರಸಾರ ಮಸೂದೆ'ಯ ಕರಡು ಯಥಾರೂಪದಲ್ಲಿ ಕಾನೂನಾಗಿ ಜಾರಿಗೆ ಬಂದರೆ, ಕಾರ್ಯಕ್ರಮಗಳನ್ನು ರೂಪಿಸುವುದು ಹಾಗೂ ಅವುಗಳನ್ನು ಪ್ರಸಾರ ಮಾಡುವುದು ಬಹಳ ಕಷ್ಟಕರವಾಗಲಿದೆ. ಅದರ ಪರಿಣಾಮವಾಗಿ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಹಿಂದೆಂದೂ ಕಾಣದ ಬಗೆಯಲ್ಲಿ ತೊಂದರೆಗಳು ಎದುರಾಗಲಿವೆ. ಕೇಬಲ್ ಟಿ.ವಿ. ನಿಯಮಗಳ ಬದಲಿಗೆ ಜಾರಿಗೆ ತರಲು ಉದ್ದೇಶಿಸಿರುವ ಪ್ರಸಾರ ಸೇವೆಗಳ (ನಿಯಂತ್ರಣ) ಮಸೂದೆಯ ಮೊದಲ ಕರಡನ್ನು ಕೇಂದ್ರ ಸರ್ಕಾರವು ಸಾರ್ವಜನಿಕ ಚರ್ಚೆಗೆ ಕಳೆದ ವರ್ಷ ಬಿಡುಗಡೆ ಮಾಡಿತ್ತು. ನಂತರದ ಕೆಲವು ಕರಡುಗಳನ್ನು ಪ್ರಸಾರ ಮತ್ತು ಮನರಂಜನಾ ಉದ್ಯಮ ಸೇರಿದಂತೆ ಕೆಲವು ಆಯ್ದ ಭಾಗೀದಾರರಿಗೆ ನೀಡಲಾಗಿದೆ. ಆದರೆ, ಕರಡಿನಲ್ಲಿ ಏನಿದೆ ಎಂಬುದನ್ನು ಬಹಿರಂಗವಾಗಿ ಚರ್ಚಿಸುವಂತಿಲ್ಲ ಎಂಬ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ. ಇದು ತಪ್ಪು. ಏಕೆಂದರೆ, ಸಂವಿಧಾನ ನೀಡಿರುವ ಮೂಲಭೂತ ಹಕ್ಕೊಂದರ ಮೇಲೆ ಪರಿಣಾಮ ಬೀರುವ ಹಾಗೂ ಪ್ರತಿ ನಾಗರಿಕನ ಮೇಲೆಯೂ ಪರಿಣಾಮ ಉಂಟುಮಾಡುವ ಮಸೂದೆಯೊಂದಕ್ಕೆ ಸಂಬಂಧಿಸಿದ ಚರ್ಚೆಗಳ ವಿಚಾರವಾಗಿ ಯಾವ ಗೋಪ್ಯತೆಯೂ ಇರಬಾರದು. ಗೋಪ್ಯತೆಯ ಕಾರಣಕ್ಕಾಗಿ ಮಾತ್ರವೇ ಅಲ್ಲದೆ ಮಸೂದೆಯಲ್ಲಿ ಇರುವ ಕೆಲವು ವಿವಾದಾತ್ಮಕ ಅಂಶಗಳ ಕಾರಣದಿಂದಾಗಿಯೂ ಅದರ ಬಗ್ಗೆ ಟೀಕೆಗಳು ಬಂದಿವೆ. ಕರಡು ಮಸೂದೆಯಲ್ಲಿ ಇರುವ ಅಂಶಗಳ ಬಗ್ಗೆ ಗೋಪ್ಯತೆ ಕಾಯ್ದುಕೊಳ್ಳಬೇಕು ಎಂದು ಸೂಚಿಸಿದ್ದರಿಂದಾಗಿ ಈ ವಿವಾದಾತ್ಮಕ ಅಂಶಗಳು ವ್ಯಾಪಕವಾಗಿ ವರದಿಯಾಗಿಲ್ಲ, ಗಂಭೀರ ಕಳವಳಕ್ಕೆ ಕಾರಣವಾಗಿವೆ.

ಕರಡು ಮಸೂದೆಯಲ್ಲಿ ಇರುವ ಕೆಲವು ವಿವಾದಾತ್ಮಕ ಅಂಶಗಳು ಗಂಭೀರ ಕಳವಳಕ್ಕೆ ಕಾರಣವಾಗಿವೆ

ಜಗತ್ತಿನ ಯಾವುದೇ ಭಾಗದಿಂದ ಆನ್‌ಲೈನ್ ವೇದಿಕೆಗಳಿಗಾಗಿ ವಿಡಿಯೊಗಳನ್ನು ಸಿದ್ಧಪಡಿಸುವವರು, ಸಾಮಾಜಿಕ ಜಾಲತಾಣ ವೇದಿಕೆಗಳಲ್ಲಿ ಖಾತೆ ಹೊಂದಿರುವವರು ಮತ್ತು ಆನ್‌ಲೈನ್ ಸ್ಟ್ರೀಮಿಂಗ್ ಸೇವೆಗಳನ್ನು ಒದಗಿಸುವ ವೇದಿಕೆಗಳು ಪ್ರಸ್ತಾವಿತ ಕಾನೂನಿನ ವ್ಯಾಪ್ತಿಗೆ ಬರುವ ಸಾಧ್ಯತೆ ಇದೆ. ಪ್ರಚಲಿತ ವಿದ್ಯಮಾನಗಳಿಗೆ ಸಂಬಂಧಿಸಿದ ಬಹುಮಾಧ್ಯಮ ಕಾರ್ಯಕ್ರಮವನ್ನು ಸಾಮಾಜಿಕ ಜಾಲತಾಣ ವೇದಿಕೆಗಳಿಗೆ ಅಪ್ಲೋಡ್ ಮಾಡುವವರು ಅದರಿಂದ ಆದಾಯ ಗಳಿಸಿದರೆ ಅವರನ್ನು ಡಿಜಿಟಲ್ ಸುದ್ದಿ ಪ್ರಸಾರಕರು ಎಂದು ಪರಿಗಣಿಸಲಾಗುತ್ತದೆ. ಯುಟ್ಯೂಬ್ ಹಾಗೂ ಇನ್‌ಸ್ಟಾಗ್ರಾಂ ಮೂಲಕ ಸಾಮಾಜಿಕವಾಗಿ ಪ್ರಭಾವ ಬೀರುವ ವ್ಯಕ್ತಿಗಳನ್ನು ಹಾಗೂ ಸ್ವತಂತ್ರವಾದ ಸುದ್ದಿಸಂಸ್ಥೆಗಳನ್ನು ಒಂದು ಮಿತಿಯನ್ನು ಮೀರಿ ನಿಯಂತ್ರಿಸಲಿದೆ. ಅಂದರೆ ಅತ್ಯಂತ ಜನಪ್ರಿಯ ಅಭಿವ್ಯಕ್ತಿ ಮಾಧ್ಯಮಗಳಿಗೆ ಅಂಕುಶ ಹಾಕಿದಂತಾಗುತ್ತದೆ. ಇವರೆಲ್ಲ ತಮ್ಮನ್ನು ನಿಯಂತ್ರಣ ವ್ಯವಸ್ಥೆಯೊಂದರಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು ಹಾಗೂ ಕಾರ್ಯಕ್ರಮಗಳನ್ನು ಪರಿಶೀಲಿಸುವ ಸಮಿತಿಯೊಂದು ಇವರು ಸಿದ್ಧಪಡಿಸುವ ವಿಡಿಯೊಗಳನ್ನು, ಡಿಜಿಟಲ್ ವಸ್ತು-ವಿಷಯಗಳನ್ನು ಪರಿಶೀಲಿಸುತ್ತದೆ ಎಂದು ಕರಡು ಮಸೂದೆ ಹೇಳುತ್ತದೆ.

ತಮ್ಮ ಬಳಕೆದಾರರ ಬಗ್ಗೆ ಸರ್ಕಾರಕ್ಕೆ ಮಾಹಿತಿ ಒದಗಿಸುವ ಸಾಮಾಜಿಕ ಜಾಲತಾಣ ಕಂಪನಿಗಳು ಕ್ರಿಮಿನಲ್ ಹೊಣೆಗಾರಿಕೆಯನ್ನು ಹೊರಬೇಕಾಗುತ್ತದೆ. ಸರ್ಕಾರವು ಕೇಳಿದಾಗಲೆಲ್ಲ ಕಂಪನಿಗಳು ತಮ್ಮ ಬಳಕೆದಾರರ ಬಗ್ಗೆ ಮಾಹಿತಿ ಒದಗಿಸಬೇಕಾಗುತ್ತದೆ. ಕರಡು ಮಸೂದೆಯಲ್ಲಿ ಉಲ್ಲೇಖಿಸಲಾಗಿರುವ ದಂಡದ ಮೊತ್ತವು ಭಾರಿ ಮಟ್ಟದಲ್ಲಿದೆ. ಜಾಹೀರಾತು ಜಾಲವನ್ನು ಕೂಡ ನಿಯಂತ್ರಣಕ್ಕೆ ಒಳಪಡಿಸಲಾಗುತ್ತದೆ. ಕರಡು ಮಸೂದೆಯಲ್ಲಿ ವಿವಾದಾತ್ಮಕವಾದ 'ಇನ್ನೂ ಹಲವು' ಅಂಶಗಳು ಇವೆ. ಇದು ಕಾನೂನಿನ ರೂಪ ಪಡೆದರೆ, ಕಾನೂನಿನ ಹಲವು ಅಂಶಗಳನ್ನು ಮಾತ್ರವೇ ಬಳಕೆ ಮಾಡಿಕೊಳ್ಳುವ ಅವಕಾಶ ಕೂಡ ಸರ್ಕಾರಕ್ಕೆ ಇರಲಿದೆ. ಸರ್ಕಾರವು ಕೆಲವರನ್ನು ಅಥವಾ ಒಂದು ಗುಂಪನ್ನು ಕ್ರಿಮಿನಲ್ ಹೊಣೆಗಾರಿಕೆಯಿಂದ ಹೊರಗಿಡಬಹುದು ಎಂದು ಕರಡಿನಲ್ಲಿ ಹೇಳಲಾಗಿದೆ. ಅಂದರೆ, ಸರ್ಕಾರವು ಕೆಲವರ ವಿರುದ್ಧ ಕಾನೂನು ಕ್ರಮ ಜರುಗಿಸದೆ, ತಾನು ಬಯಸಿದವರ ವಿರುದ್ಧ ಮಾತ್ರ ಕಾನೂನಿನ ಕ್ರಮಕ್ಕೆ ಮುಂದಾಗಬಹುದು. ಕರಡು ಮಸೂದೆಯಲ್ಲಿ ಅಸ್ಪಷ್ಟವಾದ ಹಲವು ಅಂಶಗಳಿವೆ. 'ನಿರ್ದಿಷ್ಟಪಡಿಸಬಹುದಾದ ಬಗೆಯಲ್ಲಿ' ಎಂಬ ಮಾತು ಕರಡು ಮಸೂದೆಯಲ್ಲಿ 42 ಕಡೆ ಉಲ್ಲೇಖವಾಗಿದೆ ಎಂಬುದು ಗಮನಾರ್ಹ. ಇದರ ಪರಿಣಾಮವಾಗಿ, ಸರ್ಕಾರಕ್ಕೆ ಬಹಳ ಹೆಚ್ಚು ಎನ್ನಬಹುದಾದ ವಿವೇಚನಾಧಿಕಾರ ಸಿಗುತ್ತದೆ. ಇದರ ಪರಿಣಾಮಗಳನ್ನು ಯಾರಾದರೂ ಊಹಿಸಬಹುದು. ಈ ವಿಚಾರಗಳನ್ನು ವಿರೋಧ ಪಕ್ಷಗಳು ಸಂಸತ್ತಿನಲ್ಲಿ ಪ್ರಸ್ತಾಪಿಸಿವೆ. ಸತ್ಯವನ್ನು ಹತ್ತಿಕ್ಕಿ, ಅಪ್ರಜಾಸತ್ತಾತ್ಮಕವಾದ ಹಾಗೂ ಕರಾಳವಾದ ಕಾನೂನೊಂದನ್ನು ರೂಪಿಸಲು ಸರ್ಕಾರ ಮುಂದಾಗಿದೆ ಎಂದು ಅವು ಆರೋಪಿಸಿವೆ. ಕರಡು ಮಸೂದೆಯು ಕಾನೂನಿನ ರೂಪ ಪಡೆದು ಅನುಷ್ಠಾನಕ್ಕೆ ಬಂದರೆ ಅದು ಅಭಿವ್ಯಕ್ತಿ ಸ್ವಾತಂತ್ರ್ಯದ ಪಾಲಿಗೆ, ಸರ್ಕಾರವು ಈ ಹಿಂದೆ ಕೈಗೊಂಡಿದ್ದ ಇತರ ಯಾವುದೇ ಕ್ರಮಕ್ಕಿಂತ ಹೆಚ್ಚು ಅಪಾಯಕಾರಿಯಾಗಿ ಪರಿಣಮಿಸಬಹುದು.

ದಿನದ ಟ್ವೀಟ್

ಕ್ರೀಡಾ ಸ್ಫೂರ್ತಿ ಮೆರೆಯೋಣ

ವಿನೇಶ್ ಫೋಗಟ್ ಅವರಿಗೆ ಆದ ಹಿನ್ನಡೆಯ ಬಳಿಕ, ಬಲಪಂಥೀಯರು ಯಾರೂ ಅವರನ್ನು ಟ್ರೋಲ್ ಮಾಡಿದ್ದು ನನ್ನ ಗಮನಕ್ಕೆ ಬಂದಿಲ್ಲ. ಭಾರತೀಯರೆಲ್ಲರೂ ದುಃಖ ವ್ಯಕ್ತಪಡಿಸುತ್ತಿದ್ದಾರೆ. ನಿಜವಾದ ರಾಷ್ಟ್ರವಾದಿಗಳು ಮಾಡುವ ಕೆಲಸ ಅದು– ಗೆಲುವು ಮತ್ತು ಸೋಲಿನ ಎರಡೂ ಸಂದರ್ಭಗಳಲ್ಲಿ ನಮ್ಮ ಅಥ್ಲೀಟ್‌ಗಳ ಜೊತೆ ನಿಲ್ಲುವುದು.

ದಿವ್ಯಾ ಗಂಡೋತ್ರ ಟಂಡನ್, ಉದ್ಯಮಿ

ಕಿಡಿನುಡಿ

ಅಲ್ಪಸಂಖ್ಯಾತ ಸಮುದಾಯಗಳು ತೀವ್ರ ಹಿಂಸಾಚಾರ ಮತ್ತು ಕಿರುಕುಳ ಎದುರಿಸುತ್ತಿರುವ ಬಾಂಗ್ಲಾದೇಶದ ಇತ್ತೀಚಿನ ಬೆಳವಣಿಗೆಗಳಿಂದ ಅತೀವ ದುಃಖಕ್ಕೆ ಒಳಗಾಗಿದ್ದೇನೆ ಮತ್ತು ವಿಚಲಿತಳಾಗಿದ್ದೇನೆ. ಈ ನಾಚಿಕೆಗೇಡಿನ ದಾಳಿಗಳು, ನಾವು ಎಲ್ಲೇ ಇದ್ದರೂ ನ್ಯಾಯ ಹಾಗೂ ಮಾನವೀಯತೆಯ ಪರವಾಗಿ ನಿಲ್ಲಬೇಕಾದ ಮಹತ್ವವನ್ನು ನೆನಪಿಸುತ್ತಿವೆ...

ರವೀನಾ ಟಂಡನ್, ಚಿತ್ರನಟಿ

25 ವರ್ಷಗಳ ಹಿಂದೆ

ಭಾನುವಾರ, 8-8-1999

• 'ಚಕ್ರ' ಚಿಹ್ನೆ, ದಳ ಹೆಸರು ಬಳಕೆಗೆ ಆಯೋಗ ನಿಷೇಧ

ನವದೆಹಲಿ, ಆ. 7– ಚುನಾವಣಾ ಆಯೋಗವು ಇಂದು ಜನತಾದಳದ 'ಚಕ್ರ' ಚಿಹ್ನೆಯನ್ನು ಮುಟ್ಟುಗೋಲು ಹಾಕಿಕೊಂಡು, ಎಚ್.ಡಿ. ದೇವೇಗೌಡ ಮತ್ತು ಶರದ್ ಯಾದವ್ ಬಣಗಳೆರಡಕ್ಕೂ ತಾತ್ಕಾಲಿಕವಾಗಿ ರಾಷ್ಟ್ರೀಯ ಪಕ್ಷಗಳ ಸ್ಥಾನಮಾನ ನೀಡಿ ತಾತ್ಕಾಲಿಕ ಆಜ್ಞೆ ಹೊರಡಿಸಿತು.

ಜನತಾದಳವು ಜುಲೈ 20ರಂದು ಇಬ್ಭಾಗವಾದ ಹಿನ್ನೆಲೆಯಲ್ಲಿ, ಎಚ್.ಡಿ. ದೇವೇಗೌಡರ ನೇತೃತ್ವದ ಬಣವು ಸಲ್ಲಿಸಿದ ಅರ್ಜಿಯ ವಿಚಾರಣೆ ನಂತರ ಚುನಾವಣಾ ಆಯೋಗ ಈ ಆಜ್ಞೆ ಹೊರಡಿಸಿತು.

ಈ ಎರಡು ಬಣಗಳು ಬರಲಿರುವ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಜನತಾದಳದ ಹೆಸರನ್ನು ಬಳಸುವುದಕ್ಕೆ ಚುನಾವಣಾ ಆಯೋಗವು ನಿಷೇಧ ಹೇರಿದೆ. ನಾಳೆ ಒಳಗೆ ತಮ್ಮ ಬಣಗಳ ಹೆಸರುಗಳನ್ನು ತಿಳಿಸಲು ಸೂಚಿಸಿದೆ.

• ದಳ ಸಖ್ಯ ತೊರೆದು ಸ್ಥಾನ ಹೊಂದಾಣಿಕೆಗೆ ಬನ್ನಿ: ಬಿಜೆಪಿ

ಬೆಂಗಳೂರು, ಆ. 7 – ಮುಖ್ಯಮಂತ್ರಿ ಜೆ.ಎಚ್. ಪಟೇಲ್ ನೇತೃತ್ವದ ಜನತಾದಳದ ಜತೆ ಲೋಕಶಕ್ತಿಯ ನಾಯಕರು ಕಳೆದ ಎರಡು ವಾರಗಳಿಂದ ನಡೆಸುತ್ತಿರುವ 'ಮಧುಚಂದ್ರ'ಕ್ಕೆ ಇತಿಶ್ರೀ ಹೇಳಿ, ಸ್ಥಾನಗಳ ಹೊಂದಾಣಿಕೆ ಸಂಬಂಧ ಮಾತುಕತೆಗೆ ಬರಬೇಕು ಎಂದು ರಾಜ್ಯ ಬಿಜೆಪಿ ಮನವಿ ಮಾಡಿದೆ.

50 ವರ್ಷಗಳ ಹಿಂದೆ

ಗುರುವಾರ, 8-8-1974

• ಚಿಕ್ಕಬಳ್ಳಾಪುರ: ಗುಂಡು ತಗುಲಿದ್ದ ಇನ್ನೊಬ್ಬನ ಸಾವು

ಬೆಂಗಳೂರು, ಆ. 7 – ಚಿಕ್ಕಬಳ್ಳಾಪುರದ ಮುನಿಸ್ವಾಮಿರಾಜು (17) ಎಂಬ ಇನ್ನೊಬ್ಬ ಯುವಕನು ಸ್ಥಳೀಯ ಆಸ್ಪತ್ರೆಯಲ್ಲಿ ಬೆಳಗಿನ ಜಾವ ಮೃತನಾದುದರಿಂದ, ಚಿಕ್ಕಬಳ್ಳಾಪುರದ ಗೋಲಿಬಾರ್ ಪ್ರಕರಣದಲ್ಲಿ ಮೃತರಾದವರ ಸಂಖ್ಯೆ ಎರಡಕ್ಕೆ ಏರಿತು.

ನಿನ್ನೆ ಅಲ್ಲಿ ನಡೆದ ಗೋಲಿಬಾರ್‌ನಲ್ಲಿ ಗಾಯಗೊಂಡವರಲ್ಲಿ ತೀವ್ರವಾಗಿರುವ ಇನ್ನಿಬ್ಬರನ್ನು ನಗರದ ಆಸ್ಪತ್ರೆಗೆ ಇಂದು ಸೇರಿಸಲಾಯಿತು.

ರಾಗಿ ಹಿಟ್ಟಿನಲ್ಲಿ ತೌಡು ಬೆರೆಸಿ ಮಾರುತ್ತಿದ್ದಾರೆಂಬುದನ್ನು ಪ್ರತಿಭಟಿಸಿ ನಿನ್ನೆ ಅಲ್ಲಿ ನಡೆದ ಪ್ರಕರಣ ಇನ್ನೊಂದು ಜವಳಿ ಅಂಗಡಿಯ ಲೂಟಿಯಲ್ಲಿ ಪರ್ಯವಸಾನಗೊಂಡು ಲಾಠಿ ಪ್ರಯೋಗ, ಗೋಲಿಬಾರನ್ನು ಕಂಡಿತು.

• ಆಕಾಶದ ಬಣ್ಣ ಕಪ್ಪು!

ನವದೆಹಲಿ, ಆ. 7 – 'ಕಾಶ್ಮೀರವು ರಷ್ಯಾಕ್ಕೆ ಸೇರಿದ ಒಂದು ಭಾಗ; ಆಕಾಶದ ಬಣ್ಣ ಕಪ್ಪು'

–ಇವು ಸರ್ಕಾರಿ ರಂಗದಲ್ಲಿ ಪ್ರಕಟವಾಗಿರುವ ಪಠ್ಯಪುಸ್ತಕಗಳಲ್ಲಿ ಮುದ್ರಿತವಾಗಿರುವ ಕೆಲವು ದೋಷಗಳು.

ರಾಜ್ಯಸಭೆಯಲ್ಲಿ ಇಂದು ಪಠ್ಯಪುಸ್ತಕಗಳ ಬೆಲೆ ಏರಿಕೆ ಬಗ್ಗೆ ಗಮನ ಸೆಳೆವ ಸೂಚನೆಯ ಮೇಲೆ ಚರ್ಚೆಯಲ್ಲಿ ಭಾಗವಹಿಸಿದ್ದ ಸ್ವತಂತ್ರ ಪಕ್ಷದ ಸದಸ್ಯ ಲೋಕನಾಥ ಮಿಶ್ರಾ ಇದನ್ನು ತಿಳಿಸಿ, ಈ ದೋಷಗಳಿರುವ ಪಠ್ಯಪುಸ್ತಕ ಮಧ್ಯಪ್ರದೇಶದಲ್ಲಿ ಪ್ರಕಟವಾಗಿದೆ ಎಂದು ವಿವರಿಸಿದರು.

ಇಂದಿನ ಭೂಕುಸಿತಗಳೇ ನಾಳಿನ ಇಂಧನ; ಹಾಕಬೇಕು ಈ ಇಂಗಾಲಚಕ್ರಕ್ಕೆ ದಿಗ್ಬಂಧನ!

ಪಂಚಭೂತಗಳಿಗೇ ಉದ್ದೀಪನ ಮದ್ದು!

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ವಯನಾಡ್‌ನಲ್ಲಿ ಸಂಭವಿಸಿದ ಭೂಕುಸಿತದ ಸಂತ್ರಸ್ತರ ನೆರವಿಗೆ ಧಾವಿಸಿ ಬಂದ ಪಡೆಯನ್ನು ಗಮನಿಸಿದಿರಾ? ದುರ್ಗಮ ಪ್ರದೇಶದಲ್ಲಿ ಬಂದಿಳಿದ ಹೆಲಿಕಾಪ್ಟರ್‌ಗಳು, ಯೋಧರು, ಅವರ ನೆರವಿಗೆ ಬಂದ ಜೆಸಿಬಿಗಳು, ಸೇತುವೆ ಸರಂಜಾಮುಗಳು, ಕ್ರೇನ್‌ಗಳು, ಅವಕ್ಕೆ ಬೇಕಾದ ಡೀಸೆಲ್, ಅವರಿಗೆಲ್ಲ ಕೋಟು, ಗಂಬೂಟು, ಊಟ-ಉಣಿಸು. ಲಕ್ಷಾಂತರ ಸಹಾಯಹಸ್ತ. ದುರಂತದ ಮಧ್ಯೆಯೂ ನಾವೆಲ್ಲ ಮೆಚ್ಚಬೇಕಾದ ನೋಟ.

ಹೋಲಿಕೆಗೆ, ಇತ್ತೀಚೆಗೆ 24.5.24ರಂದು ಪಾಪುವಾ ನ್ಯೂಗಿನಿಯ 'ಎಂಗಾ' ಎಂಬಲ್ಲಿ ಸಂಭವಿಸಿದ ಭೂಕುಸಿತದ ದೃಶ್ಯವನ್ನು ನೋಡಬೇಕು (ಕನ್ನಡದಲ್ಲೇ ಹುಡುಕಿದರೂ ಗೂಗಲ್‌ನಲ್ಲಿ ಸಿಗುತ್ತದೆ). ಅಲ್ಲಿ, ಕಾವ್ಕಾಲಮ್ ಎಂಬ ಊರು ಹೀಗೇ ನಡುರಾತ್ರಿಯೇ ಕೆಸರು, ಬಂಡೆರಾಶಿಗಳ ನಡುವೆ ಭೂಗತವಾಯಿತು. ಮೊದಲ ದಿನ '300 ಜನ ನಾಪತ್ತೆ' ಎಂಬ ವರದಿ ಬಂತು. ಮೂರು ದಿನಗಳ ನಂತರ ಇಡೀ ಹಳ್ಳಿಯ 2,000ಕ್ಕೂ ಹೆಚ್ಚು ಜನ ಸಮಾಧಿ ಎಂದು ತೀರ್ಮಾನಿಸಲಾಯಿತು. ಸಹಾಯಕ್ಕೆ ಧಾವಿಸಿದವರು ಕೈಯಲ್ಲಿ ಉದ್ದನ್ನ ದೊಣ್ಣೆ, ಬಿದಿರು ಬೊಂಬಿನಿಂದ ಆಳೆತ್ತರದ ಬಂಡೆಯನ್ನು ಹೊರಳಿಸಲು ಯತ್ನಿಸುತ್ತಿದ್ದರು. ಕೆಲವರ ಕೈಯಲ್ಲಿ ಸನಿಕೆ. ಅಂತೂ ಐವರು ಗಾಯಾಳುಗಳನ್ನು ಮೇಲೆತ್ತಿದ ಕ್ಷೀಣ ವರದಿ ಬಂತು. ಹೆಚ್ಚಿನ ವಿವರಣೆಗೆ ಮಾಧ್ಯಮಗಳು ಅಷ್ಟೇನೂ ಆಸಕ್ತಿ ತೋರಿಸಲಿಲ್ಲ.

ಇವೆರಡು ದುರಂತಗಳನ್ನು ಹೋಲಿಸಿದಾಗ ಅಭಿವೃದ್ಧಿಯ ರೋಚಕ ಸಾಧ್ಯತೆಗಳ ಕಡೆಗೇ ನಾವು ಒಲವು ತೋರಿಸುತ್ತೇವೆ. ವಿಜ್ಞಾನ ಅದೆಷ್ಟು ಮುಂದುವರಿದಿದೆ ಎಂದರೆ, ಶಿರೂರಿನ ದುರಂತದಲ್ಲಿ ಗಂಗಾವಳಿ ನದಿಯಲ್ಲಿ ನಾಪತ್ತೆಯಾದ ಮಲೆಯಾಳಿ ವ್ಯಕ್ತಿಯನ್ನು ಹುಡುಕಲು ಆಕಾಶದಿಂದಲೇ ಸ್ಕ್ಯಾನ್ ಮಾಡಬಲ್ಲ ರಡಾರನ್ನು ತರಿಸಬೇಕೆಂದು ಕೇರಳದ ಶಾಸಕರೊಬ್ಬರು ಒತ್ತಾಯಿಸಿದ್ದರು. ನಮ್ಮಲ್ಲಿ ಅಂಥ ಸಾಧನಗಳೂ ಇವೆ ಎಂಬುದು ಗೊತ್ತಾಗುವಂತಾಯಿತು. ಅಷ್ಟರಲ್ಲೇ ಮಾಧ್ಯಮದ ಬೆಳಕು ಅತ್ತ ಮಂಡಕ್ಕೂರು, ಚೂರನ್ಮಲೈ ಕಡೆ ಹರಿದಿದ್ದರಿಂದ ಈ ಕಥನ ನೇಪಥ್ಯಕ್ಕೆ ಸರಿಯಿತು. ಈಗ ಹೇಳಿ, ರೋಚಕತೆಯನ್ನೇ ನಮಗೆಲ್ಲ ಉಣ್ಣಿಸುತ್ತ ಈ ವಿಜ್ಞಾನ-ತಂತ್ರಜ್ಞಾನ ನಮ್ಮನ್ನೆಲ್ಲ ಎತ್ತ, ಯಾವ ವೇಗದಲ್ಲಿ ಸಾಗಿಸುತ್ತಿದೆ?

ಸುಧಾರಿತ ದೇಶಗಳು ನೂರಾರು ವರ್ಷಗಳಿಂದ ಭಾರೀ ಪ್ರಮಾಣದಲ್ಲಿ ಕಲ್ಲಿದ್ದಲು, ಪೆಟ್ರೋಲಿಯಂನಂಥ ಪಳೆಯುಳಿಕೆ ಇಂಧನಗಳನ್ನು ಉರಿಸುತ್ತ ಬಂದಿದ್ದೂ ಅಲ್ಲದೆ, ಜಗತ್ತಿಗೆಲ್ಲ ಅದೇ ಬಗೆಯ ಅಭಿವೃದ್ಧಿಯ ಮಾದರಿಯನ್ನು ತೋರಿಸಿದ್ದಕ್ಕೇ ಭೂಮಿಗೆ ಸಂಕಟ ಬಂದಿದೆ ಎಂಬುದು ಈಗ ಸಾಬೀತಾಗಿದೆ. ವಾಯುಮಂಡಲ ಬಿಸಿಯಾಗುತ್ತ, ನೆಲವೂ ಕಾಯುತ್ತ, ಸಮುದ್ರದ ಉಷ್ಣಾಂಶದಲ್ಲೂ ಏರಿಕೆ ಆಗುತ್ತಿದೆ. ಅದರಿಂದಾಗಿಯೇ ಅರಬ್ಬಿ ಸಮುದ್ರದಲ್ಲಿ ವಾಯುಭಾರ ಕುಸಿತ ಉಂಟಾಗಿ, ಪಶ್ಚಿಮಘಟ್ಟಗಳಲ್ಲಿ ಪದೇ ಪದೇ ಮೇಘಸ್ಫೋಟ ಆಗುತ್ತಿದೆ ಎಂತಲೂ ಹವಾಮಾನ ತಜ್ಞರು ಹೇಳುತ್ತಿದ್ದಾರೆ. ಈ ಘಟ್ಟಗಳು ಕೋಟ್ಯಂತರ ವರ್ಷಗಳಿಂದ ಸಮುದ್ರದ ಕಡೆಯಿಂದ ಬರುವ ಬಿರುಗಾಳಿ ಮತ್ತು ಜಡಿಮಳೆಯ ಪೆಟ್ಟು ತಿಂದು ತಿಂದು ಶಿಥಿಲವಾಗಿವೆ. ಈಚಿನ ವರ್ಷಗಳಲ್ಲಿ ತಾಪಮಾನ ಏರಿಕೆಯ ಹೊಸ ಪೆಟ್ಟು ಅದರ ಮೇಲೆ ಬೀಳುತ್ತಿದೆ. ಸಾಲದೆಂಬಂತೆ, ನಾವು ಅತ್ಯಾಧುನಿಕ ಯಂತ್ರಾಯುಧಗಳನ್ನು ಈ ಜರ್ಝರಿತ ಬೆಟ್ಟಗಳ ಕಡೆಗೇ ನುಗ್ಗಿಸುತ್ತಿದ್ದೇವೆ (ಯಂತ್ರಾಯುಧಗಳು ಅಂದರೆ, ಈಗ ವಯನಾಡಿನಲ್ಲಿ ಸಂತ್ರಸ್ತರ ನೆರವಿಗೆ ಬಳಕೆ ಆಗುತ್ತಿವೆಯಲ್ಲ, ಅವೇ!). ಇವೆಲ್ಲವುಗಳಿಂದಾಗಿ ಈಗ ಪಂಚಭೂತಗಳು- ನೀರು, ಭೂಮಿ, ಆಕಾಶ, ಬೆಂಕಿ ಮತ್ತು ಗಾಳಿ ಐದೂ- ಉದ್ದೀಪನ ಮದ್ದನ್ನು (ಸ್ಟೀರಾಯ್ಡ್) ಸೇವಿಸಿದಂತೆ ಪಶ್ಚಿಮಘಟ್ಟಗಳನ್ನು ತಾಡನ ಮಾಡುತ್ತಿವೆ.

ಪಾಪುವಾ ನ್ಯೂಗಿನಿಯ ಪರಿಸ್ಥಿತಿ ಏನು? ಅದೂ ಪಶ್ಚಿಮ ಘಟ್ಟಗಳ ಹಾಗೆ ದಟ್ಟ ಗುಡ್ಡಬೆಟ್ಟಗಳ ದೇಶ. ಈಗಿನ ಅಭಿವೃದ್ಧಿಯ ಅಳತೆಗೋಲಿನ ಪ್ರಕಾರ ತೀರಾ 'ಹಿಂದುಳಿದ' ದೇಶವೂ ಹೌದು. ಕೈಗಾರಿಕೆಗಳು, ದೊಡ್ಡ ನಗರಗಳು ಇಲ್ಲ. ಜನರೂ ನಮ್ಮ ದೇಶದ ಮೂಲ ನಿವಾಸಿಗಳಂತೆಯೇ ಕಾಣುತ್ತಾರೆ. ಸುಮಾರು 35 ಸಾವಿರ ವರ್ಷಗಳ ಹಿಂದೆ ಭಾರತದತ್ತ ಸಾಗಿಬಂದ ಜನಾಂಗದ ಒಂದು ತುಕಡಿಯೇ ಇನ್ನೂ ಪೂರ್ವಕ್ಕೆ ವಲಸೆ ಹೋಗುತ್ತ, ಆಸ್ಟ್ರೇಲಿಯಾವರೆಗೂ ಹೋಗಿ ನೆಲೆಸಿತು. ನಂತರ ಸಮುದ್ರಮಟ್ಟ ಏರಿದ್ದರಿಂದ (ನಮ್ಮಿಂದ ಶ್ರೀಲಂಕಾ ಬೇರ್ಪಟ್ಟ ಹಾಗೆ) ನ್ಯೂಗಿನಿ ಕೂಡ ಆಸ್ಟ್ರೇಲಿಯಾದಿಂದ ಬೇರ್ಪಟ್ಟಿತು. ಸುಧಾರಣೆಯ ಗಾಳಿ ಜೋರಾಗಿ ಬೀಸಿಲ್ಲವಾದ್ದರಿಂದ ಈಗಲೂ ಅಲ್ಲಿ ಹಣದ ವಹಿವಾಟೇ ಕಡಿಮೆ. ತಾವು ಬೆಳೆದುದನ್ನು ತಾವೇ ಹಂಚಿಕೊಂಡು ಬದುಕುತ್ತಿದ್ದಾರೆ. ಹಾಗಿದ್ದರೆ ಅಲ್ಲೇಕೆ ಅಷ್ಟೊಂದು ಭಾರೀ ಭೂಕುಸಿತ ಸಂಭವಿಸಿದೆ?

ಅದು ಜ್ವಾಲಾಮುಖಿ, ಭೂಕಂಪನಗಳ ಪ್ರದೇಶ. ಶಾಂತಸಾಗರದ ಸುತ್ತಲಿನ 'ಬೆಂಕಿಯ ಬಳೆ'ಯಲ್ಲಿ ಸಿಲುಕಿದ ದೇಶಗಳಲ್ಲಿ ಇದೂ ಒಂದು. ಅಷ್ಟೇ ಆಗಿದ್ದರೆ ಚಿಂತೆ ಇರಲಿಲ್ಲ. ನೆಲ ನಡುಗಿ, ತಲೆಯ ಮೇಲಿನ ಸೂರು ಕಳಚಿ ಬಿದ್ದರೂ ಅಷ್ಟೇನೂ ಆಘಾತ ಆಗದಂಥ ಸರಳ ಮನೆಗಳಲ್ಲಿ ಅಲ್ಲಿನವರು ವಾಸಿಸುತ್ತಾರೆ. ಸಮಸ್ಯೆಗೆ ಕಾರಣ ಏನೆಂದರೆ, ಅಲ್ಲಿನ ಶಿಲೆಗಳಲ್ಲಿ ಚಿನ್ನ, ತಾಮ್ರ, ನಿಕ್ಕೆಲ್, ಕೊಬಾಲ್ಟ್ ನಿಕ್ಷೇಪಗಳಿವೆ. ಅವನ್ನೆಲ್ಲ ಎತ್ತಿ ಸಾಗಿಸಲೆಂದು ವಿದೇಶಿ ಕಂಪನಿಗಳು ಅಲ್ಲಿ ಠಿಕಾಣಿ ಹೂಡಿವೆ. ಗಣಿಗಾರಿಕೆಯಿಂದ ಸರ್ಕಾರಕ್ಕೆ ಸಿಗುವ ದುಗ್ಗಾಣಿಯಿಂದಲೇ ಅಷ್ಟಿಷ್ಟು ಭೋಗಸಾಮಗ್ರಿಗಳು ವಿದೇಶಗಳಿಂದ ಬರುತ್ತಿವೆ. ಅಲ್ಲಿನ ಆಳ ಗಣಿಗಳಲ್ಲಿ ಭಾರೀ ಯಂತ್ರೋಪಕರಣಗಳ, ಸ್ಫೋಟಕಗಳ ಭರಾಟೆಯೇ ಭೂಕಂಪನಕ್ಕೆ ಕಾರಣವಾಯಿತೊ ಏನೊ, ಅಂದೂ ಭಾರೀ ಭೂಸ್ಖಲನವಾಗಿ ಇಡೀ ಗುಡ್ಡವೇ ಕುಸಿದಿದೆ. ಚಿನ್ನದ ಗಣಿಗೆ ಹೋಗುವ ಏಕೈಕ ಮಾರ್ಗವೂ ಇದರಿಂದ ಮುಚ್ಚಿಹೋಗಿದೆ ಎಂದೇ ಮಾಧ್ಯಮಗಳಲ್ಲಿ ಅಳಲು ವ್ಯಕ್ತವಾಗಿತ್ತು. ಭೂಮಿಯ ತಾಪಮಾನ ಏರಿಕೆಯೇ ಈ ದುರಂತಕ್ಕೆ ಕಾರಣ ಎಂದು ಪಾಪುವಾ ನ್ಯೂಗಿನಿಯ ಪ್ರಧಾನಿ ಜೇಮ್ಸ್ ಮರಾಪೆ ಹೇಳಿದರು. ಅದನ್ನು ಒಪ್ಪೋಣ. ಏಕೆಂದರೆ, ಅವರು ಪರಿಸರ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವೀಧರ.

ಭೂಮಿಯ ಚರಿತ್ರೆ ಗೊತ್ತಿದ್ದವರಿಗೆ ಒಂದು ವಿಲಕ್ಷಣ ಸತ್ಯ ಅರಿವಾಗಬಹುದು. ಏನೆಂದರೆ, ವಯನಾಡಿನ ಸಂತ್ರಸ್ತರ ನೆರವಿಗೆ ಬಂದ ಯಂತ್ರೋಪಕರಣಗಳು ಲಕ್ಷಗಟ್ಟಲೆ ಲೀಟರ್ ಡೀಸೆಲ್ಲನ್ನು ಸುಡುತ್ತಿವೆಯಲ್ಲ, ಅವೆಲ್ಲವೂ ಬಂದಿದ್ದೇ ಪುರಾತನ ಭೂಕುಸಿತಗಳಿಂದ. ಕೋಟಿಗಟ್ಟಲೆ ವರ್ಷಗಳ ಹಿಂದೆ ದಟ್ಟ ಅರಣ್ಯಗಳು, ಚಿಕ್ಕದೊಡ್ಡ ಡೈನೊಸಾರಸ್‌ಗಳಂಥ ಜೀವಜಂತುಗಳು ಭೂಗತವಾದಾಗ ಅಲ್ಲಿನ ಒತ್ತಡ ಮತ್ತು ಶಾಖಕ್ಕೆ ಸಿಕ್ಕು ಅವು ಪಳೆಯುಳಿಕೆ ಇಂಧನಗಳಾಗುತ್ತವೆ. ಅವನ್ನು ನಾವು ಮೇಲೆತ್ತಿ ಸುಟ್ಟು ಇಂಗಾಲದ ಚಕ್ರವನ್ನು ಜೋರಾಗಿ ತಿರುಗಿಸುತ್ತಿದ್ದೇವೆ. ಇಂದಿನ ಭೂಕುಸಿತಕ್ಕೆ ಸಿಕ್ಕ ನತದೃಷ್ಟ ಜೀವಿಗಳೆಲ್ಲ ಮುಂದೆಂದೋ ಮತ್ತೆ ಇಂಧನ ನಿಕ್ಷೇಪವಾಗುತ್ತವೆ. 1945ರ ನಾಗಾಸಾಕಿಯಲ್ಲಿ ಈ ದಿನ (ಆಗಸ್ಟ್ 8ರಂದು) ಬೀಳಿಸಿದ ಪರಮಾಣು ಬಾಂಬ್‌ಗೆ ಬೇಕಿದ್ದ ಇಂಧನ ಕೂಡ ಭೂಗರ್ಭದಿಂದ ಮೇಲೆತ್ತಿದ್ದೇ ಆಗಿತ್ತು. ಅಂದು ಆಕಾಶಕ್ಕೇರಿದ ದೂಳು, ಹೊಗೆ ಮತ್ತು ಕರಕಲು ಮಸಿ (ಆ ಮಿಶ್ರಣಕ್ಕೆ 'ಏರೋಸೋಲ್' ಎನ್ನುತ್ತಾರೆ) ಈಗಲೂ ಭೂಮಿಯ ತಾಪಮಾನವನ್ನು ಏರಿಸುತ್ತಿದೆ. ಈಗೀಗ ಭಾರತ ದೇಶವನ್ನು 'ಏರೋಸೋಲ್ ಭಂಡಾರ' ಎಂದೇ ಬಣ್ಣಿಸಲಾಗುತ್ತಿದೆ. ನಮ್ಮ ಆಕಾಶದಲ್ಲಿ ಸುತ್ತುತ್ತಿರುವಷ್ಟು ಹೊಗೆ, ಮಸಿ, ಗಣಿಯ ದೂಳುಕಣಗಳ ರಾಶಿ ಬೇರಾವ ದೇಶದಲ್ಲೂ ಇಲ್ಲ. ಅದಕ್ಕೇ ಇಲ್ಲಿ ಬಿರುಗಾಳಿ, ಜಡಿಮಳೆ, ಕಾಡಿನ ಬೆಂಕಿ, ಹಿಮಕುಸಿತ, ಸೇತುವೆಗಳ ಕುಸಿತ, ಭೂಕುಸಿತದ ಘನತಾಂಡವ. ಅತ್ತ ಸಂಸತ್ತಿನಲ್ಲಿ ವಿರಾಜಮಾನರಾದವರಿಗೆ ಇದನ್ನು ಸೂಚ್ಯವಾಗಿ ತಿಳಿಸುವಂತೆ, ಹೊಸ ಭವನದ ಸೂರಿನಿಂದ ಇಷ್ಟೇ ಇಷ್ಟು ಬಿಂದುಗಳು ತೊಟ್ಟಿಕ್ಕಿವೆ. ಸೂಕ್ಷ್ಮಮತಿಗಳಿಗೆ ಅಷ್ಟು ಸಾಕು ತಾನೆ?

ಪಶ್ಚಿಮಘಟ್ಟಗಳ ಹೆದ್ದಾರಿಗಳಗುಂಟ ಸಾಗುತ್ತಿರುವ ಅಭಿವೃದ್ಧಿಯ ದಾಂಗುಡಿ ಏನಿದೆ, ಅದು ಅಲ್ಲಿನ ಸಹಜ ನಿವಾಸಿಗಳ ಅಭಿವೃದ್ಧಿಗೆ ಅಲ್ಲವೇ ಅಲ್ಲ. ಅದೇನಿದ್ದರೂ ಹೊರಗಿನಿಂದ ಬಂದು ಹೋಗುವವರ ವಿಲಾಸಕ್ಕೆ ಅಷ್ಟೆ. ಅಲ್ಲಿನ ಸಹಜ ನಿವಾಸಿಗಳ ಸುಸ್ಥಿರ ಕ್ಷೇಮಾಭಿವೃದ್ಧಿಗೆ ಏನೇನು ಮಾಡಬೇಕು ಎಂಬುದನ್ನು ಗಾಡ್ಗೀಳ್ ಸಮಿತಿಯ ವರದಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಅಲ್ಲಿ ಬುಲ್‌ಡೋಝರ್ ಬಳಕೆಯ ಪ್ರಸ್ತಾಪ ಇಲ್ಲ.

ಚುರುಮುರಿ

'ಮುಡಾ'ನಂಬಿಕೆ!

• ತುರುವೇಕೆರೆ ಪ್ರಸಾದ್

'ಏನ್ರಪ್ಪಾ, ಈ ಕಡಿಯಿಂದ ಪಾದಯಾತ್ರೆ ಒಂಟಿರೋರು, ಆ ಕಡೆಯಿಂದ ಜನಾಂದೋಲನ ಮಾಡ್ತಿರೋರು ರಸ್ತೆನಾಗೇ ಪವಾಡ ಬಯಲು ಕಾರ್ಯಕ್ರಮ ಹಮ್ಮಿಕೊಂಡವ್ರಲ್ಲ' ಎಂದ ಗುದ್ಲಿಂಗ ಹರಟೇಕಟ್ಟೇಲಿ!

'ಪವಾಡ ಎಲ್ಲಲಾ ಐತೆ? ಮಳೆಗೆ ಕೊಡೆ ಹಿಡ್ಕಂಡು, ರಸ್ತೆಬದಿ ಪಕೋಡ ತಿಂದ್ಕಂಡು ಒದ್ದಾಡ್ತಾವ್ರೆ' ಎಂದ ಮಾಲಿಂಗ.

'ಅದೇನೋ ಸರಿ ಬುಡು, ಆದ್ರೆ ನಾಯಕ್ರು ತಮ್ ಉದ್ದೇಶನೇ ಮರ್ತು ಒಬ್ರಿಗೊಬ್ರು ಆಸ್ತಿ ಬಯಲು ಮಾಡ್ತೀವಿ ಅಂತ ಸವಾಲು ಹಾಕ್ತಾವ್ರಲ್ಲ'.

'ಅದ್ ಬಿಡು, ಎಲ್ರಿಗೂ ಗೊತ್ತಿರೋದೇ. ಆಸ್ತಿ ಬಯಲು ಮಾಡ್ತೀವಿ ಅಂತ ಸವಾಲು ಆಕ್ತಾರೆ, ಆಮೇಲೆ ಅವಕಾಶ ಸಿಕ್ರೆ ಅಧಿಕಾರನೇ ಪಾಲ್ ಹಾಕ್ತಾರೆ. ಆದ್ರೆ ಆಸ್ತಿ ಬಯಲು ಮಾಡಕ್ಕೂ ಪವಾಡ ಬಯಲು ಮಾಡಕ್ಕೂ ಏನ್ಲಾ ಸಂಬಂಧ?'

'ರಾಜಕೀಯ ಅಂದ್ರೆ ಪವಾಡಗಳ ಸಂತೆ ಕಣ್ಲಾ. ಆದಾಯದ್ ಮೂಲನೇ ಇಲ್ದೆ ಒಬ್ಬೊಬ್ರ ಆಸ್ತಿನೂ ಐದು ವರ್ಷದಲ್ಲಿ ಐದು ಪಟ್ಟು, ಹತ್ತು ಪಟ್ಟು ಹೆಚ್ಚಾಯ್ತದೆ. ಇದು ಶೂನ್ಯದಿಂದ ಸೃಷ್ಟಿ ಮಾಡೋ ಪವಾಡ ಅಲ್ವೇನ್ಲಾ?'

'ಹ್ಞೂಂ ಕಣ್ಲಾ! ಎಲೆಕ್ಷನ್ ಕಮಿಷನ್ನೋರು ಕಣ್ಣಿಗೆ ಎಣ್ಣೆ ಬುಟ್‌ಕಂಡ್ ಕಾದ್ರೂ 'ರಂ'ಗೋಲಿ ಕೆಳಗೆ ತೂರಿ ಕೋಟಿ ಕೋಟಿ ಚಚ್ಚಾಕ್ತಾರೆ. ಇದು ಒಂಥರಾ ಮಾಯಾಸೃಷ್ಟಿ' ಎಂದ ಕಲ್ಲೇಶಿ.

'ಇನ್ನು ರಸ್ತೆ, ಚರಂಡಿ, ಸೇತುವೆಗಳನ್ನ ಮಂಗಮಾಯ ಮಾಡ್ತಾರಲ್ಲ ಅದಂತೂ ದೊಡ್ ಹೌದಿನಿ ಟೆಕ್ನಿಕ್ಕೇ! ಮಾಲೇ ಇಲ್ದೆ ಬಿಲ್ ಆಕ್ಕೋದು, ನಿಗಮದ ದುಡ್ನ ಬ್ಯಾಂಕಿಂದ ಮಂಗಮಾಯ ಮಾಡೋದು, ಬೇನಾಮಿ ಆಸ್ತಿ ಇವೆಲ್ಲಾ ಪವಾಡಗಳೇ ಅಲ್ವೇನ್ಲಾ?'

'ಅಷ್ಟೆಲ್ಲಾ ತಾರಾತಿಗಡಿ ಮಾಡಿನೂ ದೇವಸ್ಥಾನ, ಮಠಗಳ್ನ ಸುತ್ಕಂಡು, ಇದೆಲ್ಲಾ ದೇವರೇ ಕೊಟ್ಟಿದ್ದು ಅಂತ ಜನ್ರನ್ನ ನಂಬುಸ್ತಾವ್ರೆ'.

'ಇದ್ ತಪ್ಪು, ಸರ್ಕಾರ ಮೂಢನಂಬಿಕೆ ವಿರುದ್ಧ ಜಾಗೃತಿ ಮೂಡಿಸ್ಬೇಕು ಕಣ್ಲಾ'.

'ಅಯ್ಯೋ! ಮೂಢನಂಬಿಕೆ ಅಳಿಸೋದಿರ್‍ಲಿ, ಸರ್ಕಾರಕ್ಕೆ ಸದ್ಯ ಮುಡಾದಲ್ಲಿ ಏನೂ ನಡ್ದಿಲ್ಲ ಅಂತ 'ಮುಡಾನಂಬಿಕೆ' ಉಳ್ಸುದ್ರೆ ಸಾಕಾಗಿದೆ' ಎಂದ ಪರ್ಮೇಶಿ. ಹೌದ್ಹೌದು ಎಂದು ಎಲ್ಲಾ ಜೋರಾಗಿ ನಕ್ಕರು.

ಸಂಗತ

ಮಿಡಿವ ಹೃದಯವಿದು 'ದಿವ್ಯ ಔಷಧ'

ವಿಪತ್ತು ಎದುರಾದಾಗ ತೋರುವ ಮಾನವೀಯತೆಯು ಮನುಕುಲದ ಮಾನಸಿಕ ಮತ್ತು ದೈಹಿಕ ವಿಕಾರಗಳಿಗೆ ಒಂದು ದಿವ್ಯ ಔಷಧಿಯ ರೂಪಕವಾಗಿ ನಿಲ್ಲುತ್ತದೆ

• ಡಾ. ಲಕ್ಷ್ಮಣ ವಿ.ಎ.

ಆಗಿನ ಕಾಲದ ಅತ್ಯಂತ ವೈಭವೋಪೇತ ಮತ್ತು ಎಂದಿಗೂ ಮುಳುಗದ ಹಡಗು ಎಂದೇ ಪ್ರಸಿದ್ಧವಾಗಿದ್ದ 'ಟೈಟಾನಿಕ್' ಮುಳುಗುವ ಹೊತ್ತಿನಲ್ಲಿ, ಅದರಲ್ಲಿ ಜಾನ್ ಜಾಕೋಬ್ ಆಸ್ಟರ್ ಎಂಬ ಆಗರ್ಭ ಶ್ರೀಮಂತ ಪ್ರಯಾಣಿಸುತ್ತಿದ್ದರು. ಅವರ ಬ್ಯಾಂಕ್ ಖಾತೆಯಲ್ಲಿ ಟೈಟಾನಿಕ್‌ನಂತಹ ಮೂವತ್ತು ಹಡಗುಗಳನ್ನು ಕೊಳ್ಳುವಷ್ಟು ಸಂಪತ್ತು ಇತ್ತು. ಅಂತಹವರು ತಮ್ಮ ಪಾಲಿನ ಜೀವರಕ್ಷಕ ದೋಣಿಯನ್ನು ಇಬ್ಬರು ಮಕ್ಕಳ ಜೀವ ಉಳಿಸಲು ತ್ಯಾಗ ಮಾಡಿದ್ದರು.

ಇನ್ನೊಬ್ಬ ಕೋಟ್ಯಧಿಪತಿ ಇಸಿಡೋರ್ ಸ್ಟ್ರಾಸ್ ಎಂಬುವರು ಸಹ ಈ ಹಡಗಿನಲ್ಲಿದ್ದರು. ಅವರ ಪತ್ನಿ ಇಡಾ ಸ್ಟ್ರಾಸ್, ಜೀವರಕ್ಷಕ ದೋಣಿಯನ್ನು ಹತ್ತಲು ನಿರಾಕರಿಸಿ, ತಮ್ಮ ಕಂಪನಿಗೆ ಹೊಸದಾಗಿ ನೇಮಕಗೊಂಡಿದ್ದ ಸೇವಕಿ ಎಲೆನ್ ಬರ್ಡ್‌ಗೆ ಆ ಜಾಗವನ್ನು ಬಿಟ್ಟುಕೊಟ್ಟಿದ್ದರು. ಈ ಶ್ರೀಮಂತ ಮಹಿಳೆ ತಮ್ಮ ಜೀವನದ ಕೊನೆಯ ಕ್ಷಣಗಳನ್ನು ಗಂಡನೊಂದಿಗೆ ಕಳೆಯಲು ನಿರ್ಧರಿಸಿದ್ದರು.

ಕೇರಳದ ವಯನಾಡಿನಲ್ಲಿ ಸಂಭವಿಸಿದ ಭೀಕರ ಭೂಕುಸಿತಗಳು ನವಜಾತ ಶಿಶುಗಳನ್ನು ಸಹ ಅನಾಥರನ್ನಾಗಿಸಿದ ಹೃದಯವಿದ್ರಾವಕ ಸುದ್ದಿ ಹಲವಾರು ಮಾನವೀಯ ಹೃದಯಗಳು ಮಿಡಿಯುವಂತೆ ಮಾಡಿದೆ. ಇವರ ಪೈಕಿ, ಅದೇ ರಾಜ್ಯದ ಇಡುಕ್ಕಿ ಸಮೀಪದ ಗ್ರಾಮವೊಂದರ ನಿವಾಸಿಯಾದ ಭಾವನಾ ಎಂಬ ಮಹಿಳೆ, ತಮ್ಮ ಎದೆಹಾಲನ್ನು ಇಂತಹ ಮಕ್ಕಳಿಗೆ ಉಣಿಸಲು ನಿರ್ಧರಿಸಿರುವುದು ಅತ್ಯಂತ ಮನನೀಯವಾದದ್ದು. ಭಾವನಾ ಮತ್ತು ಸಚಿನ್ ಎಂಬ ಈ ದಂಪತಿಗೆ ಎದೆಹಾಲು ಕುಡಿಯುವ ನಾಲ್ಕು ತಿಂಗಳ ಮಗು ಇರುವುದು ಗಮನಾರ್ಹ.

ಕೇರಳದ ಪಲ್ಲಿತೊಟ್ಟಂನ ಸುಬೈದಾ ಎಂಬ ವೃದ್ಧೆಯೊಬ್ಬರು ಬ್ಯಾಂಕಿನ ಬಡ್ಡಿ ಕಟ್ಟುವ ಸಲುವಾಗಿ, ತಮ್ಮ ಬಳಿ ಇದ್ದ ನಾಲ್ಕೂ ಮೇಕೆಗಳನ್ನು ಮಾರಾಟ ಮಾಡಿ ಹತ್ತು ಸಾವಿರ ರೂಪಾಯಿ ತಂದಿಟ್ಟುಕೊಂಡಿದ್ದರು. ಅದನ್ನು ಅವರೀಗ ಮುಖ್ಯಮಂತ್ರಿ ಪರಿಹಾರ ನಿಧಿಗೆ ದೇಣಿಗೆ ನೀಡಿದ್ದಾರೆ. ಅಂದಹಾಗೆ, ಈ ಹಿರಿಯ ಜೀವ ಒಂದು ಹಳ್ಳಿಯಲ್ಲಿ ಚಿಕ್ಕ ಚಹಾ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದೆ.

ಮನುಕುಲದ ಇತಿಹಾಸದಲ್ಲಿ ಕಾಯಿಲೆ, ಯುದ್ಧ, ಸುನಾಮಿ, ಬರ, ನೆರೆ, ಭೂಕಂಪದಂತಹ ಗಂಡಾಂತರಗಳು ಹೊಸವೇನಲ್ಲ. ಕೆಲವು ನೈಸರ್ಗಿಕ ವಿಕೋಪಗಳಿಂದ ಸಂಭವಿಸಿದರೆ, ಇನ್ನು ಕೆಲವು ಸ್ವತಃ ಮನುಷ್ಯನ ವಿಕೃತಿಗಳಿಂದ ಸೃಷ್ಟಿಯಾಗಿರುವಂತಹವು. ಈ ವಿಕೃತಿಯ ಫಲವಾಗಿ ಕುಸಿಯುತ್ತಿರುವ ಬೆಟ್ಟಗಳು, ಮನುಷ್ಯ ಮನುಷ್ಯನ ನಡುವೆ ಬೆಳೆಯುತ್ತಿರುವ ಕಂದಕಗಳು, ಜಾತಿ– ಧರ್ಮದ ಗೋಡೆಗಳು ಮನುಕುಲಕ್ಕೇ ಸವಾಲಾಗಿವೆ. ಎದೆಯ ದನಿಗೆ ಕಿವುಡಾದ ಲೋಕದ ವೃತ್ತಿ ವೈಪರೀತ್ಯಗಳ ನಡುವೆಯೂ ಜಾಕೋಬ್, ಸ್ಟ್ರಾಸ್, ಸುಬೈದಾ, ಭಾವನಾ ಅವರಂತಹ ವ್ಯಕ್ತಿಗಳು ಸಂಕಟದ ಕಾಲದಲ್ಲಿ ಆದರ್ಶದ ಪ್ರತಿಮೆಗಳಂತೆ ಕಾಣುತ್ತಾರೆ. 'ಗೆದ್ದರೆ ಗೆಲ್ಲಬೇಕು ಬಾಹುಬಲಿಯಂತೆ ಬಿಟ್ಟುಕೊಡುವುದರ ಮೂಲಕ' ಎಂಬ ಕವಿ ತಿರುಮಲೇಶರ ಕವಿತೆಯೊಂದರ ಸಾಲಿನಂತೆ, ಮನುಕುಲದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ನಿಲ್ಲುತ್ತಾರೆ.

ಕಾರ್ಗಿಲ್ ಯುದ್ಧದಲ್ಲಿ ಮಡಿದ ಯೋಧರ ಸಹಾಯಾರ್ಥವಾಗಿ ನಮ್ಮ ಕಾಲೇಜಿನ ಪರವಾಗಿ ದೇಣಿಗೆ ಸಂಗ್ರಹಿಸುತ್ತಿದ್ದಾಗ, ಬಾಲಕನೊಬ್ಬ ತನ್ನ ತಂದೆ ಸೈಕಲ್ ಕೊಳ್ಳಲೆಂದು ಕೊಟ್ಟಿದ್ದ ಹಣವನ್ನು ಪರಿಹಾರ ನಿಧಿಗೆ ಅರ್ಪಿಸಿದ್ದನ್ನು ಎಂದಿಗೂ ಮರೆಯಲಾಗದು.

ಭೋಪಾಲ್‌ನ ಮುಸ್ಕಾನ್ ಅಹಿವಾರ ಎಂಬ ಹನ್ನೊಂದು ವರ್ಷದ ಬಾಲಕಿ ತನ್ನ ಹುಟ್ಟುಹಬ್ಬಕ್ಕೆ ಉಡುಗೊರೆಯಾಗಿ ಬಂದಿದ್ದ 560 ರೂಪಾಯಿಯನ್ನು, ಅಜ್ಮೇರ್‌ನ ಭಿಕ್ಷುಕಿಯೊಬ್ಬಳು ತನ್ನ ಇಡೀ ಜೀವಮಾನದ ದುಡಿಮೆಯ ಆರೂವರೆ ಲಕ್ಷ ರೂಪಾಯಿಯನ್ನು, ಸೂರತ್‌ನ ವಜ್ರದ ವ್ಯಾಪಾರಿಯೊಬ್ಬರು ನಿಕ್ಕಿಯಾಗಿದ್ದ ಮಗಳ ಮದುವೆಯನ್ನು ಮುಂದೂಡಿ, ಅದಕ್ಕೆಂದೇ ತೆಗೆದಿರಿಸಿದ್ದ ₹ 11 ಲಕ್ಷವನ್ನು ಪುಲ್ವಾಮ ಹುತಾತ್ಮ ಯೋಧರ ಕುಟುಂಬಗಳ ನೆರವಿಗಾಗಿ ನೀಡಿದ್ದಾರೆ. ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ಅವರು ಮೃತ ಯೋಧರ ಪುತ್ರರನ್ನು ದತ್ತು ಸ್ವೀಕರಿಸಿದ್ದರು. ಇಲ್ಲೆಲ್ಲ ಮಿಡಿದದ್ದು ಇವರೆಲ್ಲರ 'ಮಾತೃಹೃದಯ'.

ವಿಶ್ವ ಆರೋಗ್ಯ ಸಂಸ್ಥೆ ಪ್ರತಿವರ್ಷ ಆಗಸ್ಟ್ ಒಂದರಿಂದ ಏಳನೆಯ ತಾರೀಖಿನವರೆಗೆ 'ವಿಶ್ವ ಸ್ತನ್ಯಪಾನ' ಸಪ್ತಾಹ ಆಚರಿಸಲು ಕೋಟ್ಯಂತರ ರೂಪಾಯಿಯನ್ನು ವಿನಿಯೋಗಿಸುತ್ತದೆ. ಈ ಅಭಿಯಾನವು ಶಿಶುವಿಗೆ ಮಾಡಿಸಬೇಕಾದ ಸ್ತನ್ಯಪಾನದ ಮಹತ್ವವನ್ನು ಜಗತ್ತಿನೆಲ್ಲೆಡೆ ಸಾರುತ್ತದೆ.

ಮಗು ಜನಿಸಿದ ಅರ್ಧ ಗಂಟೆಯಿಂದ ಒಂದು ಗಂಟೆಯೊಳಗೆ ಮೊದಲ ಬಾರಿ ಊಡಿಸುವ ಎದೆಹಾಲಿನಲ್ಲಿ ಇರುವ ಕೊಲಾಸ್ಟ್ರಮ್ (ಹಳದಿ ವರ್ಣದ ಗಟ್ಟಿಹಾಲು) ಮಗುವಿಗೆ ಮೊದಲ ಲಸಿಕೆ ಇದ್ದಂತೆ. ಈ ಕೊಲಾಸ್ಟ್ರಮ್‌ನಲ್ಲಿ ಅತ್ಯಧಿಕ ಪೌಷ್ಟಿಕಾಂಶ ಇರುತ್ತದೆ. ಇದು, ಮಗುವಿನ ರೋಗನಿರೋಧಕ ಶಕ್ತಿಯನ್ನು ವೃದ್ಧಿಸಿ, ಭವಿಷ್ಯದಲ್ಲಿ ಬರಬಹುದಾದ ದೀರ್ಘಕಾಲೀನ ಕಾಯಿಲೆಗಳನ್ನು ತಡೆಗಟ್ಟುತ್ತದೆ.

ಅನಾಥ ಮಕ್ಕಳಿಗೆ ಇದೀಗ ತನ್ನ ಎದೆಹಾಲು ನೀಡಲು ಮುಂದಾಗಿರುವ ಭಾವನಾ ಎಂಬ ತಾಯಿ, ಏಕಕಾಲಕ್ಕೆ ಮನುಕುಲದ ಮಾನಸಿಕ ಮತ್ತು ದೈಹಿಕ ವಿಕಾರಗಳಿಗೆ ಒಂದು ದಿವ್ಯ ಔಷಧಿಯ ರೂಪಕವಾಗಿ ನಿಲ್ಲುತ್ತಾರೆ.

ವಾಚಕರ ವಾಣಿ

ತ್ಯಾಗ, ಬಲಿದಾನದ ಮಹತ್ವ ಅರಿಯದವರು

ಹಿಂದೆ ಪೂರ್ವ ಪಾಕಿಸ್ತಾನ ಎನಿಸಿಕೊಂಡಿದ್ದ ಈಗಿನ ಬಾಂಗ್ಲಾದೇಶವು ಪಾಕಿಸ್ತಾನದಿಂದ ಬೇರ್ಪಡಲು ಮಾಡಿದ ಯುದ್ಧ ನಮ್ಮ ತಲೆಮಾರಿನಲ್ಲೇ ನಡೆದದ್ದು. ಹೀಗಾಗಿ, ಆ ಪ್ರಕ್ರಿಯೆಯಲ್ಲಿ ಆದ ಸಾವು, ನೋವು, ತ್ಯಾಗ, ಬಲಿದಾನ ಎಲ್ಲಾ ನಮ್ಮ ನೆನಪಿನ ಅಂಗಳದಿಂದ ಮರೆಯಾಗಿಲ್ಲ. ಆ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಇದ್ದದ್ದು ಮುಜೀಬುರ್ ರೆಹಮಾನ್ ಅವರ ನಿಸ್ವಾರ್ಥ ಪಾಲುದಾರಿಕೆ. ಅದನ್ನು ಅರಿಯದ ಈಗಿನ ಅಲ್ಲಿಯ ಯುವಕರು ಅವರದಲ್ಲದ ತಪ್ಪಿಗೆ, ಅವರ ಪ್ರತಿಮೆ ಮೇಲೆ ಕುಳಿತು, ಸುತ್ತಿಗೆಯಿಂದ ತಲೆಗೆ, ಮುಖಕ್ಕೆ ಹೊಡೆಯುತ್ತಿದ್ದುದನ್ನು ಟಿ.ವಿ.ಯಲ್ಲಿ ನೋಡಿ ಮನಸ್ಸಿಗೆ ಅತೀವ ಖೇದವಾಯಿತು.

ನಾನಾ ಕಾರಣಗಳಿಂದಾಗಿ ದೇಶದ ಆರ್ಥಿಕತೆ ದಯನೀಯ ಸ್ಥಿತಿಯಲ್ಲಿ ಇರುವಾಗ, ಸಂಬಂಧಪಟ್ಟ ವ್ಯಕ್ತಿಗಳು, ಅಧಿಕಾರಿಗಳು ಸಮಾಲೋಚಿಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಅದುಬಿಟ್ಟು ಸಂಬಂಧವಿಲ್ಲದವರ ಮೇಲೆ ವಿನಾಕಾರಣ ಆಕ್ರೋಶ ಹೊರಹಾಕಿ ಅವರಿಗೆ ಅವಮಾನ ಮಾಡುವುದು ಸರಿಯಲ್ಲ.

ಟಿ.ವಿ.ಬಿ.ರಾಜನ್, ಬೆಂಗಳೂರು

ಹೆಚ್ಚಲಿ ಬಾಂಧವ್ಯ

ಬಾಂಗ್ಲಾದ ಮಧ್ಯಂತರ
ಸರ್ಕಾರದ ನೇತೃತ್ವಕ್ಕೆ
ನೊಬೆಲ್ ಶಾಂತಿ ಪ್ರಶಸ್ತಿ
ಪುರಸ್ಕೃತ ಯೂನಸ್ ಸಮ್ಮತಿ,
ತರಲಿ ಶಾಂತಿ, ನೆಮ್ಮದಿಯ
ಕೊನೆಗಾಣಲಿ ಹಿಂಸೆ, ಅರಾಜಕತೆ
ಹೆಚ್ಚಲಿ ಭಾರತದ ಜೊತೆಗಿನ
ಬಾಂಗ್ಲಾ ಬಾಂಧವ್ಯ.

ಸಿ.ಪಿ.ಸಿದ್ಧಾಶ್ರಮ
ಮೈಸೂರು

ಬಡವಾಯಿತು ಜನಪರ ಹೋರಾಟದ ದನಿ

'ಬರಿಗಾಲ ಗಾಂಧಿ' ಎಂದೇ ಹೆಸರಾಗಿದ್ದ ವಿಜಯಪುರದ ಕಾರ್ಮಿಕ ಧುರೀಣ ಭೀಮಶಿ ಕಲಾದಗಿ, ಪಾದರಕ್ಷೆ ಧರಿಸದೆ ಬರಿಗಾಲಿನಿಂದ ನಡೆಯುವುದನ್ನು ತಮ್ಮ ಹೋರಾಟದ ಅಸ್ತ್ರವನ್ನಾಗಿಸಿಕೊಂಡಿದ್ದರು. ಆಲಮಟ್ಟಿ ಜಲಾಶಯ ಕಾಮಗಾರಿ ಪೂರ್ಣಗೊಳ್ಳುವವರೆಗೆ ಪಾದರಕ್ಷೆ ಧರಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದರು. ಈ ಕಾಮಗಾರಿ ಇನ್ನೂ ಬಾಕಿ ಇರುವುದರಿಂದ ಅವರು ಪಾದರಕ್ಷೆಯನ್ನು ಧರಿಸದೆ, ನಾಡಿನ ತುಂಬ ಬರಿಗಾಲಿನಲ್ಲೇ ಓಡಾಡುತ್ತಿದ್ದರು. ಖಾದಿ ಧೋತರ, ನಿಲುವಂಗಿ ಮತ್ತು ಟೋಪಿ ಧರಿಸುತ್ತಿದ್ದ ಭೀಮಶಿ ಅಪ್ಪಟ ಗಾಂಧಿ ಪ್ರತಿನಿಧಿಯಾಗಿದ್ದರು.

ರಸ್ತೆಬದಿಯಲ್ಲಿ ಬಹಿರ್ದೆಸೆಗೆ ಕುಳಿತಿದ್ದ ಮಹಿಳೆಯರನ್ನು ಲಾಠಿ ಬೀಸಿ ಓಡಿಸಿದ ಪೊಲೀಸ್ ಅಧಿಕಾರಿಯ ಮನೆಗೆ ಆ ಹೆಣ್ಣುಮಕ್ಕಳನ್ನು ಕರೆದುಕೊಂಡು ಹೋಗಿ 'ಪೊಲೀಸಪ್ಪ, ಹೆಣ್ಣುಮಕ್ಕಳು ನಿನ್ನ ಮನೆಯಲ್ಲಿ ಸಂಡಾಸು ಮಾಡಲು ಬಂದಿದ್ದಾರೆ' ಎಂದು ಕೂಗು ಹಾಕಿದ್ದರು.

ವಿಜಯಪುರ ಜಿಲ್ಲೆಯ ಶಿರೂಲ, ಹೊಸೂರ, ಕಣಬೂರು, ಚಿಕ್ಕಲಗಲಿ, ಜಂಬಿಗಿ ಗ್ರಾಮದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಕಾರ್ಮಿಕರ ಪರವಾಗಿ ದೀರ್ಘ ಹೋರಾಟ ನಡೆಸಿ, 119 ಎಕರೆ ಸರ್ಕಾರಿ ಭೂಮಿಯ ಹಕ್ಕುಪತ್ರ ಕೊಡಿಸಿದ್ದರು. ಕೃಷಿ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತರು, ಕೈಗಾರಿಕೆಗಳ ಕಾರ್ಮಿಕರು, ಹಮಾಲರು, ರಸ್ತೆಬದಿ ವ್ಯಾಪಾರಿಗಳು, ದಿನಗೂಲಿ ನೌಕರರು ರಾಜ್ಯದಾದ್ಯಂತ ನಡೆಸಿಕೊಂಡು ಬಂದ ಹೋರಾಟಗಳಲ್ಲಿ ಅವರ ಜನಪರ ಕೂಗು ಕೇಳಿಸುತ್ತಿತ್ತು. ಸೈಕಲ್ ರಿಪೇರಿ ಅವರ ಉಪಜೀವನದ ವೃತ್ತಿಯಾಗಿತ್ತು. ಅವರ ಪತ್ನಿ ಗಂಗಮ್ಮ ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಹಳೆಯ ತಲೆಮಾರಿನ ಸಣ್ಣ ಮನೆಯಲ್ಲಿ ಬದುಕು ಸಾಗಿಸಿದ ಭೀಮಶಿ ಅವರ ಅಗಲಿಕೆಯಿಂದ ಜನಪರ ಹೋರಾಟದ ದನಿ ಬಡವಾಗಿದೆ.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಅನಗತ್ಯ ಸಲಹೆ ನೀಡುವ ಉಸಾಬರಿ ಏಕೆ?

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿಗೆ ಹಂಚಿಕೆ ಮಾಡಿರುವ ನಿವೇಶನಗಳನ್ನು ಮುಡಾ ಹಿಂದಕ್ಕೆ ಪಡೆಯಲಿ' ಎಂದು ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಹೊಸದುರ್ಗ ಶಾಖಾ ಮಠದ ಈಶ್ವರಾನಂದಪುರಿ ಸ್ವಾಮೀಜಿ ಹೇಳಿರುವುದು (ಪ್ರ.ವಾ., ಆ. 6) ಸರಿಯಲ್ಲ. ಲೌಕಿಕ ಜೀವನದಲ್ಲಿ ಆಸಕ್ತಿ ತಾಳದೆ, ದೀಕ್ಷೆ ಪಡೆದು ಭಕ್ತರನ್ನು ಆಧ್ಯಾತ್ಮಿಕತೆಯಲ್ಲಿ ಮುನ್ನಡೆಸುತ್ತ ಜನಸೇವೆ ಮಾಡಲು ತಮ್ಮನ್ನು ಪ್ರಾಮಾಣಿಕವಾಗಿ ಅರ್ಪಿಸಿಕೊಂಡವರು ರಾಜಕೀಯದಲ್ಲಿ ಹಸ್ತಕ್ಷೇಪ ಮಾಡುವುದು ಖಂಡನೀಯ.

ತಮ್ಮ ಧ್ಯೇಯ ಮತ್ತು ನಿಲುವನ್ನು ಆಧ್ಯಾತ್ಮಿಕತೆಯಲ್ಲಿ ಐಕ್ಯಗೊಳಿಸಿ ತಮ್ಮ ಘನತೆ, ಗೌರವವನ್ನು ಕಾಯ್ದುಕೊಳ್ಳುವುದು ಸೂಕ್ತ. ತಾವು ನಿರ್ವಹಿಸುತ್ತಿರುವ ಮಠದಲ್ಲಿ ಭಕ್ತರ ಸೇವೆಗೆ ಸಂಬಂಧಪಟ್ಟ ಸಮಸ್ಯೆಗಳೇನಾದರೂ ಇದ್ದಲ್ಲಿ ಅವುಗಳ ಪರಿಹಾರಕ್ಕಾಗಿ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಬೇಕೇ ವಿನಾ ತಮಗೆ ಸಂಬಂಧವಿಲ್ಲದ ವಿಚಾರಗಳಲ್ಲಿ ಸರ್ಕಾರಕ್ಕೆ ಸಲಹೆ ನೀಡುವುದು ಸ್ವಾಮೀಜಿಗಳ ಕೆಲಸವಲ್ಲ.

ಎಲ್.ಚಿನ್ನಪ್ಪ, ಬೆಂಗಳೂರು

ಎಲ್ಲ ಕಲಾವಿದರಿಗೆ ಸಿಗಲಿ ಸಮಾನ ಗೌರವ

ಇತ್ತೀಚಿನ ದಿನಗಳಲ್ಲಿ ರಾಜಕೀಯ ನಾಯಕರ ಬರುವಿಕೆಗೆ ಅಥವಾ ಸತ್ಯಾಗ್ರಹ, ಧರಣಿಗಳಿಗೆ ಜನಪದ ಕಲಾವಿದರನ್ನು ಕರೆದು ಅವರ ಕಲೆಯನ್ನು ಅವಮಾನಿಸುವಂತಹ ಪ್ರವೃತ್ತಿ ಹೆಚ್ಚುತ್ತಿರುವುದರ ಬಗ್ಗೆ ಗಿರಿಜಾ ವೀರಪ್ಪ ಅವರು ಪ್ರಶ್ನಿಸಿರುವುದು (ವಾ.ವಾ., ಆ. 7) ಸರಿಯಾಗಿದೆ. ಈ ಸಂದರ್ಭದಲ್ಲಿ, ಸಾಹಿತಿ ಶಿವರಾಮ ಕಾರಂತರ ಮಾತುಗಳನ್ನು ಉದ್ಧರಿಸುವುದು ಸೂಕ್ತವೆನಿಸುತ್ತದೆ.

ಕಾರಂತರು ತಮ್ಮನ್ನು ಉಡುಪಿಯ ಉತ್ಸವಕ್ಕೆ ಆಹ್ವಾನಿಸಿದ ಸಂದರ್ಭವನ್ನು ಪ್ರಸ್ತಾಪಿಸುತ್ತಾ, 'ಉಡುಪಿಯ ಉತ್ಸವಕ್ಕೆ ನನ್ನನ್ನು ಕರೆತರುವ ಹೊತ್ತಿನಲ್ಲಿ ನಾನು ಕಂಡ ಒಂದು ನೋಟ ಮಾತ್ರ ಆ ಕ್ಷಣದಲ್ಲೂ ಮತ್ತು ಇಂದಿನ ತನಕವೂ ಒಂದು ನೋವನ್ನು ಉಳಿಸಿದೆ. ಆ ದಿನ ನನ್ನ ಸ್ವಾಗತಕ್ಕೆಂದು ಕಾಲೇಜಿನ ಮಹಾದ್ವಾರದಿಂದ ಸಭಾಂಗಣದ ವೇದಿಕೆಯ ತನಕವೂ ಎರಡು ಸಾಲುಗಳಲ್ಲಿ ಯಕ್ಷಗಾನ ಕಲಾವಿದರನ್ನು ವೇಷಪೂರಿತವಾಗಿ ನಿಲ್ಲಿಸಿದ್ದರು. ಅದನ್ನು ಕಂಡು ನನಗೆ ತೀರಾ ನೋವಾಯಿತು. ಆ ಕಲೆಗಾಗಿ ನಾನು ಸಾಕಷ್ಟು ದುಡಿದಿದ್ದೇನೆ. ಅದು ನನಗಿಂತಲೂ ದೊಡ್ಡದು. ಯಾವುದೇ ಕಲೆಯಾದರೂ ಹಾಗೆಯೇ. ಯಕ್ಷಗಾನ ಕಲಾವಿದರನ್ನು ನನ್ನ ಆಗಮನದ ಕಾಲದಲ್ಲಿ ಆಚೀಚೆ ನಿಲ್ಲಿಸಿದ್ದು ಔಚಿತ್ಯ ಮೀರಿದ್ದು' ಎಂದು ಹೇಳಿದ್ದರು. ಹಾಗಾಗಿ, ಜನಪದ ಕಲಾವಿದರಿರಬಹುದು, ಯಕ್ಷಗಾನ ಕಲಾವಿದರಿರಬಹುದು ಅಥವಾ ಶಿಷ್ಟಕಲೆಯ ಕಲಾವಿದರಿರಬಹುದು- ಈ ಎಲ್ಲ ಕಲಾವಿದರನ್ನೂ ಸಮಾನವಾಗಿ ಗೌರವಿಸುವುದನ್ನು ರೂಢಿಸಿಕೊಳ್ಳಬೇಕಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತೂಕ ಇಳಿಸುವ ಪ್ರಯಾಸ

ಪ್ಯಾರಿಸ್ ಒಲಿಂಪಿಕ್ಸ್‌ನ 50 ಕೆಜಿ ವಿಭಾಗದ ಫ್ರೀಸ್ಟೈಲ್ ಕುಸ್ತಿಯಲ್ಲಿ ಪದಕವನ್ನು ಖಾತ್ರಿಪಡಿಸಿದ್ದ ಭಾರತದ ಕುಸ್ತಿಪಟು ವಿನೇಶ್ ಫೋಗಟ್ ಅವರು ಅನರ್ಹಗೊಂಡಿರುವುದು ಇಡೀ ದೇಶಕ್ಕೆ ಆಘಾತ ಉಂಟು ಮಾಡಿದೆ. ತೂಕಕ್ಕೆ ಸಂಬಂಧಿಸಿದ ನಿಯಮ ಅವರ ಅನರ್ಹತೆಗೆ ಕಾರಣವಾಗಿದೆ. ಟ್ರೋಫಿ, ಪದಕ ತಂದು ದೇಶಕ್ಕೆ ಕೀರ್ತಿ ತರುವ ಕ್ರೀಡಾಪಟುಗಳು ದೇಹದ ತೂಕ ಕಾಯ್ದುಕೊಳ್ಳಲು ಪಡುವ ಕಷ್ಟ ಅಷ್ಟಿಷ್ಟಲ್ಲ...

ಕ್ರೀಡಾಪಟುಗಳ ಸಾಧನೆಯನ್ನು ಅವರು ಸಾಧಿಸುವ ಗೆಲುವುಗಳು, ಪಡೆಯುವ ಟ್ರೋಫಿಗಳು, ಪದಕಗಳಿಂದ ಅಳೆಯಲಾಗುತ್ತದೆ. ಆ ಸಾಧನೆಯ ಹಿಂದೆ ಕಠಿಣ ಪರಿಶ್ರಮ ಇರುತ್ತದೆ. ಅದಕ್ಕಾಗಿ ದೇಹವನ್ನು ಇನ್ನಿಲ್ಲದಂತೆ ದಂಡಿಸಿರುತ್ತಾರೆ. ಕ್ರೀಡೆ ದೈಹಿಕ ಸಾಮರ್ಥ್ಯವನ್ನು ಬಯಸುತ್ತದೆ. ತೂಕವೂ ಬಹಳ ಮುಖ್ಯ. ಅದರಲ್ಲೂ ವಿವಿಧ ತೂಕದ ವಿಭಾಗಗಳಲ್ಲಿ ನಡೆಯುವ ಕುಸ್ತಿ, ಬಾಕ್ಸಿಂಗ್, ವೇಟ್‌ಲಿಫ್ಟಿಂಗ್, ಪವರ್‌ಲಿಫ್ಟಿಂಗ್, ಜೂಡೊ ಕ್ರೀಡೆಗಳಲ್ಲಿ ಕ್ರೀಡಾಳುಗಳ ತೂಕವೇ ಪ್ರಧಾನ. ಒಂದಿನಿತು ವ್ಯತ್ಯಾಸವಾದರೂ, ಕ್ರೀಡಾಳುಗಳು ಬಹುದೊಡ್ಡ ಅವಕಾಶದಿಂದ ವಂಚಿತರಾಗುತ್ತಾರೆ. ಅದಕ್ಕೆ ವಿನೇಶ್ ಫೋಗಟ್ ಅವರೇ ತಾಜಾ ಉದಾಹರಣೆ.

ಸ್ಪರ್ಧೆಗಳ ಸಂದರ್ಭದಲ್ಲಿ ತೂಕ ಕಾಯ್ದುಕೊಳ್ಳಲು ಕ್ರೀಡಾಪಟುಗಳು ಇನ್ನಿಲ್ಲದ ಕಸರತ್ತು ನಡೆಸುತ್ತಾರೆ. ಆಟ ಬೇಡುವಂತೆ ತೂಕ ಇಳಿಸುವುದು, ಗಳಿಸುವುದು ಕ್ರೀಡಾಳುಗಳ ಮುಂದಿರುವ ದೊಡ್ಡ ಸವಾಲು. ವೈದ್ಯರು, ತರಬೇತುದಾರರು, ಪೌಷ್ಟಿಕ ಆಹಾರ ತಜ್ಞರ ತಂಡದ ಮೇಲ್ವಿಚಾರಣೆಯಲ್ಲಿ ತಮ್ಮ ದೇಹದ ತೂಕವನ್ನು ನಿಗದಿತ ಮಟ್ಟಕ್ಕೆ ತರುತ್ತಾರೆ.

'ತೂಕ ಕಾಯ್ದುಕೊಳ್ಳುವುದಕ್ಕಾಗಿ ಎರಡು ದಿನಗಳ ಕಾಲ ನಾನು ಆಹಾರ ಮತ್ತು ನೀರು ಸೇವಿಸಿರಲಿಲ್ಲ. ಇದರಿಂದಾಗಿ ಶಕ್ತಿಯನ್ನು ಕಳೆದುಕೊಂಡಿದ್ದೆ' ಎಂದು ಭಾರತದ ಬಾಕ್ಸರ್ ನಿಖತ್ ಝರೀನ್, ಈ ಒಲಿಂಪಿಕ್ಸ್‌ನಲ್ಲಿ ಸೋತ ಬಳಿಕ ಹೇಳಿದ್ದರು.

'ತೂಕ ಕಡಿಮೆ ಮಾಡಿಕೊಳ್ಳುವ ಪ್ರಯಾಸಕರವಾದ ಪ್ರಕ್ರಿಯೆಯಲ್ಲಿ ತೊಡಗುವ ಕ್ರೀಡಾಪಟುಗಳು ಪದಕಕ್ಕೆ ಅರ್ಹರು' ಎಂದು ಹಿಂದೊಮ್ಮೆ ಕುಸ್ತಿಪಟು ಸಾಕ್ಷಿ ಮಲ್ಲಿಕ್ ತಮಾಷೆಯಾಗಿ ಹೇಳಿದ್ದರು.

ಈ ಎರಡು ಹೇಳಿಕೆಗಳೇ, ಕ್ರೀಡೆಯಲ್ಲಿ ತೂಕ ಎಷ್ಟು ಮುಖ್ಯ. ಅದನ್ನು ಕಾಪಾಡಿಕೊಳ್ಳುವುದು ಎಷ್ಟು ಕಷ್ಟ ಎಂಬುದನ್ನು ವಿವರಿಸುತ್ತವೆ.

ತೂಕ ಇಳಿಸುವ ಪ್ರಕ್ರಿಯೆ ಹೇಗೆ?

ಕ್ರೀಡಾಕೂಟಕ್ಕೂ ಮುನ್ನ ಕ್ರೀಡಾಪಟುಗಳು ನಿಗದಿತ ಅವಧಿಯಲ್ಲಿ ಅತ್ಯಂತ ವ್ಯವಸ್ಥಿತವಾಗಿ ತಮ್ಮ ತೂಕವನ್ನು ಇಳಿಸಿಕೊಳ್ಳುತ್ತಾರೆ. ತಮ್ಮ ದೇಹವನ್ನು ಚೆನ್ನಾಗಿ ಅರಿತಿರುವ ಕ್ರೀಡಾಳುಗಳು ಕ್ರೀಡಾಕೂಟ ಆರಂಭಕ್ಕೂ 10ರಿಂದ 20 ದಿನಗಳ ಮೊದಲು ತೂಕ ಇಳಿಸಿಕೊಳ್ಳಲು ಆರಂಭಿಸುತ್ತಾರೆ. ಉದಾಹರಣೆಗೆ 57 ಕೆ ಜಿ ತೂಕದ ಒಬ್ಬ ಕ್ರೀಡಾಪಟು 53 ಕೆಜಿ ವಿಭಾಗದಲ್ಲಿ ಸ್ಪರ್ಧಿಸಬೇಕಾದರೆ ಸ್ಪರ್ಧೆಯ ಸಂದರ್ಭದಲ್ಲಿ ಆತನ ತೂಕ 53 ಕೆ ಜಿ ಒಳಗಡೆ ಇರಬೇಕು.

ಒಲಿಂಪಿಕ್ಸ್, ಕಾಮನ್‌ವೆಲ್ತ್ ಗೇಮ್ಸ್, ಏಷ್ಯನ್ ಗೇಮ್ಸ್‌ನಂತಹ ಪ್ರಮುಖ ಕ್ರೀಡಾಕೂಟಗಳ ಸಂದರ್ಭದಲ್ಲಿ ಪಂದ್ಯಕ್ಕೂ ಮೊದಲು ಹಲವು ಕ್ರೀಡಾಪಟುಗಳು ಆಹಾರವನ್ನೇ ತೆಗೆದುಕೊಳ್ಳುವುದಿಲ್ಲ.

ಪಂದ್ಯದ ದಿನ ಬೆಳಿಗ್ಗೆ ತೂಕ ಪರೀಕ್ಷೆ ಇರುವುದರಿಂದ, ಹಿಂದಿನ ದಿನ ರಾತ್ರಿ ಪೂರ್ತಿ ಕಾರ್ಡಿಯೊ, ಸ್ಕಿಪ್ಪಿಂಗ್, ಓಟ, ಹಬೆ ಸ್ನಾನ ಸೇರಿದಂತೆ, ದೇಹದಲ್ಲಿನ ನೀರಿನ ಅಂಶವನ್ನು ಗರಿಷ್ಠಪ್ರಮಾಣದಲ್ಲಿ ಹೊರಹಾಕಲು ವಿವಿಧ ರೀತಿಯ ವ್ಯಾಯಾಮದಲ್ಲಿ ತೊಡಗುತ್ತಾರೆ. ಕೆಲವು ಸ್ಪರ್ಧಿಗಳು ನೀರು, ಆಹಾರ ಸೇವಿಸುವುದಿಲ್ಲ. ತೂಕ ಪರೀಕ್ಷೆಯ ನಂತರ ಪಂದ್ಯ ಇರುವುದರಿಂದ ಶಕ್ತಿಗಾಗಿ ಕಾರ್ಬೊಹೈಡ್ರೇಟ್, ಪ್ರೋಟೀನ್‌ಯುಕ್ತ ಆಹಾರ (ಬಹುಪಾಲು ದ್ರವ ಆಹಾರ) ಸೇವಿಸುತ್ತಾರೆ. ಆರಂಭಿಕ ಸುತ್ತುಗಳಲ್ಲಿ ಗೆದ್ದು ಫೈನಲ್ ಪ್ರವೇಶಿಸಿದರೆ, ಫೈನಲ್ ಪಂದ್ಯದ ದಿನ ಬೆಳಿಗ್ಗೆ ನಡೆಯುವ ತೂಕ ಪರೀಕ್ಷೆಗೆ ಮತ್ತೆ ತಮ್ಮ ದೇಹವನ್ನು ಸಜ್ಜುಗೊಳಿಸಬೇಕಾಗುತ್ತದೆ.

ಯುಡಬ್ಲ್ಯುಡಬ್ಲ್ಯು ಆರ್ಟಿಕಲ್–11 ನಿಯಮ ಹೇಳುವುದೇನು?

- ಕುಸ್ತಿ ಪಂದ್ಯದ ದಿನ ಬೆಳಿಗ್ಗೆ ಕುಸ್ತಿಪಟುಗಳ ತೂಕ ಪರೀಕ್ಷೆ ಮಾಡಲಾಗುತ್ತದೆ. ತೂಕ ಮಾಡುವ ಪ್ರಕ್ರಿಯೆ 30 ನಿಮಿಷಗಳ ಕಾಲ ನಡೆಯುತ್ತದೆ
- ಎರಡನೇ ದಿನ ಬೆಳಿಗ್ಗೆ ಫೈನಲ್ ಮತ್ತು ರೆಪೆಷಾಜ್‌ನಲ್ಲಿ ಹೋರಾಡುವ ಕುಸ್ತಿಪಟುಗಳ ತೂಕವನ್ನು ಅಳೆಯಲಾಗುತ್ತದೆ. ಇದು 15 ನಿಮಿಷಗಳ ಕಾಲ ನಡೆಯುತ್ತದೆ
- ಪರೀಕ್ಷೆ ವೇಳೆಯಲ್ಲಿ ಕುಸ್ತಿಪಟುಗಳು ಪರಿಪೂರ್ಣ ದೈಹಿಕ ಸಾಮರ್ಥ್ಯ ಹೊಂದಿರಬೇಕು. ಉಗುರುಗಳನ್ನು ಅತ್ಯಂತ ಚಿಕ್ಕದಾಗಿ ಕತ್ತರಿಸಿರಬೇಕು
- ಒಂದು ವೇಳೆ ಸ್ಪರ್ಧಿಯು ಮೊದಲ ಮತ್ತು ಎರಡನೇ ತೂಕ ಪರೀಕ್ಷೆಯಲ್ಲಿ ಪಾಲ್ಗೊಳ್ಳದಿದ್ದರೆ ಅಥವಾ ಅದರಲ್ಲಿ ವಿಫಲವಾದರೆ ಸ್ಪರ್ಧೆಯಿಂದ ಅನರ್ಹಗೊಳ್ಳುತ್ತಾರೆ ಮತ್ತು ಪಟ್ಟಿಯಲ್ಲಿ ರ‍್ಯಾಂಕ್ ರಹಿತವಾಗಿ ಕೊನೆಯ ಸ್ಥಾನ ನೀಡಲಾಗುತ್ತದೆ

ಅನರ್ಹತೆ ಸಾಮಾನ್ಯ

ಕುಸ್ತಿಯ ರೀತಿಯಲ್ಲಿಯೇ ಬಾಕ್ಸಿಂಗ್, ವೇಟ್‌ಲಿಫ್ಟಿಂಗ್, ಪವರ್‌ಲಿಫ್ಟಿಂಗ್, ಜೂಡೊ ಕ್ರೀಡೆಗಳಲ್ಲಿ ತೂಕದ ನಿಯಮ ಜಾರಿಯಲ್ಲಿದೆ. ಪಂದ್ಯಕ್ಕೂ ಮುನ್ನ ಕ್ರೀಡಾಪಟುಗಳ ತೂಕವು ಅವರು ಸ್ಪರ್ಧಿಸುವ ನಿಗದಿತ ತೂಕ ವಿಭಾಗಕ್ಕೆ ತಕ್ಕಂತೆ ಇರಬೇಕು. ಇಲ್ಲದಿದ್ದರೆ ಅನರ್ಹಗೊಳ್ಳುತ್ತಾರೆ. ಕ್ರೀಡಾಕೂಟಗಳಲ್ಲಿ ತೂಕದ ಕಾರಣಕ್ಕೆ ಸ್ಪರ್ಧಿಗಳು ಅನರ್ಹಗೊಳ್ಳುವ ಪ್ರಕರಣ ನಡೆಯುತ್ತಿರುತ್ತದೆ.

ಒಲಿಂಪಿಕ್ಸ್‌ನ ಕೆಲವು ಉದಾಹರಣೆಗಳು ಇಂತಿವೆ...

ವಿನೇಶ್ ಫೋಗಟ್: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಈಗ ಅನರ್ಹರಾದ ವಿನೇಶ್ ಫೋಗಟ್ ಅವರೇ 2016ರ ರಿಯೊ ಒಲಿಂಪಿಕ್ಸ್‌ಗೂ ಮೊದಲು ನಡೆದ ಏಷ್ಯನ್ ಕ್ವಾಲಿಫೈರ್ಸ್‌ನಲ್ಲಿ 48 ಕೆಜಿ ವಿಭಾಗದಲ್ಲಿ ತೂಕ ಜಾಸ್ತಿ ಇದ್ದ ಕಾರಣಕ್ಕೆ ಅನರ್ಹಗೊಂಡಿದ್ದರು.

ಇಮಾನ್ಯುಲಾ ಲುಝಿ: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮಂಗಳವಾರ ನಡೆದ ಕುಸ್ತಿಯಲ್ಲಿ ಇಟಲಿಯ ಸ್ಪರ್ಧಿಯಾಗಿದ್ದ, 24 ವರ್ಷದ ಇಮಾನ್ಯುಲಾ ಲುಝಿ ಅವರು 50 ಕೆಜಿ ವಿಭಾಗ ಫ್ರೀಸ್ಟೈಲ್‌ನಲ್ಲಿ ನಿಗದಿಗಿಂತ ಹೆಚ್ಚು ತೂಕ ಇದ್ದ ಕಾರಣಕ್ಕೆ ಪ್ರಾಥಮಿಕ ಬೌಟ್‌ನಿಂದ ಅನರ್ಹಗೊಂಡಿದ್ದರು.

ಮೆಸೌದ್ ರಿಡೌನ್ ಡ್ರಿಸ್: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಜುಲೈ 29ರಂದು ಜೂಡೊ ಪಂದ್ಯದಲ್ಲಿ ಅಲ್ಜೀರಿಯಾದ ಮೆಸೌದ್ ರಿಡೌನ್ ಡ್ರಿಸ್ ಅವರು ಇಸ್ರೇಲ್‌ನ ತೊಹರ್ ಬಟ್ಬುಲ್ ಅವರನ್ನು ಎದುರಿಸಬೇಕಿತ್ತು. ತೂಕ ಪರೀಕ್ಷೆಯಲ್ಲಿ 400 ಗ್ರಾಂ ತೂಕ ಹೆಚ್ಚಿದ್ದರಿಂದ ಅವರು ಸ್ಪರ್ಧೆಯಿಂದ ಹೊರ ಬಿದ್ದಿದ್ದರು.

ಜೆಡೆನ್ ಕಾಕ್ಸ್: 2016ರ ರಿಯೊ ಒಲಿಂಪಿಕ್ಸ್‌ನ ಕಂಚಿನ ಪದಕ ವಿಜೇತ ಅಮೆರಿಕದ ಜೆಡೆನ್ ಕಾಕ್ಸ್ ಅವರು 2020ರ ಟೋಕಿಯೊ ಒಲಿಂಪಿಕ್ಸ್‌ಗೂ ಮುನ್ನ ಅಮೆರಿಕದಲ್ಲಿ ನಡೆದ ಕುಸ್ತಿ ಟ್ರಯಲ್ಸ್‌ನಲ್ಲಿ ತೂಕ ಜಾಸ್ತಿ ಇದ್ದ ಕಾರಣಕ್ಕೆ 97 ಕೆಜಿ ವಿಭಾಗದಲ್ಲಿ ಸ್ಪರ್ಧಿಸುವ ಅರ್ಹತೆ ಕಳೆದುಕೊಂಡಿದ್ದರು.

ತೂಕಕ್ಕಿಲ್ಲ ರಿಯಾಯಿತಿ

ಆಹ್ವಾನಿತ ಕುಸ್ತಿಗಳಲ್ಲಿ ವಿವಿಧ ತೂಕ ವಿಭಾಗಗಳಲ್ಲಿ ಸ್ಪರ್ಧಿಸುವ ಕುಸ್ತಿಪಟುಗಳು ಹೊಂದಿರಬೇಕಾದ ತೂಕದ ನಿಯಮದಲ್ಲಿ ಯುಡಬ್ಲ್ಯುಡಬ್ಲ್ಯು ಸಡಿಲಿಕೆ ಮಾಡುತ್ತದೆ. 2 ಕೆಜಿಯಷ್ಟು ರಿಯಾಯಿತಿ ನೀಡುತ್ತದೆ. ಆದರೆ ಒಲಿಂಪಿಕ್ಸ್, ವಿಶ್ವ ಚಾಂಪಿಯನ್‌ಶಿಪ್, ಏಷ್ಯನ್ ಚಾಂಪಿಯನ್‌ಶಿಪ್‌ಗಳಲ್ಲಿ ಇದಕ್ಕೆ ಅವಕಾಶ ಇಲ್ಲ.

ಆಧಾರ: ಪಿಟಿಐ, ಯುಡಬ್ಲ್ಯುಡಬ್ಲ್ಯು ನಿಯಮಗಳು, ಎಕ್ಸ್ ಟ್ವೀಟ್‌ಗಳು, ಫೇಸ್‌ಬುಕ್ ಪೋಸ್ಟ್‌ಗಳು

ಸಾಮಾಜಿಕ ಮಾಧ್ಯಮಗಳಲ್ಲಿ 'ಕುತಂತ್ರ'ದ ಚರ್ಚೆ

ವಿನೇಶ್ ಫೋಗಟ್ ಅವರು ತೂಕ ಹೆಚ್ಚಳದ ಕಾರಣಕ್ಕೆ ಒಲಿಂಪಿಕ್ಸ್‌ನಿಂದ ಹೊರಬಿದ್ದ ಕ್ಷಣದಿಂದಲೇ ಅದರ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಲಕ್ಷಾಂತರ ಮಂದಿ ಪೋಸ್ಟ್ ಮಾಡಿ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಿದ್ದಾರೆ. ನಡೆದ ಘಟನೆಯ ಬಗ್ಗೆ ಮತ್ತು ವಿನೇಶ್ ಬಗ್ಗೆ ಫೇಸ್‌ಬುಕ್, 'ಎಕ್ಸ್' ಮುಂತಾದ ವೇದಿಕೆಗಳಲ್ಲಿ ಪರ ಮತ್ತು ವಿರೋಧದ ಚರ್ಚೆ ಬಿರುಸುಗೊಂಡಿತ್ತು.

ಬಹುತೇಕರು ವಿನೇಶ್ ಪರ ಸಹಾನುಭೂತಿ ವ್ಯಕ್ತಪಡಿಸಿ, ಅವರನ್ನು ಹೊಗಳಿದ್ದಾರೆ. ಕೇವಲ 100 ಗ್ರಾಂ ತೂಕ ಹೆಚ್ಚಳ ಎಂಬುದು 'ಒಂದು ಕುತಂತ್ರ' ಎಂದು ಬಹಳ ಮಂದಿ ಅನುಮಾನ ವ್ಯಕ್ತಪಡಿಸಿದ್ದಾರೆ.

ಜತೆಗೆ 'ಪನೌತಿ' ಎನ್ನುವ ಹ್ಯಾಷ್ ಟ್ಯಾಗ್ ಬಳಸಿ ವಿನೇಶ್ ಈ ಹಿಂದೆ ಮೋದಿ ಸರ್ಕಾರದ ವಿರುದ್ಧ ನಡೆಸಿದ್ದ ಹೋರಾಟವನ್ನು ನೆನಪಿಸಿಕೊಳ್ಳುತ್ತಿದ್ದಾರೆ. ಕೆಲವರು ಈ ಬಗ್ಗೆ 'ಕರ್ಮ' ಎಂದು ಪೋಸ್ಟ್ ಮಾಡಿದ್ದು, 'ಅವರು ಮಾಡಿದ ಕರ್ಮದ ಫಲ' ಎಂದು ಚಿತ್ರಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಮತ್ತೆ ಕೆಲವರು ಇದು 'ಕ್ರೂರ ಅಂತ್ಯ' ಎಂದು ಕರೆದರೆ, ಕೆಲವರು 'ನಾವು ನಿಮ್ಮೊಂದಿಗಿದ್ದೇವೆ' ಎಂದು ಬೆಂಬಲ ವ್ಯಕ್ತಪಡಿಸಿದ್ದಾರೆ.

'ಬಾಯ್ಕಾಟ್ ಪ್ಯಾರಿಸ್ ಒಲಿಂಪಿಕ್ಸ್' ಎನ್ನುವ ಹ್ಯಾಷ್ ಟ್ಯಾಗ್ ಬಳಸಿ ಕ್ರೀಡಾಕೂಟ ಬಹಿಷ್ಕರಿಸಲು ಕರೆ ನೀಡಿ ಪೋಸ್ಟ್ ಮಾಡುತ್ತಿದ್ದಾರೆ. ಕೆಲವರು ತಮ್ಮ ಪೋಸ್ಟ್‌ಗಳಲ್ಲಿ ವಿನೇಶ್ ಜತೆ ಪ್ರಧಾನಿ ಮೋದಿ ಚಿತ್ರಗಳನ್ನು ಹಂಚಿಕೊಂಡರೆ, ಮತ್ತೆ ಕೆಲವರು ರಾಹುಲ್ ಗಾಂಧಿ ಚಿತ್ರದೊಂದಿಗೆ ಪೋಸ್ಟ್ ಹಂಚಿಕೊಳ್ಳುತ್ತಿದ್ದಾರೆ. ಈ ವಿಷಯವೇ ಬುಧವಾರ ಜಾಲತಾಣಗಳಲ್ಲಿ ಟ್ರೆಂಡಿಂಗ್‌ನಲ್ಲಿತ್ತು.

ಪ್ರತಿ ಗ್ರಾಂ ಕೂಡ ಮುಖ್ಯ



ವಿನೇಶ್ ಫೋಗಟ್ ಅವರ ಅನರ್ಹತೆಯ ಘಟನೆ ತುಂಬಾ ಆಘಾತ ತಂದಿದೆ. ಒಲಿಂಪಿಕ್ಸ್‌ನಂತಹ ಅತ್ಯುನ್ನತ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆಲ್ಲುವ ಅವಕಾಶಗಳೇ ನಮ್ಮ ದೇಶಕ್ಕೆ ಸಿಕ್ಕಿದ್ದು ಕಡಿಮೆ. ಅಂತಹದರಲ್ಲಿ ಕುಸ್ತಿಯಲ್ಲಿ ಚಿನ್ನ ಗೆಲ್ಲುವ ಶತಮಾನದ ಕನಸು ಕೈಗೂಡುವ ಅವಕಾಶ ಇದಾಗಿತ್ತು. ಈ ರೀತಿ ಕೈತಪ್ಪಿದ್ದು ದುರದೃಷ್ಟಕರ. ಅಂತರರಾಷ್ಟ್ರೀಯ ಒಲಿಂಪಿಕ್ಸ್ ಕೌನ್ಸಿಲ್ ನಿಯಮಗಳು ಯಾವಾಗಲೂ ಕಟ್ಟುನಿಟ್ಟು. ಈ ಹಿಂದೆ ಕೆಲವು ಪ್ರಕರಣಗಳಲ್ಲಿ 20 ಗ್ರಾಂ ತೂಕ ಹೆಚ್ಚಾದಾಗಲೂ ಕುಸ್ತಿಪಟುಗಳು ಅನರ್ಹಗೊಂಡಿದ್ದಾರೆ. ಇಲ್ಲಿ ಯಾರು ಏನೇ ಮಾತನಾಡಲಿ, ಚರ್ಚಿಸಲಿ. ವಿಜ್ಞಾನವೇ ಅಂತಿಮ. ಅನುಭವಿ ಕುಸ್ತಿಪಟುವಾಗಿರುವ ವಿನೇಶ್ ಅವರಿಗೆ ನುರಿತ ಕೋಚ್, ಪರಿಣತ ನೆರವು ಸಿಬ್ಬಂದಿ ಇದ್ದಾರೆ. ಅವರೆಲ್ಲರೂ ಇದಕ್ಕೆ ಬಾಧ್ಯಸ್ಥರು. ಮೊದಲ ದಿನ ಮೂರು ಬೌಟ್‌ಗಳ ನಂತರ ಅವರು ಯಾವ ರೀತಿಯ ಆಹಾರ ತೆಗೆದುಕೊಂಡರು ಎಂಬುದು ಮುಖ್ಯವಾಗುತ್ತದೆ. ರಿಕವರಿ ಟೈಮ್‌ನಲ್ಲಿ ತೂಕ ಹೆಚ್ಚಾಗಿದ್ದರೆ ಇಳಿಸಲು ವೈಜ್ಞಾನಿಕ ಪದ್ಧತಿಗಳಿವೆ. ಇಲ್ಲಿ ಯಾವ ರೀತಿಯ ಕ್ರಮ ಅನುಸರಿಸಿದ್ದಾರೆ ಎಂದು ಗೊತ್ತಿಲ್ಲ. ಚಿನ್ನದ ಪದಕಕ್ಕಾಗಿ ನಡೆಯುವ ಪಂದ್ಯ ಎಂದರೆ ಸಾಮಾನ್ಯವೇ? ಎಷ್ಟು ಜಾಗರೂಕರಾಗಿದ್ದರೂ ಕಡಿಮೆಯೇ. ಅದಕ್ಕಾಗಿಯೇ ಕ್ರೀಡಾಪಟುಗಳು ತಮ್ಮ ಸ್ಪರ್ಧೆಗೂ ಮುನ್ನ ಆಹಾರ, ಪಾನೀಯಗಳ ಕುರಿತು ಸಂಪೂರ್ಣ ತಿಳಿದುಕೊಂಡಿರಬೇಕು. ತೂಕದ ವಿಭಾಗದಲ್ಲಿ ಸ್ಪರ್ಧಿಸುವ ಕ್ರೀಡಾಪಟುಗಳಿಗೆ ಸ್ಪರ್ಧೆಗೂ ಕನಿಷ್ಠ 10 ದಿನ ಮುನ್ನವೇ ತೂಕ ನಿರ್ವಹಣೆಯ ಬಗ್ಗೆ ಜಾಗೃತಿ ಮೂಡಿಸಿರಬೇಕು. ಏಕೆಂದರೆ ದೇಹತೂಕ ಆಧಾರಿತ ಕ್ರೀಡೆಗಳಲ್ಲಿ ಒಂದೊಂದು ಗ್ರಾಂ ಕೂಡ ಮುಖ್ಯ.

ಡಾ. ಕಿರಣ ಕುಲಕರ್ಣಿ, ಕ್ರೀಡಾ ವೈದ್ಯ, ಎಎಫ್‌ಸಿ ಡೋಪಿಂಗ್ ಅಧಿಕಾರಿ

ಸಿನಿ ಬಿಟ್ಸ್

ವಿಕ್ರಂ, ಮಾಳವಿಕ

'ತಂಗಲಾನ್'ನಲ್ಲಿ ಕೆಜಿಎಫ್ ಚಿನ್ನದ ಹುಡುಕಾಟ!

ಪ.ರಂಜಿತ್ ನಿರ್ದೇಶನದಲ್ಲಿ ಚಿಯಾನ್ ವಿಕ್ರಂ ನಟಿಸಿರುವ 'ತಂಗಲಾನ್' ಚಿತ್ರ ಆ.15ರಂದು ತೆರೆ ಕಾಣುತ್ತಿದೆ. ಕೆಜಿಎಫ್‌ನ ಚಿನ್ನದ ಗಣಿ ಸುತ್ತಲಿನ ಬುಡಕಟ್ಟು ಸಮುದಾಯದವರು ಚಿನ್ನವನ್ನು ಹುಡುಕುವ ಕಥೆಯನ್ನು ಚಿತ್ರ ಹೊಂದಿದೆ.

'ಕೆಜಿಎಫ್' ಬರುವುದಕ್ಕಿಂತ ಮುಂಚೆ ಬರೆದ ಕಥೆ. ಕೆಜಿಎಫ್ ಚಿತ್ರ ಪ್ರಾರಂಭವಾದಾಗ ನನ್ನ ಕೆಲಸ ನಿಲ್ಲಿಸಿದೆ. ಆದರೆ ಕೆಜಿಎಫ್‌ನಲ್ಲಿ ಇರುವುದು ಬೇರೆಯದೇ ಕಥೆ ಎಂದು ಚಿತ್ರದ ನೋಡಿದ ಮೇಲೆ ತಿಳಿಯಿತು. ಹಾಗಾಗಿ ಚಿತ್ರವನ್ನು ಮತ್ತೆ ಕೈಗೆತ್ತಿಕೊಂಡೆ. ಕೆಜಿಎಫ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬುಡಕಟ್ಟು ಸಮುದಾಯವದರು ನಡೆದ ಚಿನ್ನದ ಹುಡುಕಾಟ, ಬ್ರಿಟಿಷರ ವಿರುದ್ಧದ ಹೋರಾಟ, ವಸಹಾತುಶಾಹಿತ್ವ ಮೊದಲಾದ ಅಂಶಗಳು ಚಿತ್ರದಲ್ಲಿದೆ' ಎಂದರು ನಿರ್ದೇಶಕ ಪ.ರಂಜಿತ್.

ಮೂಲ ತಮಿಳಿನ ಚಿತ್ರ ಹಲವು ಭಾಷೆಗಳಿಗೆ ಡಬ್ ಆಗಿ ಬಿಡುಗಡೆಗೊಳ್ಳುತ್ತಿದೆ. 'ನನ್ನ ವೃತ್ತಿ ಬದುಕಿನಲ್ಲಿ ಭಿನ್ನವಾದ ಪಾತ್ರಗಳನ್ನು ಆಯ್ದುಕೊಂಡಿದ್ದೇನೆ. ಆದರೆ ಇದು ಎಲ್ಲದಕ್ಕಿಂತ ಭಿನ್ನ. ಚಿತ್ರೀಕರಣ ಬಹಳ ಕಷ್ಟವಾಗಿತ್ತು. ನೈಜ ಲೋಕವನ್ನು ಸೃಷ್ಟಿಸುವ ನಿರ್ದೇಶಕ ಪ.ರಂಜಿತ್ ಜೊತೆ ಕೆಲಸ ಮಾಡುವುದು ಸುಲಭವಲ್ಲ. ಈ ಚಿತ್ರದ ಚಿತ್ರೀಕರಣದ ವೇಳೆ ಹಲವರಿಗೆ ಸಾಕಷ್ಟು ಗಾಯಗಳಾಗಿವೆ. ಚಿತ್ರ ಅವೆಲ್ಲವನ್ನು ಮರೆಸುವ ರೀತಿಯಲ್ಲಿ ಬಂದಿದೆ. ಎಲ್ಲ ಭಾಷೆಗಳಲ್ಲಿ ನಟಿಸಿರುವೆ. ಅದೇ ರೀತಿ ಕನ್ನಡದಲ್ಲಿಯೂ ಚಿತ್ರ ಮಾಡಬೇಕೆಂಬ ಆಸೆಯಿದೆ. 'ಕೆಜಿಎಫ್', 'ಕಾಂತಾರ' ಚಿತ್ರಗಳು ಜಗತ್ತೇ ನಮ್ಮ ಕಡೆಗೆ ತಿರುಗಿ ನೋಡುವಂತೆ ಮಾಡಿವೆ' ಎಂದರು ಚಿಯಾನ್ ವಿಕ್ರಂ.

ಜಿ.ವಿ.ಪ್ರಕಾಶ್ ಸಂಗೀತವಿರುವ ಚಿತ್ರದಲ್ಲಿ ಪಾರ್ವತಿ, ಮಾಳವಿಕ ಮೋಹನನ್ ನಾಯಕಿಯರು. ಎ.ಕಿಶೋರ್ ಕುಮಾರ್ ಛಾಯಾಚಿತ್ರಗ್ರಹಣವಿದೆ.

ತಮಿಳಿನಲ್ಲಿ ಆಶಿಕಾ ಮಿಂಚು

ಸ್ಯಾಂಡಲ್‌ವುಡ್‌ನ 'ಪಟಾಕಿ ಪೋರಿ' ಆಶಿಕಾ ರಂಗನಾಥ್ ಕನ್ನಡ ಸಿನಿಮಾಗಳ ಜೊತೆಗೆ ತೆಲುಗು, ತಮಿಳು ಸಿನಿಮಾಗಳಲ್ಲೂ ತೊಡಗಿಸಿಕೊಂಡಿದ್ದಾರೆ. ತಮಿಳಿನಲ್ಲಿ ನಟ ಸಿದ್ಧಾರ್ಥ್ ಜೊತೆ ತೆರೆಹಂಚಿಕೊಂಡ ಬಳಿಕ ಇದೀಗ ಕಾರ್ತಿ ಜೊತೆ ನಟಿಸಲು ಆಶಿಕಾ ಸಜ್ಜಾಗಿದ್ದಾರೆ.

ಆಶಿಕಾ ಜನ್ಮದಿನದಂದು 'ಸರ್ದಾರ್-2' ಚಿತ್ರತಂಡ ಆಶಿಕಾ ಅವರನ್ನು ನಾಯಕಿಯಾಗಿ ಘೋಷಿಸಿದೆ. ಇದು ಆಶಿಕಾ ಅವರ ಮೂರನೇ ತಮಿಳು ಸಿನಿಮಾ. ಚಿತ್ರವನ್ನು ಪ್ರಿನ್ಸ್ ಪಿಕ್ಚರ್ಸ್ ನಿರ್ಮಾಣ ಮಾಡುತ್ತಿದ್ದು ಪಿಎಸ್ ಮಿತ್ರನ್ ನಿರ್ದೇಶಿಸುತ್ತಿದ್ದಾರೆ. ಮಾಳವಿಕ ಮೋಹನ್, ಎಸ್.ಜೆ.ಸೂರ್ಯ ಚಿತ್ರದ ತಾರಾಬಳಗದಲ್ಲಿದ್ದಾರೆ. ಸಿದ್ಧಾರ್ಥ್ ಜೊತೆ ನಟಿಸಿರುವ 'ಮಿಸ್ ಯು' ಸಿನಿಮಾ ರಿಲೀಸ್‌ಗೆ ಸಜ್ಜಾಗುತ್ತಿರುವಾಗಲೇ ಆಶಿಕಾ ಮತ್ತೊಂದು ತಮಿಳು ಪ್ರಾಜೆಕ್ಟ್ ಒಪ್ಪಿಕೊಂಡಿದ್ದಾರೆ.

ತಮಿಳಿನ ಜೊತೆಗೆ 'ಅಮಿಗೋಸ್' ಸಿನಿಮಾ ಮೂಲಕ ಟಾಲಿವುಡ್‌ಗೆ ಹೆಜ್ಜೆ ಇಟ್ಟಿದ್ದ ಆಶಿಕಾ, ಮೆಗಾಸ್ಟಾರ್ ಚಿರಂಜೀವಿ ನಟನೆಯ 'ವಿಶ್ವಂಭರ' ಚಿತ್ರದಲ್ಲೂ ನಟಿಸುತ್ತಿದ್ದಾರೆ. ಕನ್ನಡದಲ್ಲಿ ಸಿಂಪಲ್ ಸುನಿ ನಿರ್ದೇಶನದ 'ಗತವೈಭವ' ಸಿನಿಮಾ ಬಿಡುಗಡೆಗೂ ಆಶಿಕಾ ಎದುರು ನೋಡುತ್ತಿದ್ದಾರೆ.

ಆಶಿಕಾ ರಂಗನಾಥ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಕಳೆದ ಕೆಲವು ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಒಂದು ಚಿತ್ರವನ್ನು ವ್ಯಾಪಕವಾಗಿ ಹಂಚಿಕೊಳ್ಳಲಾಗುತ್ತಿದೆ. ಅದು ವಯನಾಡ್‌ನ ಭೂಕುಸಿತದ ಚಿತ್ರ ಎಂದು ಪೋಸ್ಟ್ ಮಾಡಲಾಗುತ್ತಿದೆ. ಗಿರಿಶ್ರೇಣಿಯ ನಡುವೆ ಭೂಕುಸಿತ ಉಂಟಾಗಿ, ಕೆಳಭಾಗದಲ್ಲಿದ್ದ ನಗರ ಕೊಚ್ಚಿಕೊಂಡು ಹೋಗಿರುವುದು ಚಿತ್ರದಲ್ಲಿ ಕಾಣುತ್ತದೆ. ಕೆಲವರು ತಮ್ಮ ಪೋಸ್ಟ್‌ನಲ್ಲಿ 'ಇಂದು ವಯನಾಡ್, ನಾಳೆ ತಮಿಳುನಾಡಿನ ನೀಲಗಿರೀಸ್' ಎಂದು ಉಲ್ಲೇಖಿಸಿದ್ದಾರೆ. ಆದರೆ, ಇದು ವಯನಾಡ್‌ನ ಭೂಕುಸಿತದ ಚಿತ್ರ ಅಲ್ಲ.



ಗೂಗಲ್ ಲೆನ್ಸ್ ಮೂಲಕ ಚಿತ್ರವನ್ನು ಪರಿಶೀಲನೆ ನಡೆಸಿದಾಗ, ಆ ಚಿತ್ರವನ್ನು ಹಲವರು ಹಂಚಿಕೊಂಡು ಇದೇ ರೀತಿಯ ಪ್ರತಿಪಾದನೆಗಳನ್ನು ಮಾಡಿರುವುದು ಕಂಡುಬಂತು. ಈ ಬಗ್ಗೆ ಹುಡುಕಾಟ ಮುಂದುವರೆಸಿದಾಗ, ನಾಸಾದಲ್ಲಿ ಫೆಬ್ರುವರಿ 13, 2006ರಲ್ಲಿ ಪ್ರಕಟವಾಗಿದ್ದ ಚಿತ್ರ ಅದು ಎಂದು ತಿಳಿಯಿತು. ಚಿತ್ರದ ಕೆಳಗೆ, 2001ರಲ್ಲಿ ಎಲ್ ಸಾಲ್ವಡಾರ್‌ನ ಸಾಂಟಾ ಟೆಕ್ಲಾ ನಗರದಲ್ಲಿ ಭೂಕುಸಿತ ಉಂಟಾಗಿ ಅನೇಕ ಮನೆಗಳು ಮಣ್ಣಿನ ಅಡಿ ಹೂತುಹೋಗಿವೆ ಎಂದು ಉಲ್ಲೇಖಿಸಲಾಗಿತ್ತು. ಎಲ್ ಸಾಲ್ವಡಾರ್‌ನ ಭೂಕುಸಿತದ ಹಳೆಯ ಚಿತ್ರವನ್ನು ವಯನಾಡ್‌ನ ಚಿತ್ರ ಎಂದು ಈಗ ತಪ್ಪಾಗಿ ಹಂಚಿಕೊಳ್ಳಲಾಗುತ್ತಿದೆ. ಈ ಬಗ್ಗೆ ಪಿಟಿಐ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನಮ್ಮ ದಾರಿಗೆ ಅಡೆತಡೆ ಯಾರು?

ನುಡಿ ಬೆಳಗು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಒಮ್ಮೆ ಒಂದು ದೊಡ್ಡ ಸಂಸ್ಥೆಯಲ್ಲಿ ಬೆಳಿಗ್ಗೆ ಎಲ್ಲರೂ ಕೆಲಸಕ್ಕೆ ಬಂದಾಗ ಸೂಚನಾ ಫಲಕದ ಮೇಲೆ ಹೀಗೆ ಬರೆದಿತ್ತು: 'ನಿಮ್ಮ ಬೆಳವಣಿಗೆಯನ್ನು ತಡೆಯುತ್ತಿದ್ದ ವ್ಯಕ್ತಿ ಇವತ್ತು ಮೃತಪಟ್ಟಿದ್ದಾರೆ. ಅಂತಿಮ ದರ್ಶನಕ್ಕಾಗಿ ಅವರ ಶರೀರವನ್ನು ಮೊದಲನೇ ಮಹಡಿಯ ಸಭಾಂಗಣದಲ್ಲಿ ಇಡಲಾಗಿದೆ'. ಯಾರು ತೀರಿಕೊಂಡಿರಬಹುದು, ಯಾರು ನಮ್ಮ ದಾರಿಯನ್ನು ತಡೆದವರಿರಬಹುದು ಎಂಬ ಕುತೂಹಲದಿಂದ ಎಲ್ಲರೂ ಅವರ ಹೆಸರನ್ನು ತಿಳಿದುಕೊಳ್ಳಲು ಪ್ರಯತ್ನಪಡತೊಡಗಿದರು. ಒಳಹೋಗಿ ನೋಡಿಬಂದವರನ್ನು ಕೇಳುವ ಎಂದರೆ ಹೊರಬರುವವರು ಒಳಹೋಗುವವರನ್ನು ಭೇಟಿಯಾಗದಂತೆ ವ್ಯವಸ್ಥೆ ಮಾಡಲಾಗಿತ್ತು. ಪ್ರತಿಯೊಬ್ಬರೂ ದೇಹವನ್ನು ನೋಡಲು ಹೊರಟರು. ಉದ್ದನೆಯ ಸರದಿ ಸಾಲು. ದೂರದಿಂದ ಹೊರಬರುತ್ತಿರುವವರನ್ನು ನೋಡಿದರೆ ಅವರ ಮುಖ ಸಪ್ಪಗಾಗಿತ್ತು. ಅಲ್ಲಿ ಶ್ರೀಧರ ಎನ್ನುವ ಗುಮಾಸ್ತನಿದ್ದ. ಅವನದ್ದು ಯಾವಾಗಲೂ ಬೇರೆಯವರ ಮೇಲೇ ದೂರು. 'ಸದ್ಯ, ನನ್ನ ದಾರಿಗೆ ಅಡ್ಡ ಬಂದವರು ಯಾರೋ ಹೋದರಲ್ಲ, ಒಳ್ಳೆಯದಾಯಿತು' ಎಂದುಕೊಳ್ಳುತ್ತ ಒಳಹೋದ.

ಒಳಹೋದರೆ ಅಲ್ಲೊಂದು ಶವಪೆಟ್ಟಿಗೆ. ನೋಡಿದರೆ ಅದರೊಳಗೆ ಏನೂ ಇರಲಿಲ್ಲ. ಬದಲಾಗಿ ಒಂದು ಕನ್ನಡಿ ಇತ್ತು. ಶ್ರೀಧರ ಬಗ್ಗಿ ನೋಡಿದಾಗ ಅದರಲ್ಲಿ ಶ್ರೀಧರನ ಪ್ರಗತಿಗೆ ಅಡ್ಡಿಯಾಗಿದ್ದವನ ಬಿಂಬ ಕಾಣಿಸಿತು! ಪಕ್ಕದಲ್ಲೊಂದು ಚೀಟಿ ಇತ್ತು. ಅದರ ಮೇಲೆ 'ನಿಮ್ಮ ಬೆಳವಣಿಗೆಯನ್ನು ತಡೆಯುತ್ತಿರುವ ವ್ಯಕ್ತಿ ಬೇರೆ ಯಾರೂ ಅಲ್ಲ, ನೀವೇ' ಎಂದು ಬರೆದಿತ್ತು.

ನಮ್ಮೆಲ್ಲರಿಗೂ ಒಮ್ಮೆಯಾದರೂ ನಮ್ಮನ್ನು ಕಂಡರೆ ಆಗದವರು ಯಾರೋ ನಮ್ಮ ಬೆಳವಣಿಗೆಯನ್ನು ತಡೆಯುತ್ತಿದ್ದಾರೆ ಎಂಬ ಭಾವನೆ ಸುಳಿದುಹೋಗಿರುತ್ತದೆ. ಅಥವಾ ನಾವು ಅಂದುಕೊಂಡಷ್ಟು ಯಶಸ್ವಿಯಾಗದಿರಲು ಬೇರೆ ಯಾರೋ ಕಾರಣ ಎಂದು ಬಲವಾಗಿಯೇ ನಂಬಿಕೊಂಡಿರುತ್ತೇವೆ. ಕೆಲವರಂತೂ ತಮಗೆ ಮಧ್ಯವಯಸ್ಸು ದಾಟಿದರೂ ತಂದೆತಾಯಿಗಳನ್ನು ದೂಷಿಸುತ್ತಲೇ ಇರುತ್ತಾರೆ. ಆದರೆ ಏನೇ ಅಂದರೂ ನಮ್ಮ ಒಳಮನಸ್ಸಿಗೆ ನಮ್ಮೆಲ್ಲಾ ಕ್ರಿಯೆಗಳಿಗೆ, ಅದರ ಪರಿಣಾಮಗಳಿಗೆ ನಾವೇ ಕಾರಣರೆಂಬ ಸತ್ಯ ಗೊತ್ತಿರುತ್ತದೆ.

ನಮ್ಮ ದೃಢಸಂಕಲ್ಪ, ಮನೋಬಲ ಗಟ್ಟಿಯಾಗಿದ್ದರೆ ಎಲ್ಲ ಅಡೆತಡೆಗಳೂ ಸುನಾಮಿಯೆದುರಿನ ಪುಟ್ಟ ಗುಡಿಸಲಿನಂತೆ! ಮನುಷ್ಯನನ್ನು ಮನುಷ್ಯನಂತೆಯೇ ಪರಿಗಣಿಸದ ಅವಮಾನ ಅನುಭವಿಸಿದ ಅಂಬೇಡ್ಕರ್ ಅವರಿಗೆ ಹೆಜ್ಜೆ ಹೆಜ್ಜೆಗೂ ಅಡೆತಡೆಗಳಿರಲಿಲ್ಲವೇ? ಎಂಟರ ಹರೆಯದಲ್ಲೇ ಪತ್ರಿಕೆ ಹಂಚುತ್ತಿದ್ದ ಅಬ್ದುಲ್ ಕಲಾಂ ಅವರಿಗೆ ಸಮಸ್ಯೆಗಳಿರಲಿಲ್ಲವೇ? ಸಗಣಿ ನೀರನ್ನು ಎರಚಿಸಿಕೊಂಡರೂ ಬಡ ಹೆಣ್ಣುಮಕ್ಕಳಿಗೆ ಪಾಠ ಮಾಡುವುದನ್ನು ಬಿಡದ ಸಾವಿತ್ರಿಬಾಯಿ ಫುಲೆಯವರ ದಾರಿ ಸುಗಮವಾಗಿತ್ತೇ?

ಮನೆಯ, ಕಚೇರಿಯ ವಾತಾವರಣ ಸರಿಯಿಲ್ಲ, ಜನ ಸರಿಯಿಲ್ಲ ಎನ್ನುವ ಬದಲು ನಮ್ಮ ಬಲಹೀನತೆಯನ್ನು ತಿಳಿದುಕೊಳ್ಳುವುದು ಮತ್ತು ಅದು ಹೇಗೆ ನಮ್ಮನ್ನು ಮುಂದುವರೆಯದಂತೆ ತಡೆಯುತ್ತಿದೆ ಎಂಬುದನ್ನು ಅರಿತುಕೊಂಡು ಸರಿಪಡಿಸಿಕೊಳ್ಳುವುದು ಸಾಧನೆಯೆಡೆಗಿನ ಮೊದಲ ಹೆಜ್ಜೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಆಗಸ್ಟ್ 8, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಚತುರ್ಥಿ ಗಂ. 24-37 ನಕ್ಷತ್ರ: ಉತ್ತರಫಲ್ಗುನಿ ಗಂ. 23-34 ಯೋಗ: ಶಿವ ಗಂ. 12-39 ಕರಣ: ವಣಿಜ ಗಂ. 11-20, ಕರ್ಕಾಟಕ ಮಾಸದ 22 ನೇ ದಿನ, ಮಳೆನಕ್ಷತ್ರ: ಆಶ್ಲೇಷ 2.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-21 ಸೂರ್ಯಾಸ್ತ : 06-52
ಮುಸ್ಲಿಂ ದಿನಾಂಕ : 28 ಮೊಹರಮ್
ಅದೃಷ್ಟ ಸಂಖ್ಯೆ : 7, 3

ಮೇಷ: ಉತ್ತಮ ಸಂಸ್ಕೃತಿಯನ್ನು ಪಡೆದಿರುವ ಕೆಲಸ ಕಾರ್ಯಗಳಲ್ಲಿ ಖಂಡಿತ ಜಯ ಸಿಗುವುದು. ಹೆಂಡತಿ ಮಕ್ಕಳೊಂದಿಗೆ ಕೈಗೊಂಡ ಪ್ರವಾಸ ಸುಖದಾಯಕವಾಗಿರುವುದು. ಕೈತಪ್ಪಿದ ಅವಕಾಶಗಳು ಪುನಃ ದೊರೆಯಲಿದೆ.

ವೃಷಭ: ಸಾಂಸಾರಿಕ ಸಮಸ್ಯೆಗಳಿಂದ ವೃತ್ತಿಯಲ್ಲಿ ಬಿಡುವು ಮಾಡಿಕೊಳ್ಳಬೇಕಾದ ಸಂದರ್ಭ ಎದುರಾಗಬಹುದು. ಈ ದಿನದ ಆಗುಹೋಗುಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಸೌಖ್ಯವೆಂದು ಅನಿಸಲಿದೆ.

ಮಿಥುನ: ನಿರುದ್ಯೋಗಿಗಳಿಗೆ ಪ್ರತಿಷ್ಠಿತರ ಪರಿಚಯದಿಂದ ಗೌರವಾನ್ವಿತ ಜಾಗದಲ್ಲಿ ಉದ್ಯೋಗ ಪ್ರಾಪ್ತಿ. ಹವಾ ಬದಲಾವಣೆಗಾಗಿ ಕಿರು ಪ್ರವಾಸದ ಸಾಧ್ಯತೆಗಳಿವೆ. ಲೇವಾದೇವಿ ವ್ಯವಹಾರಗಳಲ್ಲಿ ಜಾಗ್ರತೆ ವಹಿಸಬೇಕಾಗುವುದು

ಕರ್ಕಾಟಕ: ಆರ್ಥಿಕತೆಯಲ್ಲಿ ಅಗೌರವವಾಗುವಂಥ ಸನ್ನಿವೇಶ ಎದುರಾಗಿ ಕೊನೆಯ ಕ್ಷಣದಲ್ಲಿ ಹಣಕಾಸಿನ ಹೊಂದಿಕೆಯಾಗುವುದು. ಮಹಿಳೆಯರಿಗೆ ತವರಿನವರ ಆಗಮನವು ಅತೀವ ಸಂತೋಷಕ್ಕೆ ಕಾರಣವಾಗುವುದು.

ಸಿಂಹ: ಕಾರ್ಯಕ್ಷೇತ್ರದಲ್ಲಿ ಎಚ್ಚರ ವಹಿಸದೆ ಅತಿಯಾದ ವಿಶ್ವಾಸದಿಂದ ಮುಂದುವರಿದರೆ ನಿಮ್ಮ ಮೇಲಧಿಕಾರಿಗಳಿಂದ ಮುಖಭಂಗವಾಗಬಹುದು. ಸಾಂಸಾರಿಕವಾಗಿ ಸುಖ ಹಾಗೂ ನೆಮ್ಮದಿಯುಕ್ತ ಕುಟುಂಬ ನಿಮ್ಮದಾಗುವುದು.

ಕನ್ಯಾ: ಬುದ್ಧಿವಂತಿಕೆ ಹಾಗೂ ಯೋಜನೆಗಳು ನಿಮ್ಮ ವ್ಯವಹಾರ ಸುಲಭಗೊಳಿಸುತ್ತದೆ. ಸ್ನೇಹಿತರಿಂದ ವ್ಯಾಪಾರದಲ್ಲಿ ಉತ್ತಮ ಫಲಿತಾಂಶ ಎದುರು ನೋಡಬಹುದು. ಹಿತಶತ್ರುಗಳ ಪರಾಜಯ ನೋಡಿ ಸಂತಸ.

ತುಲಾ: ಇಂದಿನ ದಿನದ ಪರಿಸ್ಥಿತಿಗಳನ್ನು ನೀವು ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಳ್ಳುವ ಪ್ರಯತ್ನದಲ್ಲಿ ಸಫಲರಾಗುವಿರಿ. ಮನೆ ದೇವರ ಪೂಜೆಯ ಹರಕೆಯ ಫಲವಾಗಿ ಮಗ/ ಮಗಳಿಗೆ ಉದ್ಯೋಗ ದೊರಕುವುದು.

ವೃಶ್ಚಿಕ: ವಾಣಿಜ್ಯೋದ್ಯಮ ಮಂದಿಗೆ ಇಂದು ಹೆಚ್ಚಿನ ಬಂಡವಾಳ ತೊಡಗಿಸಲು ಉತ್ತಮ ದಿನ. ಕೆಲಸಮಾಡುವ ಸ್ಥಳದಲ್ಲಿ ಕೆಲವು ಬದಲಾವಣೆ ಮಾಡುವುದು ಉತ್ತಮ. ಪರೀಕ್ಷಾರ್ಥಿಗಳಿಗೆ ಆತ್ಮವಿಶ್ವಾಸ ವೃದ್ಧಿಯಾಗುವುದು.

ಧನು: ಜನಸಂಪರ್ಕದಲ್ಲಿರುವ ರಾಜಕಾರಣಿಗಳಿಗೆ ಬಹಳ ಕೆಲಸದ ಒತ್ತಡ ಇರುವುದು. ಧ್ಯೇಯವನ್ನು ತಲುಪುವ ಹಾದಿಯಲ್ಲಿ ನಿಮ್ಮ ಬಾಲ್ಯ ಸ್ನೇಹಿತರ ಸಹಕಾರ ದೊರೆಯಲಿದೆ. ಅಧಿಕಾರಿಗಳ ವಿಶ್ವಾಸಗಳಿಸಲು ಪ್ರಯತ್ನಿಸಿ.

ಮಕರ: ಕ್ರಮಿಸಿ ಬಂದ ದಾರಿಯನ್ನು ಅವಲೋಕಿಸಿದಲ್ಲಿ ತಲುಪುಬೇಕೆಂದಿರುವ ಗುರಿ ದೂರವಿಲ್ಲವೆಂಬ ವಿಚಾರದಿಂದ ಉತ್ಸಾಹ ಹೊಂದುವಿರಿ. ನಿಮ್ಮ ಕೆಲಸಗಳನ್ನು ಕಾರ್ಯರೂಪಕ್ಕೆ ತರಲು ಪರಿಶ್ರಮದ ಅಗತ್ಯವಿದೆ.

ಕುಂಭ: ವ್ಯವಹಾರದ ಮೂಲ ವಿಚಾರವನ್ನು ನಿಮ್ಮ ಉತ್ತರಾಧಿಕಾರಿಗಳಿಗೆ ತಿಳಿಸುವ ಮನಸ್ಸಾಗಲಿದೆ. ಕೃಷಿ ಕಾರ್ಯವು ವಿಳಂಬವಾಗದಂತೆ ಕೃಷಿಕರು ಗಮನವಹಿಸಿ. ಭೋಜನ ಆರೋಗ್ಯಕ್ಕೆ ಸ್ವಲ್ಪ ತೊಂದರೆ ತರಬಹುದು.

ಮೀನ: ವಾಹನ ಮಾರಾಟಗಾರರಿಗೆ, ರಿಪೇರಿ ಮಾಡುವವರಿಗೆ ಉದ್ಯೋಗದಲ್ಲಿ ಬಿಡುವಿಲ್ಲ. ನಿಮ್ಮ ವೃತ್ತಿಯಲ್ಲಿ ಸಾಕಷ್ಟು ಸುಸಂದರ್ಭಗಳು ಎದುರಾಗಬಹುದು. ವಿದ್ಯಾರ್ಥಿಗಳಿಗೆ ತಮ್ಮ ಅಧ್ಯಯನದಿಂದ ಲಾಭ ಸಿಗುವುದು.

ಪದಬಂಧ 5766

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದಕ್ಷಿಣ ದಿಕ್ಕು (3)
4.ಅಡಗಿಕೊಳ್ಳಲು ಪ್ರಶಸ್ತವಾದ ಕಾಡು (3)
6.ಪಾರಲೌಕಿಕ ಜ್ಞಾನದ ಕೊನೆಗೆ ಅಕ್ಕನ ಗಂಡನಿದ್ದಾನೆ! (4)
7.ದೀಪವನ್ನು ಹೀಗೂ ಹೇಳುವರು (3)
8.ಉತ್ತರದವರ ನಲ್ಲಿಯಿಲ್ಲಿ ಉಲ್ಟಾ ಆಗಿದೆಯಲ್ಲಾ! (2)
9.ನಾರಿಕೇಳ ಹಿಡಿದಿರುವ ಸ್ತ್ರೀ (2)
12.ಕತ್ತು ಚಾಚಿ ತೋರಿಸಿದ ಶಕ್ತಿ (3)
14.ಕಡೆದ ಮೊಸರು (4)
15.ಮರದ ಹತ್ತಿರ ನಡೆದ ಯುದ್ಧ (3)
16.ವಾರದೊಳಗೆ ಬಂದಿರುವ ಕಪಿ (3)

ಮೇಲಿಂದ ಕೆಳಕ್ಕೆ
2.ಕಸ್ತೂರಿ ಕಂಪಿನ ಭಾಷೆ (3)
3.ಅಜವನ್ನು ಹಿಡಿದಿರುವ ತಮ್ಮ (3)
4.ಎಲ್ಲಾ ಬಗೆಯ ಅಭಿಮಾನವನ್ನು ತಳ್ಳಿಹಾಕಿದವನು (4)
5.ರಾಜ್ಯದ ಶಾಸನಮಂಡಲ (7)
7.ಸೊಡ್ಡಳ ವಚನಾಂಕಿತವುಳ್ಳ ಶರಣ (7)
10.ಚಾಂದ್ರಮಾನ ವರ್ಷದ ಒಂಬತ್ತನೆಯ ತಿಂಗಳು (4)
11.ದಾಯಾದಿ ಮಾಡಿರುವ ಪಾವತಿ (3)
13.ದನಕ್ಕಾಗಿ ನಡೆದ ಕಾಳಗ (3)



5765ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಆಮ್ಲಜನಕ 4.ಸುಲಲಿತ 7.ತಿಪಾ 9.ಗುರಾಣಿ 10.ಕಣ 11.ಅಂಬರಚುಂಬಿ 12.ರವಿ 13.ಕಣಜ 14.ತ್ರಿಹ 16.ಸುರಚಾಪ 18.ರಸಕವಳ

ಮೇಲಿಂದ ಕೆಳಕ್ಕೆ:
1.ರಾಸು 3.ಕಲ್ಯಾಣಿ 5.ಲವಣ 6.ತತಿ 8.ಪಾತರಗಿತ್ತಿ 9.ಗುಲಾಬಿ 11.ಅಂಬುಜ 12.ರಮಚಾ 13.ಕರ್ಜೂರ 15.ಹಸು 17.ಪರ

ಸುಡೊಕು 6151

8			6		2		4	
6		2				8		3
	4		3		9		1	
4		8			5		2	
						4		7
2		5	4				6	
			8		3		9	
7		3				6		5
	8		7		6		3	2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6150 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4

ಲಿಂಗಸುಗೂರು ತಾಲ್ಲೂಕಿನ ತವದ(ಶೀಲಹಳ್ಳಿ)ಗಡ್ಡಿ ಸಂತ್ರಸ್ತರ ಸ್ಥಿತಿ ಶೋಚನೀಯ

ನಡುಗಡ್ಡೆ ಜನರ ನೆರವಿಗೆ ಬಾರದ ಆಡಳಿತ

• ಬಿ.ಎ. ನಂದಿಕೋಲಮಠ

ಲಿಂಗಸುಗೂರು (ರಾಯಚೂರು ಜಿಲ್ಲೆ): ನಾರಾಯಣಪುರ ಅಣೆಕಟ್ಟೆ ನಿರ್ಮಾಣಗೊಂಡು ಕ್ರಸ್ಟ್ ಗೇಟ್‌ಗಳ ಮೂಲಕ ಕೃಷ್ಣಾ ನದಿಗೆ ನೀರು ಹರಿಸುತ್ತಿರುವಾಗಿನಿಂದಲೂ ನಡುಗಡ್ಡೆ ಜನರ ಬದುಕು ಮೂರಾಬಟ್ಟೆಯಾಗಿದೆ. ಪ್ರವಾಹ ಸಂದರ್ಭದಲ್ಲಿ ಬೆಳೆದ ಫಸಲು ಹಾನಿಯಾಗುತ್ತಿದೆ.

ಶೀಲಹಳ್ಳಿ ಸೇತುವೆ ಕೆಳಭಾಗದ ಅನತಿ ದೂರದಲ್ಲಿ ಕೃಷ್ಣಾ ನದಿ ಟಿಸಿಲೊಡೆದು ಹರಿದು ಪುನಃ ಮುಂದೆ ಕೃಷ್ಣಾ ನದಿಗೆ ಒಂದಾಗಿ ಹರಿಯುತ್ತಿದೆ. ಈ ಮಧ್ಯದ ಪ್ರದೇಶ ನಡುಗಡ್ಡೆಯಾಗಿ ಪರಿವರ್ತಿತಗೊಂಡಿದೆ. ಈ ಪ್ರದೇಶವನ್ನು ತವದಗಡ್ಡಿ ಎಂದು ಕರೆಯಲಾಗುತ್ತಿದೆ. ಇಲ್ಲಿ 15ಕ್ಕೂ ಹೆಚ್ಚು ಪರಿಶಿಷ್ಟ ಜಾತಿ (ಮಾದಿಗ) ಕುಟುಂಬದವರು ಜಮೀನು ಹೊಂದಿದ್ದಾರೆ. ಬಹುತೇಕ ಕುಟುಂಬಸ್ಥರು ಸಮೀಪದ ಶೀಲಹಳ್ಳಿ ಗ್ರಾಮದಲ್ಲಿ ಮನೆ ಮಾಡಿಕೊಂಡಿದ್ದಾರೆ.

'ಶೀಲಹಳ್ಳಿ ಗೋನವಾಟ್ಲ ಸಂಪರ್ಕಿಸುವ ರಸ್ತೆ ನಡುಗಡ್ಡೆಗೆ ಅನುಕೂಲಕರವಾಗಿದೆ. ಕೃಷಿ ಚಟುವಟಿಕೆ ನಡೆಸಲು ಈ ರಸ್ತೆ ಬಳಕೆ ಅನಿವಾರ್ಯ. ಪ್ರವಾಹ ಬಂದಾಗ ಮಾತ್ರ ಭಾರಿ ಸಂಕಷ್ಟ ಎದುರಿಸಬೇಕಾಗುತ್ತದೆ. 1.50 ಲಕ್ಷ ಕ್ಯುಸೆಕ್‌ಗಿಂತ ಹೆಚ್ಚು ನೀರು ಹರಿಸಿದಾಗ ಪ್ರವಾಹ ಬಂದರೆ ಜಮೀನುಗಳು ಜಲಾವೃತಗೊಳ್ಳುತ್ತವೆ. ಪ್ರತಿ ವರ್ಷ ಬೆಳೆದ ಫಸಲು ಕೈಗೆ ಸೇರದೆ, ಪರಿಹಾರವೂ ಸಿಗದೆ ಭಾರಿ ಸಂಕಷ್ಟ ಎದುರಿಸುತ್ತಿದ್ದೇವೆ' ಎಂದು ಚಂದಪ್ಪ ಹರಿಜನ ಅಳಲು ತೋಡಿಕೊಂಡರು.

ಪ್ರತಿ ವರ್ಷ ನಾಲ್ಕಾರು ದಿನ ಹೆಚ್ಚಿನ ನೀರು ಕೃಷ್ಣಾ ನದಿಗೆ ಹರಿದು ನಂತರ ಪ್ರವಾಹ ಕಡಿಮೆ ಆಗುತ್ತಿತ್ತು. ಆಗ ಕೃಷಿ ಚಟುವಟಿಕೆ ನಡೆಸುತ್ತಿದ್ದೆವು. ಈ ವರ್ಷ ಹದಿನೈದು ದಿನಗಳಿಂದ ನಿರಂತರವಾಗಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರುಸುತ್ತಿರುವುದರಿಂದ ನಡುಗಡ್ಡೆ ಸಂಪರ್ಕ ಸಾಧ್ಯವಾಗುತ್ತಿಲ್ಲ. ಬೆಳೆ ಜಲಾವೃತಗೊಂಡು ಹಾಳಾಗುತ್ತಿದೆ. ಇನ್ನೊಂದೆಡೆ ಕಸ ಬೆಳೆದು ಬೆಳೆ ರೋಗಕ್ಕೆ ತುತ್ತಾಗುತ್ತಿದೆ. ಹೀಗಿದ್ದರೂ ಆಡಳಿತ ಬಿಡಿಗಾಸು ನೆರವು ನೀಡುತ್ತಿಲ್ಲ ಎಂದು ರೈತರು ದೂರಿದ್ದಾರೆ.

'ಪ್ರವಾಹ ಎಂದಾಕ್ಷಣ ತಾಲ್ಲೂಕು, ಜಿಲ್ಲಾ ಆಡಳಿತ ಮ್ಯಾದರಗಡ್ಡಿ, ಕರಡಕಲಗಡ್ಡಿ, ವಂಕಮ್ಮನಗಡ್ಡಿ ಪ್ರದೇಶಕ್ಕೆ ತೆರಳುತ್ತಾರೆ. ಶೀಲಹಳ್ಳಿ ಮಾರ್ಗದಲ್ಲಿ ತೆರಳುವ ಅಧಿಕಾರಿಗಳು ಸೌಜನ್ಯಕ್ಕೂ ತವದಗಡ್ಡಿ ರೈತರನ್ನು ಸಂಪರ್ಕ ಮಾಡುತ್ತಿಲ್ಲ. ಮಾದಿಗ ಸಮುದಾಯ ಆಗಿದ್ದರಿಂದ ಅಧಿಕಾರಿಗಳು ಕಡೆಗಣಿಸಿದ್ದಾರೆ. ಉಳಿದ ಗಡ್ಡಿಗಳಲ್ಲಿ ಇತರೆ ಪರಿಶಿಷ್ಟ ವರ್ಗದವರು ಇದ್ದುದರಿಂದ ಹೆಚ್ಚಿನ ಪ್ರಾತಿನಿಧ್ಯ ನೀಡಲಾಗುತ್ತಿದೆ' ಎಂದು ಆರೋಪಿಸಿದ್ದಾರೆ.

'ಕೃಷ್ಣಾ ನಡುಗಡ್ಡೆ ಪ್ರದೇಶಗಳಂತೆ ನಮ್ಮ ಬೇಡಿಕೆಗಳಿಲ್ಲ. ಪ್ರವಾಹ ಸಂದರ್ಭದಲ್ಲಿ ನಡುಗಡ್ಡೆ ಸಂಪರ್ಕಿಸುವ ರಸ್ತೆ ಜಲಾವೃತಗೊಳ್ಳುತ್ತದೆ. ಪ್ರವಾಹ ಸಂದರ್ಭದಲ್ಲಿ ಜನ, ಜಾನುವಾರು ತಿರುಗಾಡಲು ಅನುಕೂಲ ಆಗುವಂತಹ ಸಣ್ಣ ಸೇತುವೆ ನಿರ್ಮಿಸಿಕೊಡಲು ಮನವಿ ಮಾಡುತ್ತ ಬಂದಿದ್ದೇವೆ. ದಲಿತರ ಹೆಸರಲ್ಲಿ ಆಡಳಿತ ನಡೆಸುವ ಯಾವೊಂದು ಸರ್ಕಾರವೂ ನಾಲ್ಕು ದಶಕಗಳಿಂದ ನಮ್ಮ ಬೇಡಿಕೆ ಈಡೇರಿಸಿಲ್ಲ' ಎಂದು ಶಿವಪ್ಪ ದೊಡಮನಿ ಆಕ್ರೋಶ ವ್ಯಕ್ತಪಡಿಸಿದರು.

ತಹಶೀಲ್ದಾರ್ ಶಂಶಾಲಂ ನಾಗಡದಿನ್ನಿ ಅವರನ್ನು ಸಂಪರ್ಕಿಸಿದಾಗ, 'ನಡುಗಡ್ಡೆಗಳ ಕುರಿತು ಈಗಾಗಲೇ ಹಲವು ಸುತ್ತಿನ ಮಾಹಿತಿಯನ್ನು ಹಿರಿಯ ಅಧಿಕಾರಿಗಳಿಗೆ ಸಲ್ಲಿಸುತ್ತ ಬಂದಿದ್ದೇವೆ. ತವದಗಡ್ಡಿ ಜನರ ಬೇಡಿಕೆ ಹಾಗೂ ಅಹವಾಲು ಕುರಿತು ಸ್ಪಷ್ಟ ಮಾಹಿತಿ ಇಲ್ಲ. ಪ್ರವಾಹ ಇಳಿದಾಕ್ಷಣ ಕೃಷಿ ಮತ್ತು ಕಂದಾಯ ಇಲಾಖೆ ಜಂಟಿ ಸಮೀಕ್ಷೆ ನಡೆಸಿ ಬೆಳೆ ನಷ್ಟ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು. ಸೇತುವೆ ನಿರ್ಮಾಣ ಕುರಿತು ಚರ್ಚಿಸಲಾಗುವುದು' ಎಂದರು.

ಲಿಂಗಸುಗೂರು ತಾಲ್ಲೂಕಿನ ಶೀಲಹಳ್ಳಿ ಬಳಿಯ ತವದಗಡ್ಡಿ ಸಂತ್ರಸ್ತರು ಪ್ರವಾಹದ ಮಧ್ಯೆಯೇ ಕೃಷಿ ಚಟುವಟಿಕೆಗೆ ತೆರಳಲು ಹರಸಾಹಸಪಟ್ಟರು

ಮುಖ್ಯಾಂಶಗಳು

- ಪ್ರವಾಹ ಮಧ್ಯೆಯೇ ಕೃಷಿ ಚಟುವಟಿಕೆ ನಡೆಸುವ ರೈತರು
- ಪರಿಶಿಷ್ಟ(ಮಾದಿಗ)ರಿಗೆ ಸೌಲಭ್ಯ ಕಲ್ಪಿಸಲು ಮೀನಮೇಷ

ಶೀಲಹಳ್ಳಿ ಬಳಿಯ ತವದಗಡ್ಡಿಗೆ ಶೀಲಹಳ್ಳಿ ಗೋನವಾಟ್ಲ ಸಂಪರ್ಕಿಸುವ ರಸ್ತೆಗೆ ಸಣ್ಣ ಸೇತುವೆ ನಿರ್ಮಿಸಿದರೆ ಅನುಕೂಲ ಆಗಲಿದೆ. ನಮ್ಮ ಗೋಳನ್ನು ಯಾರೂ ಕೇಳುತ್ತಿಲ್ಲ.
ತಿಪ್ಪಣ್ಣ ಹನುಮಪ್ಪ ಹೊಸಮನಿ, ತವದಗಡ್ಡಿ ರೈತ, ಶೀಲಹಳ್ಳಿ

ಗೋನವಾಟ್ಲ ಸೀಮಾಂತರದ ತವದಗಡ್ಡಿಯಲ್ಲಿ ಜಮೀನು ಹೊಂದಿದ್ದೇವೆ. ಈ ವರ್ಷ ಪ್ರವಾಹ ಹೆಚ್ಚಿದ್ದರಿಂದ ಭಾರಿ ಸಂಕಷ್ಟ ಎದುರಿಸುವಂತಾಗಿದೆ.
ಸಿದ್ದಪ್ಪ ಸಣ್ಣಪ್ಪ ಹಳೆಮನಿ, ತವದಗಡ್ಡಿ ರೈತ, ಶೀಲಹಳ್ಳಿ

ಸುದ್ದಿ 2 ನಿಮಿಷ

ರಸ್ತೆಗಳ ಸುರಕ್ಷತೆಗೆ ಮೈಲಿಗೂಲಿಗಳ ನೇಮಕ: ಸತೀಶ ಜಾರಕಿಹೊಳಿ

ಶಿರಹಟ್ಟಿ (ಗದಗ): 'ರಾಜ್ಯದಲ್ಲಿನ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಸುರಕ್ಷತೆಗೆ ಪ್ರತಿ 30 ಕಿ.ಮೀ.ಗೆ ಒಬ್ಬರಂತೆ 1,500 ಮಂದಿ ಮೈಲಿಗೂಲಿಗಳನ್ನು ನೇಮಕ ಮಾಡಲಾಗುವುದು' ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ರಸ್ತೆಯಲ್ಲಿ ನೀರು ನಿಂತರೆ ತಕ್ಷಣ ಹೊರಹಾಕುವುದು, ಗುಂಡಿ ಬಿದ್ದರೆ ಮುಚ್ಚುವುದು, ಒಟ್ಟಾರೆ ಆಗಿಂದ ಆಗ ನಿಗಾ ವಹಿಸುವುದು ಅವರ ಕೆಲಸ. ಇದು ಯಶಸ್ವಿಯಾದರೆ, ಮುಂದಿನ ದಿನಗಳಲ್ಲಿ ಇನ್ನಷ್ಟು ಮೈಲಿಗೂಲಿಗಳನ್ನು ನೇಮಕ ಮಾಡಿಕೊಳ್ಳಲಾಗುವುದು' ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

'ರಾಜ್ಯದಲ್ಲಿ ಅತಿ ಹೆಚ್ಚು ಮಳೆ ಆಗುತ್ತಿರುವ ಕಾರಣ ರಸ್ತೆಗಳು ಹಾಳಾಗಿವೆ. ಮೊದಲ ಹಂತದಲ್ಲಿ ರಸ್ತೆಗಳ ದುರಸ್ತಿಯನ್ನು ಮಾಡಿ, ನಂತರ ಹೊಸ ರಸ್ತೆ ನಿರ್ಮಾಣಕ್ಕೆ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

ಎಂಜಿನಿಯರ್ ಅಳಲು: ಅರ್ಜಿ ಸಲ್ಲಿಸಲು ತಾಕೀತು

ಬೆಂಗಳೂರು: 'ಶಿವಮೊಗ್ಗ ಜಿಲ್ಲೆಯ ಸಾಗರದ ಡಿವೈಎಸ್‌ಪಿ (ಉಪ ಪೊಲೀಸ್ ವರಿಷ್ಠಾಧಿಕಾರಿ) ನನಗೆ ಕಿರುಕುಳ ನೀಡುತ್ತಿದ್ದಾರೆ, ರಕ್ಷಣೆ ಒದಗಿಸಿ' ಎಂದು ಮುಕ್ತ ನ್ಯಾಯಾಲಯದಲ್ಲಿ ಮನವಿ ಮಾಡಿದ್ದ ಕೆಪಿಟಿಸಿಎಲ್‌ನ ಸಹಾಯಕ ಎಂಜಿನಿಯರ್ ಎಂ.ಜಿ.ಶಾಂತಕುಮಾರ ಸ್ವಾಮಿಗೆ ತಮ್ಮ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣದ ಬಗ್ಗೆ ಆಕ್ಷೇಪಣೆ ಇದ್ದರೆ ಅದನ್ನು ಲಿಖಿತ ಅರ್ಜಿ ಮೂಲಕವೇ ಪರಿಹಾರ ಪಡೆಯುವಂತೆ ಹೈಕೋರ್ಟ್ ನಿರ್ದೇಶಿಸಿದೆ.

ಸಾಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಾಂತಕುಮಾರ ಸ್ವಾಮಿ ನಿನ್ನೆಯಷ್ಟೇ (ಆ.6) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ, 'ಪೊಲೀಸರು ನನಗೆ ಕಿರುಕುಳ ನೀಡುತ್ತಿದ್ದಾರೆ' ಎಂದು ಮೌಖಿಕವಾಗಿ ದೂರಿದ್ದರು. ಇದಕ್ಕೆ ನ್ಯಾಯಮೂರ್ತಿಗಳು 'ಈ ಬಗ್ಗೆ ಪರಿಶೀಲಿಸಿ ಬುಧವಾರ (ಆ.7) ಉತ್ತರಿಸಿ' ಎಂದು ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರಿಗೆ ಸೂಚಿಸಿದ್ದರು.

ಇದರನ್ವಯ ಬಿ.ಎನ್.ಜಗದೀಶ್ ಬುಧವಾರ ಶಾಂತಕುಮಾರ ಸ್ವಾಮಿಯ ದೂರಿಗೆ ಸಂಬಂಧಿಸಿದಂತೆ ವಾಸ್ತವಾಂಶ ಏನಿದೆ ಎಂಬುದರ ಕುರಿತಾದ ಕೆಲವು ಡಿಜಿಟಲ್ ರೂಪದಲ್ಲಿನ ದಾಖಲೆಗಳನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಿದರು. ಇದನ್ನು ಸ್ವೀಕರಿಸಿದ ನ್ಯಾಯಪೀಠ, ಖುದ್ದು ಹಾಜರಿದ್ದ ಶಾಂತಕುಮಾರ ಸ್ವಾಮಿಗೆ, 'ನಿಮ್ಮ ಯಾವುದೇ ಅಳಲು ಏನಿದ್ದರೂ ಅದನ್ನು ನಿಮ್ಮ ವಿರುದ್ಧ ಈಗಾಗಲೇ ದಾಖಲಿಸಲಾಗಿರುವ ಕ್ರಿಮಿನಲ್ ದೂರಿಗೆ ಅನುಗುಣವಾಗಿ ಲಿಖಿತ ಅರ್ಜಿ ಮುಖಾಂತರವೇ ಕೋರ್ಟ್‌ಗೆ ಮನವಿ ಸಲ್ಲಿಸಿ' ಎಂದು ತಾಕೀತು ಮಾಡಿತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.32	12,489	7,752
ಹಾರಂಗಿ	2,859	2,856.81	6,085	2,058
ಕಬಿನಿ	2,284.00	2,283.46	7,359	4,079
ಹೇಮಾವತಿ	2,922	2,922	4,283	4,283
ಲಿಂಗನಮಕ್ಕಿ	1,819	1,816	30,345	16,038
ಸೂಪಾ (ಮೀ)	564	558.15	15,065;4	662.90
ಮಾಣಿ	595	588.42	2,343	-
ತುಂಗಭದ್ರಾ	1,633	632.50	67,394	50,302
ಮಲಪ್ರಭಾ	2,079.5	2,076.65	8,359	5,194
ಘಟಪ್ರಭಾ	2175	2,173.10	18,151	10,883
ಭದ್ರಾ	186	180.2	7,801	7,223
ಆಲಮಟ್ಟಿ (ಮೀ)	519.6	517.76	2,95,580	2,02,641
ನಾರಾಯಣಪುರ (ಮೀ)	492.25	490.94	2,05,000	2,00,620

* ನೆಲಮಟ್ಟದಿಂದ

ದ್ವೀಪದಂತಾದ ಜಮೀನು, ಬೆಳೆ ಕಳೆದುಕೊಂಡ ರೈತರು ಕಂಗಾಲು

ಉಕ್ಕಿದ ಹಳ್ಳ; ಕೊಚ್ಚಿಹೋದ ಬೆಳೆ

ಪ್ರಜಾವಾಣಿ ವಾರ್ತೆ

ಚಿಕ್ಕಜಾಜೂರು (ಚಿತ್ರದುರ್ಗ ಜಿಲ್ಲೆ): ಮಂಗಳವಾರ ಸಂಜೆ ಮತ್ತು ರಾತ್ರಿ ಸುರಿದ ಭಾರಿ ಮಳೆಗೆ ಇಲ್ಲಿನ ಮಾಳೆ ಹಳ್ಳ (ಮಾಳೆ ಸರ) ಉಕ್ಕಿ ಹರಿದಿದ್ದು ಹಳ್ಳದ ತಟದ 35 ಎಕರೆಗೂ ಹೆಚ್ಚು ಜಮೀನಿನಲ್ಲಿ ಬೆಳೆದು ನಿಂತಿದ್ದ ಮೆಕ್ಕೆಜೋಳ ಸಂಪೂರ್ಣ ಕೊಚ್ಚಿ ಹೋಗಿದೆ.

ಚಿಕ್ಕಜಾಜೂರು ಸೇರಿ ಬಿ.ದುರ್ಗ ಹೋಬಳಿಯಾದ್ಯಂತ ಒಂದು ಗಂಟೆಗೂ ಹೆಚ್ಚು ಕಾಲ ಧಾರಾಕಾರ ಮಳೆ ಸುರಿದಿದೆ. ಹಲವು ವರ್ಷಗಳಿಂದ ನೀರಿನ ಹರಿವು ಕಾಣದಿದ್ದ ಮಾಳೆ ಹಳ್ಳದಲ್ಲಿ ಪ್ರವಾಹದ ರೀತಿ ನೀರು ಹರಿದಿದ್ದು, ಅಕ್ಕಪಕ್ಕದ ಜಮೀನಿಗೆ ನುಗ್ಗಿದ ಪರಿಣಾಮ ಮೆಕ್ಕೆಜೋಳ ಫಸಲು ನಾಶವಾಗಿದೆ.

ಸಾಸಲು, ಸಾಸಲುಹಳ್ಳ, ಕಾಗಳಗೆರೆ, ಮುತ್ತುಗದೂರು, ಅಂದನೂರು, ಹಿರಿಯೂರು, ಕಾಳಘಟ್ಟ, ವಿಶ್ವನಾಥನಹಳ್ಳಿ, ಮಲ್ಲೇನಹಳ್ಳಿ, ಪಾಡಿಗಟ್ಟೆ, ಆಡನೂರು ಮೊದಲಾದ ಗ್ರಾಮಗಳ ರೈತರು ಬೆಳೆ ಕಳೆದುಕೊಂಡು ಕಂಗಾಲಾಗಿದ್ದಾರೆ. ಚಿಕ್ಕಎಮ್ಮಿಗನೂರು ಗ್ರಾಮದ ರೈತರಿಗೆ ಹೆಚ್ಚು ನಷ್ಟವಾಗಿದೆ.

'ಚಿಕ್ಕಎಮ್ಮಿಗನೂರು ಹಾಗೂ ಸುತ್ತ-ಮುತ್ತಲಿನ ಗ್ರಾಮಗಳ ಬಳಿ ಹರಿಯುವ ಮಾಳೆ ಹಳ್ಳ ಹಲವು ವರ್ಷಗಳಿಂದ ನೀರಿಲ್ಲದೇ ಭಣಗುಡುತ್ತಿತ್ತು. ಮಂಗಳವಾರ ಸುರಿದ ಮಳೆಯಿಂದ ಕಾಯಿಕಟ್ಟುವ ಹಂತದಲ್ಲಿದ್ದ ಬೆಳೆ ಕೊಚ್ಚಿ ಹೋಯಿತು' ಎಂದು ರೈತರಾದ ಕೆ.ಎನ್. ಶಿವಕುಮಾರ್, ಚಿಂದಪ್ಪರ ವೆಂಕಟೇಶ್, ರಘು, ವಿಶ್ವನಾಥ, ಮೈಲಾರಪ್ಪ, ಡಿ.ಆರ್. ಲೋಕೇಶ್, ಸಿ. ಅರುಣ್‌ಕುಮಾರ್ ನೋವು ತೋಡಿಕೊಂಡರು. 'ಹಳ್ಳದ ಎರಡೂ ಬದಿಯ ಜಮೀನಲ್ಲಿ ಬೆಳೆದು ನಿಂತಿದ್ದ ಮೆಕ್ಕೆಜೋಳ ಬೆಳೆ ಈಗ ಇಲ್ಲವಾಗಿದೆ. ಇಡೀ ಪ್ರದೇಶ ಜಲಾವೃತಗೊಂಡಿದ್ದು ಜಮೀನು ಕಾಣದಾಗಿದೆ. ಇಡೀ ಪ್ರದೇಶ ದ್ವೀಪದಂತಾಗಿದೆ' ಎಂದು ರೈತ ವೆಂಕಟೇಶ್ ಕಣ್ಣೀರಿಟ್ಟರು.

ಕುಸಿದ ಗೋಡೆಗಳು: ರಾತ್ರಿವರೆಗೂ ಸುರಿದ ಮಳೆಯಿಂದಾಗಿ ಚಿಕ್ಕಜಾಜೂರು ಸಮೀಪದ ಕೊಡಗವಳ್ಳಿ ಹಟ್ಟಿ ಗ್ರಾಮದ ಸಿ. ತಿಪ್ಪೇಸ್ವಾಮಿ, ಕಾಮನಹಳ್ಳಿ ಗ್ರಾಮದ ರೇವಮ್ಮ, ಚಿಕ್ಕಎಮ್ಮಿಗನೂರು ಗ್ರಾಮದ ಭರತ್‌ಕುಮಾರ್, ಸುಲೋಚನಾ ಅವರ ಮನೆಗಳ ಗೋಡೆಗಳು ಉರುಳಿ ಬಿದ್ದಿವೆ. ಹಲವು ಹಳೆಯ ಮನೆಗಳು ಶಿಥಿಲಗೊಂಡಿದ್ದು, ಅಪಾಯದ ಸ್ಥಿತಿಯಲ್ಲಿವೆ.

'ಬುಧವಾರ ಗ್ರಾಮಕ್ಕೆ ಭೇಟಿ ನೀಡಿ ಮಹಜರು ನಡೆಸಲಾಗಿದೆ. ನಾಲ್ಕು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಈ ಕುರಿತು ತಾಲ್ಲೂಕು ಆಡಳಿತಕ್ಕೆ ವರದಿ ನೀಡಲಾಗುವುದು' ಎಂದು ಗ್ರಾಮ ಆಡಳಿತಾಧಿಕಾರಿ ಎಸ್.ಗಂಗಾಧರ್ ತಿಳಿಸಿದರು.

ಮಾಳೆ ಮಳ್ಳ ತುಂಬಿ ಹರಿದ ಪರಿಣಾಮ ಚಿಕ್ಕಎಮ್ಮಿಗನೂರು ಗ್ರಾಮದ ರೈತ ಶಿವಕುಮಾರ್ ಅವರ ಜಮೀನು ಜಲಾವೃತಗೊಂಡಿದೆ

ಸ್ಥಳಕ್ಕೆ ಅಧಿಕಾರಿಗಳನ್ನು ಕಳುಹಿಸಿ ರೈತರ ಸಮಸ್ಯೆ ಆಲಿಸಲು ಸೂಚಿಸುತ್ತೇನೆ. ಹಾನಿ ಸಮೀಕ್ಷೆ ನಡೆಸಿ ಬೆಳೆನಷ್ಟ ಪರಿಹಾರಕ್ಕೆ ವರದಿ ಸಲ್ಲಿಸಲಾಗುವುದು
ಬಿ.ಮಂಜುನಾಥ್, ಕೃಷಿ ಜಂಟಿ ನಿರ್ದೇಶಕ, ಚಿತ್ರದುರ್ಗ ಜಿಲ್ಲೆ

ಉತ್ತರಾದಿ ಮಠ ಮೇಲ್ಮನವಿ: ಏಕಸದಸ್ಯ ಪೀಠದ ಆದೇಶ ಅಮಾನತು

ಬೆಂಗಳೂರು: ಉತ್ತರಾದಿ ಹಾಗೂ ರಾಘವೇಂದ್ರ ಸ್ವಾಮಿ ಮಠಗಳ ಮಧ್ಯದ ಕೊಪ್ಪಳ ಜಿಲ್ಲೆ ಆನೆಗೊಂದಿಯ ನವ ವೃಂದಾವನದ ಭೂ ಮಾಲೀಕತ್ವದ ವಿವಾದಕ್ಕೆ ಸಂಬಂಧಿಸಿದಂತೆ ಸರ್ವೆ ನಂಬರ್ 192ರ ಒಟ್ಟು ಜಮೀನಿನ ಜಂಟಿ ಸರ್ವೆ ನಡೆಸುವಂತೆ ನಿರ್ದೇಶಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಅಮಾನತ್ತಿನಲ್ಲಿ ಇರಿಸಿ ಆದೇಶಿಸಿದೆ.

ಈ ಸಂಬಂಧ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಉತ್ತರಾದಿ ಮಠದ ಪೀಠಾಧಿಪತಿ ಸತ್ಯಾತ್ಮತೀರ್ಥ ಸ್ವಾಮೀಜಿ ಸಲ್ಲಿಸಿರುವ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಉತ್ತರಾದಿ ಮಠದ ಪರ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಮುಕುಲ್ ರೋಹಟಗಿ ವಾದ ಮಂಡಿಸಿದರು. ಕೆಲ ಕಾಲ ವಾದ ಆಲಿಸಿದ ನ್ಯಾಯಪೀಠ, ಮೇಲ್ಮನವಿಯನ್ನು ವಿಚಾರಣೆಗೆ ಅಂಗೀಕರಿಸಿತು.

'ಆನೆಗೊಂದಿಯಲ್ಲಿನ ನವ ವೃಂದಾವನ ಗಡ್ಡೆ ಇರುವ ಸರ್ವೆ ನಂಬರ್ 192ರ ಜಮೀನನ್ನು ಹೊಸದಾಗಿ ಜಂಟಿ ಸರ್ವೆ ನಡೆಸಿ ಅದರಂತೆ ಕಂದಾಯ ಮತ್ತು ಸರ್ವೆ ದಾಖಲೆಗಳನ್ನು ಸರಿಪಡಿಸಬೇಕು' ಎಂದು ಕಂದಾಯ ಹಾಗೂ ಸರ್ವೆ ಇಲಾಖೆಗೆ ಏಕಸದಸ್ಯ ನ್ಯಾಯಪೀಠವು 2024ರ ಜುಲೈ 3ರಂದು ನೀಡಿದ್ದ ಆದೇಶವನ್ನು ಅಮಾನತ್ತಿನಲ್ಲಿ ಇರಿಸಿ ಆದೇಶಿಸಿತು. ವಿಚಾರಣೆಯನ್ನು ನವೆಂಬರ್ 13ಕ್ಕೆ ಮುಂದೂಡಲಾಗಿದೆ. ವಕೀಲರಾದ ವಿನಾಯಕ ಕುಲಕರ್ಣಿ ಹಾಗೂ ಅನಿಲ್ ಕಂಭಾವಿ ವಕಾಲತ್ತು ವಹಿಸಿದ್ದರು.

ಸಹಾಯಕ ಲೋಕೊ ಪೈಲಟ್ ಪರೀಕ್ಷೆ: ಕನ್ನಡದಲ್ಲಿಯೂ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆಯಲ್ಲಿ ಸಹಾಯಕ ಲೋಕೊ ಪೈಲಟ್ ಪರೀಕ್ಷೆಯನ್ನು ಕನ್ನಡದಲ್ಲಿಯೂ ಬರೆಯಲು ಅವಕಾಶ ನೀಡಿ ನೈರುತ್ಯ ರೈಲ್ವೆ ಅಧಿಸೂಚನೆ ಹೊರಡಿಸಿದೆ.

ಸಹಾಯಕ ಲೋಕೊ ಪೈಲಟ್ (ಬಡ್ತಿ) ಪರೀಕ್ಷೆ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮಾತ್ರ ಇರುವುದನ್ನು ವಿವಿಧ ಸಂಘಟನೆಗಳು ವಿರೋಧಿಸಿದ್ದವು. ಅದಕ್ಕಾಗಿ ಪರೀಕ್ಷೆಯನ್ನೇ ಮುಂದೂಡಲಾಗಿತ್ತು. ನೈರುತ್ಯ ರೈಲ್ವೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು, 'ರೈಲ್ವೆಗೆ ಸಂಬಂಧಿಸಿದ ಎಲ್ಲ ಪರೀಕ್ಷೆಗಳು ಕನ್ನಡದಲ್ಲಿ ಇರಬೇಕು. ಈ ಬಗ್ಗೆ ಆದೇಶ ಹೊರಡಿಸಬೇಕು' ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಸಹಾಯಕ ಲೋಕೊ ಪೈಲಟ್ ಪರೀಕ್ಷೆ ಸಂಬಂಧಿಸಿದಂತೆ ಮಾತ್ರ ಆದೇಶ ಹೊರಡಿಸಲಾಗಿದ್ದು, ಕೇಂದ್ರೀಕೃತ ಕಂಪ್ಯೂಟರ್ ಆಧಾರಿತ ಈ ಪರೀಕ್ಷೆಯಲ್ಲಿ ಕನ್ನಡ, ಇಂಗ್ಲಿಷ್, ಹಿಂದಿಯಲ್ಲಿ ಪ್ರಶ್ನೆ-ಪತ್ರಿಕೆ ಇರಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಒಂದೇ ಪರೀಕ್ಷೆಗೆ ಸೀಮಿತ?: ಸಾಮಾನ್ಯ ವಿಭಾಗ ಸ್ಪರ್ಧಾತ್ಮಕ ಪರೀಕ್ಷೆ (ಜಿಡಿಸಿಇ), ಸೀಮಿತ ವಿಭಾಗದ ಸ್ಪರ್ಧಾತ್ಮಕ ಪರೀಕ್ಷೆ (ಎಲ್‌ಡಿಸಿಇ) ಸೇರಿದಂತೆ ಎಲ್ಲ ಪರೀಕ್ಷೆಗಳಲ್ಲಿ ಕನ್ನಡದಲ್ಲಿಯೂ ಅವಕಾಶ ನೀಡಬೇಕು ಎಂಬುದು ಬೇಡಿಕೆಯಾಗಿತ್ತು.

ಇದಕ್ಕೆ ಸ್ಪಂದಿಸಿದ್ದ ವಿ. ಸೋಮಣ್ಣ, 'ಕನ್ನಡದಲ್ಲಿಯೂ ಪರೀಕ್ಷೆಗಳಿರಲಿವೆ' ಎಂದು ತಿಳಿಸಿದ್ದರು. ಆದರೆ, ಈಗ ನೈರುತ್ಯ ರೈಲ್ವೆ ಹೊರಡಿಸಿರುವ ಆದೇಶ ಒಂದು ಪರೀಕ್ಷೆಗಷ್ಟೇ ಸೀಮಿತವಾಗಿದೆ. ಮುಂದಿನ ಎಲ್ಲ ಪರೀಕ್ಷೆಗಳಿಗೆ ಅನ್ವಯ ಎಂಬುದು ಆದೇಶದಲ್ಲಿಲ್ಲ. ಈ ಬಗ್ಗೆ ನೈರುತ್ಯ ರೈಲ್ವೆ ಅಧಿಕಾರಿಗಳು ಪ್ರತಿಕ್ರಿಯೆಗೆ ಲಭ್ಯರಾಗಿಲ್ಲ.

'ಕನ್ನಡಿಗ ಸಿಬ್ಬಂದಿಗೆ ಅನುಕೂಲ': 'ಸಚಿವ ವಿ. ಸೋಮಣ್ಣ ಅವರ ಸೂಚನೆಯಂತೆ ಲೋಕೊ ಪೈಲಟ್ ಪರೀಕ್ಷೆಗಳನ್ನು ಕನ್ನಡದಲ್ಲಿಯೂ ನಡೆಸುವಂತೆ ಬೆಂಗಳೂರು, ಮೈಸೂರು, ಹುಬ್ಬಳ್ಳಿ ಮೂರೂ ವಿಭಾಗಗಳಿಗೂ ಅಧಿಕೃತ ಆದೇಶ ಹೊರಡಿಸಲಾಗಿದೆ. ಇದರಿಂದ ರೈಲ್ವೆಯಲ್ಲಿ ಕಾರ್ಯ ನಿರ್ವಹಿಸುವ ಕನ್ನಡಿಗ ಸಿಬ್ಬಂದಿಗೆ ಸಹಾಯಕವಾಗಲಿದೆ. ಸದ್ಯದಲ್ಲಿಯೇ ದಿನಾಂಕವನ್ನು ಮರು-ನಿಗದಿಪಡಿಸಿ ಪರೀಕ್ಷೆಯನ್ನು ನಡೆಸಲು ಕ್ರಮವಹಿಸಲಾಗುವುದು' ಎಂದು ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವೈದ್ಯಕೀಯ: ನೀಟ್ ಅರ್ಹರಿಗೆ ಮತ್ತೊಂದು ಅವಕಾಶ

ಬೆಂಗಳೂರು: ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಇದುವರೆಗೂ ಅರ್ಜಿ ಸಲ್ಲಿಸದೆ ಇರುವ ನೀಟ್ ಅರ್ಹತೆ ಪಡೆದ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮತ್ತೊಂದು ಅವಕಾಶ ನೀಡಿದೆ.

ರಾಜ್ಯ ಮತ್ತು ಹೊರ ರಾಜ್ಯದ ಅರ್ಹ ಅಭ್ಯರ್ಥಿಗಳು ಆ.9 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಕೆಇಎ ವೆಬ್ ಪೋರ್ಟಲ್‌ನಲ್ಲಿ, ಯುಜಿನೀಟ್-24ಕ್ಕೆ ಹೊಸದಾಗಿ ನೋಂದಣಿ ಮಾಡುವ ಲಿಂಕ್ ಆಯ್ಕೆ ಮಾಡಿಕೊಂಡು ಅರ್ಜಿ ಸಲ್ಲಿಸಿ, ನಿಗದಿತ ಶುಲ್ಕ ಪಾವತಿಸಬೇಕು ಎಂದು ಕೆಇಎ ಹೇಳಿದೆ. ವಿವಿಧ ಕೋಟಾಕ್ಕಾಗಿ ಬೇಡಿಕೆ ಸಲ್ಲಿಸಿ, ನಿಗದಿತ ದಿನಾಂಕದಂದು ದಾಖಲೆಗಳ ಪರಿಶೀಲನೆಗೆ ಹಾಜರಾಗದೇ ಇದ್ದವರು ಆ.9ರವರೆಗೆ ಕೆಇಎ ಕಚೇರಿಗೆ ದಾಖಲೆಗಳ ಪರಿಶೀಲನೆ ಹಾಜರಾಗಬಹುದು.

28 ಹೆಕ್ಟೇರ್ ಅರಣ್ಯ ಬಳಕೆಗೆ ಕೇಂದ್ರಕ್ಕೆ ಮತ್ತೆ ಪ್ರಸ್ತಾವ

ಬಂಡೂರಿ ನಾಲಾ ತಿರುವು 10,212 ಮರಗಳಿಗೆ ಕುತ್ತು?

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹದಾಯಿ ಯೋಜನೆಯ ಭಾಗವಾದ ಬಂಡೂರಿ ನಾಲಾ ತಿರುವು ಯೋಜನೆಗೆ 28.44 ಹೆಕ್ಟೇರ್ ಅರಣ್ಯ ಬಳಕೆಗೆ ಅನುಮೋದನೆ ಕೋರಿ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯಕ್ಕೆ ಕರ್ನಾಟಕ ಸರ್ಕಾರ ಮತ್ತೆ ಪ್ರಸ್ತಾವ ಸಲ್ಲಿಸಿದೆ. ಈ ಯೋಜನೆಯಿಂದಾಗಿ 10,212 ಮರಗಳಿಗೆ ಕುತ್ತು ಉಂಟಾಗಲಿದೆ.

ಮಹದಾಯಿ ಜಲವಿವಾದ ನ್ಯಾಯ ಮಂಡಳಿಯು 2018ರ ಆಗಸ್ಟ್ 14ರಂದು ಕಳಸಾ–ಬಂಡೂರಿ ಯೋಜನೆಗೆ 3.90 ಟಿಎಂಸಿ ಅಡಿ ನೀರಿನ ಹಂಚಿಕೆ ಮಾಡಿದೆ. ಇದರಲ್ಲಿ ಬಂಡೂರಿ ನಾಲಾ ತಿರುವು ಯೋಜನೆಗೆ 2.18 ಟಿಎಂಸಿ ಅಡಿ ಮೀಸಲಿಡಲಾಗಿದೆ. ಈ ಯೋಜನೆಗೆ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಮೂರು ಗ್ರಾಮಗಳ ಅರಣ್ಯ ಬಳಕೆಗೆ (ಜಾಕ್‌ವೆಲ್ ನಿರ್ಮಾಣ, ಪಂಪ್ ಹೌಸ್, ಎಲೆಕ್ಟ್ರಿಕಲ್ ಸಬ್ ಸ್ಟೇಷನ್, ಪೈಪ್‌ಲೈನ್‌ಗೆ) ಒಪ್ಪಿಗೆ ನೀಡಬೇಕು ಎಂದು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯ ದರ್ಶಿ ಎನ್. ಮಂಜುನಾಥ ಪ್ರಸಾದ್ ಅವರು ಪ್ರಸ್ತಾವನೆಯಲ್ಲಿ ಕೋರಿದ್ದಾರೆ.

ಪ್ರಸ್ತಾವಿತ ಯೋಜನಾ ಸ್ಥಳಕ್ಕೆ ಬೆಳಗಾವಿ ವೃತ್ತದ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಫೆಬ್ರುವರಿಯಲ್ಲಿ ಭೇಟಿ ನೀಡಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದ್ದರು. ಈ ಪ್ರದೇಶದ ಸುತ್ತ ಹುಲಿ, ಚಿರತೆ, ಕರಡಿ, ಕಾಡುಕೋಣ, ಜಿಂಕೆ ಸೇರಿದಂತೆ ಅನೇಕ ಕಾಡು ಪ್ರಾಣಿಗಳು ಕಂಡುಬಂದಿವೆ. ಈ ಪ್ರದೇಶವು ರಾಷ್ಟ್ರೀಯ ಉದ್ಯಾನ, ವನ್ಯಜೀವಿ ಧಾಮ, ಹುಲಿ ಸಂರಕ್ಷಿತ ಪ್ರದೇಶ ಹಾಗೂ ಆನೆ ಕಾರಿಡಾರ್‌ನ ಭಾಗ ಅಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅಡಿಯಲ್ಲಿ ಅಧಿಸೂಚಿಸಿದ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಗೂ ಈ ಪ್ರದೇಶ ಬರುವುದಿಲ್ಲ. ಈ ಯೋಜನೆಯ ಅನುಷ್ಠಾನದಿಂದ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಉಲ್ಲಂಘನೆ ಆಗುವುದಿಲ್ಲ. ಕುಡಿಯುವ ನೀರು ಒದಗಿಸುವ ಉದ್ದೇಶದ ಈ ಯೋಜನೆಗಾಗಿ ಕನಿಷ್ಠ ಪ್ರಮಾಣದ ಅರಣ್ಯ ಬಳಕೆ ಮಾಡಲಾಗುತ್ತದೆ ಎಂದು ರಾಜ್ಯ ಸ್ಪಷ್ಟಪಡಿಸಿದೆ.

ಪರಿಹಾರಾತ್ಮಕ ಅರಣ್ಯೀಕರಣ ಯೋಜನೆಗಾಗಿ 31 ಹೆಕ್ಟೇರ್ ಅರಣ್ಯೇತರ ಪ್ರದೇಶ ಗುರುತಿಸಿ ಯೋಜನೆ ಸಿದ್ಧಪಡಿಸಲಾಗಿದೆ ಎಂದೂ ರಾಜ್ಯ ಸರ್ಕಾರ ಹೇಳಿದೆ. ಕಳಸಾ ನಾಲಾ ತಿರುವು ಯೋಜನೆಗೆ ವನ್ಯಜೀವಿ ಅನುಮೋದನೆಯನ್ನೂ ಪಡೆಯಬೇಕಿದೆ. ಇದಕ್ಕಾಗಿ ರಾಜ್ಯ ಸರ್ಕಾರ ಸಲ್ಲಿಸಿರುವ ಪ್ರಸ್ತಾವಕ್ಕೆ ಅನುಮೋದನೆ ನೀಡಲು ರಾಷ್ಟ್ರೀಯ ವನ್ಯಜೀವಿ ಮಂಡಳಿ ನಿರಾಕರಿಸಿದೆ.

'ಕಳಸಾ-ಬಂಡೂರಿ ಯೋಜನೆ ಅನುಷ್ಠಾನವಾದರೆ ಮಹದಾಯಿ ಕಣಿವೆಯ ಜೀವವೈವಿಧ್ಯ ನಾಶವಾಗಲಿದೆ. ಯೋಜನೆ ಹೆಸರಿನಲ್ಲಿ ವನ್ಯಜೀವಿಗಳ ಹಿತಾಸಕ್ತಿ ಬಲಿಕೊಡುವುದು ಎಷ್ಟರ ಮಟ್ಟಿಗೆ ಸರಿ' ಎಂದು ಬೆಳಗಾವಿಯ ಹೋರಾಟಗಾರ-ರಾಘವೇಂದ್ರ ಪ್ರಶ್ನಿಸಿದರು.

ವೈದ್ಯ ಕಾಲೇಜು: ಕೆಇಎ ಮೂಲಕ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಗಳಿಗೆ ಅಗತ್ಯವಿರುವ 650 ಸಹಾಯಕ ಪ್ರಾಧ್ಯಾಪಕರು ಹಾಗೂ 1,200 ಶುಶ್ರೂಷಣಾ ಅಧಿಕಾರಿಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕ ನೇಮಕ ಮಾಡಿಕೊಳ್ಳಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿದರು. ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿಗಳ ಜೊತೆ ಬುಧವಾರ ನಡೆದ ಸಭೆಯ ನಂತರ ಅವರು ಮಾತನಾಡಿದರು.

ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಲು ಸ್ಪರ್ಧಾತಕ ಪರೀಕ್ಷೆಯ ಮೂಲಕ ನೇಮಕ ಮಾಡಿಕೊಳ್ಳಲು ನಿರ್ಧರಿಸಲಾಗಿದೆ. ಅದಕ್ಕಾಗಿ ಕೆಇಎಗೆ ಪರೀಕ್ಷೆ ನಡೆಸಲು ಪ್ರಸ್ತಾವ ಕಳುಹಿಸಲಾಗುವುದು ಎಂದರು.

22 ವೈದ್ಯಕೀಯ ಕಾಲೇಜುಗಳು ಮತ್ತು 11 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿವೆ. ಹಿಂದೆ ವೈದ್ಯಕೀಯ ಕಾಲೇಜುಗಳ ಮುಖ್ಯಸ್ಥರ ನೇತೃತ್ವದ ಸಮಿತಿಗಳೇ ಸಹಾಯಕ ಪ್ರಾಧ್ಯಾಪಕರು ಹಾಗೂ ಶುಶ್ರೂಷಣಾ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದವು. ನೇಮಕಾತಿಯಲ್ಲಿ ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತದ ಆರೋಪಗಳು ಕೇಳಿ ಬಂದಿದ್ದವು. ಹಾಗಾಗಿ, ಬೈಲಾಗೆ ತಿದ್ದುಪಡಿ ಮಾಡಲಾಗುವುದು. ಆರೋಗ್ಯ ಇಲಾಖೆ ನೇಮಕಾತಿಗೆ ಅನ್ವಯವಾಗುವ ಸಿ ಮತ್ತು ಆರ್ ನಿಯಮಗಳನ್ನು ಅನುಸರಿಸಲಾಗುವುದು. ಪ್ರಾಧಿಕಾರಕ್ಕೆ ಹೊಣೆಗಾರಿಕೆ ನೀಡಲಾಗುವುದು ಎಂದು ಹೇಳಿದರು.

ಪರೀಕ್ಷೆಗಳಿಗೆ ಅಗತ್ಯವಾದ ಪಠ್ಯಕ್ರಮಕ್ಕಾಗಿ ತಜ್ಞರ ಸಮಿತಿ ರಚಿಸುವಂತೆ ವೈದ್ಯಕೀಯ ಶಿಕ್ಷಣ ನಿರ್ದೇಶಕಿ ಡಾ.ಸುಜಾತಾ ರಾಥೋಡ್ ಅವರಿಗೆ ಶರಣಪ್ರಕಾಶ ಪಾಟೀಲ ಸೂಚಿಸಿದರು.

ಕಾಳಿ ನದಿ: ಕುಸಿದ ಸೇತುವೆ

ಒಂದನೇ ಪುಟದಿಂದ...

1956ರಲ್ಲಿ ಸೇತುವೆ ನಿರ್ಮಾಣ ಕಾರ್ಯ ಆರಂಭಗೊಂಡು, 1984ರಲ್ಲಿ ಸೇತುವೆಯು ಸಂಚಾರಕ್ಕೆ ಮುಕ್ತವಾಯಿತು. 2009ರಲ್ಲಿ ಸೇತುವೆ ದುರಸ್ತಿ ಮಾಡಲಾಗಿತ್ತು. ಅದರ ಪಕ್ಕದಲ್ಲೇ 2017ರಲ್ಲಿ ಇನ್ನೊಂದು ಸೇತುವೆ ನಿರ್ಮಿಸಲಾಯಿತು.

ಡಿ.ಸಿಯಿಂದ ಮಾಹಿತಿ ಪಡೆದ ಸಿ.ಎಂ: (ಮೈಸೂರು ವರದಿ): ಕಾಳಿ ನದಿ ಸೇತುವೆ ಕುಸಿದು ಬಿದ್ದಿರುವ ಕುರಿತು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉತ್ತರ ಕನ್ನಡ ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ಅವರಿಂದ ದೂರವಾಣಿಯಲ್ಲಿ ಬುಧವಾರ ಮಾಹಿತಿ ಪಡೆದರು.

'ಜಿಲ್ಲೆಯಲ್ಲಿ ಎಲ್ಲ ಸೇತುವೆಗಳು, ರಸ್ತೆಗಳ ಸುರಕ್ಷತೆಯ ಕುರಿತು ಖಾತರಿಪಡಿಸಬೇಕು ಹಾಗೂ ಯಾವುದೇ ಜೀವ ಹಾನಿ ಆಗದಂತೆ ಮುನ್ನೆಚ್ಚರಿಕೆ ವಹಿಸಬೇಕು' ಎಂದು ಸೂಚಿಸಿದರು. ಘಟನೆ ಬಗ್ಗೆ ಮಾಹಿತಿ ನೀಡಿದ ಜಿಲ್ಲಾಧಿಕಾರಿ, 'ಸೇತುವೆ ಕುಸಿದ ಸಂದರ್ಭದಲ್ಲಿ ಗಾಯಗೊಂಡ ಲಾರಿ ಚಾಲಕರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ತಕ್ಷಣ ಕಾರ್ಯಚರಣೆಗಾಗಿ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ. ಸೇತುವೆಯ ಪರಿಶೀಲನೆಗಾಗಿ ಮತ್ತು ಪ್ರದೇಶದಲ್ಲಿನ ಎಲ್ಲಾ ಸೇತುವೆಗಳ ಸುರಕ್ಷತೆಯನ್ನು ಖಚಿತಪಡಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಪತ್ರ ಕಳುಹಿಸಲಾಗಿದೆ' ಎಂದು ವಿವರಿಸಿದರು.

ಕಾರವಾರದ ಕೋಡಿಬಾಗದಲ್ಲಿ ಕಾಳಿ ನದಿಗೆ ನಿರ್ಮಿಸಲಾಗಿದ್ದ ಹಳೆ ಸೇತುವೆಯು ಮುರಿದು ಬಿದ್ದಿದೆ. ಪ್ರಜಾವಾಣಿ ಚಿತ್ರ/ ದಿಲೀಪ್ ರೇವಣಕರ್

ಶಿರೂರು ಗುಡ್ಡ ದುರಂತ, ಸೇತುವೆ ಕುಸಿತದಂತಹ ಅವಘಡಗಳಿಗೆ ಐಆರ್‌ಬಿ ಕಂಪನಿಯ ಅವೈಜ್ಞಾನಿಕ ಕೆಲಸ ಕಾರಣ. ಕೇಂದ್ರ ಸರ್ಕಾರವೇ ಇದಕ್ಕೆ ಹೊಣೆ
ಮಂಕಾಳ ವೈದ್ಯ, ಜಿಲ್ಲಾ ಉಸ್ತುವಾರಿ ಸಚಿವ, ಉತ್ತರ ಕನ್ನಡ

ಹೊಸ ಸೇತುವೆಗೆ ಧಕ್ಕೆ ಆಗಲಿದೆಯೇ ಎಂಬುದನ್ನು ಪರೀಕ್ಷಿಸಿ, ವರದಿ ಸಲ್ಲಿಸಲು ಸೂಚಿಸಲಾಗಿದೆ. ಎಲ್ಲ ಸೇತುವೆಗಳ ಸಾಮರ್ಥ್ಯ ಪರಿಶೀಲಿಸುತ್ತೇವೆ
ಕೆ.ಲಕ್ಷ್ಮಿಪ್ರಿಯಾ, ಜಿಲ್ಲಾಧಿಕಾರಿ, ಉತ್ತರ ಕನ್ನಡ

ನಿಷ್ಕಾಳಜಿ: ಪ್ರಕರಣ ದಾಖಲು

ಕಾಳಿ ಸೇತುವೆ ಕುಸಿಯಲು ಸೇತುವೆಯ ಗುಣಮಟ್ಟ ಪರಿಶೀಲನೆ ನಡೆಸುವಲ್ಲಿ ನಿಷ್ಕಾಳಜಿತನ ತೋರಿದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಮತ್ತು ಹೆದ್ದಾರಿ ನಿರ್ಮಿಸುತ್ತಿರುವ ಐಆರ್‌ಬಿ ಕಂಪನಿ ಕಾರಣ ಎಂಬ ಆರೋಪ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ.

'ದುರ್ಘಟನೆಯ ಪ್ರತ್ಯಕ್ಷದರ್ಶಿಯಾಗಿರುವ ಲಾರಿ ಚಾಲಕ ತಮಿಳುನಾಡು ಮೂಲದ ರಾಧಾಕೃಷ್ಣನ್ ನೀಡಿರುವ ದೂರು ಆಧರಿಸಿ ಕಾರವಾರ ನಗರ ಪೊಲೀಸ್ ಠಾಣೆಯಲ್ಲಿ ಎನ್‌ಎಚ್‌ಎಐ ಮತ್ತು ಐಆರ್‌ಬಿ ಕಂಪನಿಯ ಅಧಿಕಾರಿಗಳ ವಿರುದ್ಧ ಸಾರ್ವಜನಿಕ ಆಸ್ತಿಗೆ ರಕ್ಷಣೆ ನೀಡದೆ ನಿಷ್ಕಾಳಜಿತನ ತೋರಿರುವ ಪ್ರಕರಣ ದಾಖಲಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ತಿಳಿಸಿದ್ದಾರೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಸಭೆಯಲ್ಲಿ ನಿರ್ಧಾರ

ಕಟ್ಟಡ ಕಾರ್ಮಿಕರಿಗಾಗಿ 'ಅಂಬೇಡ್ಕರ್ ಸೇವಾ ಕೇಂದ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕಾರ್ಮಿಕರ ನೋಂದಣಿ, ಫಲಾನುಭವಿಗಳ ಆಯ್ಕೆ, ನೈಜತೆ ಪರಿಶೀಲನೆ ಮತ್ತಿತರ ಕೆಲಸಗಳನ್ನು ನಿರ್ವಹಿಸಲು ಪ್ರತ್ಯೇಕವಾಗಿ 'ಅಂಬೇಡ್ಕರ್ ಸೇವಾ ಕೇಂದ್ರ'ವನ್ನು ಅಸ್ತಿತ್ವಕ್ಕೆ ತರಲು ನಿರ್ಧರಿಸಲಾಗಿದೆ.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಮಂಡಳಿಯ ಸಭೆಯಲ್ಲಿ ಅಂಬೇಡ್ಕರ್ ಸೇವಾ ಕೇಂದ್ರಗಳನ್ನು ಆರಂಭಿಸುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಗಿದೆ. ಅನರ್ಹ ಫಲಾನುಭವಿಗಳನ್ನು ಪತ್ತೆಮಾಡುವ ಜವಾಬ್ದಾರಿಯನ್ನೂ ಸೇವಾ ಕೇಂದ್ರಗಳಿಗೆ ವಹಿಸುವ ನಿರ್ಧಾರ ಕೈಗೊಳ್ಳಲಾಗಿದೆ.

ಈ ಕುರಿತು 'ಪ್ರಜಾವಾಣಿ' ಜೊತೆ ಮಾತನಾಡಿದ ಸಂತೋಷ್ ಲಾಡ್, 'ರಾಜ್ಯದಲ್ಲಿ 58 ಲಕ್ಷ ಮಂದಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕಾರ್ಮಿಕರು ಎಂಬುದಾಗಿ ನೋಂದಣಿ ಮಾಡಿಕೊಂಡಿದ್ದರು. ನೈಜತೆ ಪರಿಶೀಲನೆ ಬಳಿಕ 20 ಲಕ್ಷ ಮಂದಿಯ ನೋಂದಣಿ ರದ್ದುಗೊಳಿಸಲಾಗಿದೆ. ಉಳಿದಿರುವ 38 ಲಕ್ಷ ಮಂದಿಯ ನೈಜತೆ ಪರಿಶೀಲನೆಯನ್ನೂ ಅಂಬೇಡ್ಕರ್ ಸೇವಾ ಕೇಂದ್ರಗಳಿಗೆ ವಹಿಸಲು ತೀರ್ಮಾನಿಸಲಾಗಿದೆ' ಎಂದರು.

ಜಿಐಎಸ್ ಮ್ಯಾಪಿಂಗ್‌ಗೆ ನಿರ್ಧಾರ: ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾಮಗಾರಿಗಳು ಮತ್ತು ಖಾಸಗಿ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ನಡೆಸುವವರು ಕಾರ್ಮಿಕ ಕಲ್ಯಾಣ ಸೆಸ್ ಪಾವತಿಸದೇ ವಂಚಿಸುವುದನ್ನು ತಡೆಯಲು ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ಮೂಲಕ ಆಸ್ತಿಗಳ ಪಟ್ಟಿ ಮಾಡುವ (ಮ್ಯಾಪಿಂಗ್) ನಿರ್ಧಾರವನ್ನೂ ಮಂಡಳಿಯ ಸಭೆ ಕೈಗೊಂಡಿದೆ.

ಸಂತೋಷ್ ಲಾಡ್

'ಈಗ ವಾರ್ಷಿಕ ₹800 ಕೋಟಿ ಸೆಸ್ ಸಂಗ್ರಹವಾಗುತ್ತಿದೆ. ಜಿಐಎಸ್ ಮ್ಯಾಪಿಂಗ್ ಮಾಡಿದರೆ ಸಂಗ್ರಹ ದುಪ್ಪಟ್ಟಾಗಲಿದೆ. ಮಂಡಳಿ ಆರಂಭವಾದ ದಿನದಿಂದ ಈವರೆಗೆ ಸೆಸ್ ಪಾವತಿಸದೆ ವಂಚಿಸಿರುವವರನ್ನು ಪತ್ತೆಹಚ್ಚಿ, ಬಾಕಿ ವಸೂಲಿ ಮಾಡುವುದೂ ಸಾಧ್ಯವಾಗಲಿದೆ' ಎಂದು ಸಚಿವರು ಹೇಳಿದರು.

ವಸತಿ ಯೋಜನೆ: ಕಟ್ಟಡ ಕಾರ್ಮಿಕರ ವಸತಿ ಯೋಜನೆಯನ್ನು ಪ್ರಾಯೋಗಿಕವಾಗಿ ಎರಡು ಜಿಲ್ಲೆಗಳಲ್ಲಿ ಆರಂಭಿಸುವ ಕುರಿತು ಚರ್ಚಿಸಲಾಗಿದೆ. ಫಲಾನುಭವಿಗಳ ವಂತಿಕೆ, ಮಂಡಳಿಯಿಂದ ₹2 ಲಕ್ಷ ಬಡ್ಡಿರಹಿತ ಸಾಲ ಹಾಗೂ ಬ್ಯಾಂಕ್ ಸಾಲದಿಂದ ಮನೆ ನಿರ್ಮಿಸುವ ಪ್ರಸ್ತಾವ ಸಿದ್ಧಪಡಿಸಲಾಗುತ್ತಿದೆ. ಶೀಘ್ರದಲ್ಲಿ ಯೋಜನೆಯ ರೂಪುರೇಷೆ ಅಂತಿಮಗೊಳಿಸಲಾಗುವುದು ಎಂದರು.

ಕಾರ್ಮಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹಿಸಿನ್, ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಾರತಿ, ಕಾರ್ಮಿಕ ಇಲಾಖೆಯ ಆಯುಕ್ತ ಗೋಪಾಲಕೃಷ್ಣ, ಮಂಡಳಿಯ ಸದಸ್ಯರಾದ ಎಚ್.ಜೆ.ರಮೇಶ್, ವಿಜಯಕುಮಾರ್ ಪಾಟೀಲ್, ಜಾನಿ, ಶ್ರೇಯಾನ್ಸ್, ಕವಿತಾ ರೆಡ್ಡಿ ಸಭೆಯಲ್ಲಿದ್ದರು.

ಕಾರ್ಮಿಕ ಸಂಘಟನೆ ಮುಖಂಡರೊಂದಿಗೆ ಚರ್ಚೆ

ವಿದ್ಯಾರ್ಥಿ ವೇತನ ವಿತರಣೆ ಸೇರಿದಂತೆ ಕಟ್ಟಡ ನಿರ್ಮಾಣ ಕಾರ್ಮಿಕರ ವಿವಿಧ ಬೇಡಿಕೆಗಳ ಕುರಿತು ಕಾರ್ಮಿಕ ಸಂಘಟನೆಗಳ ಮುಖಂಡರೊಂದಿಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಬುಧವಾರ ಚರ್ಚೆ ನಡೆಸಿದರು.

'ವಿದ್ಯಾರ್ಥಿ ವೇತನಕ್ಕಾಗಿ 13 ಲಕ್ಷ ಕಾರ್ಮಿಕರ ಮಕ್ಕಳು ಅರ್ಜಿ ಸಲ್ಲಿಸಿದ್ದಾರೆ. ಎಲ್ಲ ಅರ್ಜಿದಾರರಿಗೂ ವಿದ್ಯಾರ್ಥಿ ವೇತನ ನೀಡಲು ₹ 2,500 ಕೋಟಿ ಅಗತ್ಯ. ಸ್ಪಷ್ಟ ಮಾರ್ಗಸೂಚಿ ರೂಪಿಸಿದ ಬಳಿಕ ವಿದ್ಯಾರ್ಥಿ ವೇತನ ವಿತರಿಸಲಾಗುವುದು' ಎಂಬುದಾಗಿ ಸಚಿವರು ಕಾರ್ಮಿಕ ಮುಖಂಡರಿಗೆ ಮನವರಿಕೆ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕರ್ತವ್ಯಕ್ಕೆ ಹಾಜರಾಗಲು ಪೊಲೀಸರ ಹಿಂಜರಿಕೆ ● ವಿದ್ಯಾರ್ಥಿಗಳಿಂದಲೇ ಸಂಚಾರ ವ್ಯವಸ್ಥೆ ನಿರ್ವಹಣೆ

ಬಾಂಗ್ಲಾ: ಕಾನೂನು, ಸುವ್ಯವಸ್ಥೆ ಕುಸಿತ

ಢಾಕಾ (ಪಿಟಿಐ): ತೀವ್ರಗೊಂಡ ಗಲಭೆ, ಹಿಂಸಾಚಾರದಿಂದಾಗಿ ಬಾಂಗ್ಲಾದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿದ್ದು, ಸಂಚಾರ ವ್ಯವಸ್ಥೆ ನಿಯಂತ್ರಣ ಸವಾಲಾಗಿ ಪರಿಣಮಿಸಿದೆ. ಹೆಚ್ಚಿನ ಸಂಖ್ಯೆಯ ಪೊಲೀಸರು ಕರ್ತವ್ಯ ನಿರ್ವಹಿಸಲು ಹಿಂಜರಿಯುತ್ತಿರುವುದು ಸಮಸ್ಯೆಯನ್ನು ಬಿಗಡಾಯಿಸಿದೆ.

ಮಾಜಿ ಪ್ರಧಾನಿ ಶೇಖ್ ಹಸೀನಾ ಅವರು ಸೋಮವಾರ ದೇಶ ತೊರೆದ ಬಳಿಕ, ದೇಶದಾದ್ಯಂತ ಹಿಂಸಾಚಾರ ತೀವ್ರ ಸ್ವರೂಪ ಪಡೆದುಕೊಂಡಿತ್ತು. ಉದ್ರಿಕ್ತರ ಗುಂಪುಗಳು ಪೊಲೀಸ್ ಠಾಣೆಗಳ ಮೇಲೆ ದಾಳಿ ನಡೆಸಿ, ಧ್ವಂಸ ಗೊಳಿಸಿದ್ದವು. ಈ ವೇಳೆ ಹಲವು ಪೊಲೀಸರು ಮೃತಪಟ್ಟಿದ್ದರು. ಇದರಿಂದಾಗಿ ಪೊಲೀಸರು ಕರ್ತವ್ಯಕ್ಕೆ ಹಾಜರಾಗಲು ಹಿಂಜರಿಯುತ್ತಿದ್ದಾರೆ ಎಂದು ಪತ್ರಿಕೆಗಳು ವರದಿ ಮಾಡಿವೆ.

‘ರಾಜಧಾನಿ ಢಾಕಾ ಸೇರಿದಂತೆ ದೇಶದ ಬಹುತೇಕ ಪೊಲೀಸ್ ಠಾಣೆಗಳಲ್ಲಿ ಪೊಲೀಸ್ ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗಿಲ್ಲ’ ಎಂದು ಢಾಕಾ ಟ್ರಿಬ್ಯೂನ್ ವರದಿ ಮಾಡಿದೆ.

400ಕ್ಕೂ ಹೆಚ್ಚು ಠಾಣೆಗಳ ಮೇಲೆ ದಾಳಿ: ‘ದೇಶದಾದ್ಯಂತ 400ಕ್ಕೂ ಹೆಚ್ಚು ಪೊಲೀಸ್ ಠಾಣೆಗಳ ಮೇಲೆ ಉದ್ರಿಕ್ತರ ಗುಂಪುಗಳು ದಾಳಿ ನಡೆಸಿ ಲೂಟಿ ಮಾಡಿವೆ. ಅಲ್ಲದೆ, ಬೆಂಕಿ ಹಚ್ಚಿ ಠಾಣೆಗಳನ್ನು ಧ್ವಂಸ ಮಾಡಿವೆ. ಇದರಿಂದ ಪೊಲೀಸರು ರಾತ್ರೋರಾತ್ರಿ ಠಾಣೆಗಳನ್ನು ಖಾಲಿ ಮಾಡಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳ ಹೇಳಿಕೆಯನ್ನು ಢಾಕಾ ಟ್ರಿಬ್ಯೂನ್ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

‘1971ರಿಂದ ಪೊಲೀಸರು ಇಂತಹ ಪರಿಸ್ಥಿತಿಯನ್ನು ಎದುರಿಸಿರಲಿಲ್ಲ’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪೊಲೀಸ್ ಪ್ರಧಾನ ಕಚೇರಿ ಮೇಲೆ ಸೋಮವಾರ ರಾತ್ರಿ ದಾಳಿ ನಡೆದಾಗ, ಹಿರಿಯ ಅಧಿಕಾರಿಗಳನ್ನು ಹೆಲಿಕಾಪ್ಟರ್ ನೆರವಿನಿಂದ ಸುರಕ್ಷಿತವಾಗಿ ಸ್ಥಳಾಂತರಿ-ಸಲಾಯಿತು. ಅನೇಕರು ಗೋಡೆಗಳನ್ನು ಏರಿ ತಪ್ಪಿಸಿಕೊಂಡರು ಎಂದು ಮೂಲಗಳು ತಿಳಿಸಿವೆ.

ಉದ್ರಿಕ್ತರ ಗುಂಪು ಸೋಮವಾರ ಜನಪ್ರಿಯ ಜಾನಪದ ಗಾಯನ ತಂಡ ‘ಜೋಲರ್ ಗಾನ್’ದ ಸದಸ್ಯ ರಾಹುಲ್ ಆನಂದ್ ಅವರ ನಿವಾಸದ ಮೇಲೂ ದಾಳಿ ನಡೆಸಿ, ಲೂಟಿ ಮಾಡಿದೆ. ಬಳಿಕ ಬೆಂಕಿಯಿಟ್ಟು ಧ್ವಂಸಗೊಳಿಸಿದೆ. ದಾಳಿಕೋರರು ಮನೆಯಲ್ಲಿದ್ದ ಕನ್ನಡಿ, ಪೀಠೋಪಕರಣ, ಸಂಗೀತ ವಾದ್ಯಗಳು ಸೇರಿದಂತೆ ಕೈಗೆ ಸಿಕ್ಕ ವಸ್ತುಗಳನ್ನು ಹೊತ್ತೊಯ್ದಿದ್ದಾರೆ. ಅವರ ನಿವಾಸದಲ್ಲಿ 3,000ಕ್ಕೂ ಹೆಚ್ಚು ಸಂಗೀತ ವಾದ್ಯಗಳಿ-ದ್ದವು ಎನ್ನಲಾಗಿದೆ. ದಾಳಿಯ ಬೆನ್ನಲ್ಲೇ ರಾಹುಲ್ ಆನಂದ್ ಮತ್ತು ಅವರ ಕುಟುಂಬವನ್ನು ಗೋಪ್ಯ ಸ್ಥಳದಲ್ಲಿ ರಕ್ಷಿಸಲಾಗಿದೆ.

ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಕ್ಷ ಢಾಕಾದಲ್ಲಿ ಬುಧವಾರ ಏರ್ಪಡಿಸಿದ್ದ ರ‍್ಯಾಲಿಯಲ್ಲಿ ಸೇರಿದ್ದ ಜನಸ್ತೋಮ — ಎಎಫ್‌ಪಿ ಚಿತ್ರ

ಇಂದಿನ ಪ್ರಮುಖ ಬೆಳವಣಿಗೆಗಳು

- ದೇಶದ ರ‍್ಯಾಪಿಡ್ ಆ್ಯಕ್ಷನ್ ಬೆಟಾಲಿಯನ್ (ಆರ್‌ಎಬಿ) ಮತ್ತು ಢಾಕಾ ಮೆಟ್ರೊಪಾಲಿಟನ್ ಪೊಲೀಸ್ (ಡಿಎಂಪಿ) ಹುದ್ದೆಗಳಿಗೆ ಹೊಸ ನೇಮಕಗಳನ್ನು ಮಾಡಲಾಗಿದೆ. ಎ.ಕೆ.ಎಂ. ಶಾಹಿದುರ್ ರೆಹಮಾನ್ ಅವರನ್ನು ಆರ್‌ಎಬಿಯ ಮಹಾ ನಿರ್ದೇಶಕರನ್ನಾಗಿ, ಮೈನುಲ್ ಹಸನ್ ಅವರನ್ನು ಡಿಎಂಪಿ ಆಯುಕ್ತರನ್ನಾಗಿ ನೇಮಿಸಲಾಗಿದೆ.
- 2020ರ ಅಕ್ಟೋಬರ್‌ನಲ್ಲಿ ನೇಮಕಗೊಂಡಿದ್ದ ಅಟಾರ್ನಿ ಜನರಲ್ ಅಬುಮೊಹಮ್ಮದ್ ಅಮೀನ್ ಉದ್ದೀನ್ ಅವರು ಬುಧವಾರ ರಾಜೀನಾಮೆ ನೀಡಿದ್ದಾರೆ.
- ಬಾಂಗ್ಲಾದೇಶ ಬ್ಯಾಂಕಿನ ನೂರಾರು ಅಧಿಕಾರಿಗಳು ಬ್ಯಾಂಕಿನ ಗವರ್ನರ್ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದ್ದಾರೆ. ಬ್ಯಾಂಕ್ ಲೂಟಕೋರರಿಗೆ ನೆರವಾಗುತ್ತಿದ್ದೀರಾ ಎಂದು ಆರೋಪಿಸಿ, ಡೆಪ್ಯುಟಿ ಗವರ್ನರ್ ಅನ್ನು ಕಚೇರಿಯಿಂದ ಹೊರ ಹೋಗುವಂತೆ ಒತ್ತಾಯಿಸಿದ್ದಾರೆ. ಇದರ ಬೆನ್ನಲ್ಲೇ ಡೆಪ್ಯುಟಿ ಗವರ್ನರ್ ಕಾಜಿ ಸಯೀದುರ್ ರೆಹಮಾನ್ ಸೇರಿದಂತೆ ಬ್ಯಾಂಕ್‌ನ ಆರು ಉನ್ನತ ಅಧಿಕಾರಿಗಳು ರಾಜೀನಾಮೆ ನೀಡಿದ್ದಾರೆ.
- ಪೊಲೀಸರ ಅನುಪಸ್ಥಿತಿಯಲ್ಲಿ ಸತತ ಎರಡನೇ ದಿನವಾದ ಬುಧವಾರವೂ ಬಾಂಗ್ಲಾದೇಶದ ಸ್ಕೌಟ್ ಸೇರಿದಂತೆ ವಿದ್ಯಾರ್ಥಿಗಳೇ ಸ್ವಯಂ ಸೇವಕರಾಗಿ ವಿವಿಧೆಡೆ ಸಂಚಾರ ನಿರ್ವಹಣಾ ಕಾರ್ಯವನ್ನು ನಿರ್ವಹಿಸಿದ್ದಾರೆ.
- ಪೊಲೀಸ್ ಪಡೆಯ ಪ್ರತಿಯೊಬ್ಬರೂ ಕರ್ತವ್ಯಕ್ಕೆ ಹಾಜರಾಗಿ, ನಾಗರಿಕರ ಸುರಕ್ಷತೆ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಕಾರ್ಯದಲ್ಲಿ ತೊಡಗಬೇಕು ಎಂದು ಹೊಸದಾಗಿ ನೇಮಕವಾದ ಪೊಲೀಸ್ ಮಹಾನಿರ್ದೇಶಕ (ಐಜಿಪಿ) ಎ.ಕೆ.ಎಂ. ಶಾಹಿದುರ್ ರೆಹಮಾನ್ ಕರೆ ನೀಡಿದ್ದಾರೆ.

‘ದೆಹಲಿಯಲ್ಲೇ ಕೆಲ ದಿನ ಇರಲಿರುವ ಹಸೀನಾ’

ಢಾಕಾ (ಪಿಟಿಐ): ದೇಶ ತೊರೆದಿರುವ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರು ಕೆಲ ದಿನಗಳು ದೆಹಲಿಯಲ್ಲೇ ಇರಲಿದ್ದಾರೆ ಎಂದು ಅವರ ಪುತ್ರ ಸಜೀಬ್ ವಾಜೆದ್ ಜಾಯ್ ಬುಧವಾರ ಪ್ರತಿಕ್ರಿಯಿಸಿದ್ದಾರೆ.

ಹಸೀನಾ ಅವರ ಮುಂದಿನ ನಡೆ ಕುರಿತು ಜರ್ಮನ್ ಮಾಧ್ಯಮಕ್ಕೆ ಪ್ರತಿಕ್ರಿಯಿಸಿದ ಅವರು, ‘ಸದ್ಯ ವದಂತಿಗಳು. ಆ ಬಗ್ಗೆ ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ. ಕೆಲ ದಿನಗಳ ಅವರು ದೆಹಲಿಯಲ್ಲಿಯೇ ಇರಲಿದ್ದಾರೆ’ ಎಂದಿದ್ದಾರೆ.

ರಾಜಕೀಯಕ್ಕೆ ಸೇರುವ ಯೋಜನೆ ಇದೆಯೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಸದ್ಯ ಅಂತಹ ಯೋಜನೆ ಇಲ್ಲ. ನಮ್ಮ ಕುಟುಂಬದ ವಿರುದ್ಧ ಇದು ಮೂರನೇ ಬಾರಿ ನಡೆದ ದಂಗೆಯಾಗಿದೆ’ ಎಂದಿದ್ದಾರೆ.

‘ಹಿಂದೂಗಳನ್ನು ಗುರಿಯಾಗಿಸಲಾಗಿದೆ’

ಯೋಗಿ ಆದಿತ್ಯನಾಥ್

ಅಯೋಧ್ಯೆ, ಉತ್ತರ ಪ್ರದೇಶ (ಪಿಟಿಐ): ಬಾಂಗ್ಲಾದೇಶದಲ್ಲಿ ಹಿಂದೂಗಳನ್ನು ಗುರಿಯಾಗಿಸ-ಲಾಗಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಬುಧವಾರ ಆರೋಪಿಸಿದರು.

ಸನಾತನ ಧರ್ಮಕ್ಕೆ ಎದುರಾಗಿರುವ ಬೆದರಿಕೆ ವಿರುದ್ಧ ಒಟ್ಟಾಗಿ ಹೋರಾಡೋಣ ಎಂದು ಇದೇ ಸಂದರ್ಭದಲ್ಲಿ ಕರೆ ನೀಡಿದರು.

ಬಾಂಗ್ಲಾದೇಶದಲ್ಲಿ ಹಿಂಸಾಚಾರ ಉಲ್ಲೇಖಿಸಿದ ಅವರು, ‘ಇಂದು ಭಾರತದ ನೆರೆಯವರೆಲ್ಲ ಬೆಂಕಿಗೆ ಆಹುತಿಯಾಗುತ್ತಿದ್ದಾರೆ, ದೇಗುಲಗಳನ್ನು ಧ್ವಂಸ ಮಾಡಲಾಗುತ್ತಿದೆ. ಹಿಂದೂಗಳನ್ನು ಗುರಿಯಾಗಿಸಲಾಗಿದೆ’ ಎಂದರು.

ಶ್ರೀ ರಾಮಜನ್ಮಭೂಮಿ ತೀರ್ಥ ಕ್ಷೇತ್ರದ ಪ್ರಥಮ ಅಧ್ಯಕ್ಷರಾದ ಬ್ರಹ್ಮಲೀನ ಪರಮಹಂಸ ರಾಮಚಂದ್ರ ದಾಸ್ ಅವರ 21ನೇ ಪುಣ್ಯಸ್ಮರಣೆ ಅಂಗವಾಗಿ ಅವರ ಪ್ರತಿಮೆಯನ್ನು ಅನಾವರಣ ಮಾಡಿ ಗೌರವ ನಮನ ಸಲ್ಲಿಸಿದರು.

‘ದಂಗೆಕೋರರ ಸ್ವರ್ಗ ಆಗದಿರಲಿ’

ಪ್ರಜಾವಾಣಿ ವಾರ್ತೆ

ಗುವಾಹಟಿ: ‘ದಂಗೆಕೋರರಿಗೆ ಬಾಂಗ್ಲಾದೇಶ ‘ಸ್ವರ್ಗ’ ಎಂಬಂತೆ ಮತ್ತೊಮ್ಮೆ ಆಗಬಾರದು. ಶೇಖ್ ಹಸೀನಾ ಪ್ರಧಾನಿ ಆಗುವುದಕ್ಕೂ ಮೊದಲು ಬಾಂಗ್ಲಾದೇಶವು ದಂಗೆಕೋರರಿಗೆ ಸುರಕ್ಷಿತ ನೆಲೆ ಎಂಬಂತಿತ್ತು’ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಬುಧವಾರ ಅಭಿಪ್ರಾಯ ಪಟ್ಟರು. ಬಾಂಗ್ಲಾದಲ್ಲಿನ ಹಿಂಸಾಚಾರದ ಬಗ್ಗೆಯೂ ಕಳವಳ ವ್ಯಕ್ತಪಡಿಸಿದರು.

‘2041ರ ಹೊತ್ತಿಗೆ ರಾಜ್ಯದಲ್ಲಿ ಮುಸ್ಲಿಮರು ಬಹುಸಂಖ್ಯಾತರಾದರೆ, ರಾಜ್ಯ ಪರಿಸ್ಥಿತಿ ಏನಾಗಬಹುದು. ಆ ದೇಶದ ಪರಿಸ್ಥಿತಿಯು ಭಾರತದ ಪೂರ್ವ ಭಾಗದ ರಾಜ್ಯಗಳಿಗೆ ಕಳವಳ ಕಾರಿಯಾಗಲಿದೆ’ ಎಂದರು.

ಸಲ್ಮಾನ್ ಖುರ್ಷೀದ್ ಹೇಳಿಕೆಗೆ ಖಂಡನೆ

ನವದೆಹಲಿ (ಪಿಟಿಐ): ‘ಬಾಂಗ್ಲಾದೇಶದ ಸ್ಥಿತಿ ಭಾರತದಲ್ಲೂ ಬರಬಹುದು’ ಎಂಬ ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷೀದ್ ಅವರ ಹೇಳಿಕೆಯನ್ನು ಖಂಡಿಸಿರುವ ಬಿಜೆಪಿ, ‘ಖುರ್ಷೀದ್ ಅರಾಜಕತೆಯ ಪರವಾಗಿದ್ದಾರೆ’ ಎಂದು ಟೀಕಿಸಿದೆ.

ಮಂಗಳವಾರ ರಾತ್ರಿ ನಡೆದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಖುರ್ಷೀದ್, ‘ಮೇಲ್ನೋಟಕ್ಕೆ ದೇಶದಲ್ಲಿ ಎಲ್ಲವೂ ಸಹಜವಾಗಿಯೇ ಇದೆ. ಆದರೆ ಬಾಂಗ್ಲಾದೇಶದ ಸ್ಥಿತಿ ಭಾರತದಲ್ಲೂ ಒದಗಿ ಬರಬಹುದು’ ಎಂದು ಹೇಳಿದ್ದರು.

‘ಇದು ಅರಾಜಕತೆಯ ಪರವಾದ ಹೇಳಿಕೆ. ಇದು ದೇಶದ್ರೋಹ ಎಂದು ನಾನು ಭಾವಿಸುತ್ತೇನೆ. ಕಾಂಗ್ರೆಸ್ ತನ್ನ ವೈಫಲ್ಯಗಳನ್ನು ಮರೆಮಾಚಲು ಇಂತಹ ಹೇಳಿಕೆ ನೀಡುತ್ತಿರುವುದು ದುರದೃಷ್ಟಕರ’ ಎಂದು ಬಿಜೆಪಿ ಸಂಸದ ರಾಜೀವ್ ಪ್ರತಾಪ್ ರುಡಿ ಅವರು ಟೀಕಿಸಿದ್ದಾರೆ.

ವಯನಾಡ್: ಇನ್ನೂ 138 ಮಂದಿ ನಾಪತ್ತೆ

9ನೇ ದಿನವೂ ಮುಂದುವರಿದ ಶೋಧ ● ಪರಿಹಾರ ನಿರ್ವಹಣೆ, ವಿತರಣೆಗೆ ತಂತ್ರಜ್ಞಾನ ನೆರವು

ವಯನಾಡ್, ಕೇರಳ (ಪಿಟಿಐ): ಧಾರಾಕಾರ ಮಳೆ ಸುರಿದಿದ್ದರಿಂದ ಸಂಭವಿಸಿದ ಹಲವು ಭೂಕುಸಿತಗಳು ಮತ್ತು ಪ್ರವಾಹದಿಂದ ತತ್ತರಿಸಿರುವ ವಯನಾಡ್‌ನ ಗ್ರಾಮಗಳಿಂದ 138 ಮಂದಿ ನಾಪತ್ತೆಯಾಗಿದ್ದಾರೆ. ಜಿಲ್ಲಾಡಳಿತವು ಈ ಸಂಬಂಧ ಅಧಿಕೃತವಾಗಿ ಕರಡುಪಟ್ಟಿ ಪ್ರಕಟಿಸಿದೆ.

ಚೂರಲ್‌ಮಲ ಮತ್ತು ಮುಂಡಕ್ಕೈ ಸೇರಿದಂತೆ ಭೂಕುಸಿತದಿಂದ ತೀವ್ರ ಬಾಧಿತವಾಗಿರುವ ಗ್ರಾಮಗಳಲ್ಲಿ ಮೃತಪಟ್ಟವರ ಸಂಖ್ಯೆ 226ಕ್ಕೆ ಏರಿದೆ.

ಬಾಧಿತ ಪ್ರದೇಶಗಳ ಕುಟುಂಬಗಳ ಪಡಿತರ ಚೀಟಿ, ಮತದಾರರ ಚೀಟಿಯ ವಿವರಗಳು, ಗ್ರಾಮ ಪಂಚಾಯಿತಿ, ಐಸಿಡಿಎಸ್, ಜಿಲ್ಲಾ ಪ್ರಾಕೃತಿಕ ವಿಕೋಪ ಪ್ರಾಧಿಕಾರ, ಜಿಲ್ಲಾ ಶಿಕ್ಷಣ ಇಲಾಖೆಯ ದಾಖಲೆಗಳನ್ನು ಆಧರಿಸಿ ಪಟ್ಟಿ ಸಿದ್ಧಪಡಿ-ಸಲಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ.

ಶಿಬಿರಗಳಲ್ಲಿ ಆಶ್ರಯ ಪಡೆದಿರುವವರು, ಸಂಬಂಧಿಕರ ಮನೆಗಳಲ್ಲಿ ಉಳಿದಿರುವವರು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರು ಹಾಗೂ ಸಾವು ದೃಢಪಟ್ಟವರ ಹೆಸರನ್ನು ಪಟ್ಟಿಯಿಂದ ಕೈಬಿಡಲಾಗಿದೆ ಎಂದು ತಿಳಿಸಿದೆ.

> **ವಯನಾಡ್ ಭೂಕುಸಿತ ಅವಘಡವನ್ನು ಸರ್ಕಾರ ರಾಷ್ಟ್ರೀಯ ವಿಕೋಪ ಎಂದು ಘೋಷಿಸಬೇಕು ಹಾಗೂ ಸಂತ್ರಸ್ತರಿಗೆ ಹೆಚ್ಚಿನ ಪರಿಹಾರ ನೀಡಬೇಕು**
> **ರಾಹುಲ್‌ಗಾಂಧಿ,** ಕಾಂಗ್ರೆಸ್ ನಾಯಕ

ಈ ಮಧ್ಯೆ, ಚೂರಲ್‌ಮಲ ಮತ್ತು ಮುಂಡಕ್ಕೈ ಗ್ರಾಮಗಳ ವ್ಯಾಪ್ತಿಯಲ್ಲಿ 9ನೇ ದಿನವಾದ ಬುಧವಾರವೂ ಶೋಧ ಕಾರ್ಯ ಮುಂದುವರಿದಿದ್ದು, 1,026 ಮಂದಿ ನಿರತರಾಗಿದ್ದಾರೆ.

ಪರಿಹಾರ ನಿರ್ವಹಣೆ, ವಿತರಣೆಗೆ ತಂತ್ರಜ್ಞಾನ ನೆರವು: ಇನ್ನೊಂದೆಡೆ, ಪರಿಹಾರ ಕಾರ್ಯಗಳಿಗೆ ನೆರವಾಗಲು ಕೊಚ್ಚಿ ಮೂಲದ ಸಾಫ್ಟ್‌ವೇರ್ ಅಭಿವೃದ್ಧಿ ಸಂಸ್ಥೆ ಫೇರ್‌ಕೋರ್ ಇನ್ಫೊಟೆಕ್ ತಾಂತ್ರಿಕ ಪರಿಣತಿ ಹಾಗೂ ತಂತ್ರಜ್ಞಾನದ ನೆರವನ್ನು ಜಿಲ್ಲಾಡಳಿತಕ್ಕೆ ಒದಗಿಸಿದೆ.

ಇಲ್ಲಿನ ಸೇಂಟ್ ಜೋಸೆಫ್ ಪ್ರೌಢ ಶಾಲೆಯಲ್ಲಿ ಸ್ಥಾಪಿಸಿರುವ ಪರಿಹಾರ ನೆರವು ಸಂಗ್ರಹ ಕೇಂದ್ರದಲ್ಲಿ ಅತ್ಯಾಧುನಿಕ ನಿರ್ವಹಣಾ ವ್ಯವಸ್ಥೆಯನ್ನು ಸಂಸ್ಥೆಯ ಸ್ಥಾಪಕ ರಜಿತ್ ರಾಮಚಂದ್ರನ್ ಮತ್ತು ತಂಡವು ಅಳವಡಿಸಿದೆ.

ಅಗಾಧವಾಗಿ ಬರುತ್ತಿರುವ ಪರಿಹಾರ ಸಾಮಗ್ರಿಗಳ ನಿರ್ವಹಣೆಗೆ ಕಂದಾಯ ಇಲಾಖೆ ಅಧಿಕಾರಿಗಳ ಕೆಲಸವನ್ನು ಇದು ಹಗುರಾಗಿಸಿದೆ. ಅಲ್ಲದೆ, ಸಕಾಲದಲ್ಲಿ ಸಂತ್ರಸ್ತರಿಗೆ ಪರಿಹಾರ ಒದಗಿಸುವುದು ಸಾಧ್ಯವಾಗಿದೆ.

‘ಸಂಸ್ಥೆಯ ಇಆರ್‌ಪಿ ಸಾಫ್ಟ್‌ವೇರ್ ನಿರ್ವಹಣೆಯ ಒಟ್ಟು ವ್ಯವಸ್ಥೆಯನ್ನು ಸರಾಗಗೊಳಿಸಿದೆ’ ಎಂದು ರಜಿತ್ ತಿಳಿಸಿದರು.

‘ಸಾಫ್ಟ್‌ವೇರ್ ಬಳಕೆಗೆ 10 ಅಧಿಕಾರಿಗಳಿಗೆ ತರಬೇತಿ ನೀಡಿದೆ. ನಾವು ಇಆರ್‌ಪಿ (ಎಂಟರ್‌ಪ್ರೈಸ್ ರಿಸೋರ್ಸ್ ಪ್ಲಾನಿಂಗ್) ಅಳವಡಿಸಿದ್ದೇವೆ. ಅಧಿಕಾರಿಗಳು ತ್ವರಿತಗತಿಯಲ್ಲಿ ಇದನ್ನು ಅರ್ಥಮಾಡಿಕೊಂಡರು’ ಎಂದು ಹೇಳಿದರು.

ಪಾಲಕ್ಕಾಡ್ ಮೂಲದ ರಜಿತ್ ಕೊಚ್ಚಿಯಲ್ಲಿ ಕಂಪನಿ ನಡೆಸುತ್ತಿದ್ದಾರೆ. ಸಂಕಷ್ಟದ ಸಂದರ್ಭದಲ್ಲಿ ನೆರವಿಗೆ ಮುಂದಾಗುತ್ತಾರೆ.

ಮೋದಿ ಭೇಟಿ ಸಾಧ್ಯತೆ: ಪ್ರಧಾನಿ ನರೇಂದ್ರ ಮೋದಿ ಅವರು ದುರಂತ ನಡೆದ ಸ್ಥಳಕ್ಕೆ ಶನಿವಾರ ಭೇಟಿ ನೀಡುವ ಸಾಧ್ಯತೆಯಿದೆ. ನವದೆಹಲಿಯಿಂದ ಕಣ್ಣೂರಿಗೆ ಬರಲಿರುವ ಪ್ರಧಾನಿ, ಅಲ್ಲಿಂದ ಹೆಲಿಕಾಪ್ಟರ್‌ನಲ್ಲಿ ವಯನಾಡ್‌ಗೆ ಪ್ರಯಾಣಿಸುವರು ಎಂದು ಮೂಲಗಳು ಹೇಳಿವೆ.

ನೆರವು ಸಿಬ್ಬಂದಿಗೆ ಆರೋಗ್ಯ ಚಿಕಿತ್ಸೆ

ವಯನಾಡ್ (ಪಿಟಿಐ): ಶವಗಳ ಶೋಧ, ರಕ್ಷಣಾ ಕಾರ್ಯಲ್ಲಿ ತೊಡಗಿದ್ದ ಜೆಸಿಬಿ ನಿರ್ವಾಹಕರೂ ಸೇರಿ ಭೂಕುಸಿತದ ಸ್ಥಳದಲ್ಲಿ ಪರಿಹಾರ ಕಾರ್ಯಗಳಲ್ಲಿ ನಿರತರಾಗಿದ್ದ ಹಲವರು ಮಾನಸಿಕ ಆಘಾತಕ್ಕೆ ಒಳಗಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಜೆಸಿಬಿ ನಿರ್ವಾಹಕರು ಸೇರಿದಂತೆ ನೆರವು ಸಿಬ್ಬಂದಿಗೆ ಮಾನಸಿಕ ಆರೋಗ್ಯ ಚಿಕಿತ್ಸೆ ನೆರವು, ಸಮಾಲೋಚನೆಗೆ ಸರ್ಕಾರ ಮುಂದಾಗಿದೆ. ಶೋಧ ಕಾರ್ಯಕ್ಕೆ 300ಕ್ಕೂ ಹೆಚ್ಚು ಜೆಸಿಬಿಗಳ ನೆರವು ಪಡೆಯಲಾಗಿತ್ತು.

ಬಿಹಾರ, ತಮಿಳುನಾಡು, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ಜಾರ್ಖಂಡ್, ಒಡಿಶಾ, ಕರ್ನಾಟಕದಿಂದಲೂ ನಿರ್ವಾಹಕರು ತೆರಳಿದ್ದರು. ಇವರಿಗೆ ಭಿನ್ನ ಭಾಷೆಗಳಲ್ಲಿ ಮಾನಸಿಕ ಆರೋಗ್ಯ ಸಲಹೆ ನೀಡಲಾಗುತ್ತಿದೆ.

ಇದರ ಹೊರತಾಗಿ ಭೂಕುಸಿತ ಪ್ರದೇಶಗಳ ಬಾಧಿತರಿಗೆ ನೆರವಾಗಲು ಸಂಚಾರ ಮಾನಸಿಕ ಆರೋಗ್ಯ ಘಟಕವನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ಹೇಳಿದರು.

ಸೂಪರ್ ಸ್ಪೆಷಾಲಿಟಿ ಟೆಲಿ ಸಂವಹನ ಸೇವೆಯನ್ನು ಶಿಬಿರಗಳು ಹಾಗೂ ಬಾಧಿತ ವಲಯದಲ್ಲಿ ಉಳಿದ ಮನೆಗಳಲ್ಲಿ ಇರುವ ಜನರಿಗೆ ಒದಗಿಸಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವರಾದ ಆರ್. ಬಿಂದು ತಿಳಿಸಿದರು.

‘ಹಿಂದೂಗಳ ರಕ್ಷಿಸಲು ಆಗ್ರಹ’

ಪ್ರಜಾವಾಣಿ ವಾರ್ತೆ/ ಪಿಟಿಐ

ಮುಂಬೈ: ಬಾಂಗ್ಲಾದೇಶದಲ್ಲಿರುವ ಹಿಂದೂಗಳು ಮತ್ತು ದೇಗುಲಗಳನ್ನು ರಕ್ಷಣೆ ಮಾಡಿ ಎಂದು ಹಿಂದೂ ಜನಜಾಗೃತಿ ಸಮಿತಿಯು (ಎಚ್‌ಜೆಎಸ್) ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದೆ.

ಹೀಗೆ ಸ್ಥಳಾಂತರಗೊಂಡ ಹಿಂದೂಗಳಿಗೆ ಪೌರತ್ವ ತಿದ್ದುಪಡಿ ಕಾಯ್ದೆ ಅಡಿಯಲ್ಲಿ ಆಶ್ರಯ ನೀಡಿ ಎಂದೂ ಮನವಿ ಮಾಡಿದೆ.

ಭಾರತ ಸರ್ಕಾರವು ಸಕಾಲದಲ್ಲಿ ಮಧ್ಯಪ್ರದೇಶ ಮಾಡದಿದ್ದಲ್ಲಿ ಪಾಕಿಸ್ತಾನವು ಪರಿಸ್ಥಿತಿಯ ಲಾಭ ಪಡೆದು ಅಲ್ಲಿ ಹಿಂದೂಗಳ ನರಮೇಧ ಮಾಡುವ ಸಾಧ್ಯತೆ ಇದೆ ಎಂದು ಎಚ್ಚರಿಕೆ ನೀಡಿದೆ.

‘ಸರ್ಕಾರ ವಿರೋಧಿ ಚಟುವಟಿಕೆಯು ಹಿಂಸಾತ್ಮಕ ರೂಪ ಪಡೆದಿದೆ. ಹಿಂದೂಗಳನ್ನು ಗುರಿಯಾಗಿಸಿಕೊಂಡು ಹತ್ಯೆ, ಲೂಟಿಗಳು ನಡೆಯುತ್ತಿವೆ, ದೇಗುಲಗಳನ್ನು ಧ್ವಂಸ ಮಾಡಲಾಗುತ್ತಿದೆ. ಇದು ಅಲ್ಪಸಂಖ್ಯಾತ ಹಿಂದೂಗಳಲ್ಲಿ ಭಯ ಹುಟ್ಟಿಸಿದೆ’ ಎಂದು ಎಚ್‌ಜೆಎಸ್ ರಾಷ್ಟ್ರೀಯ ವಕ್ತಾರ ರಮೇಶ್ ಶಿಂದೆ ಹೇಳಿದರು.

‘ಹಿಂದೂಗಳ ಮೇಲಿನ ದಾಳಿಯನ್ನು ತಡೆಯುವಂತೆ ಬಾಂಗ್ಲಾದೇಶದ ಸೇನೆಗೆ ಭಾರತ ಸರ್ಕಾರವು ನಿರ್ದೇಶನ ನೀಡಬೇಕು. ಅಲ್ಲಿರುವ ಹಿಂದೂಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸ-ಬೇಕು, ತಕ್ಷಣವೇ ಅವರಿಗೆ ಭದ್ರತೆ ಒದಗಿಸಬೇಕು’ ಎಂದು ಕೋರಿದರು.

‘ವಿಶ್ವಸಂಸ್ಥೆಯಲ್ಲಿ ವಿಷಯವನ್ನು ಪ್ರಸ್ತಾಪಿಸಿ, ನಿಯೋಗವೊಂದು ಬಾಂಗ್ಲಾದೇಶಕ್ಕೆ ಭೇಟಿ ನೀಡಬೇಕು ಎಂದು ಒತ್ತಾಯಿಸಬೇಕು’ ಎಂದರು.

205 ಮಂದಿ ಹೊತ್ತು ತಂದ ಏರ್‌ಇಂಡಿಯಾ (ನವದೆಹಲಿ ವರದಿ) : ಏರ್ ಇಂಡಿಯಾ ವಿಶೇಷ ವಿಮಾನವು ಢಾಕಾದಿಂದ ಆರು ಮಕ್ಕಳು ಸೇರಿದಂತೆ 205 ಜನರನ್ನು ದೆಹಲಿಗೆ ಬುಧವಾರ ಬೆಳಿಗ್ಗೆ ಹೊತ್ತುತಂದಿತು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಮಂಗಳವಾರ ರಾತ್ರಿ ಬಾಂಗ್ಲಾದೇಶದ ರಾಜಧಾನಿಯಿಂದ ವಿಮಾನ ಹೊರಟಿತ್ತು ಎಂದು ಹೇಳಿದರು. ವಿಸ್ತಾರ ಮತ್ತು ಇಂಡಿಯೊ ವಿಮಾನಗಳು ನಿಗದಿಯಂತೆ ಬಾಂಗ್ಲಾದೇಶದ ರಾಜಧಾನಿಗೆ ಸಂಚರಿಸುತ್ತಿವೆ.

ಬಾಂಗ್ಲಾ: ಆಹಾರ ವಸ್ತು ದುಬಾರಿ ಸಾಧ್ಯತೆ

- **ನವದೆಹಲಿ:** ಬಾಂಗ್ಲಾದೇಶದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟಿನ ಪರಿಣಾಮವಾಗಿ ಅಲ್ಲಿ ಆಹಾರ ವಸ್ತುಗಳ ಬೆಲೆ ಏರಿಕೆ ಆಗಬಹುದು, ಸ್ಥಳೀಯ ಮಾರುಕಟ್ಟೆಯಲ್ಲಿ ಒಂದಿಷ್ಟು ಸಮಸ್ಯೆಗಳು ಸೃಷ್ಟಿಯಾಗಬಹುದು ಎಂದು ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಕೃಷಿ ಅಭಿವೃದ್ಧಿ ಕುರಿತ ಅಂತರ-ರಾಷ್ಟ್ರೀಯ ನಿಧಿಯ ಸಹ ಉಪಾಧ್ಯಕ್ಷೆ ಜ್ಯೋತ್ಸ್ನಾ ಪುರಿ ಹೇಳಿದ್ದಾರೆ.
- ಹೂಡಿಕೆಗಳು ಎಷ್ಟರಮಟ್ಟಿಗೆ ಸುರಕ್ಷಿತ ಎಂಬ ಭಾವನೆಯು ಹೂಡಿಕೆದಾರರಲ್ಲಿ ಮೂಡಬಹುದು. ವಿದೇಶಿ ಹೂಡಿಕೆದಾರರಿಗೆ ಅವರ ಹೂಡಿಕೆಯು ಸುರಕ್ಷಿತ ಎಂಬ ಭಾವನೆ ಮೂಡಿಸಬೇಕು, ಹೂಡಿಕೆಯ ಹಣವು ಹಿಂದಕ್ಕೆ ಸಿಗುತ್ತದೆ ಎಂಬ ಭರವಸೆ ನೀಡಬೇಕು ಎಂದು ಜ್ಯೋತ್ಸ್ನಾ ಹೇಳಿದ್ದಾರೆ.
- **ಕೋಲ್ಕತ್ತ:** ಕೋಲ್ಕತ್ತದ ವಿವಿಧ ಆಸ್ಪತ್ರೆಗಳಿಗೆ ಚಿಕಿತ್ಸೆಗಾಗಿ ಬರುವ ಬಾಂಗ್ಲಾದೇಶೀಯರ ಸಂಖ್ಯೆಯು ಬಿಕ್ಕಟ್ಟಿನ ಪರಿಣಾಮವಾಗಿ ಭಾರಿ ಪ್ರಮಾಣದಲ್ಲಿ ಕಡಿಮೆ ಆಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಾಂಗ್ಲಾದೇಶದಲ್ಲಿ ಪ್ರತಿಭಟನೆಗಳು ಹಿಂಸಾತ್ಮಕ ರೂಪ ಪಡೆದ ನಂತರದಲ್ಲಿ ರೋಗಿಗಳು ಚಿಕಿತ್ಸೆಗೆ ಬರುವ ಪ್ರಮಾಣವು ಕಡಿಮೆ ಆಗಿದೆ ಎಂದು ಅವರು ಹೇಳಿದ್ದಾರೆ. ಮಣಿಪಾಲ್ ಆಸ್ಪತ್ರೆ, ಫೋರ್ಟಿಸ್ ಹೆಲ್ತ್‌ಕೇರ್, ಅಪೋಲೊ ಆಸ್ಪತ್ರೆಗಳು ತಮ್ಮಲ್ಲಿಗೆ ಬರುವ ಬಾಂಗ್ಲಾ ರೋಗಿಗಳ ಸಂಖ್ಯೆ ಕಡಿಮೆ ಆಗಿದೆ ಎಂದು ತಿಳಿಸಿವೆ.
- **ಕೋಲ್ಕತ್ತ:** ಬಾಂಗ್ಲಾದೇಶಿ ನಟ ಶಾಂತೊ ಖಾನ್ ಮತ್ತು ಅವರ ತಂದೆ ಸಲೀಂ ಖಾನ್ ಅವರ ಹತ್ಯೆಗೆ ಕೋಲ್ಕತ್ತ ಸಿನಿಮೋದ್ಯಮ ಆಘಾತ ವ್ಯಕ್ತಪಡಿಸಿದೆ. ಸಲೀಂ ಅವರು ನಿರ್ಮಾಪಕರಾಗಿದ್ದರು. ಬಾಂಗ್ಲಾದಲ್ಲಿ ನಡೆಯುತ್ತಿರುವ ಗಲಭೆಗಳ ಸಂದರ್ಭದಲ್ಲಿ ತಂದೆ ಮತ್ತು ಮಗನನ್ನು ಹತ್ಯೆ ಮಾಡಲಾಗಿದೆ.

ಚೂರಲ್‌ಮಲ: ಮುನ್ನಡೆಸಿದ ಶಾಲೆಯಲ್ಲಿಲ್ಲ ಜೀವಕಳೆ

● ವಿಕ್ರಂ ಕಾಂತಿಕೆರೆ

ಕಲ್ಪೆಟ್ಟ (ವಯನಾಡ್ ಜಿಲ್ಲೆ): ಮುಂಭಾಗದ ಮೆಟ್ಟಿಲು ಇಳಿದು ಮೈದಾನದಲ್ಲಿ ನಿಂತು ನೋಡಿದರೆ ತಣ್ಣನೆ ಹರಿಯುವ ಹೊಳೆ. ಅದರಾಚೆ ನಿತ್ಯಹರಿದ್ವರ್ಣದ ತೋಟ-ಕಾಡು-ಗುಡ್ಡದ ಆವರಣ. ಹಿಂಭಾಗದಲ್ಲೂ ಬೆಟ್ಟಗಳ ಸಾಲು. ಹಸಿರ ರಾಶಿಯ ನಡುವೆ ಗ್ರಾಮೀಣ ಮಕ್ಕಳಿಗೆ ಶಿಕ್ಷಣ ನೀಡಿ ಜನರ ಬದುಕು ಹಸನಾಗಿಸಿದ ಚೂರಲ್‌ಮಲ ಸರ್ಕಾರಿ ವೃತ್ತಿಪರ ಹಿರಿಯ ಪ್ರಾಥಮಿಕ ಶಾಲೆಯ ಹಳೆಯ ಚಿತ್ರಣವಿದು.

ಮುಂಡಕ್ಕೈ, ಪುಂಜಿರಿಮಟ್ಟಂ ಮತ್ತು ಚೂರಲ್‌ಮಲದಲ್ಲಿ ಸಂಭವಿಸಿದ ಭೂಕುಸಿತದ ನಂತರ ಈ ಶಾಲೆಯ ಪರಿಸರ ಗುರುತು ಸಿಗದಷ್ಟು ಬದಲಾಗಿದೆ. ಮೈದಾನವಿದ್ದ ಜಾಗ ಈಗ ‘ಸ್ಮಶಾನ’. ಮುಂಡಕ್ಕೈಯಿಂದ ಕೆಸರುಮಿಶ್ರಿತ ನೀರು ಎಳೆದುಕೊಂಡು ಬಂದ ಅನೇಕ ಮಂದಿಯ ಮೃತದೇಹಗಳು ಸಿಕ್ಕಿದ್ದು ಇಲ್ಲೇ. ಬಂಡೆಕಲ್ಲುಗಳು ಮತ್ತು ಗುಡ್ಡದಂತೆ ಬಿದ್ದಿರುವ ಮಣ್ಣಿನ ರಾಶಿಯಡಿ ಇನ್ನೂ ದೇಹಗಳಿಗಾಗಿ ಹುಡುಕಾಟ ನಡೆಯುತ್ತಿದೆ.

ಮುಂಡಕ್ಕೈಯಲ್ಲಿದ್ದ ಶಾಲೆಗಳೆಲ್ಲವೂ ಮಹಾಪ್ರವಾಹಕ್ಕೆ ಕೊಚ್ಚಿಕೊಂಡು ಹೋಗಿವೆ. ಚೂರಲ್‌ಮಲ ಶಾಲೆಗೆ ಕಲ್ಲು ಮತ್ತು ಮರದ ದಿಮ್ಮಿ ಬಡಿದು ಅಲ್ಪಸ್ವಲ್ಪ ಹಾನಿಯಾಗಿದ್ದರೂ ಕುಸಿಯದೆ ಗಟ್ಟಿಯಾಗಿ ನಿಂತಿದೆ. ಗ್ರಾಮೀಣ ಜನರ ಬದುಕಿಗೆ ತಿರುವು ನೀಡಿದ ಶಾಲೆ ಹಾಗೆ ದೃಢವಾಗಿ ನಿಂತ ಕಾರಣ ಅನೇಕ ಮಂದಿಯ ಜೀವ ಉಳಿದಿದೆ, ಚೂರಲ್‌ಮಲ ಪಟ್ಟಣದ ಬಹುಪಾಲು ಕೂಡ ಉಳಿದಿದೆ.

ಕುಸಿಯದಿರುವ ಚೂರಲ್‌ಮಲ ಶಾಲೆ ಪ್ರಜಾವಾಣಿ ಚಿತ್ರ/ಫಕ್ರುದ್ದೀನ್ ಎಚ್

ದುರಂತದ ನೆಲದಿಂದ

‘ಶಾಲೆಯ ಗೋಡೆಗಳು ನೀರನ್ನು ತಡೆಯದೇ ಇದ್ದಿದ್ದರೆ ಚೂರಲ್‌ಮಲ ಪಟ್ಟಣದ ಕುರುಹೇ ಇರುತ್ತಿರಲಿಲ್ಲ’ ಎನ್ನುತ್ತಾರೆ ಸ್ಥಳೀಯರು.

ಹಂತಹಂತವಾಗಿ ಬೆಳೆದ ಶಾಲೆ ಇದು. ಶಾಲೆಯ ಅಭಿವೃದ್ಧಿ ಆದಂತೆಲ್ಲ ಮುಂಡಕ್ಕೈ, ಚೂರಲ್‌ಮಲ, ವೆಳ್ಳಾರ್‌ಮಲ, ಅಟ್ಟಮಲ ಮತ್ತು ಪುಂಜಿರಿಮಟ್ಟಂ ಗ್ರಾಮಗಳ ಜನರ ಬದುಕು ಬದಲಾಗಿತ್ತು. ಪ್ರಾಥಮಿಕ ಹಂತದಲ್ಲಿದ್ದ ಶಾಲೆ ಹೈಸ್ಕೂಲ್ ಆಗಿ, ನಂತರ ಪಿಡಿಸಿ (ಪಿಯುಸಿ) ವರೆಗೆ ಇಲ್ಲೇ ಕಲಿಯಲು ಅವಕಾಶವಾಯಿತು. ಇದರಿಂದ ಕಾಲೇಜಿಗೆ ಹೋಗುವವರ ಸಂಖ್ಯೆ ಹೆಚ್ಚಾಯಿತು.

‘ನಾನು ಶಾಲೆಗೆ ಹೋಗುವಾಗ ಇಲ್ಲಿ 10ನೇ ತರಗತಿ ವರೆಗೆ ಮಾತ್ರ ಶಿಕ್ಷಣವಿತ್ತು. ಚಹಾ ತೋಟಗಳಲ್ಲಿ ಕೆಲಸ ಮಾಡುತ್ತ ‘ಪಾಡಿ’ಗಳಲ್ಲಿ (ಲೈನ್‌ಮನೆಗಳು) ವಾಸಿ-ಸುತ್ತಿದ್ದವರ ಮಕ್ಕಳು ಓದಿ ಉನ್ನತ ಶಿಕ್ಷಣ ಮತ್ತು ಉದ್ಯೋಗ ಗಳಿಸಿದ್ದರಿಂದ ಪಾಡಿಗಳ ಬದುಕು ಇಲ್ಲದಾಯಿತು. ಚಂದದ ಮನೆಗಳು ನಿರ್ಮಾಣವಾದವು. ಪ್ರವಾಸೋದ್ಯಮ ವಿಸ್ತರಿಸಿತು’ ಎಂದು ಸ್ಥಳೀಯ ನಿವಾಸಿ ಅಜಯ್ ಹೇಳಿದರು.

> **ಸುಂದರ ವಾತಾವಣದಲ್ಲಿ ಕಲಿಯಲು ಹಿತವಾಗುತ್ತಿತ್ತು. ನಾನು 8ನೇ ತರಗತಿಯಲ್ಲಿದ್ದೆ. ಮೂವರು ಗೆಳೆಯರು ಇಲ್ಲವಾಗಿದ್ದಾರೆ. ಇನ್ನು ಮುಂದೆ ದೂರದ ಶಾಲೆಗೆ ಹೋಗಬೇಕು.**
> **ಹೃಸ್ವಾನ್,** ವೆಳ್ಳಾರ್‌ಮಲ ಶಾಲೆಯ ವಿದ್ಯಾರ್ಥಿ

ಜುಲೈ 27ರಂದು ಕೊನೆಯದಾಗಿ ಈ ಶಾಲೆಗಳಲ್ಲಿ ತರಗತಿಗಳು ನಡೆದಿದ್ದವು. 28 ಭಾನುವಾರ. 29ರಂದು ಧಾರಾಕಾರ ಮಳೆ ಎಂದು ರಜೆ ನೀಡಲಾಗಿತ್ತು. ಅಂದು ತಡರಾತ್ರಿ ಉಂಡು ಮಲಗಿದವರಲ್ಲಿ ಹಲವರು ಮತ್ತೆ ಏಳಲೇ ಇಲ್ಲ. ಇವರಲ್ಲಿ ವಿದ್ಯಾರ್ಥಿಗಳೂ ಇದ್ದರು. ದುರಂತದಲ್ಲಿ ಒಟ್ಟು 36 ಮಕ್ಕಳು ಮೃತರಾಗಿದ್ದು 17 ಮಂದಿಯನ್ನು ಇನ್ನೂ ಪತ್ತೆ ಆಗಿಲ್ಲ.

ಶಾಲೆಯ ಬ್ಲ್ಯಾಕ್‌ಬೋರ್ಡ್‌ಗಳಲ್ಲಿ 27ರಂದು ಬರೆದ ವಿದ್ಯಾರ್ಥಿಗಳ ಸಂಖ್ಯೆ ಇದೆ. ಅವರಲ್ಲಿ ಹಲವರು ಇನ್ನು ಈ ಶಾಲೆಯ ಕೊಠಡಿಗಳಿಗೆ ಬರುವುದಿಲ್ಲ. ಕೆಸರು ತುಂಬಿದ ಕೊಠಡಿಗಳ ಮುಂದೆ ಕೆಲವು ಕಡೆ ದೊಡ್ಡದೊಡ್ಡ ಮರದ ದಿಮ್ಮಿಗಳು ಅಪ್ಪಳಿಸಿವೆ. ಕೆಳಗಿನ ಭಾಗದಲ್ಲಿರುವ ಕಟ್ಟಡದ ಪಿಲ್ಲರ್‌ಗಳು ನೀರು ಮತ್ತು ಬಂಡೆಗಳ ಹೊಡೆತಕ್ಕೆ ಭಾಗಶಃ ಹಾನಿಗೊಳಗಾಗಿವೆ. ಇಲ್ಲಿ ಓಡಾಡಿದ, ಹಾಡಿದ, ನಲಿದ, ಶಿಕ್ಷಕರ ಪೆಟ್ಟು ತಿಂದ ಮಕ್ಕಳು ಇನ್ನೆಂದೂ ಕಾಣಸಿಗಲಾರರು ಎಂಬ ವೇದನೆಯೊಂದಿಗೆ ಬಿಕ್ಕಳಿಸುತ್ತಿರುವಂತಿವೆ ಇಲ್ಲಿನ ಒಂದೊಂದು ಗೋಡೆಯೂ.. ಕಂಬವೂ.. ಕೊಠಡಿಯೂ.

ಇನ್ನು ಮೇಪ್ಪಾಡಿಯಲ್ಲಿ ಶಾಲೆ

ಚೂರಲ್‌ಮಲ ಭಾಗದ ಶಾಲೆಗಳ ವಿದ್ಯಾರ್ಥಿಗಳ ಕಲಿಗೆ ಇನ್ನು 13 ಕಿಲೊಮೀಟರ್ ದೂರದ ಪಟ್ಟಣ ಮೇಪ್ಪಾಡಿಯಲ್ಲಿ ಮುಂದುವರಿಯಲಿದೆ. ವೆಳ್ಳಾರ್‌ಮಲ ಸರ್ಕಾರಿ ವೃತ್ತಿಪರ ಶಾಲೆ, ಮುಂಡಕ್ಕೈ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಸೇರಿದಂತೆ ವಿವಿಧ ಶಾಲೆಗಳ 378 ವಿದ್ಯಾರ್ಥಿಗಳು 10 ಕಾಳಜಿ ಕೇಂದ್ರಗಳಲ್ಲಿ ಕಲಿಯುತ್ತಿದ್ದಾರೆ. 231 ಮಂದಿ ಸಂಬಂಧಿಕರ ಮನೆಯಲ್ಲಿದ್ದಾರೆ. 5 ಮಂದಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 276 ವಿದ್ಯಾರ್ಥಿಗಳ ಪುಸ್ತಕ ಮತ್ತು ಪಠ್ಯ ಸಾಮಗ್ರಿಗಳು ಕೊಚ್ಚಿಕೊಂಡು ಹೋಗಿವೆ.

ಮೇಪ್ಪಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಹೈಸ್ಕೂಲ್ ಮತ್ತು ಮೇಪ್ಪಾಡಿ ಗ್ರಾಮ ಪಂಚಾಯಿತಿಯ ಸಭಾಂಗಣದಲ್ಲಿ ತರಗತಿಗಳು ನಡೆಯಲಿವೆ. ಊಟದ ಮನೆ, ಪ್ರಯೋಗಾಲಯ, ವಾಚನಾಲಯ ಇದಕ್ಕೆ ಸಜ್ಜಾಗಿವೆ.

‘ದಲಿತರ ಜಮೀನು ಸಿ.ಎಂ ಪಾಲು’

ಒಂದನೇ ಪುಟದಿಂದ...

ಸತ್ಯ ಮರೆಮಾಚಿಸಿದ ಸಿಎಂ: ‘ತಂದೆ ನಿಂಗ ಹೆಸರಿನಲ್ಲಿಯೇ ಜಮೀನಿರುವುದು ಗೊತ್ತುಪಡಿಸಿಕೊಂಡ ಪುತ್ರ ದೇವರಾಜ, ಆರ್‌ಟಿಸಿ ಮಾಡಿಸಿಕೊಡುವ ನೆಪದಲ್ಲಿ ಸಹೋದರ ಮೈಲಾರಯ್ಯನ ಮಗ ಮಂಜುನಾಥಸ್ವಾಮಿ ಮತ್ತು ಪತ್ನಿ ಪುಟ್ಟಗೌರಮ್ಮ ಅವರಿಂದ ಖಾಲಿ ಪತ್ರಕ್ಕೆ ಸಹಿ ಮಾಡಿಸಿಕೊಂಡು 1992–93ರಲ್ಲಿ ತನ್ನ ಹೆಸರನ್ನು ಅಕ್ರಮವಾಗಿ ಸೇರಿಸಿಕೊಂಡಿದ್ದ. ಅದನ್ನು ಸಿದ್ದರಾಮಯ್ಯ ಮರೆಮಾಚಿಸಿದ್ದಾರೆ. 27 ಹಕ್ಕುದಾರರಿಗೆ ಸೇರಬೇಕಾದ ಜಮೀನನ್ನು ದೇವರಾಜ ಒಬ್ಬನಿಂದ ಸಿಎಂ ಹೇಗೆ ಸಹಿ ಮಾಡಿಸಿಕೊಂಡರು’ ಎಂದು ಪ್ರಶ್ನಿಸಿದರು.

‘1992ರಲ್ಲಿ ಮುಡಾ ಸರ್ವೆ ನಂಬರ್ 464 ಸೇರಿದಂತೆ ಸುತ್ತಮುತ್ತಲ ಒಟ್ಟು 462 ಎಕರೆ ಭೂಮಿಯನ್ನು ದೇವನೂರು ಮೂರನೇ ಹಂತದ ಬಡಾವಣೆ ಉದ್ದೇಶಕ್ಕಾಗಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿತ್ತು. ಭೂಮಿ ಮೇಲೆ ಹಕ್ಕೇ ಇಲ್ಲದ ದೇವರಾಜ, ಜಮೀನು ಪಿತ್ರಾರ್ಜಿತವಾದ್ದರಿಂದ ಕೃಷಿ ಭೂಮಿಯನ್ನು ಭೂಸ್ವಾಧೀನದಿಂದ ಕೈಬಿಡಬೇಕು ಎಂದು ನಗರಾಭಿವೃದ್ಧಿ ಇಲಾಖೆಗೆ ಸುಳ್ಳು ಅರ್ಜಿ ನೀಡಿದ್ದ’ ಎಂದರು.

ಸಿದ್ದರಾಮಯ್ಯ ಕೈವಾಡ: ಸ್ಥಳ ಪರಿಶೀಲನೆ ನಡೆಸಿದ ಅಧಿಕಾರಿಗಳು, ಪ್ರಸ್ತಾವಿತ ಭೂಮಿ ಯೋಜನೆಯ ಕೊನೆಯ ಭಾಗದಲ್ಲಿದೆ ಎಂದು ಸುಳ್ಳು ಮಾಹಿತಿ ನೀಡಿ, ಭೂಸ್ವಾಧೀನದಿಂದ ಕೈಬಿಡಬಹುದು ಎಂದು ವರದಿ ನೀಡಿದ್ದರು. 1998ರಲ್ಲಿ ಡಿನೋಟಿಫಿಕೇಶನ್ ಮಾಡಲಾಗಿತ್ತು. ದಲಿತ ಕುಟುಂಬಕ್ಕೆ ಸೇರಿದ ಸಾಮಾನ್ಯ ವ್ಯಕ್ತಿ ಡಿನೋಟಿಫಿಕೇಷನ್ ಮಾಡಿಸಲು ಸಾಧ್ಯವೇ? ಆಗ ಉಪ ಮುಖ್ಯಮಂತ್ರಿ ಆಗಿದ್ದವರು ಇದೇ ಸಿದ್ದರಾಮಯ್ಯ. ಅಲ್ಲಿಂದಲೇ ಅವರ ಕೈವಾಡ ಆರಂಭವಾಗಿದೆ’ ಎಂದರು.

> **ಸಿದ್ದರಾಮಯ್ಯ ರಾಜೀನಾಮೆ ನೀಡಿ, ನ್ಯಾಯಾಂಗ ತನಿಖೆ ಎದುರಿಸಬೇಕು. ಇಲ್ಲದಿದ್ದರೆ ಪ್ರಕರಣವನ್ನು ರಾಷ್ಟ್ರಪತಿವರೆಗೂ ಕೊಂಡೊಯ್ಯುತ್ತೇವೆ**
> **ಆರ್.ಅಶೋಕ**
> ವಿರೋಧ ಪಕ್ಷದ ನಾಯಕ

ಬಡಾವಣೆಯಾಗಿದ್ದ ಜಾಗ ಭೂ ಪರಿವರ್ತನೆ: ‘ದೇವರಾಜ ಮತ್ತು ಕುಟುಂಬಸ್ಥರು 3 ಎಕರೆ 16 ಗುಂಟೆ ಜಮೀನನನ್ನು 2004ರಲ್ಲಿ ಸಿದ್ದರಾಮಯ್ಯ ಅವರ ಪತ್ನಿಯ ಸಹೋದರ ಮಲ್ಲಿಕಾರ್ಜುನಸ್ವಾಮಿಗೆ ಮಾರಾಟ ಮಾಡಿದ್ದರು. ಸಿದ್ದರಾಮಯ್ಯ ಬಾಮೈದ ಅಕ್ರಮವಾಗಿ ಕ್ರಯ ಮಾಡಿಸಿಕೊಂಡಿದ್ದರು. 2001ರಲ್ಲೇ ಎಲ್ ಅಂಡ್ ಟಿ ಸಂಸ್ಥೆಯೊಂದಿಗೆ ಮುಡಾ ಒಪ್ಪಂದ ಮಾಡಿಕೊಂಡು ₹11.68 ಕೋಟಿಯಲ್ಲಿ ಹೊಸ ಬಡಾವಣೆ ಅಭಿವೃದ್ಧಿಪಡಿಸಲು ಟೆಂಡರ್ ಆಗಿತ್ತು. ಮಲ್ಲಿಕಾರ್ಜುನಸ್ವಾಮಿ ಖರೀದಿಸುವ ವೇಳೆಗೆ ಇದೇ ಜಮೀನಿನಲ್ಲಿನ 5 ನಿವೇಶನಗಳನ್ನು ಹಂಚಿಕೆ ಮಾಡಲಾಗಿತ್ತು. ಲೇಔಟ್ ಆಗಿದ್ದ ಜಾಗ ಹೇಗೆ 2005ರಲ್ಲಿ ಭೂಪರಿವರ್ತನೆ ಆಯಿತು? ಅಂದಿನ ಜಿಲ್ಲಾಧಿಕಾರಿ ಸೇರಿದಂತೆ ಎಲ್ಲರೂ ಕುರುಡರಂತೆ ಭೂ ಪರಿವರ್ತನೆ ಮಾಡಿಕೊಟ್ಟಿದ್ದರು’ ಎಂದು ಗಂಭೀರ ಆರೋಪ ಮಾಡಿದರು.

ಪರಿಹಾರಕ್ಕೆ ಪತ್ರ ಬರೆದ ಪಾರ್ವತಿ: ‘2010ರಲ್ಲಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಅವರ ಅಣ್ಣ ಅರಿಸಿನ ಕುಂಕುಮದ ಕೊಡುಗೆಯಾಗಿ ಜಮೀನು ನೀಡಿದ್ದರು. 2014ರಲ್ಲಿ ಪಾರ್ವತಿ ಅವರು ಮುಡಾಕ್ಕೆ ಪತ್ರ ಬರೆದು ನನಗೆ ಬಂದ ಜಮೀನಿನಲ್ಲಿ ನೀವು ಬಡಾವಣೆ ಮಾಡಿದ್ದೀರಾ. ಬದಲಿ ಜಾಗವನ್ನು ನನಗೆ ನೀಡಿ ಎಂದು ಕೇಳಿದ್ದರು. 2017ರಲ್ಲಿ ಮುಡಾದಲ್ಲಿ ಈ ವಿಷಯ ಚರ್ಚೆಗೆ ಬಂದು 50:50 ಯೋಜನೆಯಡಿ ಬದಲಿ ನಿವೇಶನ ನೀಡಲು ನಿರ್ಧಾರ ಕೈಗೊಳ್ಳಲಾಗಿತ್ತು’ ಎಂದರು.

ಕಾನೂನು ಓದಿದ ಸಿ.ಎಂಗೆ ತಿಳಿಯಲಿಲ್ಲವೇ?

‘ಮಾಲೀಕತ್ವದ ಗೊಂದಲ ಇದ್ದರೂ ಸಿದ್ದರಾಮಯ್ಯ ಭಾಮೈದ ಏಕೆ ಜಮೀನು ಖರೀದಿಸಿದರು? ಸ್ಥಳ ಪರಿಶೀಲನೆ ವೇಳೆ, ಬಡಾವಣೆ ಅಭಿವೃದ್ಧಿಯಾಗುತ್ತಿದೆ ಎಂಬುದು ಗೊತ್ತಿದ್ದರೂ ಜಿಲ್ಲಾಧಿಕಾರಿ ಏಕೆ ತಪ್ಪು ವರದಿ ನೀಡಿದರು? ಅವರ ಮೇಲೆ ಯಾರ ಒತ್ತಡವಿತ್ತು? 28 ವರ್ಷಗಳ ಹಿಂದೆಯೇ ಸತ್ತು ಹೋದ ನಿಂಗ ಎಂಬವನ ಹೆಸರಿನಲ್ಲಿ ಡಿನೋಟಿಫಿಕೇಷನ್ ಆಗಿದ್ದು ಹೇಗೆ? ಅರಿಸಿನ ಕುಂಕುಮಕ್ಕೆ ತೆಗೆದುಕೊಳ್ಳುವಾಗ ದಾಖಲೆ ನೋಡಲಿಲ್ಲವೇ? ಕಾನೂನು ಓದಿದ್ದೇನೆ ಎಂದು ಹೇಳಿಕೊಳ್ಳುವ ಸಿದ್ದರಾಮಯ್ಯ ಅವರಿಗೆ ಇದೆಲ್ಲಾ ಗೊತ್ತಾಗಲಿಲ್ಲವೇ’ ಎಂದು ಅಶೋಕ ಪ್ರಶ್ನಿಸಿದರು.

ಷೇರುಪೇಟೆ ವಹಿವಾಟು 874



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,992
ಇಂದಿನ ಅಂತ್ಯ	24,297
▲	304
ದಿನದ ಗರಿಷ್ಠ	24,337

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹290-455
ದ್ವಿತಳಿ (ಬಿ.ವಿ)	₹300-618

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹470
12 ಕ್ಕೆ	₹68
ಮೈಸೂರು	
100ಕ್ಕೆ	₹470

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1540 (1540)
ಸೋಯಾ (ರಿಫೈನ್ಡ್)	₹950 (950)
ಸೂರ್ಯಕಾಂತಿ (ರಿಫೈನ್ಡ್)	₹955 (955)
ಪಾಮೋಲಿನ್	₹910 (912)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8000-9650
ಕೆ.ಆರ್.ಪೇಟೆ	₹9455-9502
ಮಧುಗಿರಿ	₹7490-9000
ತಿಪಟೂರು	₹9300-10000
ತುರುವೇಕೆರೆ	₹9300-9300

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹238
ಆರ್‌ಎಸ್‌ಎಸ್-5	₹225
(ಪ್ರತಿ ಕೆ.ಜಿಗೆ)ಗುಡ್ ಲಾಟ್	₹214

ಮುಂಬೈ ಧಾರಣೆ

ಶೇಂಗಾ 07-08-2024

ಜಾವಾ 70/80(ಹೊಸ)	11600-11700
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9400-9500
ದಪ್ಪ ಗುಜರಾತ್(ಹೊಸ)	10200-10300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಸೋಯಾ ಕಚ್ಚಾ	885 (885)
ಪಾಮ್ ವಾರದ ಡೆಲಿವರಿ	910 (910)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹68,550 (69,000)

ಬೆಳ್ಳಿ ಕೆ.ಜಿ ₹79,100 (79,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹16500
ಎಸಿ	₹9940
ಆರ್‌ಪಿ	₹18500
ಆರ್‌ಸಿ	₹9880

ವಿನಿಮಯ ದರ

$ ಡಾಲರ್	83.95
£ ಪೌಂಡ್	106.67
€ ಯುರೊ	91.60
¥ ಯೆನ್ (100ಕ್ಕೆ)	59

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ

ಸಿ.ಎಂ. ಕೃಷ್ಣಪ್ಪ
ನಿವೃತ್ತ ಜಂಟಿ ನಿರ್ದೇಶಕರು, ರೇಷ್ಮೆ ಇಲಾಖೆ
14.06.1945 – 07.08.2024
ಅಂತಿಮ ವಿಧಿ ವಿಧಾನಗಳು
ದಿನಾಂಕ: 09.08.2024, ಶುಕ್ರವಾರ ಮಧ್ಯಾಹ್ನ 2 ರಿಂದ 3 ಗಂಟೆಯೊಳಗೆ ಬನಶಂಕರಿ ಚಿತಾಗಾರ, ಬೆಂಗಳೂರು
ಸಂಪರ್ಕಿಸಲು: 9845099430, 9341930008

ಜನುಮ ದಿನದ ಸವಿನೆನಪು

ಡಾ. ಎಂ. ಸಿ. ರವೀಂದ್ರನಾಥ್
(08-08-1950 : 09-08-2012)
ಸಂಸ್ಥಾಪಕರು:
ಆಕ್ಸ್‌ಫರ್ಡ್ ವಿದ್ಯಾಸಂಸ್ಥೆಗಳು
ನಾಗರಭಾವಿ & ಉಲ್ಲಾಳ, ಬೆಂಗಳೂರು.
ಬಾಳು ಬೆಳಕಾಗಿ, ಕತ್ತಲಿನ ಕುತ್ತವ ನೀಗಿ,
ಕಾಯ ಅಳಿದರೂ ಕೀರ್ತಿಕಾಯವ ಪಡೆದು,
ಸಮಾಜಕ್ಕೂ ನಮಗೂ ಪ್ರೀತಿಯ ಅಮೃತಧಾರೆ
ಹರಿಸಿದ ದಿವ್ಯಾತ್ಮನಿಗೆ ಆದರದ ಭಾಷ್ಪಾಂಜಲಿ.
ಕುಟುಂಬವರ್ಗ:
ಶ್ರೀಮತಿ. ಉಷಾ ರವೀಂದ್ರನಾಥ್
ಡಾ. ಬಿ.ಆರ್. ಸುಪ್ರೀತ್, ಶ್ರೀಮತಿ. ಶಾರದ ಸುಪ್ರೀತ್,
ಡಾ. ಬಿ.ಆರ್. ಪ್ರಕೃತ ಆದಿತ್ಯ, ಶ್ರೀ. ಆದಿತ್ಯ ರಾವ್,
ಬಿ.ಎಸ್. ಪ್ರಾಂಜಲ, ಬಿ.ಎಸ್. ರವಿಸಿಂಹ, ಚಿ.ಅವ್ಯಕ್ತ್
ವಿದ್ಯಾರ್ಥಿವೃಂದ ಮತ್ತು ಸಿಬ್ಬಂದಿವರ್ಗ
OXFORD INSTITUTIONS

ಎಲ್‌ಟಿಸಿಜಿಗೆ ತಿದ್ದುಪಡಿ: ತೆರಿಗೆದಾರರು ನಿರಾಳ–2 ಪದ್ಧತಿ ಆಯ್ಕೆಗೆ ಅವಕಾಶ

ಮತ್ತೆ ಇನ್‌ಡೆಕ್ಸೇಷನ್ ಲಭ್ಯ

ನಿರ್ಮಲಾ ಸೀತಾರಾಮನ್

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಹಣಕಾಸು ಮಸೂದೆ 2024ಕ್ಕೆ ತಿದ್ದುಪಡಿ ತರುವ ಮೂಲಕ ರಿಯಲ್ ಎಸ್ಟೇಟ್ ಕ್ಷೇತ್ರದ ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆಗೆ (ಎಲ್‌ಟಿಸಿಜಿ) ಸಿಗುತ್ತಿದ್ದ 'ಇನ್‌ಡೆಕ್ಸೇಷನ್' ಪ್ರಯೋಜನವನ್ನು ಮತ್ತೆ ಕಲ್ಪಿಸಿದೆ.

ಆಸ್ತಿ ಖರೀದಿಸಿ ಮಾರಾಟ ಮಾಡಿದ ಲಾಭದ ಮೇಲೆ ತೆರಿಗೆ ವಿಧಿಸುವುದಕ್ಕೂ ಮೊದಲು ಸರ್ಕಾರವು, 'ಇನ್‌ಡೆಕ್ಸೇಷನ್' ರಿಯಾಯಿತಿ ನೀಡುತ್ತಿತ್ತು. ಇದರಡಿ ಹಣದುಬ್ಬರ ಸೂಚ್ಯಂಕದ ಏರಿಳಿತಕ್ಕೆ ಅನುಗುಣವಾಗಿ ಶೇ 20ರಷ್ಟು ತೆರಿಗೆ ವಿಧಿಸಲಾಗುತ್ತಿತ್ತು. ಆದರೆ, 2024–25ನೇ ಸಾಲಿನ ಬಜೆಟ್‌ನಲ್ಲಿ ಈ ತೆರಿಗೆ ದರವನ್ನು ಶೇ 12.5ಕ್ಕೆ ಇಳಿಸಿದ್ದ ಸರ್ಕಾರವು, 'ಇನ್‌ಡೆಕ್ಸೇಷನ್' ಅನ್ನು ಕೈಬಿಟ್ಟಿತ್ತು. ಇದಕ್ಕೆ ತೆರಿಗೆದಾರರು ಅಸಮಾಧಾನ ಹೊರ ಹಾಕಿದ್ದರು.

ಲೋಕಸಭೆಯು ಬುಧವಾರ ಎಲ್‌ಟಿಸಿಜಿ ತಿದ್ದುಪಡಿಗೆ ಅನುಮೋದನೆ ನೀಡಿದೆ. ಬಜೆಟ್‌ನಲ್ಲಿ ಪ್ರಸ್ತಾಪಿಸಿರುವ ಹೊಸ ಪದ್ಧತಿ ಅಥವಾ ಹಳೆಯ ಪದ್ಧತಿಯಡಿ ತಮಗೆ ಯಾವುದು ಅನುಕೂಲವೋ ಅದರ ಆಧಾರದ ಮೇಲೆ ತೆರಿಗೆದಾರರು ತೆರಿಗೆ ಲೆಕ್ಕಾಚಾರ ಮಾಡಬಹುದಾಗಿದೆ. ಈ ಎರಡರಲ್ಲಿ ಯಾವುದು ಕಡಿಮೆಯೋ ಅದನ್ನು ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.

ಆದರೆ, ಪ್ರಸಕ್ತ ವರ್ಷದ ಜುಲೈ 23ಕ್ಕಿಂತ ಮೊದಲು ವ್ಯಕ್ತಿಗಳು ಅಥವಾ ಹಿಂದೂ ಅವಿಭಕ್ತ ಕುಟುಂಬದವರು (ಎಚ್‌ಯುಎಫ್) ಖರೀದಿಸಿದ ಸ್ಥಿರಾಸ್ತಿಗಳಿಗಷ್ಟೇ ಈ ಎರಡು ಪದ್ಧತಿಗಳು ಅನ್ವಯವಾಗಲಿವೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಾತನಾಡಿ, 'ಮಧ್ಯಮ ವರ್ಗದ ತೆರಿಗೆದಾರರಿಗೆ ಅನುಕೂಲ ಕಲ್ಪಿಸಲು ಮತ್ತೆ 'ಇನ್‌ಡೆಕ್ಸೇಷನ್' ಪ್ರಯೋಜನ ಕಲ್ಪಿಸಲಾಗಿದೆ' ಎಂದು ತಿಳಿಸಿದರು.

ವಿಮಾ ಕಂತಿಗೆ ಜಿಎಸ್‌ಟಿ ಮಂಡಳಿಯಲ್ಲಿ ಚರ್ಚೆ: ನಿರ್ಮಲಾ

'ಜೀವ ವಿಮೆ ಮತ್ತು ಆರೋಗ್ಯ ವಿಮೆಯ ಪ್ರೀಮಿಯಂ ಮೇಲೆ ಶೇ 18ರಷ್ಟು ಜಿಎಸ್‌ಟಿ ವಿಧಿಸುವುದಕ್ಕೂ ಮೊದಲು ಎಲ್ಲಾ ರಾಜ್ಯಗಳು ವಿಮಾ ಕಂತುಗಳ ಮೇಲೆ ತೆರಿಗೆ ವಿಧಿಸುತ್ತಿದ್ದವು. ಜಿಎಸ್‌ಟಿ ಜಾರಿಯಾದ ಬಳಿಕ ಈ ತೆರಿಗೆಯು ಸ್ವಯಂ ಚಾಲಿತವಾಗಿ ಜಿಎಸ್‌ಟಿಗೆ ಒಳಪಟ್ಟಿದೆ' ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ವಿಮಾ ಕಂತಿನ ಮೇಲೆ ವಿಧಿಸುವ ಜಿಎಸ್‌ಟಿ ವಾಪಸ್ ಪಡೆಯುವಂತೆ ಪ್ರತಿಪಕ್ಷಗಳ ಒತ್ತಾಯ ಕುರಿತು ಪ್ರತಿಕ್ರಿಯಿಸಿದ ಅವರು, 'ಸಂಗ್ರಹವಾಗುವ ಒಟ್ಟು ಜಿಎಸ್‌ಟಿಯಲ್ಲಿ ಶೇ 75ರಷ್ಟು ಹಣವು ರಾಜ್ಯಗಳಿಗೆ ಹೋಗುತ್ತಿದೆ' ಎಂದರು.

ವಿಮಾ ಕಂತಿನ ಮೇಲೆ ವಿಧಿಸುವ ಜಿಎಸ್‌ಟಿಗೆ ಸಂಬಂಧಿಸಿದಂತೆ ಜಿಎಸ್‌ಟಿ ಮಂಡಳಿಯಲ್ಲಿ ಚರ್ಚಿಸಿದ ಬಳಿಕ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಒಂದು ವರ್ಷದ ಬಳಿಕ ಮಾರಾಟ ಮಾಡುವ ಷೇರುಗಳು, ಇಕ್ವಿಟಿ ಮ್ಯೂಚುವಲ್ ಫಂಡ್‌ಗಳ ಮೇಲಿನ ತೆರಿಗೆ ಮಿತಿಯನ್ನು ₹1 ಲಕ್ಷದಿಂದ ₹1.25 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಮಧ್ಯಮ ವರ್ಗದ ಜನರು ಹೂಡಿಕೆ ಮಾಡಲು ಇದರಿಂದ ಸಹಕಾರಿಯಾಗಲಿದೆ ಎಂದರು.

'ಕರ್ನಾಟಕದಲ್ಲಿ ಸೆಸ್ ಹೆಚ್ಚಿಸಿದ್ದು ಏಕೆ'

'ಕರ್ನಾಟಕ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಸೆಸ್ ಅನ್ನು ಏರಿಕೆ ಮಾಡಿದ್ದು ಏಕೆ ಎಂಬ ಬಗ್ಗೆ ಕಾಂಗ್ರೆಸ್ ನಾಯಕರು ಮೊದಲು ಉತ್ತರ ನೀಡಬೇಕಿದೆ' ಎಂದು ಸಚಿವೆ ನಿರ್ಮಲಾ ತರಾಟೆಗೆ ತೆಗೆದುಕೊಂಡರು.

'ಕರ್ನಾಟಕ ಮತ್ತು ಹಿಮಾಚಲಪ್ರದೇಶದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸೆಸ್ ಕಡಿತಗೊಳಿಸಲು ಕ್ರಮ ಕೈಗೊಳ್ಳುವಂತೆ ನೀವು ಆ ಸರ್ಕಾರಗಳಿಗೆ ಸೂಚಿಸಬೇಕಿದೆ' ಎಂದರು.

'ನಿಮ್ಮ ಪಕ್ಷಗಳು ಆಡಳಿತ ನಡೆಸುತ್ತಿರುವ ರಾಜ್ಯಗಳನ್ನು ಪ್ರಶ್ನಿಸುವ ಅಧಿಕಾರವೇ ನಿಮಗಿಲ್ಲ. ಆದರೆ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸೆಸ್ ಕಡಿತಗೊಳಿಸುವಂತೆ ಕೇಂದ್ರ ಸರ್ಕಾರದ ಮುಂದೆ ಬೇಡಿಕೆ ಮಂಡಿಸುವುದು ಏಕೆ' ಎಂದು ಪ್ರಶ್ನಿಸಿದರು.

'ಏಷ್ಯಾ ಎಜುಕೇಷನ್ ಮೆಡಲ್' ಸ್ಪರ್ಧೆ: ಅಂತಿಮ ಸುತ್ತಿಗೆ ಇಬ್ಬರು ಭಾರತೀಯರು

ಲಂಡನ್ (ಪಿಟಿಐ): ಬ್ರಿಟನ್ ಮೂಲದ ಟಿ4 ಎಜುಕೇಷನ್ ಹಾಗೂ ಮಾಹಿತಿ ತಂತ್ರಜ್ಞಾನ ಸಂಸ್ಥೆ 'ಎಚ್‌ಪಿ' ಸಂಯುಕ್ತವಾಗಿ ಆಯೋಜಿಸಿರುವ 'ಏಷ್ಯಾ ಎಜುಕೇಷನ್ ಮೆಡಲ್' ಸ್ಪರ್ಧೆಯ ಅಂತಿಮ ಸುತ್ತಿಗೆ ಭಾರತದ ಆಶೀಶ್ ಧವನ್ ಹಾಗೂ ಪ್ರಣವ್ ಕೊಠಾರಿ ಆಯ್ಕೆಯಾಗಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಈ ಸ್ಪರ್ಧೆ ಏರ್ಪಡಿಸಲಾಗಿದೆ. ಆಶೀಶ್ ಧವನ್ ಅವರು ಸೆಂಟ್ರಲ್ ಸ್ಕ್ವೇರ್ ಫೌಂಡೇಷನ್‌ನ ಸಂಸ್ಥಾಪಕರು ಮತ್ತು ಮುಖ್ಯಸ್ಥರು. ಪ್ರಣವ್ ಅವರು ಎಜುಕೇಷನ್ ಇನಿಷಿಯೇಟಿವ್ಸ್ ಸಂಸ್ಥೆಯ ಸಿಇಒ ಆಗಿದ್ದಾರೆ. ಈ ಇಬ್ಬರೂ ಸಿಂಗಪುರ, ಫಿಲಿಪ್ಪೀನ್ಸ್, ಬಾಂಗ್ಲಾದೇಶ, ಪಾಕಿಸ್ತಾನ, ಜಪಾನ್ ಮತ್ತು ಮಲೇಷ್ಯಾ ದೇಶಗಳ 8 ಮಂದಿ ಸಾಧಕರೊಂದಿಗೆ ಅಕ್ಟೋಬರ್‌ನಲ್ಲಿ ನಡೆಯುವ ಸ್ಪರ್ಧೆಯಲ್ಲಿ ಸೆಣಸಲಿದ್ದಾರೆ.

ಸೆನ್ಸೆಕ್ಸ್ 874, ನಿಫ್ಟಿ 304 ಅಂಶ ಏರಿಕೆ: ಕಚ್ಚಾ ತೈಲ ಬೆಲೆ ಹೆಚ್ಚಳ

ಷೇರುಪೇಟೆ: ಗೂಳಿ ನಾಗಾಲೋಟ

ಮುಂಬೈ (ಪಿಟಿಐ): ಸತತ ಮೂರು ದಿನಗಳಿಂದ ಇಳಿಕೆ ಕಂಡಿದ್ದ ದೇಶದ ಷೇರುಪೇಟೆಗಳಲ್ಲಿ ಬುಧವಾರ ಗೂಳಿಯ ನಾಗಾಲೋಟದಿಂದಾಗಿ ಷೇರು ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 874 ಅಂಶ ಏರಿಕೆ (ಶೇ 1.11ರಷ್ಟು) ಕಂಡು 79,468 ಅಂಶಗಳಲ್ಲಿ ಸ್ಥಿರಗೊಂಡಿತು. ವಹಿವಾಟಿನ ಒಂದು ಹಂತದಲ್ಲಿ 1,046 ಅಂಶ ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 304 ಅಂಶ ಏರಿಕೆ (ಶೇ 1.27ರಷ್ಟು) ಕಂಡು 24,297 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು. ಇಂಟ್ರಾಡೇನಲ್ಲಿ 345 ಅಂಶ ಏರಿಕೆ ಕಂಡಿತ್ತು.

ಸೆನ್ಸೆಕ್ಸ್ ಗುಚ್ಛದಲ್ಲಿ ಅದಾನಿ ಪೋರ್ಟ್ಸ್ ಮತ್ತು ಪವರ್ ಗ್ರಿಡ್ ಷೇರಿನ ಮೌಲ್ಯದಲ್ಲಿ ಶೇ 3ರಷ್ಟು ಏರಿಕೆಯಾಗಿದೆ. ಟಾಟಾ ಸ್ಟೀಲ್, ಜೆಎಸ್‌ಡಬ್ಲ್ಯು ಸ್ಟೀಲ್, ಇನ್ಫೊಸಿಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎಲ್ ಆ್ಯಂಡ್ ಟಿ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ಇಂಡಸ್ ಇಂಡ್ ಬ್ಯಾಂಕ್, ಭಾರ್ತಿ ಏರ್‌ಟೆಲ್, ಹಿಂದುಸ್ತಾನ್ ಯೂನಿಲಿವರ್, ಟೆಕ್ ಮಹೀಂದ್ರ ಮತ್ತು ಟೈಟನ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

'ಮತ್ತೆ ಬಡ್ಡಿದರ ಏರಿಕೆ ಮಾಡುವುದಿಲ್ಲ ಎಂದು ಬ್ಯಾಂಕ್ ಆಫ್ ಜಪಾನ್‌ನ ಡೆಪ್ಯುಟಿ ಗವರ್ನರ್ ಭರವಸೆ ನೀಡಿದ್ದಾರೆ. ಕೇಂದ್ರ ಸರ್ಕಾರವು ಪುನಃ ಇನ್‌ಡೆಕ್ಸೇಷನ್ ಪ್ರಯೋಜನ ಪಡೆಯಲು ಅವಕಾಶ ಕಲ್ಪಿಸಿದೆ. ಇದರಿಂದ ರಿಯಾಲ್ಟಿ ವಲಯಕ್ಕೆ ಪರಿಹಾರ ಸಿಕ್ಕಿದಂತಾಗಿದೆ. ಇದು ದೇಶೀಯ ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆಯಲು ನೆರವಾಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ (ಸಂಶೋಧನಾ ವಿಭಾಗ) ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಸೋಲ್, ಶಾಂಘೈ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆದಿದೆ. ಯುರೋಪಿಯನ್ ಮಾರುಕಟ್ಟೆಯೂ ಏರಿಕೆ ದಾಖಲಿಸಿದೆ.

ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ₹3,531 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು (ಡಿಐಐ) ₹3,357 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಶೇ 1.12ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರಲ್‌ಗೆ 77.34 ಡಾಲರ್ ಆಗಿದೆ.

ಗುತ್ತಿಗೆದಾರರ ಬಾಕಿ ₹31,000 ಕೋಟಿ!

ಒಂದನೇ ಪುಟದಿಂದ...

ಇನ್ನೂ ₹ 12,069 ಕೋಟಿ ಬಾಕಿ ಇದೆ. 2024-25ನೇ ಸಾಲಿನ ಬಜೆಟ್‌ನಲ್ಲಿ ಇಲಾಖೆಗೆ ಬಂಡವಾಳ ವೆಚ್ಚ ಹಾಗೂ ಇತರೆ ಲೆಕ್ಕ ಶೀರ್ಷಿಕೆಯಡಿ ಕಾಮಗಾರಿಗಳಿಗೆ ಒಟ್ಟು ₹ 9,987 ಕೋಟಿ ಒದಗಿಸಲಾಗಿದೆ. ಆಯಾ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಪ್ರತಿ ತಿಂಗಳು ಬಿಲ್ ಮೊತ್ತವನ್ನು ಬಿಡುಗಡೆ ಮಾಡಲಾಗುತ್ತಿದೆ. ಹೆಚ್ಚಿನ ಸಂಖ್ಯೆಯ ಕಾಮಗಾರಿಗಳು ಹಾಗೂ ಭೂಸ್ವಾಧೀನದ ಬಿಲ್‌ಗಳ ಮೊತ್ತ ಪಾವತಿಗೆ ಬಾಕಿ ಇವೆ. ಹೀಗಾಗಿ, ಪ್ರಸಕ್ತ ಸಾಲಿನಲ್ಲಿ ಲಭ್ಯ ಅನುದಾನವನ್ನು ಕಾಲಮಿತಿಯೊಳಗೆ ವೆಚ್ಚ ಮಾಡಲಾಗುತ್ತಿದೆ ಎಂದೂ ಜಲಸಂಪನ್ಮೂಲ ಇಲಾಖೆ ಮೂಲಗಳು ತಿಳಿಸಿವೆ.

ಕೆಶಿಪ್‌ಗೆ ದೊಡ್ಡ ಮೊತ್ತ ವೆಚ್ಚ: ಲೋಕೋಪಯೋಗಿ ಇಲಾಖೆಗೆ 2023–24ನೇ ಸಾಲಿನಲ್ಲಿ ಎಲ್ಲ 49 ವಿವಿಧ ಲೆಕ್ಕ ಶೀರ್ಷಿಕೆಗಳಡಿ ₹ 9,150 ಕೋಟಿ ಒದಗಿಸಲಾಗಿತ್ತು. ಪ್ರಸಕ್ತ ಸಾಲಿನಲ್ಲಿ ₹ 9,200 ಕೋಟಿ ಒದಗಿಸಲಾಗಿದೆ.

'ಏಷ್ಯಾ ಅಭಿವೃದ್ಧಿ ಬ್ಯಾಂಕ್ ಮತ್ತು ವಿಶ್ವ ಬ್ಯಾಂಕ್ ನೆರವಿನಿಂದ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿ (ಕೆಶಿಪ್) ದೊಡ್ಡ ಮೊತ್ತವನ್ನು ವಿನಿಯೋಗಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಈ ಯೋಜನೆಗಳನ್ನು ಬ್ಯಾಂಕ್ ಸಾಲದಲ್ಲಿ ಅನುಷ್ಠಾನಗೊಳಿಸುವುದರಿಂದ ದೊಡ್ಡ ಮೊತ್ತವನ್ನು ಸಾಲ ಮರುಪಾವತಿಗೆ ಬಳಕೆ ಮಾಡಬೇಕಾಗಿದೆ' ಎಂದು ಲೋಕೋಪಯೋಗಿ ಇಲಾಖೆಯ ಮೂಲಗಳು ತಿಳಿಸಿವೆ.

ಮೈಸೂರು, ಹಾಸನ, ಕೊಡಗು, ಚಿಕ್ಕಬಳಾಪುರ, ಕೋಲಾರ ಸೇರಿದಂತೆ ಒಟ್ಟು 12 ಜಿಲ್ಲೆಗಳನ್ನು ಒಳಗೊಂಡ ದಕ್ಷಿಣ ವಲಯದಲ್ಲಿ ಗುತ್ತಿಗೆದಾರರು ಕಾಮಗಾರಿ ನಿರ್ವಹಿಸಿದ ಬಿಲ್‌ಗಳು 2022ರ ಅಕ್ಟೋಬರ್‌ನಿಂದಲೂ ಬಾಕಿ ಇವೆ. ಹೀಗಾಗಿ, ಆ ಭಾಗದ ಮೊತ್ತ ಪಾವತಿಗೆ ಹೆಚ್ಚು ಬಾಕಿ ಇದೆ. ಇತರ ಎಲ್ಲ ಮೂರೂ ವಲಯಗಳಲ್ಲಿ (ಉತ್ತರ, ಈಶಾನ್ಯ, ಕೇಂದ್ರ) ಗುತ್ತಿಗೆದಾರರ 2023ರ ಜನವರಿವರೆಗಿನ ಎಲ್ಲ ಬಿಲ್‌ಗಳನ್ನು ಚುಕ್ತಾ ಮಾಡಲಾಗಿದೆ. ಇಲಾಖೆಯಲ್ಲಿ ಲಭ್ಯ ಅನುದಾನದಲ್ಲಿ ಶೇ 80ರಷ್ಟು ಬಿಲ್‌ಗಳ ಜ್ಯೇಷ್ಠತೆಯ ಆಧಾರದಲ್ಲಿ, ಶೇ 20ರಷ್ಟು ಗುತ್ತಿಗೆದಾರರ ತುರ್ತು ಅಗತ್ಯಗಳನ್ನು ಪರಿಗಣಿಸಿ ಪಾವತಿಸಲಾಗುತ್ತಿದೆ. ಯಾವುದೇ ಸರ್ಕಾರ ಅಧಿಕಾರದಲ್ಲಿದ್ದರೂ ಇಲಾಖೆಯಲ್ಲಿ ಪ್ರತಿವರ್ಷ ಅಂತ್ಯಕ್ಕೆ ₹ 4 ಸಾವಿರ ಕೋಟಿಯಿಂದ ₹5 ಸಾವಿರ ಕೋಟಿಯಷ್ಟು ಬಿಲ್ ಮೊತ್ತ ಪಾವತಿಗೆ ಬಾಕಿ ಉಳಿಯುತ್ತವೆ. ಪ್ರಸಕ್ತ ಸಾಲಿನಲ್ಲಿ ₹4 ಸಾವಿರ ಕೋಟಿ ಹೆಚ್ಚುವರಿಯಾಗಿ ಬಾಕಿ ಉಳಿದಿದೆ ಎಂದೂ ಮೂಲಗಳು ತಿಳಿಸಿವೆ.

ಆ.15 ರಂದು ಕಿರು ಉಪಗ್ರಹ ಉಡಾವಣೆ

ಬೆಂಗಳೂರು: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು(ಇಸ್ರೊ) ಇದೇ 15 ರಂದು ಭೂವೀಕ್ಷಣೆ ಕಿರುಉಪಗ್ರಹ ಇಒಎಸ್–08 ಅನ್ನು ಶ್ರೀಹರಿಕೋಟದಿಂದ ಉಡಾವಣೆ ಮಾಡಲಿದೆ.

ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ಅಭಿವೃದ್ಧಿ ಮಾಡಿರುವ ಎಸ್‌ಎಸ್‌ಎಲ್‌ವಿ–ಡಿ3 ರಾಕೆಟ್ ಮೂಲಕ ಈ ಪುಟ್ಟ ಉಪಗ್ರಹವನ್ನು ಅಂದು ಬೆಳಿಗ್ಗೆ 9.17ಕ್ಕೆ ಉಡಾವಣೆ ಮಾಡಲಿದೆ. ನ್ಯೂಸ್ಪೇಸ್ ಇಂಡಿಯಾ ಇಸ್ರೊದ ವಾಣಿಜ್ಯ ಅಂಗವಾಗಿದೆ.

ಇಒಎಸ್–08 ಅತ್ಯಾಧುನಿಕ ತಂತ್ರಜ್ಞಾನವನ್ನು ಒಳಗೊಂಡಿದೆ. ಇದು ಭವಿಷ್ಯದ ಉಪಗ್ರಹಗಳ ಕಾರ್ಯಾಚರಣೆಯನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿಪಡಿಸಲಾಗಿದೆ. 175.5 ಕೆ.ಜಿ ತೂಕದ ಉಪಗ್ರಹವು ಮೂರು ಪೇಲೋಡ್‌ಗಳನ್ನು ಒಳಗೊಂಡಿದೆ. ಮಣ್ಣಿನ ತೇವಾಂಶದ ಮಾಲ್ಯಮಾಪನದಿಂದ ಪ್ರಾಕೃತಿಕ ನಿರ್ವಹಣೆವರೆಗಿನ ಕಾರ್ಯನಿರ್ವಹಿಸುತ್ತದೆ. ಭೂಮಿಯಿಂದ 475 ಕಿ.ಮೀ ಎತ್ತರದಲ್ಲಿರುವ ಕೆಳಹಂತದ ಕಕ್ಷೆಯಲ್ಲಿ ವೃತ್ತಾಕಾರದಲ್ಲಿ ಪರಿಭ್ರಮಣೆ ನಡೆಸಲಿದೆ. ಸುಮಾರು ಒಂದು ವರ್ಷ ಕಾರ್ಯ ನಿರ್ವಹಿಸಲಿದೆ. ಎಸ್‌ಎಸ್‌ಎಲ್‌ವಿ ಮೂರು ಹಂತಗಳ, ಕಡಿಮೆ ವೆಚ್ಚದ ಉಡ್ಡಯನ ವಾಹನವಾಗಿದ್ದು, ಸುಮಾರು 500 ಕೆ.ಜಿ ತೂಕದವರೆಗಿನ ಉಪಗ್ರಹಗಳನ್ನು ಉಡಾವಣೆ ಮಾಡುವ ಸಾಮರ್ಥ್ಯವನ್ನು ಹೊಂದಿದೆ.

ಕೈಮಗ್ಗ ದಿನ

10ನೇ ರಾಷ್ಟ್ರೀಯ ಕೈಮಗ್ಗ ದಿನಾಚರಣೆ ಅಂಗವಾಗಿ ಬುಧವಾರ ಕಾಶ್ಮೀರದ ಶ್ರೀನಗರದಲ್ಲಿ ಕುಶಲಕರ್ಮಿಯೊಬ್ಬರು ಕೆಲಸದಲ್ಲಿ ನಿರತರಾಗಿರುವುದು –ಪಿಟಿಐ ಚಿತ್ರ

ಸುದ್ದಿ 2 ನಿಮಿಷ

ರಾಷ್ಟ್ರೀಯ ಕೈಮಗ್ಗ ದಿನಾಚರಣೆ

ನವದೆಹಲಿ (ಪಿಟಿಐ): 'ಮುಂದಿನ ಎರಡು ವರ್ಷದಲ್ಲಿ ಭಾರತವು ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಲಿದೆ' ಎಂದು ಉಪ ರಾಷ್ಟ್ರಪತಿ ಜಗದೀಪ್ ಧನ್‌ಕರ್ ಹೇಳಿದರು.

ಬುಧವಾರ ನಡೆದ 10ನೇ ರಾಷ್ಟ್ರೀಯ ಕೈಮಗ್ಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೈಮಗ್ಗಗಳಿಗೆ ಉತ್ತೇಜನ ನೀಡುವ ಅಗತ್ಯವಿದೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರ 'ವೋಕಲ್ ಫಾರ್ ಲೋಕಲ್' ಕರೆಯು ಈ ವಲಯದ ಆರ್ಥಿಕ ಬಲವರ್ಧನೆಗೆ ನೆರವಾಗಿದೆ. ದೇಶದ ಜನತೆ ಕೈಮಗ್ಗ ಉತ್ಪನ್ನಗಳನ್ನು ಖರೀದಿಸುವ ಬಗ್ಗೆ ಪ್ರತಿಜ್ಞೆ ಮಾಡಬೇಕಿದೆ. ಇದರಿಂದ ಮಾರಾಟದ ಪ್ರಮಾಣವು ಏರಿಕೆಯಾಗಲಿದೆ ಎಂದು ಹೇಳಿದರು.

ವಿದೇಶಿ ವಿನಿಮಯ ಉಳಿತಾಯ, ಉದ್ಯೋಗ ಸೃಷ್ಟಿ ಮತ್ತು ಉದ್ಯಮಕ್ಕೆ ಉತ್ತೇಜನ ನೀಡುವುದು ಆರ್ಥಿಕತೆಯ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದರು.

'34 ವರ್ಷದ ಹಿಂದೆ ನಾನು ಲೋಕಸಭೆ ಪ್ರವೇಶಿಸಿದಾಗ ದೇಶದ ಆರ್ಥಿಕತೆಯ ಗಾತ್ರವು ಲಂಡನ್ ಮತ್ತು ಪ್ಯಾರೀಸ್ ನಗರಗಳಿಕ್ಕಿಂತಲೂ ಕಡಿಮೆ ಇತ್ತು. ಪ್ರಸ್ತುತ ವಿಶ್ವದ 5ನೇ ಅತಿದೊಡ್ಡ ಆರ್ಥಿಕತೆಯಾಗಿದೆ' ಎಂದು ಹೇಳಿದರು.

4ನೇ ವರ್ಷವೂ ಸಂಬಳ ತ್ಯಜಿಸಿದ ಮುಕೇಶ್ ಅಂಬಾನಿ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಅವರು, ಸತತ ನಾಲ್ಕನೇ ವರ್ಷವೂ ಸಂಬಳ ಪಡೆದಿಲ್ಲ ಎಂದು ಕಂಪನಿ ತಿಳಿಸಿದೆ.

ಮುಕೇಶ್ ಅವರಿಗೆ ವಾರ್ಷಿಕ ₹15 ಕೋಟಿ ಸಂಬಳ ನಿಗದಿಪಡಿಸಲಾಗಿದೆ. 2008–09ರಿಂದ 2019–20ರ ವರೆಗೆ ಅವರು ಈ ಸಂಬಳ ಪಡೆದಿದ್ದಾರೆ.

ಆದರೆ, ಕೋವಿಡ್ ಸಾಂಕ್ರಾಮಿಕದ ವೇಳೆ (2020–21ರಲ್ಲಿ) ಸ್ವಯಂಪ್ರೇರಣೆಯಿಂದ ಕಂಪನಿಗೆ ಸಂಬಳ ಬಿಟ್ಟು ಕೊಟ್ಟಿದ್ದರು. 2023–24ರಲ್ಲಿ ಅವರು ಸಂಬಳ ಸೇರಿ ಯಾವುದೇ ಭತ್ಯೆ ಪಡೆದಿಲ್ಲ ಎಂದು ಕಂಪನಿಯು, ಷೇರುಪೇಟೆಗೆ ಮಾಹಿತಿ ನೀಡಿದೆ.

1977ರಿಂದಲೂ ಮುಕೇಶ್ ಅವರು ರಿಲಯನ್ಸ್ ಸಮೂಹದ ಆಡಳಿತ ಮಂಡಳಿಯಲ್ಲಿದ್ದಾರೆ. 2002ರಲ್ಲಿ ಅವರ ತಂದೆ ಧೀರೂಬಾಯಿ ಅಂಬಾನಿ ಅವರು ನಿಧನರಾದ ಬಳಿಕ ರಿಲಯನ್ಸ್ ಸಮೂಹದ ಅಧ್ಯಕ್ಷರಾಗಿ ಆಯ್ಕೆಯಾದರು.

ಹೆಲಿಕಾಪ್ಟರ್ ಪತನ, ಐವರ ಸಾವು

ಕಠ್ಮಂಡು (ಪಿಟಿಐ): ನೇಪಾಳ ರಾಜಧಾನಿ ಕಠ್ಮಂಡುವಿನ ವಾಯವ್ಯ ಭಾಗದಲ್ಲಿನ ಪರ್ವತಗಳ ಬಳಿ ಹೆಲಿಕಾಪ್ಟರ್‌ವೊಂದು ಬುಧವಾರ ಪತನಗೊಂಡ ಪರಿಣಾಮ ಐವರು ಮೃತಪಟ್ಟಿದ್ದಾರೆ.

ಏರ್ ಡೈನಾಸ್ಟಿ ಎಂಬ ಸಂಸ್ಥೆಗೆ ಸೇರಿದ '9ಎನ್–ಎಜೆಡಿ' ಎಂಬ ಹೆಲಿಕಾಪ್ಟರ್ ಕಠ್ಮಂಡುವಿನಿಂದ ರಸುವ ಎಂಬಲ್ಲಿಗೆ ಸಂಚರಿಸುತ್ತಿದ್ದ ವೇಳೆ ಅವಘಡ ಸಂಭವಿಸಿದೆ.

'ಹೆಲಿಕಾಪ್ಟರ್‌ನಲ್ಲಿ ಐವರು ಪ್ರಯಾಣಿಸುತ್ತಿದ್ದರು, ಅದರಲ್ಲಿ ನಾಲ್ವರು ಚೀನಿ ಪ್ರವಾಸಿಗರಿದ್ದರು' ಎಂದು ನೇಪಾಳದ ನಾಗರಿಕ ವಿಮಾನಯಾನ ಸಂಸ್ಥೆ (ಸಿಎಎಎನ್) ತಿಳಿಸಿದೆ.

'ಮಹಿಳೆ ಸೇರಿದಂತೆ ಮೂವರು ಪ್ರಯಾಣಿಕರು ಮತ್ತು ಪೈಲಟ್ ಮೃತದೇಹಗಳನ್ನು ಗುರುತಿಸಲಾಗಿದೆ. ಇನ್ನೊಂದು ಮೃತದೇಹದ ಗುರುತು ಪತ್ತೆಯಾಗಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ಮಧ್ಯಾಹ್ನ 1.54 ಗಂಟೆಗೆ ತ್ರಿಭುವನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಟೇಕ್‌ಆಫ್ ಆಗಿದ್ದ ಹೆಲಿಕಾಪ್ಟರ್, ಮೂರು ನಿಮಿಷಗಳ ಬಳಿಕ ಸಂಪರ್ಕಕ್ಕೆ ಸಿಕ್ಕಿರಲಿಲ್ಲ.

ಶ್ರೀಲಂಕಾ ಅಧ್ಯಕ್ಷೀಯ ಚುನಾವಣೆ ನಮಲ್ ಎಸ್‌ಎಲ್‌ಪಿಪಿ ಅಭ್ಯರ್ಥಿ

ಕೊಲಂಬೊ(ಪಿಟಿಐ): ಶ್ರೀಲಂಕಾ ಅಧ್ಯಕ್ಷೀಯ ಚುನಾವಣೆಗೆ ನಮಲ್ ರಾಜಪಕ್ಸ ಅವರನ್ನು ತನ್ನ ಅಭ್ಯರ್ಥಿಯಾಗಿ ಆಡಳಿತಾರೂಢ ಶ್ರೀಲಂಕಾ ಪೀಪಲ್ಸ್ ಫ್ರಂಟ್ (ಎಸ್‌ಎಲ್‌ಪಿಪಿ) ಪಕ್ಷ ಬುಧವಾರ ಘೋಷಿಸಿದೆ.

ಪಕ್ಷದ ಕೇಂದ್ರ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಎಸ್‌ಎಲ್‌ಪಿಪಿ ಪ್ರಧಾನ ಕಾರ್ಯದರ್ಶಿ ಸಾಗರ ಕರಿಯವಸಮ್ ಅವರು ಈ ಘೋಷಣೆ ಮಾಡಿದರು.

ಇದರೊಂದಿಗೆ, ಮುಂಬರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರಿಗೆ ತನ್ನ ಬೆಂಬಲ ಇಲ್ಲ ಎಂಬ ಸ್ಪಷ್ಟ ಸಂದೇಶವನ್ನು ರಾಜಪಕ್ಸ ರಾಜಮನೆತನ ರವಾನಿಸಿದೆ.

ಹಾಲಿ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ, ವಿರೋಧ ಪಕ್ಷದ ನಾಯಕ ಸಜಿತ್ ಪ್ರೇಮದಾಸ ಹಾಗೂ ಜೆವಿಪಿ ನಾಯಕ ಅನುರಕುಮಾರ ಡಿಸ್ಸನಾಯಕೆ ಅವರು ಸ್ಪರ್ಧಿಸುವುದು ಖಚಿತವಾಗಿದೆ. ಹೀಗಾಗಿ, ಈ ಬಾರಿಯ ಅಧ್ಯಕ್ಷೀಯ ಚುನಾವಣೆಯಲ್ಲಿ ಚತುಷ್ಕೋನ ಸ್ಪರ್ಧೆ ಸಾಧ್ಯತೆ ಇದೆ.

ಸಂಕ್ಷಿಪ್ತ ಸುದ್ದಿ

ಉಕ್ರೇನ್‌ನಿಂದ ಪ್ರಚೋದನೆ ವ್ಲಾದಿಮಿರ್ ಪುಟಿನ್



ವ್ಲಾದಿಮಿರ್ ಪುಟಿನ್

ಕೀವ್ (ಎಪಿ): ರಷ್ಯಾದ ನೈರುತ್ಯ ಕುರ್ಸ್ಕ್ ಪ್ರದೇಶದಲ್ಲಿನ ಉಕ್ರೇನ್ ಆಕ್ರಮಣವು 'ದೊಡ್ಡ-ಪ್ರಮಾಣದ ಪ್ರಚೋದನೆ'ಯಾಗಿದೆ ಎಂದು ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಹೇಳಿದ್ದಾರೆ.

ಉಕ್ರೇನ್ ದಾಳಿ ಬೆನ್ನಲ್ಲೇ, ಪುಟಿನ್ ಅವರು ಹಿರಿಯ ರಕ್ಷಣಾ ಅಧಿಕಾರಿಗಳ ಜತೆಗೆ ಸಭೆ ನಡೆಸಿ ಚರ್ಚಿಸಿದರು.

ಶೆಲ್ ದಾಳಿಗೆ ಒಳಗಾದ ಪ್ರದೇಶದಿಂದ 200ಕ್ಕೂ ಹೆಚ್ಚು ಜನರನ್ನು ಸ್ಥಳಾಂತರಿಸಲಾಗಿದ್ದು, ಸಾವಿರಕ್ಕೂ ಹೆಚ್ಚು ಜನರು ತಮ್ಮ ಸ್ವಂತ ವಾಹನಗಳಲ್ಲಿ ತೆರಳಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೆಂಕಿ; ಐವರು ಸಜೀವ ದಹನ

ಡೆನ್‌ಪಸಾರ್(ಇಂಡೋನೇಷ್ಯಾ): ಇಂಡೋನೇಷ್ಯಾದ ಬಾಲಿ ದ್ವೀಪದ ಸಮೀಪ ಬುಧವಾರ ಹಡಗಿನಲ್ಲಿ ಬೆಂಕಿ ಅವಘಡ ಸಂಭವಿಸಿದೆ. ಈ ವೇಳೆ ಹಡಗಿನಲ್ಲಿದ್ದ ಐವರು ಸಿಬ್ಬಂದಿ ಸಾವಿಗೀಡಾಗಿದ್ದು, 15 ಸಿಬ್ಬಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಶ್ಚಿಮ ನೂಸ ಟೆಂಗರ ಪ್ರದೇಶದತ್ತ ತೆರಳುತ್ತಿದ್ದ 'ಎಲಿಜಬೆತ್' ಹೆಸರಿನ ಈ ಹಡಗಿನಲ್ಲಿ 21 ಸಿಬ್ಬಂದಿಗಳಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಎಲೆಕ್ಟ್ರಿಕ್ ವಾಹನ ಬಳಕೆಯಲ್ಲಿ ಗ್ರಾಹಕ ಸ್ನೇಹಿ ವ್ಯವಸ್ಥೆ ಪರಿಚಯಿಸಿದ ಎಂ.ಜಿ. ಮೋಟರ್ಸ್

ಮೊದಲ ಇ–ಹಬ್ ಕಾರ್ಯಾರಂಭ

● ಬಾಲಕೃಷ್ಣ ಪಿ.ಎಚ್.

ನವದೆಹಲಿ: ವಿದ್ಯುತ್ ಚಾಲಿತ ವಾಹನಗಳನ್ನು (ಇವಿ) ಇನ್ನಷ್ಟು ಗ್ರಾಹಕ ಸ್ನೇಹಿ ಮಾಡಲು ಎಂ.ಜಿ. ಮೋಟಾರ್ ಇಂಡಿಯಾವು 'ಡ್ರೈವ್. ಭಾರತ್' ಮೂಲಕ ಬಹು ಕಂಪನಿಗಳ ಮೊದಲ ಇವಿ ಇಕೊಸಿಸ್ಟಂ ಆರಂಭಿಸಿದೆ. ಸುಲಭವಾಗಿ ಚಾರ್ಜಿಂಗ್ ಪಾಯಿಂಟ್ ಪತ್ತೆ ಹಚ್ಚಲು, ಕಾಯ್ದಿರಿಸಲು ಮತ್ತು ಪಾವತಿ ಮಾಡಲು ಅನುಕೂಲವಾಗುವಂತಹ 'ಇ-ಹಬ್' ಕಾರ್ಯಾರಂಭ ಮಾಡಿದೆ.

ಇಲ್ಲಿನ ಭಾರತ್ ಮಂಟಪಮ್‌ನಲ್ಲಿ ವಿವಿಧ ಇವಿ ಕಂಪನಿಗಳ ಪ್ರತಿನಿಧಿಗಳೊಂದಿಗೆ ನಡೆದ ಸಮಾವೇಶದಲ್ಲಿ, ಜೆಎಸ್‌ಡಬ್ಲ್ಯು ಎಂಜಿ ಮೋಟರ್ ಇಂಡಿಯಾದ ಮುಖ್ಯ ಅಭಿವೃದ್ಧಿ ಅಧಿಕಾರಿ ಗೌರವ್ ಗುಪ್ತ ಅವರು 'ಇ-ಹಬ್' ವ್ಯವಸ್ಥೆ ಚಾಲನೆಗೆ ಬಂದಿದೆ ಎಂದು ಘೋಷಿಸಿದರು.

ಅಂಕಿ ಅಂಶಗಳು

1,640 2022ರಲ್ಲಿ ದೇಶದಲ್ಲಿ ಇದ್ದ ಇವಿ ಚಾರ್ಜಿಂಗ್ ಸೆಂಟರ್

12,146 2024ರ ಫೆಬ್ರುವರಿಗೆ ತಲುಪಿರುವ ಇವಿ ಚಾರ್ಜಿಂಗ್ ಸೆಂಟರ್ ಸಂಖ್ಯೆ

1 ಲಕ್ಷ 2030ರ ಹೊತ್ತಿಗೆ ಇರಲಿರುವ ಇವಿ ಚಾರ್ಜಿಂಗ್ ಸೆಂಟರ್ ಸಂಖ್ಯೆ

'ಇ-ಹಬ್' ಜಾಲಕ್ಕೆ ಅದಾನಿ ಟೋಟಲ್ ಎನರ್ಜೀಸ್ ಲಿಮಿಟೆಡ್ (ಎಟಿಇಎಲ್), ಬಿಪಿಸಿಎಲ್, ಚಾರ್ಜ್‌ಝೋನ್, ಗ್ಲಿಡ, ಎಚ್‌ಪಿಸಿಎಲ್, ಜಿಯೊ–ಬಿಪಿ, ಶೆಲ್, ಸ್ಟ್ಯಾಟಿಕ್, ಜಿಯೊನ್ ಸಹಿತ ಪ್ರಮುಖ ಪೂರೈಕೆದಾರ ಕಂಪನಿಗಳನ್ನು ಪಾಲುದಾರರನ್ನಾಗಿ ಮಾಡುವ ಮೂಲಕ ದೇಶದಾದ್ಯಂತ ಈ ಜಾಲವನ್ನು (ನೆಟ್‌ವರ್ಕ್) ವಿಸ್ತರಿಸುವ ಗುರಿಯನ್ನು ಎಂ.ಜಿ. ಮೋಟರ್ಸ್ ಇಂಡಿಯಾ ಹೊಂದಿದೆ.

ಇವಿ ಬ್ಯಾಟರಿಗಳನ್ನು ಮರುಬಳಕೆ ಮಾಡಲು ಟಿಇಆರ್‌ಐ ಮತ್ತು ಲೋಹುಮ್ ಸಹಭಾಗಿತ್ವದಲ್ಲಿ 'ಪ್ರಾಜೆಕ್ಟ್ ರಿವೈವ್' ರೂಪಿಸಲಾಗಿದೆ. ಶಾಲೆ, ಸಮುದಾಯ ಕೇಂದ್ರಗಳಲ್ಲಿ ವಾಹನಗಳ ಬ್ಯಾಟರಿಗಳನ್ನು ಮರುಬಳಕೆ ಮಾಡುವ ಮೂಲಕ ಬ್ಯಾಟರಿಗಳ ಜೀವಿತಾವಧಿ ವಿಸ್ತರಿಸುವ, ತ್ಯಾಜ್ಯ ಕಡಿಮೆ ಮಾಡುವ ಯೋಜನೆ ಇದರಲ್ಲಿದೆ.

ಎಲೆಕ್ಟ್ರಿಕ್ ಕಾರುಗಳಿಗಾಗಿ ಮೀಸಲಾದ ಭಾರತದ ಮೊದಲ ಇವಿ ಶಿಕ್ಷಣ ಮತ್ತು ಜ್ಞಾನ ವೇದಿಕೆ 'ಇವಿಪಿಡಿಯಾ'ಕ್ಕೂ ಈ ಸಂದರ್ಭದಲ್ಲಿ ಚಾಲನೆ ನೀಡಲಾಯಿತು. ಎಲೆಕ್ಟ್ರಿಕ್ ವಾಹನಗಳ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ ಬಳಕೆದಾರರ ಎಲ್ಲ ಪ್ರಶ್ನೆಗಳಿಗೆ 'ಇವಿಪಿಡಿಯಾ' ಆನ್‌ಲೈನ್ ವೇದಿಕೆ ಉತ್ತರ ನೀಡಲಿದೆ.

ಎಂ.ಜಿ. ಮೋಟರ್ ಇಂಡಿಯಾ ಮತ್ತು ಜಿಯೊ ಕಂಪನಿಗಳ ಸಹಭಾಗಿತ್ವದಲ್ಲಿ ಎಂಜಿ–ಜಿಯೊ ಇನ್ನೊವೇಟಿವ್ ಕನೆಕ್ಟಿವಿಟಿ ಪ್ಲ್ಯಾಟ್‌ಫಾರ್ಮ್ (ಎಂಜಿ–ಜಿಯೊ ಐಸಿಪಿ) ಆರಂಭಿಸಲಾಗಿದೆ. ಇದು ಎಲೆಕ್ಟ್ರಿಕ್ ವಾಹನಗಳನ್ನು ಕ್ರೀಡೆ, ಮನರಂಜನೆಗಳಿಗೆ ಪರಿಚಯಿಸಲಿದೆ. ಕಲಿಕೆಯ ಕೇಂದ್ರವಾಗಿಯೂ ಕಾರ್ಯನಿರ್ವಹಿಸಲಿದ್ದು, ಕನ್ನಡ ಸೇರಿದಂತೆ ದೇಶದ ಆರು ಭಾಷೆಗಳಲ್ಲಿ ಧ್ವನಿ ಆಜ್ಞೆಗಳನ್ನು ನೀಡುವ ತಂತ್ರಜ್ಞಾನವನ್ನು ಅಳವಡಿಸಲಾಗಿದೆ.

ಎಂ.ಜಿ. ಮೋಟರ್ ವತಿಯಿಂದ ಎಲೆಕ್ಟ್ರಿಕ್ ವಾಹನ (ಇವಿ) ಆವಿಷ್ಕಾರಗಳ ಸರಣಿಯ ಭಾಗವಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಇವಿ ಇಕೊಸಿಸ್ಟಂಗೆ ಸಂಬಂಧಿಸಿದ ತಂತ್ರಜ್ಞಾನಗಳ ಪ್ರದರ್ಶನ ನಡೆದವು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣ ಬೇಕಾಗಿದ್ದಾರೆ . ಟಯೋಟಾ,TVS, ಬ್ರಿಟಾನಿಯಾ,ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC,PUC,Degree, ITI ನವರು.18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035277967

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿ ವರ್ಕ್ ಫ್ರಮ್ ಹೋಮ್ ಕೆಲಸಮಾಡಿ 4000–20,000 ಪಡೆಯಿರಿ. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/- ರಿಂದ 20,000/- . ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 9008835841, 9900859248

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555, 9663542555

ಪ್ರವಾಸ

Travel

18 ದಿನಗಳ ಯುಕೆ ಮತ್ತು ಯುರೋಪ್ ಪ್ರವಾಸ 10 ದೇಶಗಳು ವಿಮಾನದರ ವೀಸಾ ಪ್ರವೇಶದರ ಊಟ,ವಸತಿ ತೆರಿಗೆ ಟಿಪ್ಸ್ ಟೋಲ್ ವಿಮೆದರ ಟೂರ್ ಮ್ಯಾನೇಜರ್ ಬೆಂಗಳೂರಿನಿಂದ ಬೆಂಗಳೂರಿನ ತನಕ ಎಲ್ಲಾ ಸೇರಿರುತ್ತದೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04. 9880079644 9900080793 9900093613

ಸುಸಜ್ಜಿತ ಪ್ರವಾಸಗಳು: 14.10.2024 29.10.2024 ರಿಂದ 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. ನವೆಂಬರ್ ಡಿಸೆಂಬರ್ ತಿಂಗಳಲ್ಲಿ 6 ದಿನಗಳ ದುಬೈ,ಅಬುದಾಬಿ ಶಾರ್ಜಾ ಮತ್ತು 10 ದಿನಗಳ ವಿಯಟ್ನಾಂ ಕಾಂಬೋಡಿಯ. 18.09.2024 26.09.2024 ರಿಂದ 5/8 ದಿನಗಳ ಕಾಶಿ,ಗಯಾ,ಅಯೋಧ್ಯಾ. 05.10.2024 ರಿಂದ 11 ದಿನಗಳ ನೇಪಾಳ ಮುಕ್ತಿನಾಥ ಅಯೋಧ್ಯಾ. 13.09.2024 14.10.2024 ರಿಂದ 15 ದಿನಗಳ ಚಾರ್‌ಧಾಮ್. ನವೆಂಬರ್ ಡಿಸೆಂಬರ್ ತಿಂಗಳಲ್ಲಿ ಮಧ್ಯಪ್ರದೇಶ ರಾಜಸ್ಥಾನ್ ಗುಜರಾತ್ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

★ವಿಮಾನದಲ್ಲಿ 24.09.2024★ 16/12ದಿನಗಳು ಅಖಂಡ ನೇಪಾಳ,ಮುಕ್ತಿನಾಥ,ಕಾಶಿ ಪ್ರವಾಸ.26.08.2024, 14.09.2024,05.10.2024 6ದಿನಗಳು ಕಾಶಿ,ಅಯೋಧ್ಯಾ, ಗಯಾ ಪ್ರವಾಸ.ಆರ್.ಗಾಂಧಿ ಟೂರ್ಸ್.ತ್ಯಾಗರಾಜನಗರ. 9945445809/ 8861545809

ವೈಯಕ್ತಿಕ

Change of Name

ನಾನು ಅಶ್ವಿನ್ S/O ಸತೀಶ್ ಭಟ್, R/O ಸುರಭಿ, ಇಂದಿರಾ ನಗರ, ನ್ಯೂ ಮಾರ್ಕೆಟ್ ಯಾರ್ಡ್, ಸಿರ್ಸಿ, ಉತ್ತರ ಕನ್ನಡ, ಕರ್ನಾಟಕ, ಇನ್ನು ಮುಂದೆ ನನ್ನ ಹೆಸರನ್ನು ಅಶ್ವಿನ್ ಸತೀಶ್ ಭಟ್ ಎಂದು ಬದಲಾಯಿಸಿರುತ್ತೇನೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE
ADS IN PRAJAVANI
ALL KARNATAKA, ON ALL DAYS
@ 500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
+91 9901641752 | 9845114560
*Conditions apply

ಒಲಿಂಪಿಕ್ಸ್‌ನಲ್ಲಿ ಕುಸ್ತಿಪಟು ಫೋಗಟ್ ಅನರ್ಹತೆ • ಆಸ್ಪತ್ರೆಯಲ್ಲಿ ಭೇಟಿಯಾದ ಐಒಎ ಅಧ್ಯಕ್ಷೆ

ವಿನೇಶ್‌ಗೆ ಬೆಂಬಲ: ಉಷಾ

ಪ್ಯಾರಿಸ್ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಕುಸ್ತಿಪಟು ವಿನೇಶ್ ಫೋಗಟ್ ಅವರ ಅನರ್ಹತೆಯಿಂದ ತೀವ್ರ ಆಘಾತ ಮತ್ತು ನಿರಾಸೆಯಾಗಿದೆ ಎಂದು ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಅಧ್ಯಕ್ಷೆ ಪಿ.ಟಿ.ಉಷಾ ಪ್ರತಿಕ್ರಿಯಿಸಿದ್ದಾರೆ.

ಫೋಗಟ್ ಅನರ್ಹ ಸಂಬಂಧ ಯುನೈಟೆಡ್ ವರ್ಲ್ಡ್ ರೆಸ್ಲಿಂಗ್‌ಗೆ (ಯುಡಬ್ಲ್ಯುಡಬ್ಲ್ಯು) ಐಒಎ ತೀವ್ರ ಪ್ರತಿಭಟನೆ ದಾಖಲಿಸಿದ್ದು, ಸಾಧ್ಯವಿರುವುದೆಲ್ಲವನ್ನೂ ಮಾಡುತ್ತೇವೆ ಎಂದು ಅವರು ತಿಳಿಸಿದ್ದಾರೆ.

'ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಗ್ರಾಮದಲ್ಲಿ ನಾನು ವಿನೇಶ್ ಫೋಗಟ್ ಅವರನ್ನು ಭೇಟಿಯಾಗಿದ್ದೇನೆ. ಭಾರತ ಒಲಿಂಪಿಕ್ ಸಂಸ್ಥೆ, ಕೇಂದ್ರ ಸರ್ಕಾರ ಮತ್ತು ಇಡೀ ದೇಶದ ಪರವಾಗಿ ಫೋಗಟ್ ಅವರಿಗೆ ಸಂಪೂರ್ಣ ಬೆಂಬಲ ನೀಡುವ ಭರವಸೆ ನೀಡಿದ್ದೇನೆ' ಎಂದು ಅವರು ತಿಳಿಸಿದ್ದಾರೆ.

ನೆರವು ಸಿಬ್ಬಂದಿ ವಿರುದ್ಧ ಕ್ರಮಕ್ಕೆ ಆಗ್ರಹ: ವಿನೇಶ್ ಫೋಗಟ್ ಅವರಿಗೆ ನಿಯುಕ್ತಿಗೊಳಿಸಿದ್ದ ನೆರವು ಸಿಬ್ಬಂದಿಯ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಸಂಜಯ್ ಸಿಂಗ್ ಆಗ್ರಹಿಸಿದ್ದಾರೆ.

'ಇದು ವಿನೇಶ್ ಅವರ ತಪ್ಪಲ್ಲ. ಅವರು ಅಮೋಘವಾಗಿ ಕುಸ್ತಿ ಆಡಿದ್ದಾರೆ. ಕೋಚ್‌ಗಳು, ನೆರವು ಸಿಬ್ಬಂದಿ, ಪೌಷ್ಟಿಕಾಂಶ ತಜ್ಞರು ಈ ಪ್ರಮಾದದ ಪೂರ್ಣ ಹೊಣೆ ಹೊತ್ತುಕೊಳ್ಳಬೇಕು' ಎಂದು ಸಂಜಯ್ ಸಿಂಗ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

₹25 ಲಕ್ಷ ಬಹುಮಾನ ಪ್ರಕಟಿಸಿದ ಎಲ್‌ಪಿಯು: ಪಂಜಾಬ್ ಮೂಲದ ಲವ್ಲಿ ಪ್ರೊಫೆಷನಲ್ ಯುನಿವರ್ಸಿಟಿ (ಎಲ್‌ಪಿಯು) ತನ್ನ ವಿದ್ಯಾರ್ಥಿಯೂ ಆಗಿರುವ ಕುಸ್ತಿ ಪಟು ವಿನೇಶ್ ಫೋಗಟ್ ಅವರಿಗೆ ಬುಧವಾರ ₹25 ಲಕ್ಷ ಬಹುಮಾನ ಘೋಷಿಸಿದೆ.

'ನಮಗೆಲ್ಲಾ ವಿನೇಶ್ ಈಗಲೂ ಪದಕ ವಿಜೇತೆ. ಈ ಕ್ರೀಡೆಯುದ್ದಕ್ಕೂ ಅವರ ಶ್ರದ್ಧೆ, ಬದ್ಧತೆ ಗುರುತಿಸಲು ಯೋಗ್ಯವಾಗಿದೆ. ಅವರಿಗೆ ₹25 ಲಕ್ಷ ಬಹುಮಾನ ಪ್ರಕಟಿಸಲು ನಮಗೆಲ್ಲಾ ಹೆಮ್ಮೆಯೆನಿಸುತ್ತದೆ' ಎಂದು ಸ್ಥಾಪಕ ಕುಲಪತಿ, ರಾಜ್ಯಸಭಾ ಸದಸ್ಯ ಅಶೋಕ್ ಕುಮಾರ್ ಮಿತ್ತಲ್ ಹೇಳಿದ್ದಾರೆ.

ಪ್ಯಾರಿಸ್‌ನ ಆಸ್ಪತ್ರೆಯಲ್ಲಿರುವ ವಿನೇಶ್ ಫೋಗಟ್ ಅವರನ್ನು ಭೇಟಿಯಾದ ಭಾರತ ಒಲಿಂಪಿಕ್ ಸಮಿತಿ ಅಧ್ಯಕ್ಷೆ ಪಿ.ಟಿ. ಉಷಾ –ಪಿಟಿಐ ಚಿತ್ರ

ವಿಪಕ್ಷಗಳಿಂದ ಕಲಾಪ ಬಹಿಷ್ಕಾರ

ನವದೆಹಲಿ (ಪಿಟಿಐ): ವಿನೇಶ್ ಫೋಗಟ್ ಅವರ ಅನರ್ಹತೆಯ ಹಿಂದೆ 'ಪಿತೂರಿ' ನಡೆದಿದೆ ಎಂದು ಆರೋಪಿಸಿರುವ 'ಇಂಡಿಯಾ' ಮೈತ್ರಿಕೂಟದ ಸಂಸದರು ಸಂಸತ್ತಿನ ಆವರಣದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಈ ವಿಷಯದ ಕುರಿತು ಹೆಚ್ಚಿನ ಚರ್ಚೆಗೆ ಅವಕಾಶ ನೀಡದ್ದಕ್ಕೆ ಕಾಂಗ್ರೆಸ್, ಟಿಎಂಸಿ, ಎನ್‌ಸಿಪಿ (ಎಸ್‌ಪಿ), ಜೆಎಂಎಂ, ಆರ್‌ಜೆಡಿ ಮತ್ತು ಎಸ್‌ಪಿ ಸಂಸದರು ಲೋಕಸಭೆ ಮತ್ತು ರಾಜ್ಯಸಭೆ ಕಲಾಪಗಳನ್ನು ಬಹಿಷ್ಕರಿಸಿ ಹೊರನಡೆದರು. ವಿನೇಶ್ ಅವರಿಗೆ ನ್ಯಾಯ ದೊರಕಿಸಲು ಒತ್ತಾಯಿಸಿದರು.

'ಪ್ರಧಾನಿ ಮೋದಿ ಅವರು ವಿನೇಶ್ ಅವರಿಗೆ ಸಾಂತ್ವನ ಹೇಳಿ ಟ್ವೀಟ್ ಮಾಡಿದ್ದಾರೆ. ಮೋದಿಜಿ ಅವರೇ, ಇಲ್ಲಿ ಸಾಂತ್ವನದ ಟ್ವೀಟ್ ಸಾಲದು. ಅವರಿಗೆ ನ್ಯಾಯ ಸಿಗಬೇಕು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಸುದ್ದಿಗಾರರಿಗೆ ತಿಳಿಸಿದರು.

'ಮೊದಲು ಅವರನ್ನು (ವಿನೇಶ್) ದೆಹಲಿಯ ಬೀದಿಯಲ್ಲಿ ಪ್ರತಿಭಟನೆಗೆ ಇಳಿಸಲಾಯಿತು. ಇದೀಗ ಅವರು ಒಲಿಂಪಿಕ್ಸ್‌ನಿಂದ ಅನರ್ಹಗೊಂಡಾಗ ಸರ್ಕಾರ ಮೌನವಹಿಸಿದೆ. ಇದು ಪಿತೂರಿ ನಡೆದಿರುವುದರತ್ತ ಬೊಟ್ಟು ಮಾಡಿದೆ' ಎಂದು ಆರೋಪಿಸಿದರು.

ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ವಿನೇಶ್ ಅನರ್ಹತೆ ಮತ್ತು ಅವರಿಗೆ ನೀಡಲಾದ ಎಲ್ಲ ನೆರವಿನ ವಿವರಗಳನ್ನು ಲೋಕಸಭೆಯ ಮುಂದಿಟ್ಟರು. ಅದಕ್ಕೆ ತೃಪ್ತರಾಗದ ವಿಪಕ್ಷಗಳ ಸಂಸದರು ಹೊರನಡೆದರು. ಆ ಬಳಿಕ ಸಂಸತ್ ಆವರಣದಲ್ಲಿ ಪ್ರತಿಭಟನೆ ನಡೆಸಿ, 'ವಿನೇಶ್ ಫೋಗಟ್ ವಿರುದ್ಧದ ಪಿತೂರಿ ನಿಲ್ಲಿಸಿ', 'ಅವರಿಗೆ ನ್ಯಾಯ ಒದಗಿಸಿ' ಎಂದು ಘೋಷಣೆ ಕೂಗಿದರು.

100 ಗ್ರಾಂ ತೂಕದಿಂದ ಕನಸು ಛಿದ್ರ

ಒಂದನೇ ಪುಟದಿಂದ...

ಮಂಗಳವಾರ ತಮಗೆ ಎದುರಾದ ಸವಾಲುಗಳನ್ನೆಲ್ಲ ಮೀರಿ ನಿಂತ ವಿನೇಶ್ ಫೈನಲ್ ಪ್ರವೇಶಿಸಿದ್ದರು. ಒಲಿಂಪಿಕ್ಸ್‌ನಲ್ಲಿ ಈ ಸಾಧನೆ ಮಾಡಿದ ಭಾರತದ ಮೊದಲ ಮಹಿಳಾ ಕುಸ್ತಿಪಟು ಅವರಾಗಿದ್ದರು. ಅಮೆರಿಕದ ಸಾರಾ ಆ್ಯನ್ ಹಿಲ್ಡ್‌ಬ್ರಾಂಟ್ ಅವರನ್ನು ಸೋಲಿಸಿ ಚಿನ್ನದ ಪದಕ ಜಯಿಸುವ ವಿನೇಶ್ ಕನಸು ನುಚ್ಚುನೂರಾಯಿತು. ಒಂದೊಮ್ಮೆ ಅವರು ಪರಾಭವಗೊಂಡಿದ್ದರೂ ಬೆಳ್ಳಿ ಪದಕ ಒಲಿಯುತ್ತಿತ್ತು. ಅದೂ ಐತಿಹಾಸಿಕ ಸಾಧನೆಯೇ ಆಗುತ್ತಿತ್ತು. 2016ರಲ್ಲಿ ರಿಯೊ ಡಿ ಜನೈರೊದಲ್ಲಿ ಮತ್ತು 2020ರ ಟೋಕಿಯೊ ಒಲಿಂಪಿಕ್ ಕೂಟಗಳಲ್ಲಿ ಆಗಿದ್ದ ನಿರಾಶೆಯ ನೋವು ಇಲ್ಲಿ ಶಮನವಾಗುವ ನಿರೀಕ್ಷೆ ಇತ್ತು. ಕಳೆದ ಎರಡು ವರ್ಷಗಳಲ್ಲಿ ಅವರು ಕುಸ್ತಿ ಕಣ ಮತ್ತು ಅದರಾಚೆ ಮಾಡಿದ್ದ 'ಹೋರಾಟ'ಕ್ಕೆ ತಕ್ಕ ಫಲ ಲಭಿಸುತ್ತಿತ್ತು. ಅವರ ಯಶೋಗಾಥೆಯನ್ನು ಜಗತ್ತಿಗೆ ಬಿತ್ತರಿಸಲು ಮಾಧ್ಯಮಗಳು ಕಾದು ಕುಳಿತಿದ್ದವು.

ಆದರೆ 'ಪ್ರೇಮ ನಗರಿ' ಪ್ಯಾರಿಸ್ ಭಾರತದ ಕುಸ್ತಿಪಟುವನ್ನು ದುಃಖದ ಮಡುವಿಗೆ ತಳ್ಳಿತು. ಹರಿಯಾಣದ 29 ವರ್ಷದ ವಿನೇಶ್, ಸ್ಪರ್ಧೆಯ ದಿನದಂದು ನಡೆಯುವ ತೂಕ ಪರೀಕ್ಷೆಯಲ್ಲಿ ನೂರು ಗ್ರಾಂ ಹೆಚ್ಚು ತೂಗಿದರು. ಬೌಟ್ ಇರುವ ದಿನದಂದು ತೂಕ ಪರೀಕ್ಷೆಗೊಳಗಾಗುವುದು ಕಡ್ಡಾಯ ನಿಯಮ.

'ಸ್ಪರ್ಧೆಯ ಎರಡನೇ ದಿನದ ತೂಕ ಪರೀಕ್ಷೆಯಲ್ಲಿ ವಿನೇಶ್ ಅನುತ್ತೀರ್ಣರಾಗಿದ್ದಾರೆ. ಅಂತರರಾಷ್ಟ್ರೀಯ ಕುಸ್ತಿ ನಿಯಮಾವಳಿಯ ಆರ್ಟಿಕಲ್ 11ರ ಪ್ರಕಾರ ಅವರೊಂದಿಗೆ ಸೆಮಿಫೈನಲ್‌ನಲ್ಲಿ ಸೆಣಸಿ ಸೋತ ಕ್ಯೂಬಾದ ಗುಜ್ಮನ್ ಲೋಪೆಜ್ ಯುಸ್ನೆಯಿಲಿಸ್ ಅವರು ಫೈನಲ್‌ಗೆ ಪ್ರವೇಶಿಸುವರು. ಜಪಾನ್ ದೇಶದ ಯುಯಿ ಸುಸಾಕಿ ಮತ್ತು ಉಕ್ರೇನ್‌ನ ಒಕ್ಸಾನಾ ಲಿವಾಚ್ ಅವರು ಕಂಚಿನ ಪದಕಕ್ಕಾಗಿ ರೆಪೆಷಾಜ್‌ನಲ್ಲಿ ಸೆಣಸುವರು' ಎಂದು ಪ್ಯಾರಿಸ್ 2024 ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ತೂಕ ಹೆಚ್ಚಿದ್ದು ಹೇಗೆ?: ವಿನೇಶ್ ಅವರಿಗೆ ಒಂದೇ ರಾತ್ರಿಯಲ್ಲಿ ತೂಕ ಏರಿದ್ದು ಹೇಗೆ? ಸಮರ ಕಲೆಗಳಾದ ಕುಸ್ತಿ, ಬಾಕ್ಸಿಂಗ್ ಮತ್ತು ಜುಡೊ ಕ್ರೀಡಾಪಟುಗಳಿಗೆ ತಮ್ಮ ದೇಹತೂಕ ನಿರ್ವಹಣೆ ಮಾಡಿಕೊಳ್ಳುವುದು ಪ್ರತಿನಿತ್ಯದ ಸವಾಲಾಗಿದೆ. ಕುಸ್ತಿಯಲ್ಲಿ ಕೆಲವೊಮ್ಮೆ ಪೈಲ್ವಾನರು ಒಂದೇ ದಿನದಲ್ಲಿ ಎರಡಕ್ಕಿಂತ ಹೆಚ್ಚು ಬೌಟ್‌ಗಳಲ್ಲಿ ಸೆಣಸುವ ಸಾಧ್ಯತೆ ಇರುತ್ತದೆ. ವಿನೇಶ್ ಮಂಗಳವಾರ ಮೂರು ಬೌಟ್‌ಗಳಲ್ಲಿ ಸೆಣಸಿದ್ದರು. ಇದರಿಂದಾಗಿ ದೇಹದ ಶಕ್ತಿಯನ್ನು ಉಳಿಸಿಕೊಳ್ಳಲು ಹೆಚ್ಚು ಕ್ಯಾಲೊರಿಗಳ ಆಹಾರ ಪದ್ಧತಿಯನ್ನು ಅನುಸರಿಸಿದ್ದರು. ಇದರಲ್ಲಿ ಪ್ರೋಟಿನ್ ಪೇಯಗಳು ಮತ್ತು ಕ್ಯಾಲೊರಿ ಹೆಚ್ಚಾಗಿರುವ ಬಾಳೆಹಣ್ಣಿನಂತಹ ಫಲಗಳು ಸೇರಿರುತ್ತವೆ.

ಅನುಭವಿ ಕುಸ್ತಿಪಟುಗಳು ತಾವು ಸೇವಿಸುವ ಆಹಾರ ಮತ್ತು ಪಾನೀಯಗಳ ಪ್ರಮಾಣದ ಬಗ್ಗೆ ತಿಳಿದುಕೊಂಡಿರುತ್ತಾರೆ. ದೇಹದಲ್ಲಿ ನಿರ್ಜಲೀಕರಣವಾಗದಂತೆ ಮತ್ತು ತೂಕವೂ ಹೆಚ್ಚದಂತೆ ಆಹಾರ ಕ್ರಮ ಅನುಸರಿಸುತ್ತಾರೆ. ಅವರ ನೆರವು ಸಿಬ್ಬಂದಿ ಕೂಡ ಆಹಾರ ಸೇವನೆಯ ಪಟ್ಟಿಯನ್ನು ನಿರ್ವಹಿಸುತ್ತಾರೆ. ಇದೆಲ್ಲವೂ ವೈಜ್ಞಾನಿಕವಾಗಿರುತ್ತದೆ. ಅದರಿಂದಾಗಿ ಕುಸ್ತಿಪಟುಗಳು ತೂಕ ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವುದು ಅಪರೂಪ. ವಾಸ್ತವವಾಗಿ ಕುಸ್ತಿಪಟುಗಳು ದೊಡ್ಡ ಸ್ಪರ್ಧೆಗಳಿಗೂ ಮುನ್ನ ಅತ್ಯಂತ ಕಠಿಣವಾದ ತಾಲೀಮು ನಡೆಸುತ್ತಾರೆ.

ಕೆಲವೊಮ್ಮೆ ಕಡುಕಠಿಣ ರೀತಿಯ ತಾಲೀಮು ನಡೆಸುತ್ತಾರೆ. ಅದರಲ್ಲಿ ಆಹಾರ ಮತ್ತು ನೀರನ್ನೂ ಸೇವಿಸುವುದಿಲ್ಲ. ಕೆಲವರು ಗಂಟೆಗಟ್ಟಲೇ ಹಬೆ ಸ್ನಾನ ಮಾಡುತ್ತಾರೆ. ದೇಹದೊಳಗೆ ಶೇಖರಣೆಯಾಗಿರುವ ದ್ರವಗಳನ್ನು ಹೊರಹಾಕಲು ಇದು ನೆರವಾಗುತ್ತದೆ. ಇನ್ನೂ ಕೆಲವರು ಓಟ, ಸೈಕ್ಲಿಂಗ್, ಸ್ಕಿಪ್ಪಿಂಗ್ ಮಾಡುತ್ತಾರೆ. ವಿನೇಶ್ ಕೂಡ ತಮಗಿದ್ದ ಕಡಿಮೆ ಅವಧಿಯಲ್ಲಿ ಇದರಲ್ಲಿ ಸಾಧ್ಯವಾದಷ್ಟು ಸ್ಕಿಪ್ಪಿಂಗ್‌ಗಳನ್ನು ಮಾಡಿದ್ದಾರೆ. ಇಡೀ ರಾತ್ರಿ ಅವರು ಓಟ ಮತ್ತು ಹಬೆ ಸ್ನಾನಗಳನ್ನು ಹೆಚ್ಚು ಮಾಡಿ ಎರಡು ಕಿಲೋ ತೂಕ ಕರಗಿಸಿದ್ದಾರೆ.

ಎಂಟು ವರ್ಷಗಳ ಹಿಂದೆ ರಿಯೊ ಒಲಿಂಪಿಕ್ಸ್‌ನಲ್ಲಿ ಬೌಟ್‌ನಲ್ಲಿಯೇ ಗಾಯಗೊಂಡಿದ್ದ ವಿನೇಶ್ ಅವರನ್ನು ನೆರವು ಸಿಬ್ಬಂದಿಯು ಸ್ಟ್ರೆಚರ್‌ನಲ್ಲಿ ಚಿಕಿತ್ಸೆಗಾಗಿ ಕರೆದೊಯ್ದಿದ್ದರು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವರು ಆರಂಭಿಕ ಸುತ್ತಿನಲ್ಲಿಯೇ ಸೋತಿದ್ದರು. ಆದರೆ ಪ್ಯಾರಿಸ್‌ನಲ್ಲಿ ಅವರಿಗೆ ಪದಕ ಜಯದ ಹೊಸ್ತಿಲಲ್ಲಿ 100 ಗ್ರಾಂ ಕಂಟಕ ಬರಸಿಡಿಲಿನಂತೆ ಎರಗಿತು.

ವೇಟ್‌ಲಿಫ್ಟಿಂಗ್

ಭಾರತದ ಮೀರಾಬಾಯಿ ಚಾನು ಅವರು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬುಧವಾರ ರಾತ್ರಿ ಮಹಿಳೆಯರ 49 ಕೆ.ಜಿ ವಿಭಾಗದ ವೇಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಭಾರ ಎತ್ತಿದರು. ಒಟ್ಟು 199 ಕೆ.ಜಿ ಭಾರ ಎತ್ತುವ ಮೂಲಕ ನಾಲ್ಕನೇ ಸ್ಥಾನ ಪಡೆದರು ಪ್ರಜಾವಾಣಿ ಚಿತ್ರ/ ಕೆ.ಎನ್. ಶಾಂತಕುಮಾರ್

ರೇಸ್ ವಾಕ್ ಮಿಶ್ರ ರಿಲೆ: ಸ್ಪೇನ್‌ಗೆ ಚಿನ್ನ

ಪ್ಯಾರಿಸ್ (ಎಎಫ್‌ಪಿ/ಪಿಟಿಐ): ಒಲಿಂಪಿಕ್ಸ್‌ನ ಚೊಚ್ಚಲ ಮ್ಯಾರಥಾನ್ ರೇಸ್ ವಾಕ್ ಮಿಶ್ರ ರಿಲೆ ಸ್ಪರ್ಧೆಯಲ್ಲಿ ಸ್ಪೇನ್‌ನ ಅಲ್ವರೊ ಮಾರ್ಟಿನ್ ಮತ್ತು ಮರಿಯಾ ಪೆರೆಝ್ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡರು. ಈ ಜೋಡಿಯು 2 ಗಂಟೆ 50 ನಿಮಿಷ 30 ಸೆಕೆಂಡುಗಳಲ್ಲಿ ಗುರಿ ತಲುಪಿತು.

ಪುರುಷರ 20 ಕೀ.ಮಿ. ವಾಕ್ ಚಾಂಪಿಯನ್ ಬ್ರಿಯಾನ್ ಪಿಂಟಾಡೊ ಅವರನ್ನೊಳಗೊಂಡ ಈಕ್ವೆಡಾರ್‌ನ ಜೋಡಿಯು 2 ಗಂಟೆ 51 ನಿಮಿಷ 22 ಸೆಕೆಂಡುಗಳಲ್ಲಿ ಗುರಿ ತಲುಪಿ ಎರಡನೇ ಸ್ಥಾನ ಪಡೆಯಿತು. 2 ಗಂಟೆ 51 ನಿಮಿಷ 38 ಸೆಕೆಂಡುಗಳಲ್ಲಿ ಗುರಿ ತಲುಪಿದ ಆಸ್ಟ್ರೇಲಿಯಾದ ಜೋಡಿ 3ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಕಳೆದ ವರ್ಷದ ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಮಾರ್ಟಿನ್ ಮತ್ತು ಪೆರೆಜ್ ಇಬ್ಬರೂ ತಲಾ ಎರಡು ಪ್ರಶಸ್ತಿಗಳನ್ನು ಗೆದ್ದುಕೊಂಡಿದ್ದಾರೆ.

ಸೂರಜ್, ಪ್ರಿಯಾಂಕಾ ವಿಫಲ: ಭಾರತದ ಸೂರಜ್ ಪನ್ವರ್ ಮತ್ತು ಪ್ರಿಯಾಂಕಾ ಗೋಸ್ವಾಮಿ ಜೋಡಿಯು ಸ್ಪರ್ಧೆಯನ್ನು ಮುಕ್ತಾಯಗೊಳಿಸಲಿಲ್ಲ. ಪ್ರಿಯಾಂಕಾ ಅವರು ರೇಸ್‌ನ ನಾಲ್ಕನೇ ಹಾಗೂ ಅಂತಿಮ ಲೆಗ್‌ನಲ್ಲಿ ಸ್ಪರ್ಧೆಯಿಂದ ಹೊರಬಿದ್ದರು.

ಭಾರತದ ಜೋಡಿಯ ಅಭಿಯಾನವು 33 ಕಿ.ಮೀ. ಕ್ರಮಿಸಿದ ನಂತರ ಕೊನೆಗೊಂಡಿತು. ಮೂರನೇ ಬದಲಾವಣೆಯ ನಂತರ ಸಂಪರ್ಕದ ನಷ್ಟ ಮತ್ತು ಮೊಣಕಾಲು ಬಾಗುವಿಕೆ ಕಾರಣ ನಿಯಮ ಉಲ್ಲಂಘನೆಯಿಂದಾಗಿ ಹೊರಬೀಳಬೇಕಾಯಿತು.

ಅನು ರಾಣಿ, ಜ್ಯೋತಿಗೆ ನಿರಾಸೆ: ಮಹಿಳೆಯರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಅನು ರಾಣಿ ಮತ್ತು ಮಹಿಳೆಯರ 100 ಮೀಟರ್ ಹರ್ಡಲ್ಸ್ ಮೊದಲ ಸುತ್ತಿನಲ್ಲಿ ಜ್ಯೋತಿ ಯರ್ರಾಜಿ ಪ್ರಭಾವಿ ಎನಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ.

31 ವರ್ಷದ ಅನು ರಾಣಿ, ಅರ್ಹತಾ ಸುತ್ತಿನಲ್ಲಿ 55.81 ಮೀಟರ್ ಜಾವೆಲಿನ್ ಎಸೆದು, 15ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು.

ಮತ್ತೊಂದೆಡೆ ಮಹಿಳೆಯರ 100 ಮೀಟರ್ ಹರ್ಡಲ್ಸ್ ಮೊದಲ ಸುತ್ತಿನಲ್ಲಿ ಜ್ಯೋತಿ, 7ನೇಯವರಾಗಿ (12.78 ಸೆಕೆಂಡು) ಗುರಿ ಮುಟ್ಟಿದರು. ಆ ಮೂಲಕ ಸೆಮಿಫೈನಲ್‌ಗೆ ಅರ್ಹತೆ ಗಿಟ್ಟಿಸುವಲ್ಲಿ ವಿಫಲರಾದರು.

ಮ್ಯಾರಥಾನ್ ರೇಸ್ ವಾಕ್ ಮಿಶ್ರ ರಿಲೆ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಸ್ಪೇನ್‌ನ ಮರಿಯಾ ಪೆರೆಝ್ –ಎಎಫ್‌ಪಿ ಚಿತ್ರ


ಭಾರತದ ಅದಿತಿ ಅಶೋಕ್ ಅವರು ಬುಧವಾರ ಪ್ಯಾರಿಸ್ ಒಲಿಂಪಿಕ್ಸ್‌ನ ಮಹಿಳೆಯರ ವೈಯಕ್ತಿಕ ಗಾಲ್ಫ್‌ನ ಮೊದಲ ಸುತ್ತಿನಲ್ಲಿ ಸ್ಪರ್ಧಿಸಿದರು –ಪಿಟಿಐ ಚಿತ್ರ

ಟೇಬಲ್ ಟೆನಿಸ್ ತಂಡ ವಿಭಾಗದಲ್ಲೂ ಭಾರತದ ಸವಾಲು ಅಂತ್ಯ

ಜರ್ಮನಿಗೆ ಮಣಿದ ಭಾರತ ಮಹಿಳಾ ತಂಡ

ಪ್ಯಾರಿಸ್ (ಪಿಟಿಐ): ಅರ್ಚನಾ ಕಾಮತ್ ಕೊಂಚ ಪ್ರತಿರೋಧ ತೋರಿದರೂ, ಭಾರತ ಮಹಿಳಾ ತಂಡವು ಒಲಿಂಪಿಕ್ಸ್ ಟೇಬಲ್ ಟೆನಿಸ್ ತಂಡ ವಿಭಾಗದಲ್ಲಿ ತಾಂತ್ರಿಕವಾಗಿ ಬಲಿಷ್ಠವಾಗಿರುವ ಜರ್ಮನಿ ಎದುರು ಬುಧವಾರ 1–3ರಲ್ಲಿ ಸೋಲನ್ನುಂಡಿತು.

ಆ ಮೂಲಕ ಟೇಬಲ್ ಟೆನಿಸ್ ತಂಡ ವಿಭಾಗದಲ್ಲಿ ಭಾರತದ ಸವಾಲು ಅಂತ್ಯಗೊಂಡಿತು. ಪುರುಷರ ತಂಡ ಈ ಮೊದಲೇ ಹೊರಬಿದ್ದಿತ್ತು. ಮಂಗಳವಾರ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಪ್ರಬಲ ಚೀನಾ ಎದುರು 0–3 ರಿಂದ ಸೋಲನುಭವಿಸಿತ್ತು. ಶ್ರೀಜಾ ಅಕುಲಾ ಮತ್ತು ಅರ್ಚನಾ ಕಾಮತ್ ಆರಂಭದ ಡಬಲ್ಸ್‌ನಲ್ಲಿ 5–11, 11–8, 10–12, 6–11 ರಿಂದ ಜರ್ಮನಿಯ ಯುವಾನ್ ವಾನ್- ಷಿಯೊನಾ ಶಾನ್ ಜೋಡಿಯೆದುರು ಸೋತಿತು. ಮೂರನೇ ಗೇಮ್‌ವರೆಗೆ ಭಾರತದ ಸ್ಪರ್ಧಿಗಳು ಹೋರಾಟ ನೀಡಿದರು. ಮೊದಲ ಸಿಂಗಲ್ಸ್‌ನಲ್ಲಿ ಭಾರತದ ಅಗ್ರ ಆಟಗಾರ್ತಿ ಮಣಿಕಾ ಬಾತ್ರ ಉತ್ತಮ ಲಯದಲ್ಲಿರಲಿಲ್ಲ. ಅವರು ಆ್ಯನೆಟ್ ಕಾಫ್‌ಮನ್ ವಿರುದ್ಧ ಮೊದಲ ಗೇಮ್ ಅನ್ನು 11–8ರಲ್ಲಿ ಪಡೆದರೂ, ಮುಂದಿನ ಮೂರು ಗೇಮ್‌ಗಳಲ್ಲಿ 5–11, 7–11, 5–11ರಲ್ಲಿ ಕಳೆದುಕೊಂಡು ಪಂದ್ಯ ಸೋತರು.

ಈ ಹಂತದಲ್ಲಿ ಅರ್ಚನಾ 19–17, 1–11, 11–5, 11–9 ರಿಂದ ಶಿಯೊನಾ ಶಾನ್ ಅವರನ್ನು ಸೋಲಿಸಿ ತಂಡದ ಹಿನ್ನಡೆಯನ್ನು 1–2ಕ್ಕೆ ಇಳಿಸಿದರು. ಆದರೆ ಮೂರನೇ ಸಿಂಗಲ್ಸ್‌ನಲ್ಲಿ ಕಾಫ್‌ಮನ್ 11–6, 11–7, 11–7 ರಿಂದ ಶ್ರೀಜಾ ಅವರನ್ನು ಮಣಿಸಿ ಜರ್ಮನಿ ಗೆಲುವನ್ನು ಖಾತರಿಪಡಿಸಿದರು.

ಸೋಮವಾರ ನಡೆದ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಭಾರತ ತಂಡ, ಪ್ರಬಲ ರುಮೇನಿಯಾ ತಂಡವನ್ನು 3–2 ರಿಂದ ಸೋಲಿಸಿ ಎಂಟರ ಘಟ್ಟ ತಲಪಿತ್ತು.

ಮಹಿಳೆಯರ ಒಲಿಂಪಿಕ್ಸ್ ಸಿಂಗಲ್ಸ್ ವಿಭಾಗದಲ್ಲಿ 16ರ ಸುತ್ತು ತಲುಪುವ ಮೂಲಕ ಮಣಿಕಾ ಮತ್ತು ಶ್ರೀಜಾ ದಾಖಲೆ ಬರೆದರು. ಆದರೆ ಅವರು ನಂತರದ ಹಂತ ದಾಟಲಾಗಲಿಲ್ಲ. ತಮಗಿಂತ ಉನ್ನತ ರ‍್ಯಾಂಕಿಂಗ್‌ನ ಎದುರಾಳಿಗಳಿಗೆ ಮಣಿದರು.

ಪ್ಯಾರಿಸ್ ಕ್ರೀಡೆಗಳಲ್ಲಿ ಭಾರತ ಪುರುಷರ ಮತ್ತು ಮಹಿಳಾ ತಂಡಗಳು ಇದೇ ಮೊದಲ ಬಾರಿ ಭಾಗವಹಿಸುವ ಅರ್ಹತೆ ಪಡೆದಿದ್ದವು. ತಂಡ ಸ್ಪರ್ಧೆಗಳನ್ನು 2008ರಲ್ಲಿ (ಬೀಜಿಂಗ್ ಕ್ರೀಡೆಗಳು) ಸೇರ್ಪಡೆ ಮಾಡಲಾಗಿತ್ತು.

ಟೇಬಲ್ ಟೆನಿಸ್ ಮಹಿಳಾ ತಂಡ ವಿಭಾಗದಲ್ಲಿ ಜರ್ಮನಿ ವಿರುದ್ಧ ಡಬಲ್ಸ್ ಪಂದ್ಯ ಆಡುತ್ತಿರುವ ಶ್ರೀಜಾ ಆಕುಲಾ (ಬಲಗಡೆ) ಮತ್ತು ಅರ್ಚನಾ ಕಾಮತ್ ಪ್ರಜಾವಾಣಿ ಚಿತ್ರ: ಕೆ.ಎನ್‌.ಶಾಂತಕುಮಾರ್

ಅಂತಿಮ ಪಂಘಲ್ ಸವಾಲು ಅಂತ್ಯ

ಪ್ಯಾರಿಸ್ (ಪಿಟಿಐ): ಪ್ಯಾರಿಸ್ ಕೂಟದಲ್ಲಿ ಭಾರತದ ಪದಕದ ಭರವಸೆಯಾಗಿದ್ದ ಅಂತಿಮ ಪಂಘಲ್ ಬುಧವಾರ ತಮ್ಮ ಅಭಿಯಾನ ಅಂತ್ಯಗೊಳಿಸಿದ್ದಾರೆ. ಮಹಿಳೆಯರ 53 ಕೆ.ಜಿ ವಿಭಾಗದಲ್ಲಿ ಅವರು 0–10ರ ಅಂತರದಿಂದ ಟರ್ಕಿಯ ಯೆಟ್ಗಿಲ್ ಝೆನೆಪ್ ವಿರುದ್ಧ ಹೀನಾಯ ಸೋಲನುಭವಿಸಿದರು.

ಒಲಿಂಪಿಕ್ಸ್‌ಗೆ ಪದಾರ್ಪಣೆ ಮಾಡಿದ್ದ 19 ವರ್ಷ ವಯಸ್ಸಿನ ಅಂತಿಮ ಅವರು ರೆಪೆಷಾಜ್ ಮೂಲಕ ಕಂಚಿನ ಪದಕ ಸ್ಪರ್ಧೆಯಲ್ಲಿ ಉಳಿಯುವ ಆಸೆ ಕೂಡಾ ಭಗ್ನವಾಯಿತು. ಝೆನೆಪ್ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಜರ್ಮನಿಯ ಅನ್ನಿಕಾ ವೆಂಡ್ಲೆ ವಿರುದ್ಧ ಸೋಲನುಭವಿಸಿದ್ದರು. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ವಿಜೇತರಾಗಿರುವ ಅಂತಿಮ್ ಅವರು ಈ ಹಿಂದೆ ವಿನೇಶ್ ಫೋಗಟ್ ಸ್ಪರ್ಧಿಸುತ್ತಿದ್ದ ಒಲಿಂಪಿಕ್ಸ್ ಕೋಟಾವನ್ನು ಗಳಿಸಿದವರಲ್ಲಿ ಮೊದಲಿಗರಾಗಿದ್ದರು. ಮೊದಲ ಸುತ್ತಿನಲ್ಲಿ ಅವರು 101 ಸೆಕೆಂಡುಗಳಲ್ಲಿ ಮಣಿದರು.

ಅಂತಿಮ ಅವರಿಗಿಂತ 10 ಅಂಕಗಳ ಮುನ್ನಡೆ ಸಾಧಿಸಿದ್ದ ಟರ್ಕಿಯ ಕುಸ್ತಿಪಟು 'ತಾಂತ್ರಿಕ ಶ್ರೇಷ್ಠತೆ' ಆಧಾರದಲ್ಲಿ ಜಯಶಾಲಿಯಾದರು.

ಝೆನೆಪ್ ಅವರು ಅಂತಿಮ ಮೇಲೆ ಮೊದಲು ಹಿಡಿತ ಸಾಧಿಸಿ ಎರಡು ಅಂಕ ಗಳಿಸಿದರು. ನಂತರ ಮತ್ತೆರಡು ಅಂಕಗಳನ್ನು ತಮ್ಮದಾಗಿಸಿಕೊಂಡರು. ನಂತರ ಎದುರಾಳಿ ಮೇಲೆ ಮತ್ತೆ ಹಿಡಿತ ಸಾಧಿಸಿ ನಾಲ್ಕು ಅಂಕಗಳನ್ನು ಪಡೆದರು.

ರೆಫ್ರಿ ಪಂದ್ಯವನ್ನು ನಿಲ್ಲಿಸುತ್ತಲೇ ಅಂತಿಮ ಕಣ್ಣೀರಾದರು. ಅವರು ಈ ಕ್ರೀಡೆಗಳಲ್ಲಿ ಹೊರಬಿದ್ದ ದೇಶದ ಮೂರನೇ ಕುಸ್ತಿಪಟುವಾಗಿದ್ದಾರೆ.

ನಿಶಾ ದಹಿಯಾ ಅವರ (68 ಕೆ.ಜಿ) ಅಭಿಯಾನವು ಸೋಮವಾರ ಕೊನೆಗೊಂಡಿತ್ತು. 50 ಕೆ.ಜಿ. ವಿಭಾಗದಲ್ಲಿ ಒಲಿಂಪಿಕ್ಸ್ ಫೈನಲ್‌ಗೆ ತಲುಪಿದ ಮೊದಲ ಭಾರತೀಯ ಮಹಿಳಾ ಕುಸ್ತಿಪಟು ಎಂಬ ಹೆಗ್ಗಳಿಕೆಗೆ ಪಾತ್ರರಾದ ವಿನೇಶ್ ಅನರ್ಹಗೊಂಡಿದ್ದಾರೆ.

ನವದೆಹಲಿ ವಿಮಾನ ನಿಲ್ದಾಣದಲ್ಲಿ ಮನು ಭಾಕರ್ ಮತ್ತು ಅವರ ಕೋಚ್ ಜಸ್ಪಾಲ್ ರಾಣಾ ಅವರನ್ನು ಸ್ವಾಗತಿಸಲಾಯಿತು –ಪಿಟಿಐ ಚಿತ್ರ

ತವರಿಗೆ ಮರಳಿದ ಮನು ಭಾಕರ್

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಎರಡು ಕಂಚಿನ ಪದಕ ಗೆದ್ದು ಇತಿಹಾಸ ಸೃಷ್ಟಿಸಿರುವ ಪಿಸ್ತೂಲ್ ಶೂಟರ್ ಮನು ಭಾಕರ್ ಬುಧವಾರ ತವರಿಗೆ ಮರಳಿದರು. ಅವರನ್ನು ಅಭಿಮಾನಿಗಳು ಭುಜದ ಮೇಲೆ ಹೊತ್ತರು. ಭಾಕರ್ ಮತ್ತು ಅವರ ಕೋಚ್ ಜಸ್ಪಾಲ್ ರಾಣಾ ಅವರ ಮೇಲೆ ಪುಷ್ಪವೃಷ್ಟಿಗರೆಯಲಾಯಿತು.

ಪ್ಯಾರಿಸ್‌ನಿಂದ ಏರ್‌ಇಂಡಿಯಾ ವಿಮಾನದಲ್ಲಿ ಬೆಳಿಗ್ಗೆ 9.20ರ ಸುಮಾರಿಗೆ ದೆಹಲಿಗೆ ಬಂದಿಳಿದರು. ನೂರಾರು ಮಂದಿ ಅವರನ್ನು ಸ್ವಾಗತಿಸಲು ನೆರೆದಿದ್ದರು. ಮನು ಮತ್ತು ಜಸ್ಪಾಲ್ ರಾಣಾ ಅವರಿಗೆ ಆತ್ಮೀಯ ಸ್ವಾಗತ ಕೋರಲಾಯಿತು.

22 ವರ್ಷದ ಮನು, ಸ್ವಾತಂತ್ರ್ಯಾನಂತರ ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗೆದ್ದ ಭಾರತದ ಮೊದಲ ಕ್ರೀಡಾಪಟು ಎನಿಸಿದ್ದಾರೆ. ಅವರು ಮಹಿಳೆಯರ 10 ಮೀ. ಏರ್ ಪಿಸ್ತೂಲ್ ಮತ್ತು 10 ಮೀ. ಮಿಶ್ರ ವಿಭಾಗದಲ್ಲಿ ಸರಬ್ಜ್ಯೋತ್ ಸಿಂಗ್ ಜೊತೆಗೂಡಿ ಕಂಚಿನ ಪದಕ ಗಳಿಸಿದ್ದರು.

ಅವರು ವಿಮಾನ ನಿಲ್ದಾಣದಿಂದ ಹೊರಬರುತ್ತಿದ್ದಂತೆ ಹೂಗುಚ್ಛ, ಹಾರಗಳನ್ನು ಹಾಕಿ ಬರಮಾಡಿಕೊಳ್ಳಲಾಯಿತು. ಅಲ್ಲಿ ನೆರೆದವರು ಅವರನ್ನು ಹೊತ್ತುಕೊಂಡು ಸಂಭ್ರಮಪಟ್ಟರು.

ಭಾಕರ್ ಅವರ ತಂದೆ ರಾಮ್ ಕಿಶನ್, ತಾಯಿ ಸುಮೇಧಾ ಮತ್ತು ತವರು ರಾಜ್ಯ ಹರಿಯಾಣ, ನೆರೆಯ ರಾಜ್ಯಗಳ ಕ್ರೀಡಾಪ್ರೇಮಿಗಳೂ ಜಮಾಯಿಸಿದ್ದರು.

'ಭವಿಷ್ಯದಲ್ಲಿ ಇನ್ನಷ್ಟು ಮನು ಭಾಕರ್ ಅಂಥವರು ಉದಯಿಸಲಿದ್ದಾರೆ' ಎಂದು ರಾಣಾ ನೆರೆದಿದ್ದ ಮಾಧ್ಯಮದವರಿಗೆ ತಿಳಿಸಿದರು.

ಭಾಕರ್ ಅವರು ಕ್ರೀಡಾಸಚಿವ ಮನ್ಸುಖ್ ಮಾಂಡವೀಯ ಅವರನ್ನು ಮಧ್ಯಾಹ್ನ ಭೇಟಿಯಾದರು. ಅವರು ಶನಿವಾರ ಪ್ಯಾರಿಸ್‌ಗೆ ಮರಳಲಿದ್ದಾರೆ. ಸಮಾರೋಪ ಸಮಾರಂಭದಲ್ಲಿ ಈ ಸಾಧಕಿ ಭಾರತದ ಧ್ವಜಧಾರಿಯಾಗಿದ್ದಾರೆ.

ಒಲಿಂಪಿಕ್ಸ್‌ನಲ್ಲಿ ಇಂದು
(ಭಾರತದ ಸ್ಪರ್ಧೆ)

ಗಾಲ್ಫ್
ಮಹಿಳೆಯರ ವೈಯಕ್ತಿಕ ಸ್ಪರ್ಧೆ: ಅದಿತಿ ಅಶೋಕ್, ದೀಕ್ಷಾ ದಾಗರ್, ಮಧ್ಯಾಹ್ನ 12.30

ಅಥ್ಲೆಟಿಕ್ಸ್
ಮಹಿಳೆಯರ 100 ಮೀ. ಹರ್ಡಲ್ಸ್ ರೆಪೆಷಾಜ್ ಸುತ್ತು: ಜ್ಯೋತಿ ಯರ್ರಾಜಿ, ಮಧ್ಯಾಹ್ನ 2.05
ಪುರುಷರ ಜಾವೆಲಿನ್ ಥ್ರೋ ಫೈನಲ್: ನೀರಜ್ ಚೋಪ್ರಾ, ರಾತ್ರಿ 11.55

ಕುಸ್ತಿ
ಪುರುಷರ 57 ಕೆ.ಜಿ ಫ್ರೀಸ್ಟೈಲ್ (1/8 ಫೈನಲ್ಸ್): ಅಮನ್ ಸೆಹರಾವತ್, ಮಧ್ಯಾಹ್ನ 2.30
ಮಹಿಳೆಯರ 57 ಕೆ.ಜಿ ಫ್ರೀಸ್ಟೈಲ್ (1/8 ಫೈನಲ್ಸ್): ಅನ್ಶು ಮಲಿಕ್, ಮಧ್ಯಾಹ್ನ 2.30

ಪುರುಷರ ಹಾಕಿ
ಕಂಚಿನ ಪದಕ ಪಂದ್ಯ: ಭಾರತ ವಿರುದ್ಧ ಸ್ಪೇನ್, ಸಂಜೆ 5.30

ನೇರ ಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಅಮೆರಿಕ	25	32	32	89
ಚೀನಾ	23	22	16	61
ಆಸ್ಟ್ರೇಲಿಯಾ	17	12	10	39
ಫ್ರಾನ್ಸ್	13	16	19	48
ಬ್ರಿಟನ್	12	16	20	48
ಜಪಾನ್	12	6	12	30
ದ.ಕೊರಿಯಾ	11	8	7	26
ಇಟಲಿ	9	10	8	27
ನೆದರ್‌ಲೆಂಡ್ಸ್	9	5	6	20
ಭಾರತ	0	0	3	3

ಪಟ್ಟಿಯಲ್ಲಿ ಭಾರತ 64ನೇ ಸ್ಥಾನದಲ್ಲಿದೆ

ಆಸ್ಟ್ರೇಲಿಯಾ ಹಾಕಿ ಆಟಗಾರ ವಶಕ್ಕೆ

ಪ್ಯಾರಿಸ್ (ಎಪಿ): ಕೊಕೇನ್ ಖರೀದಿಗೆ ಯತ್ನಿಸಿದ ಆಸ್ಟ್ರೇಲಿಯಾ ಹಾಕಿ ತಂಡದ ಆಟಗಾರನನ್ನು ವಶಕ್ಕೆ ಪಡೆಯಲಾಗಿದೆ ಎಂದು ಪ್ರಾಸಿಕ್ಯೂಟರ್‌ಗಳು ಬುಧವಾರ ತಿಳಿಸಿದ್ದಾರೆ. ಪ್ಯಾರಿಸ್ 9ನೇ ಉಪವಿಭಾಗದ ಕಟ್ಟಡವೊಂದರ ಹೊರಗೆ ಅವರು ಮಾದಕ ವಸ್ತು ಖರೀದಿಗೆ ಮುಂದಾದಾಗ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಹೆಚ್ಚಿನ ತನಿಖೆಗಾಗಿ ಮಾದಕವಸ್ತು ನಿಗ್ರಹ ಪೊಲೀಸ್ ಘಟಕಕ್ಕೆ ಈ ಪ್ರಕರಣವನ್ನು ವಹಿಸಲಾಗಿದೆ.

ಕಂಚಿನ ಪದಕದ ಪ್ಲೇ ಆಫ್: ಗೆಲುವಿನ ವಿಶ್ವಾಸದಲ್ಲಿ ಹರ್ಮನ್ ಪಡೆ

ಭಾರತ–ಸ್ಪೇನ್ ಸೆಣಸಾಟ ಇಂದು

ಪ್ಯಾರಿಸ್ (ಪಿಟಿಐ): ಒಲಿಂಪಿಕ್ ಕೂಟದ ಹಾಕಿಯ ಸೆಮಿಫೈನಲ್ ಪಂದ್ಯದಲ್ಲಿ ಸೋತ ಭಾರತ ತಂಡವು ಗುರುವಾರ ಕಂಚಿನ ಪದಕದ ಪ್ಲೇ ಆಫ್‌ನಲ್ಲಿ ಸ್ಪೇನ್ ತಂಡವನ್ನು ಎದುರಿಸಲಿದೆ.

ಮೂರು ವರ್ಷಗಳ ಹಿಂದೆ ಟೋಕಿಯೊದಲ್ಲಿ ಕಂಚು ಜಯಿಸಿದ್ದ ಭಾರತ ತಂಡವು ಇಲ್ಲಿಯೂ ಗೆಲ್ಲುವ ವಿಶ್ವಾಸದಲ್ಲಿದೆ. ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಬಳಗವು ಮಂಗಳವಾರ ನಾಲ್ಕನೇ ಘಟ್ಟದ ಪಂದ್ಯದಲ್ಲಿ ಜರ್ಮನಿಯ ವಿರುದ್ಧ ಸೋಲನುಭವಿಸಿತ್ತು.

ರೋಚಕ ಹಣಾಹಣಿ ನಡೆದಿದ್ದ ಆ ಪಂದ್ಯದ ಆರಂಭದಲ್ಲಿ ಭಾರತ ತಂಡವು ಮೇಲುಗೈ ಸಾಧಿಸಿತ್ತು. ಆದರೆ ಕೊನೆಯ ಹಂತದಲ್ಲಿ ಜರ್ಮನಿ ಗೋಲು ಗಳಿಸುವಲ್ಲಿ ಯಶಸ್ವಿಯಾಯಿತು. ಈ ಹಂತದಲ್ಲಿ ಭಾರತ ತಂಡದ ರಕ್ಷಣಾ ವಿಭಾಗದ ಲೋಪಗಳು ದುಬಾರಿಯಾದವು. ಕೊನೆಯಲ್ಲಿ ಜರ್ಮನ್‌ಪ್ರೀತ್ ಸಿಂಗ್ ಅವರು ಗೋಲು ಗಳಿಸುವ ಅವಕಾಶ ಕೈಚೆಲ್ಲಿದರು.

ಭಾರತ ದ ಆಟಗಾರರು ತಮಗೆ ಲಭಿಸಿದ ಸುಮಾರು 10 ಪೆನಾಲ್ಟಿ ಕಾರ್ನರ್‌ಗಳಲ್ಲಿ ಗೋಲು ಗಳಿಸುವ ಅವಕಾಶಗಳನ್ನು ವ್ಯರ್ಥ ಮಾಡಿಕೊಂಡರು. ಪ್ರಸ್ತುತ ವಿಶ್ವದ ಶ್ರೇಷ್ಠ ಡ್ರ್ಯಾಗ್ ಫ್ಲಿಕರ್‌ಗಳಲ್ಲಿ ಒಬ್ಬರಾಗಿರುವ ಹರ್ಮನ್‌ಪ್ರೀತ್ ಅವರು ಒಂದು ಬಾರಿ ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ಗಳಿಸಿದರು.

ಈ ವಿಭಾಗದಲ್ಲಿ ಲೋಪಗಳನ್ನು ತಿದ್ದಿಕೊಂಡು ಕಣಕ್ಕಿಳಿಯುವ ಸವಾಲು ಭಾರತಕ್ಕೆ ಇದೆ. ಅಮಿತ್ ರೋಹಿದಾಸ್ ಅವರು ಈ ಪಂದ್ಯಕ್ಕೆ ಮರಳುತ್ತಿರುವುದು ಸಮಾಧಾನಕರ ವಿಷಯ.

ಅಮಿತ್ ಅವರಿಗೆ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕೆಂಪು ಕಾರ್ಡ್ ದರ್ಶನವಾಗಿತ್ತು. ಅದರಿಂದಾಗಿ ಅವರಿಗೆ ಒಂದು ಪಂದ್ಯದಿಂದ ಅಮಾನತು ಮಾಡಲಾಗಿತ್ತು. ಅವರು ಸೆಮಿಫೈನಲ್‌ನಲ್ಲಿ ಆಡಿರಲಿಲ್ಲ.

44 ವರ್ಷಗಳ ನಂತರ ಫೈನಲ್ ತಲುಪುವ ಭಾರತದ ಕನಸು ಈ ಒಲಿಂಪಿಕ್ ಕೂಟದಲ್ಲಿಯೂ ಈಡೇರಲಿಲ್ಲ. ಆದರೂ ವಿಜಯವೇದಿಕೆ ಏರಿನಿಲ್ಲುವ ಅವಕಾಶ ಈಗಲೂ ಇದೆ. ಸ್ಪೇನ್ ತಂಡವನ್ನು ಮಣಿಸಿದರೆ ಕಂಚಿನ ಪದಕ ಒಲಿಯಲಿದೆ.

ಸ್ಪೇನ್ ತಂಡವು ಸೆಮಿಫೈನಲ್‌ನಲ್ಲಿ 0–4ರಿಂದ ನೆದರ್ಲೆಂಡ್ಸ್ ವಿರುದ್ಧ ಸೋತಿತ್ತು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಸ್ಪೇನ್ ತಂಡವು 8ನೇ ಸ್ಥಾನದಲ್ಲಿದೆ. ಭಾರತವು ಐದರಲ್ಲಿದೆ.

ಉಭಯ ತಂಡಗಳು ಒಲಿಂಪಿಕ್ಸ್‌ನಲ್ಲಿ ಇದುವರೆಗೆ ಹತ್ತು ಬಾರಿ ಮುಖಾಮುಖಿಯಾಗಿದ್ದು ಭಾರತವು 7 ಸಲ ಜಯಿಸಿದೆ. ಸ್ಪೇನ್ ಒಂದರಲ್ಲಿ ಗೆದ್ದಿದೆ. ಎರಡು ಪಂದ್ಯ ಡ್ರಾ ಆಗಿವೆ. ಮೇಲ್ನೋಟಕ್ಕೆ ಸ್ಪೇನ್ ವಿರುದ್ಧ ಭಾರತವೇ ಹೆಚ್ಚು ಬಲಶಾಲಿಯಾಗಿದೆ.

ಭಾರತ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಸಹ ಆಟಗಾರರು –ಎಪಿ / ಪಿಟಿಐ ಚಿತ್ರ

ವಿಕೆಟ್ ಪಡೆದ ಸಂಭ್ರಮದಲ್ಲಿ ದುನಿತ್ ವೆಲ್ಲಾಳಗೆ –ಪಿಟಿಐ ಚಿತ್ರ

27 ವರ್ಷಗಳ ನಂತರ ಭಾರತ ವಿರುದ್ಧ ಸರಣಿ ಗೆದ್ದ ಶ್ರೀಲಂಕಾ

ಕೊಲಂಬೊ (ರಾಯಿಟರ್ಸ್): ಅವಿಷ್ಕ ಫೆರ್ನಾಂಡೊ ಅವರ ಆಕರ್ಷಕ 96 ರನ್ (102ಎ, 4x9, 6x2) ಹಾಗೂ ದುನಿತ್ ವೆಲ್ಲಾಳಗೆ ಅವರ ಐದು ವಿಕೆಟ್ ಗೊಂಚಲಿನ ನೆರವಿನಿಂದ ಶ್ರೀಲಂಕಾ ತಂಡ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯದಲ್ಲಿ ಭಾರತ ತಂಡವನ್ನು 110 ರನ್‌ಗಳ ದೊಡ್ಡ ಅಂತರದಿಂದ ಬಗ್ಗುಬಡಿಯಿತು. 27 ವರ್ಷಗಳ ನಂತರ ಮೊದಲ ಸಲ ದ್ವಿಪಕ್ಷೀಯ ಸರಣಿಯನ್ನು ಗೆದ್ದುಕೊಂಡಿತು.

ಆತಿಥೇಯರು ಸರಣಿಯನ್ನು 2–0 ಯಿಂದ ಗೆದ್ದುಕೊಂಡರು. ಮೊದಲ ಪಂದ್ಯ ಟೈ ಆಗಿತ್ತು. ಪ್ರೇಮದಾಸ ಕ್ರೀಡಾಂಗಣದ ಪಿಚ್‌ನಲ್ಲಿ 249 ರನ್‌ಗಳ ಸವಾಲಿನ ಗುರಿ ಎದುರಿಸಿದ ಭಾರತ, ನಾಯಕ ರೋಹಿತ್ ಶರ್ಮಾ (35, 20ಎ) ಮತ್ತು ಅನುಭವಿ ವಿರಾಟ್ ಕೊಹ್ಲಿ (20, 18ಎ) ಅವರನ್ನು ಕಳೆದುಕೊಂಡ ನಂತರ ಕುಸಿತ ಅನುಭವಿಸಿತು. ಅಂತಿಮವಾಗಿ 26.1 ಓವರುಗಳಲ್ಲಿ 138 ರನ್‌ಗಳಿಗೆ ಉರುಳಿತು.

ಮೊದಲ ಪಂದ್ಯದಲ್ಲೂ ಮಿಂಚಿದ್ದ ಎಡಗೈ ಸ್ಪಿನ್ನರ್ ವೆಲ್ಲಾಳಗೆ ಮೊದಲು ರೋಹಿತ್ ವಿಕೆಟ್ ಪಡೆದರು. ನಂತರ ಕೊಹ್ಲಿ ಅವರನ್ನು ಎಲ್‌ಬಿ ಬಲೆಗೆ ಕೆಡವಿದರು. ಅವರು ಐದು ಓವರುಗಳಲ್ಲಿ 27 ರನ್‌ಗಳಿಗೆ 5 ವಿಕೆಟ್ ಕಬಳಿಸಿದರು.

ಇದಕ್ಕೆ ಮೊದಲು ಮೂರನೇ ಬಾರಿಯೂ ಟಾಸ್ ಗೆದ್ದ ಚರಿತ್ ಅಸಲಂಕಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಪಥುನ್ ನಿಸಾಂಕ (45) ಮತ್ತು ಅವಿಷ್ಕಾ ಗುಣವರ್ಧನ ಮೊದಲ ವಿಕೆಟ್‌ಗೆ 87 ರನ್ ಸೇರಿಸಿದರು. ಮೂರನೇ ಕ್ರಮಾಂಕದಲ್ಲಿ ಆಡಿದ ಕುಶಲ್ ಮೆಂಡಿಸ್ 59 ರನ್ (82ಎ) ಗಳಿಸಿ ತಂಡದ ಮೊತ್ತ ಹೆಚ್ಚಿಸಲು ನೆರವಾದರು. ಭಾರತದ ಕಡೆ ರಿಯಾನ್ ಪರಾಗ್ 3 ವಿಕೆಟ್ ಪಡೆದರು.

ಅವಿಷ್ಕ ಫೆರ್ನಾಂಡೊ ಪಂದ್ಯದ ಆಟಗಾರ ಎನಿಸಿದರೆ, ದುನಿತ್ ವೆಲ್ಲಾಳಗೆ ಸರಣಿ ಶ್ರೇಷ್ಠ ಗೌರವಕ್ಕೆ ಪಾತ್ರರಾದರು.

ಸ್ಕೋರುಗಳು: ಶ್ರೀಲಂಕಾ: 50 ಓವರುಗಳಲ್ಲಿ 7 ವಿಕೆಟ್‌ಗೆ 248 (ಪಥುಮ್ ನಿಸಾಂಕ 45, ಅವಿಷ್ಕ ಫೆರ್ನಾಂಡೊ 96, ಕುಸಲ್ ಮೆಂಡಿಸ್ 59, ಕಮಿಂದು ಮೆಂಡಿಸ್ ಔಟಾಗದೇ 23; ರಿಯಾನ್ ಪರಾಗ್ 54ಕ್ಕೆ3, ವಾಷಿಂಗ್ಟನ್ ಸುಂದರ್ 29ಕ್ಕೆ1, ಕುಲದೀಪ್ ಯಾದವ್ 36ಕ್ಕೆ1); **ಭಾರತ:** 26.1 ಓವರುಗಳಲ್ಲಿ 138 (ರೋಹಿತ್ ಶರ್ಮಾ 35 ವಿರಾಟ್ ಕೊಹ್ಲಿ 20, ವಾಷಿಂಗ್ಟನ್ ಸುಂದರ್ 30; ಮಹೀಷ ತೀಕ್ಷಣ 45ಕ್ಕೆ2, ದುನಿತ್ ವೆಲ್ಲಾಳಗೆ 27ಕ್ಕೆ5, ಜೆಫ್ರಿ ವಂಡರ್ಸೆ 34ಕ್ಕೆ2)

ಈಜು: ದರ್ಶನ್ ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ದರ್ಶನ್ ಎಸ್‌

ಬೆಂಗಳೂರು: ಕರ್ನಾಟಕದ ದರ್ಶನ್ ಎಸ್. ಒಡಿಶಾದ ಭುವನೇಶ್ವರದಲ್ಲಿ ನಡೆಯುತ್ತಿರುವ 40ನೇ ಸಬ್ ಜೂನಿಯರ್ ಮತ್ತು 50ನೇ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಕೂಟ ದಾಖಲೆ ನಿರ್ಮಿಸಿದರು.

ಬಾಲಕರ ಗುಂಪು–1ರ 1500 ಮೀ. ಫ್ರೀಸ್ಟೈಲ್ ವಿಭಾಗದಲ್ಲಿ 16ನಿ. 01.09 ಸೆಕೆಂಡುಗಳಲ್ಲಿ ಗುರಿ ತಲುಪಿದರು. 2022ರಲ್ಲಿ ಮಹಾರಾಷ್ಟ್ರದ ವೇದಾಂತ ಮಾಧವನ್ ನಿರ್ಮಿಸಿದ್ದ (16ನಿ 01.73 ಸೆ) ದಾಖಲೆಯನ್ನು ದರ್ಶನ್ ಮುರಿದರು.

ಕರ್ನಾಟಕದ ಈಜುಪಟುಗಳು ಬುಧವಾರ ಅಂತ್ಯಕ್ಕೆ ನಾಲ್ಕು ಚಿನ್ನ ಗೆದ್ದರು.

ರಾಜ್ಯದ ಸ್ಪರ್ಧಿಗಳ ಫಲಿತಾಂಶ: ಬಾಲಕರ ಗುಂಪು–1: 1500 ಮೀ. ಫ್ರೀಸ್ಟೈಲ್: ದರ್ಶನ್ ಎಸ್. (16ನಿ 01.09ಸೆ)–1. 50 ಮೀ.ಬಟರ್‌ಫ್ಲೈ: ಚಿಂತನ್ ಎಸ್.ಶೆಟ್ಟಿ (25.42 ಸೆ)–2, ಆರ್ಯನ್ ಕೈಲಾಸ್ ಭಟ್‌ಭಟ್ (25.75ಸೆ). ಗುಂಪು–2: 100 ಮೀ ಬ್ಯಾಕ್‌ಸ್ಟ್ರೋಕ್: ಸಮರ್ಥ್ ಗೌಡ ಬಿ.ಎಸ್.(1.ನಿ 1.06ಸೆ)–1. ಗುಂಪು–3: 200 ಮೀ.ಮೆಡ್ಲೆ: ಲೋಹಿತಾಶ್ವ ನಾಗೇಶ್ ಶಶಿಕುಮಾರ್ (2ನಿ 41.96ಸೆ)–1. ಬಾಲಕಿಯರ ಗುಂಪು–3: 100 ಮೀ 100 ಫ್ರೀಸ್ಟೈಲ್: ಶ್ವಿತಿ ಸುವರ್ಣ (1ನಿ 7.92ಸೆ)–3. 200 ಮೀ. ಮೆಡ್ಲೆ: ಶ್ರೇಯಾ ಸುರೇಶ್ ಪೂಜಾರ್ (2ನಿ 50.09 ಸೆ)–3

‘ಮೈಸೂರು ಓಪನ್‌–2024’ ಗಾಲ್ಫ್ ಟೂರ್ನಿ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮೈಸೂರು: ಪ್ರೊಫೆಷನಲ್ ಗಾಲ್ಫ್ ಟೂರ್ ಆಫ್ ಇಂಡಿಯಾ (ಪಿಜಿಟಿಐ) ಹಾಗೂ ಜಯಚಾಮರಾಜೇಂದ್ರ ಒಡೆಯರ್ ಗಾಲ್ಫ್ ಕ್ಲಬ್ (ಜೆಡಬ್ಲ್ಯುಜಿಸಿ) ಸಹಯೋಗದಲ್ಲಿ ‘ಮೈಸೂರು ಓಪನ್‌–2024’ ಪುರುಷರ ವೃತ್ತಿಪರ ಗಾಲ್ಫ್ ಟೂರ್ನಿಯು ಆಗಸ್ಟ್ 8ರಿಂದ 11ರವರೆಗೆ ಇಲ್ಲಿನ ಗಾಲ್ಫ್ ಮೈದಾನದಲ್ಲಿ ನಡೆಯಲಿದೆ. ವಿಜೇತರು ಒಟ್ಟು ₹1 ಕೋಟಿ ಮೌಲ್ಯದ ಬಹುಮಾನ ತಮ್ಮದಾಗಿಸಿಕೊಳ್ಳಲಿದ್ದಾರೆ.

‘ಮೈಸೂರಿನಲ್ಲಿ ಇದೇ ಮೊದಲ ಬಾರಿಗೆ ಅಂತರರಾಷ್ಟ್ರೀಯ ಮಟ್ಟದ ಗಾಲ್ಫ್ ಟೂರ್ನಿ ನಡೆಯುತ್ತಿದೆ. 12 ವಿದೇಶಿಯರು ಸೇರಿ 126 ಆಟಗಾರರು ಸ್ಪರ್ಧೆಯಲ್ಲಿದ್ದಾರೆ. 2022ರ ಪಿಜಿಟಿಐ ಆರ್ಡರ್ ಆಫ್ ಮೆರಿಟ್ ಚಾಂಪಿಯನ್ ಮನು ಗಂಡಾಸ್, ಮೈಸೂರಿನವರೇ ಆದ ಯಶಸ್ ಚಂದ್ರ, ಒಲಿಂಪಿಯನ್ ಉದಯನ್ ಮಾನೆ ಪ್ರಮುಖ ಆಕರ್ಷಣೆಯಾಗಿದ್ದಾರೆ’ ಎಂದು ಪಿಜಿಟಿಐ ಸಿಇಒ ಉತ್ತಮ್ ಸಿಂಗ್ ಮುಂಡಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಜೆಡಬ್ಲ್ಯುಜಿಸಿ ಅಧ್ಯಕ್ಷ ಅಬ್ರಹಾಂ ಥಾಮಸ್ ‘ದ್ವಿತಿಯಾರ್ಧ ಋತುವಿನ ಮೊದಲ ಪ್ರಮುಖ ಟೂರ್ನಿ ಇದು. ಭಾರತದ ಆಟಗಾರರ ಜೊತೆಗೆ ಶ್ರೀಲಂಕಾ, ಬಾಂಗ್ಲಾದೇಶ, ಇಟಲಿ, ನೇಪಾಳ, ಕೆನಡಾ, ದಕ್ಷಿಣ ಕೊರಿಯಾ, ಜಪಾನ್, ಅಮೆರಿಕಾದಿಂದಲೂ ಸ್ಪರ್ಧಿಗಳು ಕಣದಲ್ಲಿದ್ದಾರೆ’ ಎಂದು ಮಾಹಿತಿ ನೀಡಿದರು.

ಆಟಗಾರರಾದ ಮನು ಗಂಡಾಸ್ ಹಾಗೂ ಯಶಸ್ ಚಂದ್ರ ‘ಇಲ್ಲಿನ ಜೆಡಬ್ಲ್ಯುಜಿಸಿ ಗಾಲ್ಫ್ ಅಂಕಣ ಸುಂದರವಾದ ಭೂ ವಿನ್ಯಾಸ ಹಾಗೂ ಸವಾಲಿನ ಫೇರ್‌ವೇಗಳಿಂದ ಕೂಡಿದ್ದು, ಗಾಲ್ಫ್ ಆಟಗಾರರ ಕೌಶಲವನ್ನು ಪರೀಕ್ಷೆಗೆ ಒಡ್ಡಲಿದೆ’ ಎಂದರು.

ಬೆಂಗಳೂರು ರೇಸ್

ಯೂಕಾನ್ ಗೆಲ್ಲುವ ನಿರೀಕ್ಷೆ

ಚೀಫ್ ಜಸ್ಟೀಸ್ ಕಪ್ ಗುರುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಯೂಕಾನ್ ಈ ರೇಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅಲೈಸ್ ಬ್ಲೂಸ್ 1, ಡಬಲ್ ವಿಷನ್ 5, ಎಸ್ಟೆಫಾನಿಯಾ 3
2ನೇ ರೇಸ್: ಸದರ್ನ್ ಪವರ್ 1, ಮೆಷರ್ ಆಫ್ ಟೈಮ್ 3, ಗ್ಲೋ ಇನ್ ದಿ ಡಾರ್ಕ್ 7
3ನೇ ರೇಸ್: ರಾಡ್ನಿ 6, ಕ್ರಿಸ್ಟಲಾಸ್ 4, ಮಕೊಟೊ 5
4ನೇ ರೇಸ್: ಟೈಪೊಲೊ 6, ಮ್ಯಾಗ್ನಸ್ 4, ಅಕ್ವಮೆಟಿಕ್ 1
5ನೇ ರೇಸ್: ಯೂಕಾನ್ 6, ಇಂಪೀರಿಯಲ್ ಬ್ಲೂ 1, ನೆಜಿಯಾ 4
6ನೇ ರೇಸ್: ವಿಕ್ಟೋರಿಯಾ ದೊರೆಸಾನಿ 6, ಬ್ಲೂ ಗಾಡ್ 12, ಅಡ್ಜಸ್ಟ್‌ಮೆಂಟ್ 5
7ನೇ ರೇಸ್: ರೀಗಲ್ ಅರಿಸ್ಟೊಕ್ರಸಿ 5, ಮಿಸ್ಟಿಕಲ್ ಏರ್ 10, ಆಗಸ್ಟ್ 3

ಉತ್ತಮ ಬೆಟ್: ರಾಡ್ನಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಜಾವೆಲಿನ್ ಥ್ರೋ ಫೈನಲ್ ಇಂದು: ಚಿನ್ನ ಉಳಿಸುವ ಯತ್ನದಲ್ಲಿ ಚೋಪ್ರಾಗೆ ಕಠಿಣ ಸವಾಲು

ನೀರಜ್ ಮೇಲೆ ಎಲ್ಲರ ಕಣ್ಣು

ಎಪಿ/ಪಿಟಿಐ ಚಿತ್ರ

89.94 ಮೀ
ಭಾರತದ ನೀರಜ್ ಚೋಪ್ರಾ ವೈಯಕ್ತಿಕ ಶ್ರೇಷ್ಠ ಸಾಧನೆ

ವೈಯಕ್ತಿಕ ಶ್ರೇಷ್ಠ ಸಾಧನೆ



93.07 ಮೀ
ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್



90.18 ಮೀ
ಪಾಕಿಸ್ತಾನದ ಅರ್ಷದ್ ನದೀಮ್

89.54 ಮೀ
ಜರ್ಮನಿಯ ಜೂಲಿಯನ್ ವೆಬರ್

90.88 ಮೀ
ಝೆಕ್ ರಿಪಬ್ಲಿಕ್‌ನ ಜೇಕಬ್ ವಾಡ್ಲೆಜ್

ಪ್ಯಾರಿಸ್ (ಪಿಟಿಐ): ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಗುರುವಾರ ಮತ್ತೊಂದು ಚಾರಿತ್ರಿಕ ದಾಖಲೆ ನಿರ್ಮಿಸುವ ತವಕದಲ್ಲಿದ್ದಾರೆ. ಅರ್ಹತಾ ಸುತ್ತಿನ ಮೊದಲ ಎಸೆತದಲ್ಲೇ ಫೈನಲ್‌ಗೆ ಲಗ್ಗೆ ಹಾಕಿರುವ ಭಾರತದ ‘ಚಿನ್ನದ ಹುಡುಗ’ನ ಮೇಲೆ ಕೋಟ್ಯಂತರ ಕಣ್ಣುಗಳು ನೆಟ್ಟಿವೆ.

ಹಾಲಿ ಚಾಂಪಿಯನ್, 26 ವರ್ಷದ ನೀರಜ್ ಮಂಗಳವಾರ ನಡೆದ ಅರ್ಹತಾ ಸುತ್ತಿನಲ್ಲಿ 89.34 ಮೀಟರ್ ಜಾವೆಲಿನ್ ಎಸೆದು ಅಗ್ರಸ್ಥಾನದೊಂದಿಗೆ ಫೈನಲ್‌ಗೆ ಅರ್ಹತೆ ಪಡೆದಿದ್ದಾರೆ. ಆದರೆ ಫೈನಲ್‌ನಲ್ಲಿ ಚಾಂಪಿಯನ್ ‘ಪಟ್ಟ’ವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಅವರಿಗೆ ಕಠಿಣ ಸವಾಲು ಎದುರಾಗುವ ನಿರೀಕ್ಷೆಯಿದೆ.

ಪ್ಯಾರಿಸ್‌ನ ಸ್ಟೇಡ್ ಡಿ ಫ್ರಾನ್ಸ್ ಕ್ರೀಡಾಂಗಣದ ಗುಣಮಟ್ಟವು ಟೋಕಿಯೊಕ್ಕಿಂತ ಉತ್ತಮವಾಗಿದೆ. ಹೀಗಾಗಿ, ಅರ್ಹತಾ ಸುತ್ತಿನಲ್ಲಿ ಒಂಬತ್ತು ಜಾವೆಲಿನ್‌ಪಟುಗಳು 84 ಮೀಟರ್‌ಗಳ ಅರ್ಹತಾ ಮಟ್ಟ ದಾಟಿ ಫೈನಲ್ ಪ್ರವೇಶಿಸಿದ್ದಾರೆ. ಅಂತಿಮ ಸುತ್ತಿಗೆ ಮುನ್ನಡೆದ 12 ಮಂದಿಯಲ್ಲಿ, ಹಿಂದಿನ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಆರು ಮಂದಿ ಇದ್ದಾರೆ. ಇವರಲ್ಲಿ ಐವರು ಮೊದಲ ಎಸೆತದಲ್ಲೇ ಫೈನಲ್‌ಗೆ ಅರ್ಹತೆ ಸಂಪಾದಿಸಿದ್ದರಿಂದ ಪದಕದ ಸುತ್ತಿನಲ್ಲಿ ಚೋಪ್ರಾಗೆ ನಿಕಟ ಪೈಪೋಟಿ ಎದುರಾಗುವ ಸಾಧ್ಯತೆ ಹೆಚ್ಚಿದೆ.

ಅರ್ಹತಾ ಸುತ್ತಿನಲ್ಲಿ ಚೋಪ್ರಾ ನಂತರದ ಸ್ಥಾನ ಪಡೆದಿರುವ ಎರಡು ಬಾರಿಯ ವಿಶ್ವ ಚಾಂಪಿಯನ್, ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್ (88.63 ಮೀ), ಜರ್ಮನಿಯ ಜೂಲಿಯನ್ ವೆಬರ್ (87.76 ಮೀ) ಮತ್ತು ಪಾಕಿಸ್ತಾನದ ಅರ್ಷದ್ ನದೀಮ್ (86.59 ಮೀ) ಅವರೂ ಚಿನ್ನದ ಪದಕಕ್ಕೆ ದಾವೇದಾರರಾಗಿದ್ದಾರೆ.

‘ಫೈನಲ್‌ನಲ್ಲಿ ಪ್ರತಿಯೊಬ್ಬ ಸ್ಪರ್ಧಿಗಳ ಮನಃಸ್ಥಿತಿ ಮತ್ತು ಸಾಮರ್ಥ್ಯ ಭಿನ್ನವಾಗಿರುತ್ತದೆ. ಅಲ್ಲಿ ಉತ್ತಮ ಸ್ಪರ್ಧೆಯನ್ನು ಎದುರು ನೋಡುತ್ತಿದ್ದೇನೆ. ನಿಗದಿಪಡಿಸಿದ ಅರ್ಹತಾಮಟ್ಟ ದಾಟಿ ಫೈನಲ್‌ನಲ್ಲಿ ಅವಕಾಶ ಪಡೆದಿರುವ ಎಲ್ಲರೂ ಉತ್ತಮ ತಯಾರಿ ನಡೆಸಿದ್ದಾರೆ’ ಎಂದು ಬುಧವಾರ ಮೈದಾನದಲ್ಲಿ ಕಾಣಿಸಿಕೊಂಡ ಚೋಪ್ರಾ ಹೇಳಿದರು.

ಪ್ಯಾರಿಸ್‌ನಲ್ಲಿ ಚೋಪ್ರಾ ಚಿನ್ನ ಗೆದ್ದರೆ ಒಲಿಂಪಿಕ್ ಜಾವೆಲಿನ್ ಥ್ರೋ ಇತಿಹಾಸದಲ್ಲಿ ಪ್ರಶಸ್ತಿಯನ್ನು ಉಳಿಸಿಕೊಂಡ ಐದನೇ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ಪಾತ್ರವಾಗುವರು. ಅಲ್ಲದೆ, ವೈಯಕ್ತಿಕ ವಿಭಾಗದಲ್ಲಿ ಎರಡು ಚಿನ್ನ ಗೆದ್ದ ಏಕೈಕ ಭಾರತೀಯ ಎಂಬ ಖ್ಯಾತಿಯೂ ಅವರದ್ದಾಗಲಿದೆ.

ಎರಿಕ್ ಲೆಮ್ಮಿಂಗ್ (ಸ್ವೀಡನ್; 1908 ಮತ್ತು 1912), ಜಾನಿ ಮೈರಾ (ಫಿನ್ಲೆಂಡ್; 1920 ಮತ್ತು 1924), ಯಾನ್ ಜೆಲೆಝ್ನಿ (ಝೆಕ್ ರಿಪಬ್ಲಿಕ್; 1992, 1996 ಮತ್ತು 2000) ಮತ್ತು ಆಂಡ್ರಿಯಾಸ್ ಥೋರ್ಕಿಲ್‌ಡ್ಸೆನ್ (ನಾರ್ವೆ; 2004 ಮತ್ತು 2008) ಅವರು ಒಲಿಂಪಿಕ್ಸ್‌ನ ಪುರುಷರ ಜಾವೆಲಿನ್‌ನಲ್ಲಿ ಎರಡು ಚಿನ್ನ ಗೆದ್ದ ದಾಖಲೆ ಹೊಂದಿದ್ದಾರೆ.

ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು (ಒಂದು ಬೆಳ್ಳಿ, ಒಂದು ಕಂಚು), ಕುಸ್ತಿಪಟು ಸುಶೀಲ್ ಕುಮಾರ್ (ಒಂದು ಬೆಳ್ಳಿ, ಒಂದು ಕಂಚು) ಮತ್ತು ಶೂಟರ್ ಮನು ಭಾಕರ್ (ಎರಡು ಕಂಚು) ಸ್ವಾತಂತ್ರ್ಯದ ನಂತರ ಎರಡು ಒಲಿಂಪಿಕ್ ಪದಕ ಗೆದ್ದ ಭಾರತದ ಕ್ರೀಡಾಪಟುಗಳಾಗಿದ್ದಾರೆ.

ಚೋಪ್ರಾ ಮಂಗಳವಾರ ತಮ್ಮ ಕ್ರೀಡಾಜೀವನದ ವೈಯಕ್ತಿಕ ಎರಡನೇ ಶ್ರೇಷ್ಠ ಥ್ರೋ ಎಸೆಯುವ ಮೂಲಕ ತಮ್ಮ ಫಿಟ್ನೆಸ್ ಮತ್ತು ಫಾರ್ಮ್ ಬಗ್ಗೆ ಇದ್ದ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ. ಒಲಿಂಪಿಕ್ಸ್‌ನ ಅರ್ಹತಾ ಸುತ್ತಿನಲ್ಲಿ 2000ರ ಸಿಡ್ನಿ ಕ್ರೀಡೆಗಳಲ್ಲಿ ಜಾವೆಲಿನ್ ಥ್ರೋ ದಂತಕಥೆ ಯಾನ್ ಜೆಲೆಝ್ನಿ (89.39 ಮೀ) ನಂತರ ದಾಖಲಾದ ಎರಡನೇ ಶ್ರೇಷ್ಠ ಪ್ರಯತ್ನ ಇದಾಗಿದೆ.

2022ರ ಜೂನ್‌ನಲ್ಲಿ ಚೋಪ್ರಾ ಅವರು 89.94 ಮೀ ದೂರ ಥ್ರೋ ಮಾಡಿದ್ದು, ವೈಯಕ್ತಿಕ ಶ್ರೇಷ್ಠ ದಾಖಲೆಯಾಗಿದೆ. 90 ಮೀಟರ್ ಮೈಲಿಗಲ್ಲಿನ ಅವರ ಕನಸು ಇನ್ನೂ ನನಸಾಗಿಲ್ಲ. ಫೈನಲ್‌ನಲ್ಲಿ ಆ ಮೈಲಿಗಲ್ಲು ದಾಟುವ ಭರವಸೆಯನ್ನು ಮೂಡಿಸಿದ್ದು, ಕೋಟ್ಯಂತರ ಅಭಿಮಾನಿಗಳು ಕಾತರರಾಗಿದ್ದಾರೆ.

ಫೈನಲ್ ಪ್ರವೇಶಿಸಿರುವ ಉಳಿದ ಸ್ಪರ್ಧಿಗಳನ್ನೂ ಕಡೆಗಣಿಸುವಂತಿಲ್ಲ. ಮೂರು ಮಂದಿ 90 ಮೀಟರ್ ಗಡಿಯನ್ನು ದಾಟಿದ ದಾಖಲೆ ಹೊಂದಿದ್ದಾರೆ. ಇವರಲ್ಲಿ ಆ್ಯಂಡರ್ಸನ್ ಪೀಟರ್ಸ್ 93.07 ಮೀ ವೈಯಕ್ತಿಕ ಅತ್ಯುತ್ತಮ ಸಾಧನೆ ದಾಖಲಿಸಿದ್ದಾರೆ.

HONDA

ವೀಡಿಯೋ ಆನಂದಿಸಲು, QR ಕೋಡ್ ಸ್ಕ್ಯಾನ್ ಮಾಡಿ.
ACTIVA OVER 3.25 CRORE* HAPPY CUSTOMERS
ಡೀಲರ್ ವಿವರಗಳಿಗಾಗಿ QR ಕೋಡ್ ಸ್ಕ್ಯಾನ್ ಮಾಡಿ
ಹೆಚ್ಚಿನ ಮಾಹಿತಿಗಾಗಿ 7230032200 ಮಿಸ್ ಕಾಲ್ ನೀಡಿ
BOOK ONLINE NOW! www.honda2wheelersindia.com
CLICK BOOK RELAX

^ನಿಯಮ ಮತ್ತು ಷರತ್ತುಗಳು ಅನ್ವಯ. ##ಪೈನ್ ಲ್ಯಾಬ್ಸ್ ಮಶಿನ್‌ಗಳ ಮೂಲಕ HDFC ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಮಾಡಿದ EMI ವಹಿವಾಟುಗಳಿಗೆ ಮಾತ್ರ ಎಲ್ಲ ಹೋಂಡಾ ಟೂ-ವೀಲರ್ ಮಾಡೆಲ್‌ಗಳ ಮೇಲೆ ಕ್ಯಾಶ್‌ಬ್ಯಾಕ್ ಕೊಡುಗೆ ಲಭ್ಯವಿರುತ್ತದೆ. ##ಗ್ರಾಹಕರು ರೂ. 5000 ವರೆಗೆ 5% ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್ ಅನ್ನುಪಡೆಯಬಹುದಾಗಿದೆ. ##ಕೊಡುಗೆ ಅವಧಿಯಲ್ಲಿ ಪ್ರತಿ ಕಾರ್ಡ್/ಆರ್ಡರ್‌ಗೆ ಮಾಡಿದ ಒಂದು ವಹಿವಾಟಿನ ಮೇಲೆ ಮಾನ್ಯವಾಗಿದೆ. ##2024 ಆಗಸ್ಟ್ 31ರ ವರೆಗೆ ಕ್ಯಾಶ್‌ಬ್ಯಾಕ್ ಕೊಡುಗೆ ಮಾನ್ಯವಾಗಿದೆ. ##ಆಯ್ದ ಔಟ್‌ಲೆಟ್‌ಗಳಲ್ಲಿ ಮಾತ್ರ ಸ್ಕೀಮ್ ಲಭ್ಯವಿದೆ. **ಹಣಕಾಸು ಯೋಜನೆ ಮತ್ತು ಕ್ರೆಡಿಟ್ ಸೌಲಭ್ಯವು IDFC ಫಸ್ಟ್ ಬ್ಯಾಂಕ್‌ನ ("ಬ್ಯಾಂಕ್") ವಿವೇಚನೆಯ ಮೇರೆಗೆ ಸೀಮಿತ ಅವಧಿಗೆ ಮಾತ್ರ ಲಭ್ಯವಿದೆ. ಚಿತ್ರದಲ್ಲಿ ತೋರಿಸಿದ ಉತ್ಪನ್ನವು ಮಾರ್ಕೆಟ್‌ನಲ್ಲಿರುವ ನಿಜವಾದ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿದ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ. *ಮೂಲ: HMSI ಆಂತರಿಕ ಡೇಟಾ ಆಧಾರದಲ್ಲಿ 2001 ಜೂನ್ ಇಂದ 2024 ಜೂನ್‌ವರೆಗಿನ ಬ್ರ್ಯಾಂಡ್ Activaದ ಸಂಚಿತ ಮಾರಾಟ ಅಂಕಿಅಂಶ.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - BOMMANAHALLI: 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda - ANEKAL:** 080-27830234, 9880417779; **City Honda - ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; **Haiku Honda - DOMLUR:** 49656565, 9342432156; **INDIRANAGAR:** 9342432157; **Dhruvdesh Honda - MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **Planet Honda - RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; **Raja Honda - KORAMANGALA:** 08067329000,9035310055; **Prime Honda - VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda - RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; **Saphire Honda - JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda - KR PURAM:** 9071858885, 9071858881; **HENNUR ROAD:** 9108989817, 9108989818; **Tansi Honda - HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; **Turbo Honda - DODDABALLAPURA:** 7022620885; **NELAMANAGALA:** 080-27722333, 7022008894; **Wings Honda - HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda - KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda - CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; **Shankar Honda - GOWRIBIDANUR:** 9900007422/33; **SIDLAGHATTA:** 9611596113; **Century Honda - TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; **Shantinath Honda - TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda - PAVAGADA:** 9535941215; **Annapoorna Honda - MADHUGIRI:** 9886627429; **Vignesh Honda - TIPTUR:** 9886711161; **TURUVEKERE:** 9448214014; **Sri Srinivasa Honda - CHIKKANAYAKANAHALLI:** 8722522221; **Prestige Honda - RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; **ART Honda - BIDADI:** 9945966771, 9164871007; **Springs Honda - KENGERI:** 9513771114; **Nideesh Honda - DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com